ಸಂಪುಟ : ೨೦
ಸಂಚಿಕೆ : ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ

ಅಗಸ್ಟ, ೧೯೮೭

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳುಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನುವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು ಇನ್ನಿತರ ಯಾವುದೇ ವಿಷಯಕ್ಕೆ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ   ೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ   ೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ. ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೇ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩ ಇವರಿಗೆ ಕಳುಹಿಸಬೇಕು.)

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೨೦ ಸಂಚಿಕೆ : ೧

ರಾಷ್ಟ್ರೀಯ ಭಾವೈಕ್ಯ ಮತ್ತು ಧರ್ಮ ಕುರಿತು ವಿಶೇಷ ಸಂಚಿಕೆ

ಪ್ರಧಾನ ಸಂಪಾದಕರು :
ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಸಂಪಾದಕರು :
ಡಾ. ವಿಲ್ಯಂ ಮಾಡ್ತ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸ್ವಾತಂತ್ರ್ಯೋತ್ಸವ ಸಂಚಿಕೆ

ಅಗಸ್ಟ, ೧೯೮೨

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಸುನೀಲಕುಮಾರ ಪ್ರಿಂಟಿಂಗ್ ಪ್ರೆಸ್

ರಜತಗಿರಿ, ಧಾರವಾಡ– ೫೮೦ ೦೦೪.

ಸಂಪಾದಕೀಯ

ಪ್ರಸ್ತುತ ಭಾರತದ ಆಗುಹೋಗುಗಳನ್ನು ಗಮನಿಸಿದಾಗ ರಾಷ್ಟ್ರೀಯ ಭಾವೈಕ್ಯ ಒಂದು ಅತ್ಯಗತ್ಯ ಮೌಲ್ಯವೆಂಬುದರ ಬಗೆಗೆ ಎರಡು ಮಾತಿಲ್ಲ. ಎಚ್. ಜಿ. ವೆಲ್ಸ್ ಬಹುಕಾಲದ ಹಿಂದೆ ಹೇಳಿದ "ಮಾನವ ಕುಲವೇ ನಿಜವಾದ ರಾಷ್ಟ್ರೀಯತೆ" ಎಂಬ ಮಾತು ಕನ್ನಡ ಆದಿಕವಿಯಾಗಿರುವ ಪಂಪನ "ಮಾನವ ಕುಲಂ ತಾನೊಂದೆ ವಲಂ" ಎಂಬ ಮಾತಿನ ಮಾರ್ದನಿಯಾಗಿ ಕೇಳಿಸಿದರೂ ವಿಶ್ವ ಮಾನವ ಪ್ರಜ್ಞೆಯ ಹಾದಿಯಲ್ಲಿ ಅದು ಒಂದು ಆದರ್ಶವಾಗಿ ನಿಲ್ಲುತ್ತದೆ. ಈ ಆದರ್ಶದತ್ತ ಸಾಗುವಲ್ಲಿ ರಾಷ್ಟ್ರೀಯ ಭಾವೈಕ್ಯತೆ ಒಂದು ಕಿರುಹೆಜ್ಜೆ ಮಾತ್ರ ವಾದರೂ, ಇಂದಿನ ಪರಿಸ್ಥಿತಿಯಲ್ಲಿ ಭಾರತೀಯರಿಗೆ ಅದೊಂದು ಮಹತ್ವವಾದ ಹೆಜ್ಜೆ ಹಾಗೂ ಸಾಹಸ.

ಸಮಗ್ರ ವಿಶ್ವಕುಟುಂಬವೇ ವಸುಧೈವ ಕುಟುಂಬವಾಗಬೇಕೆಂಬ ರಾಷ್ಟ್ರಪಿತ ಗಾಂಧೀಜಿಯವರ ಕನಸು ನನಸಾಗಬೇಕಾದರೆ ಕೊನೆಯ ಪಕ್ಷ ಭಾರತೀಯರು ತಮ್ಮ ಭಾಷೆ, ರಾಜ್ಯ, ಮತಗಳನ್ನು ಮೀರಿ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸಿಕೊಳ್ಳಬೇಕು. "ನಾವು ಮಾನವರು" ಎಂದು ಸಾರುವ ಪೂರ್ವದಲ್ಲಿ ಕನಿಷ್ಠ ಪಕ್ಷ "ನಾವು ಭಾರತೀಯರು ಆ ಮೇಲೆ ಇತರರು" ಎಂಬ ಧ್ಯೇಯ ನಮ್ಮ ಜೀವನದ ಹಾಗೂ ಸಂಸ್ಕೃತಿಯ ಪ್ರಧಾನ ಆಶಯವಾಗಿ ಹೊಸ ಜೀವನ ಮಾದರಿಯನ್ನು ಅದು ರೂಪಿಸಬೇಕು.

ರಾಷ್ಟ್ರೀಯ ಭಾವೈಕ್ಯತೆಯ ಬಗ್ಗೆ ರಾಜೀವ ಗಾಂಧಿ ಮೊದಲಾದ ರಾಷ್ಟ್ರೀಯ ಧುರೀಣರು ನಮ್ಮನ್ನು ಆಗಾಗ ನೆನಪಿಸಿದರೂ ಕೂಡಾ ಅದು ಅಷ್ಟೊಂದು ಸುಲಭದ ಕೆಲಸವಲ್ಲ. ಶಿವರಾಮ ಕಾರಂತರು ಅಭಿಪ್ರಾಯಪಟ್ಟಂತೆ—

> ನಮ್ಮ ಇತಿಹಾಸದ ಪರಂಪರೆಯ ಸುದೀರ್ಘ ಇತಿಹಾಸದಲ್ಲಿ ಇಲ್ಲಿನ ಜನತೆ "ಇದು ಒಂದು ರಾಷ್ಟ್ರ" ಎಂಬ ಭಾವನೆಯಿಂದ ಯೋಚಿಸಿದವರಲ್ಲ; ಆ ದೃಷ್ಟಿಯಿಂದ ದುಡಿದವರಲ್ಲ. ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರೀಯರು ಎಂಬ ಭಾವನೆಗಳೇ ಹೆಚ್ಚು ಕಡಿಮೆ ಕಳೆದ ಶತಮಾನದ ಕೊನೆಯಲ್ಲಿ ಯುರೋಪಿನಲ್ಲಿ ರೂಪುಗೊಂಡ ವಿದ್ಯಮಾನ.... [1]

---

1. ಕರ್ನಾಟಕ ಇಂದು ಮತ್ತು ನಾಳೆ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ೧೯೮೬, ಪು. ೨.

ಭಾವೈಕ್ಯತೆಗೆ ಧರ್ಮಕ್ಕಿಂತ ಹಿರಿದಾದ ಹಾಗೂ ಶಾಶ್ವತವಾದ ಬೇರೊಂದು ನೆಲೆ ಸೆಲೆಯಿಲ್ಲ. ಸಾಮೂಹಿಕ ಜನಮನವನ್ನು ಸ್ಪಂದಿಸುವ ಶಕ್ತಿ ಧರ್ಮದಲ್ಲಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಧರ್ಮದ ಅವಿಭಾಜ್ಯಾಂಗವಾಗಿ ಬೆಳೆದ ತರ್ಕ ಮೀಮಾಂಸೆಗಳಿಗಿಂತ ಅದರ ತಿರುಳಾದ ಭಕ್ತಿ, ಅನುಭಾವ ಹಾಗೂ ಮಧುರ ಭಾವಗಳಲ್ಲಿ ಭಾವೈಕ್ಯತೆಯು ತಳಹದಿ ಕಂಡುಬರುತ್ತದೆ. ವಿವಿಧ ಧರ್ಮಗಳ ಅಧ್ಯಯನ ದಿಂದ ಅವುಗಳ ಅಂತಃಸ್ತರವನ್ನು ಮನವರಿಕೆ ಮಾಡಿ ಅಲ್ಲಿ ಹುದುಗಿದ ಮೌಲ್ಯಗ ಳನ್ನು ಸಾಮಾಜಿಕ ಜೀವನದಲ್ಲಿ ಅಳವಡಿಸಿಕೊಂಡರೆ ಪ್ರಾದೇಶಿಕತೆ, ಭಾಷಾಂಧತೆ, ಮತೀಯತೆಗಳನ್ನು ಮೀರಿ ಭದ್ರವಾದ ನೆಲೆಯಲ್ಲಿ ರಾಷ್ಟ್ರೀಯತೆಯನ್ನು ಬೆಳೆಯಿಸು ವುದು ಸಾಧ್ಯವಾಗುತ್ತದೆ. ಈ ಕೆಲಸ ಮಾನವತಾವಾದಿ ಶಿಕ್ಷಣದಿಂದ ಸಾಧ್ಯ. ಇಂತಹ ಶಿಕ್ಷಣ ನೀಡುವಲ್ಲಿ ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳ ಪಾತ್ರ ಹಿರಿದು.

ಭಾರತೀಯ ಸಂಸ್ಕೃತಿಯಲ್ಲಿ ಧರ್ಮಗಳ ಪ್ರಭಾವ ಅಚ್ಚಳಿಯದೆ ನಿಂತಿದೆ. ಈ ಧರ್ಮಗಳಲ್ಲಿ ವಿಶ್ವಮಾನವರನ್ನು ರೂಪಿಸುವ, ವಿಶ್ವಪ್ರಜ್ಞೆಯನ್ನು ಮೂಡಿಸುವ, ವಿಶ್ವಕುಟುಂಬವನ್ನು ನಿರ್ಮಿಸುವ ಅಂಶಗಳಿವೆ. ಇವುಗಳನ್ನು ಸರಿಯಾದ ರೀತಿಯಲ್ಲಿ ನಮ್ಮ ಪ್ರಜೆಗಳಿಗೆ ಮನವರಿಕೆ ಮಾಡಿಕೊಟ್ಟರೆ ಧರ್ಮಜಾಗೃತಿ ಮೂಲಕ ರಾಷ್ಟ್ರೀಯ ಭಾವೈಕ್ಯತೆ ಹುಟ್ಟುವುದು ಅಸಾಧ್ಯವೇನಲ್ಲ.

"ಕರ್ನಾಟಕ ಭಾರತಿ"ಯ ಪ್ರಸ್ತುತ ಸಂಚಿಕೆಯಲ್ಲಿ ಹಲವಾರು ಗಣ್ಯ ವಿದ್ವಾಂಸರು ಭಾರತದಲ್ಲಿಯ ಪ್ರಮುಖ ಧರ್ಮಗಳ ಆಳವಾದ ಅಧ್ಯಯನ ಮಾಡಿ ಅಲ್ಲಿಗುವ ಭಾವೈಕ್ಯಕ್ಕೆ ಪೋಷಕವಾಗಿರುವ ಅಂಶಗಳನ್ನು ಬಿಚ್ಚಿ ತೋರಿಸಿದ್ದಾರೆ. ಅನೇಕತೆಯಲ್ಲಿ ಏಕತೆಯನ್ನು ಕಂಡುಹಿಡಿದು ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸುವಲ್ಲಿ ನಮ್ಮ ಪ್ರಸ್ತುತ ಸಂಚಿಕೆ ಅಳಿಲ ಸೇವಾ ಪ್ರಯತ್ನ ಮಾತ್ರ. ಪಾಂಡಿತ್ಯಪೂರ್ಣ ಲೇಖನ ಬರೆದ ವಿದ್ವಾಂಸರಿಗೆ ನಾವು ಕೃತಜ್ಞರು. ಇಲ್ಲಿ ಅಭಿವ್ಯಕ್ತಗೊಂಡ ವಿದ್ವಾಂಸರ ಅಭಿಪ್ರಾಯಗಳಿಗೆ ಸಂಪಾದಕರು ಯಾವುದೇ ರೀತಿ ಯಲ್ಲಿ ಹೊಣೆಗಾರರಲ್ಲ. ಇನ್ನೂ ಕೆಲವು ಲೇಖನಗಳನ್ನು ನಿರೀಕ್ಷಿಸಲಾಗಿತ್ತಾದರೂ ಕಾರಣಾಂತರಗಳಿಂದ ಅವು ಇನ್ನೂ ನಮ್ಮ ಕೈಸೇರಿಲ್ಲ. ಇಂದಲ್ಲದಿದ್ದರೂ ನಾಳೆ ನಮ್ಮಲ್ಲಿ ಭಾವೈಕ್ಯತೆ ಬರುವ ವಿಶ್ವಾಸವನ್ನು ಈ ಸಂಚಿಕೆ ಸಂಕೇತಿಸುತ್ತದೆ.


ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಡಾ. ವಿಲ್ಯಂ ಮಾಡ್ತ

ಪರಿವಿಡಿ

ಪುಟ

ನಮ್ಮ ನೂತನ ಕುಲಪತಿಗಳು



ಡಾ. ಜಿ. ಕೆ. ನಾರಾಯಣ ರೆಡ್ಡಿ ಅವರು

ಧರ್ಮದ ಸ್ವರೂಪ ಲಕ್ಷಣಗಳು

● ಸಿ. ಸಿ. ಎ. ಪೈ, ಎಸ್. ಜೆ.

"ಒಬ್ಬನೇ ಕರ್ತ, ಒಂದೇ ವಿಸ್ವಾಸ, ಒಂದೇ ದೀಕ್ಷೆ, ಒಬ್ಬನೇ ತಂದೆದೇವ"

(ಎಫೆಸಿಯದವರಿಗೆ ೪:೫)

"ನಾವು ಸಕಲ ವಿಭಿನ್ನ ಧರ್ಮಗಳನ್ನೇ ಬಿಟ್ಟುಬಿಟ್ಟಿದ್ದರೆ, ನಮ್ಮೆಲ್ಲರಲ್ಲಿ ಐಕ್ಯಮತ ಬೆಳೆದು, ಒಂದೇ ಧರ್ಮ ಒಂದೇ ವಿಶ್ವಾಸವನ್ನು ನಾವು ಸವಿಯುತ್ತಿದ್ದೆವು, ನಮ್ಮಲ್ಲಿ ಭ್ರಾತೃಬಂಧುತ್ವ ವಿಪುಲವಾಗಿ ಬೆಳೆಯುತ್ತಿತ್ತು. [1]"

"ಧರ್ಮವೆಂದರೆ ಉತ್ತು ಕೊರೆದು ಹಸನು ಮಾಡಿದ ಹೊಲ
ಸ್ವರ್ಗಕಾಂಕ್ಷಿಯಾದವನು ಒಲವಿನಿಂದಲೂ
ನರಕ ಬೆಂಕಿಗಳಿಗಂಜುವಾತನು ದಿಗಿಲುಗೊಳ್ಳುತ್ತಲೂ
ಈ ಹೊಲದಲ್ಲಿ ಬಿತ್ತು ನೀರೆರೆಯುವನು.

"ಪುನರುತ್ಥಾನದಂದು ಲೆಖ್ಖಾಚಾರವಿದ್ದಿಲ್ಲದಿದ್ದರೆ
ಇವರೆಲ್ಲಿ ದೇವರಿಗೆ ಮಣಿಯುತ್ತಿದ್ದರು?
ಇವರೆಲ್ಲಿ ತಾವೆಸಗಿದ ದುಷ್ಕೃತನಕ್ಕೆ ಮರುಗುತ್ತಿದ್ದರು?
ಕೇವಲ ಹೆಚ್ಚಿನ ಪಾಲನ್ನೇ ತಾವು ವಶಪಡಿಸಿಕೊಳ್ಳುತ್ತಿದ್ದರು.

"ಧರ್ಮವೆಂದರೆ ಇವರಿಗೇನು ಮಹಾ?
ಅದೊಂದು ಕೇವಲ ವ್ಯಾಪಾರದ ವ್ಯವಹಾರ
ಅದನ್ನು ಕಡೆಗಣಿಸಿ ಸೋತು ಹಣ್ಣಾದರು
ಚತುರ ಸಾಧನೆ ಮಾಡಿ ವಿಪುಲ ಸಂಭಾವನೆ ಪಡೆದಾರು." [1]

(ಕಲಿಲ ಜಿಬ್ರಾನ : ವಕ್ರೋಕ್ತಿ)

"ಒಬ್ಬನೇ ದೇವ, ಒಂದೇ ಧರ್ಮ, ಒಂದೇ ಜಾತಿ"

(ನಾರಾಯಣ ಗುರು – ಕೇರಳ)

ಸಂದರ್ಭ ನಿರ್ಣಯ:

ಧರ್ಮಶ್ರದ್ಧೆ ಮತ್ತು ದಾನಶೀಲತೆಗಳಿಗಾಗಿ ಖ್ಯಾತಿಗೊಂಡ ದೇಶ ನಮ್ಮದು. ಜನಸೇವೆ ಜನಾರ್ಧನ ಸೇವೆಗಳೇ ಮುಖ್ಯವೆಂದು ತಿಳಿದು ಬಾಳಿದವರು ನಮ್ಮ

1. Joseph Sheban (ed). *THE WISDOM OF GIBRAN*, Bantam Books, U. S. A. 1973, p. 78-9

ಪೂರ್ವಜರು. ನಮ್ಮ ದೇಶದ ಈ ಖ್ಯಾತಿ ಮಣ್ಣುಗೂಡೀತೇ? ನಮ್ಮ ಪೂರ್ವಜರ ಪರಂಪರೆಯ ಕೀರ್ತಿ ಮರೆಯಾದೀತೇ? ದೇಶವನ್ನು ಚೂರುಚೂರಾಗಿ, ಪಕ್ಷಪಕ್ಷವಾಗಿ, ತಂಡತಂಡವಾಗಿ ಒಡೆಯಲೆಳಸುವ ಶಕ್ತಿಗಳು ಕಾರ್ಯವೆಸಗುವುದನ್ನು ಕಂಡಾಗ ಯಾರಿಗೆ ಇಂಥ ಭಯ ತಟ್ಟಲಾರದೆ ಉಳಿದೀತು?

ಆದರೆ ಒಮ್ಮೊಮ್ಮೆ ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸಿ ನಮ್ಮ ದೇಶ ಹಾಗೂ ನಮ್ಮ ಜನತೆ ಒಡೆದು ಮೂರಾಬಟ್ಟೆಯಾಗುವುದನ್ನು ತಪ್ಪಿಸಬೇಕೆಂಬ ಕಳಕಳಿಯ ಕರೆ ಕೇಳಿಸುವುದು ಆಶಾಜನಕವಾಗಿದೆ.

ಸಹಸ್ರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಆದಿವಾಸಿ ಒಡಕಟ್ಟಿನ ಧರ್ಮ ಪ್ರಜ್ಞೆ ಬೆಳೆದು ನಿಂತಿತ್ತು. ಧರ್ಮದ ವಸ್ತುವಾದ ದೇವಪರಮಾತ್ಮನನ್ನು ಅರಿಯಲು, ಕಾಣಲು, ಆತನ ಸೇವೆ ಮಾಡಲು ತಪಸ್ಸನ್ನು ಹೂಡಿ ಬೆಳಕು ಕಂಡವರು ಆದರ್ಶವಾದಿಗಳಾದ ನಮ್ಮ ದೇಶದ ಮೂಲ ಋಷಿಗಳು. ಯುಗ ಯುಗಕ್ಕೂ ಅನೇಕ ಧರ್ಮಪಂಥಗಳ ಸೋಂಕು ತಾಗಿ, ಆ ಧರ್ಮಗಳ ಅವಲಂಬಿಗಳಿಗೆ ಉದಾರ ಆಶ್ರಯವನ್ನು ನಮ್ಮ ದೇಶವು ನೀಡಿದ್ದಾದರೂ ಐತಿಹಾಸಿಕ ಸತ್ಯವಾಗಿದೆ. ಆದರೆ ನಮ್ಮ ದಿವಸಗಳಲ್ಲಿ ಮಾತ್ರ ಧರ್ಮದ ಹೆಸರಿನಲ್ಲೇ ವೈಮನಸ್ಸು, ಬಿಕ್ಕಟ್ಟು, ವಿರೋಧ, ವೈರತ್ವ, ಹಿಂಸಾಚಾರಗಳನ್ನು ನಡೆಸಿ, ತಾವು ಶೂರರೆನಿಸಿಕೊಳ್ಳುವ ಚಪಲ ಅಧಿಕಗೊಂಡಂತೆ ಕಾಣಿಸುತ್ತದೆ. ಇತ್ತೀಚೆಗೆ ಒಂದು ಧರ್ಮ ಸದನವನ್ನು ನಡೆಸಿಕೊಂಡವರಂತೂ ತಮ್ಮ ಧರ್ಮದ ಸಾತ್ವಿಕತೆಯನ್ನು ಎತ್ತಿಹಿಡಿದು ಅದನ್ನು ಪಳಗಿಸಿ ಬೆಳಗಿಸುವ ಗೊಡವೆಯನ್ನೇ ಬಿಟ್ಟು, ಕೇವಲ ಅನ್ಯಧರ್ಮಗಳ ಟೀಕೆ, ಆಕ್ಷೇಪ, ನಿಂದೆಗಳಿಗಿಳಿದುದು ಶೋಚನೀಯ. ಇಂದಿನ ಘೋರ ದುಃಸ್ಥಿತಿಗೆ ಇದೊಂದು ನಿದರ್ಶನವಲ್ಲದೆ ಇನ್ನೇನು?

ಇಂಥಾ ಹವ್ಯಾಸ ಇದೇ ಪ್ರಕಾರ ಮುನ್ನಡೆಯಿತೆಂದರೆ ರಾಷ್ಟ್ರೀಯ ಭಾವೈಕ್ಯ ಆಗುವುದರ ಬದಲು, ರಾಷ್ಟ್ರವು ಸಿಡಿದು ಚಿನ್ನಛಿದ್ರವಾಗಿ ಬೀಳುವ ಅಪಾಯವೇ ಹೆಚ್ಚಿನ್ನದೇಕು. ಹೀಗೆ ರಾಷ್ಟ್ರವು ಸಿಡಿದು ಚೂರುಚೂರಾಗಲು ಈ ಧರ್ಮಾಂಧತೆಯು ಎಷ್ಟು ಘೋರ ಅಪಾಯವೋ, ಪ್ರಾಮಾಣಿಕ ಧರ್ಮಶ್ರದ್ಧೆ ರಾಷ್ಟ್ರದ ಭಾವೈಕ್ಯಕ್ಕೆ ಅಷ್ಟೇ ಸಮರ್ಥ ಸಾಧನೆಯಾಗುತ್ತದೆ ಎಂಬುದನ್ನು ನಾವಂತೂ ಮರೆಯಲಾಗದು.

ಧರ್ಮನಿಷ್ಠೆಯುಳ್ಳವರಿಗೆ ಧರ್ಮವೆಂದರೆ ಪುನೀತಪಾವನತ್ವದ ಕಾಯಕವಿರಬಹುದು. ಧರ್ಮವನ್ನೊಪ್ಪದವನಿಗೆ ಪವಿತ್ರ ಪುನೀತ ಎಂಬ ಶಬ್ದಗಳು ಅರ್ಥಶೂನ್ಯವಾದುವು. ಲೌಕಿಕದ ಕೈಮೇಲಾಗಿರುವ ನಮ್ಮ ದಿವಸಗಳಲ್ಲಿ ಧಾರ್ಮಿಕತೆಯ ಕಡೆಗ ಗಮನ ಹರಿಸುವುದೆಂದರೆ ಇಂದಿನ ನಾಗರಿಕರಿಗೇನೂ ಸುಲಭವಲ್ಲ.

ಅನೇಕ ಮಂದಿ ಧರ್ಮದ ಹೆಸರೆತ್ತಲೂ ನಾಚುತ್ತಾರೆ, ಅಂಜುತ್ತಾರೆ. ನವ್ಯ ವಿಜ್ಞಾನದ ಈ ಇಲೆಕ್ಟ್ರಾನಿಕ್ ಯುಗದಲ್ಲಿ ಧರ್ಮವೆಂಬುದು ಸಂಪೂರ್ಣ ವಿಸಂಗತವೆಂದೇ ಅವರ ಭಾವನೆ. ಇದಕ್ಕೆ ಮೂಲ ಕಾರಣವೇನೆಂದರೆ ಧರ್ಮದ ಬಗ್ಗೆ ವ್ಯಾಪಿಸಿಕೊಂಡಿರುವ ತಪ್ಪು ಕಲ್ಪನೆ ಅನ್ನಬೇಕು. ಈ ಕಲ್ಪನೆಗಳಿಗನುಸಾರ ಧರ್ಮದ ಅನುಯಾಯಿಗಳು ತಾವು ಕಲ್ಪಿಸಿದ ಧರ್ಮವನ್ನೇ ಎತ್ತಿಹಿಡಿದು ಅನ್ಯಾಯ ಮಾಡುತ್ತಾರಾದರೆ, ಧರ್ಮವೇ ಬೇಡ ಅನ್ನುವವರು ತಾವೇ ಕಲ್ಪಿಸಿದ ಕಾಗದದ ಹುಲಿಯ ಶಿಖಾರಿ ಮಾಡಲೆಳಸುತ್ತಾರೆ.

ಆದ್ದರಿಂದ ನಮಗೀಗ ಧರ್ಮ ಎಂಬುದರ ವೈಜ್ಞಾನಿಕ ರೂಪಲಕ್ಷಣವನ್ನು ನಿರ್ದಿಷ್ಟಪಡಿಸುವುದುಚಿತವಾಗಿದೆ. ಈ ದೃಷ್ಟಿಯಿಂದ ಧರ್ಮ ಎಂಬುದರ ಬಗ್ಗೆ ಮಾನವರೆಲ್ಲರೂ, ಸಾರ್ವತ್ರಿಕವಾಗಿ ಮಾನ್ಯ ಮಾಡುವ, ಹಾಗೂ ಮಾನ್ಯ ಮಾಡಿ ಅನುಸರಿಸುವ, ಅನುಸರಿಸಬೇಕಾದ ಮಾನವಿಕ ಹಾಗೂ ದಾರ್ಶನಿಕ ಲಕ್ಷಣಗಳನ್ನು ಗುರುತಿಸಿ ವಿವರಿಸುವುದೇ ಪ್ರಸ್ತುತದ ಉದ್ದೇಶ.

ಮಾನವ ಶಾಸ್ತ್ರದ ದೃಷ್ಟಿಯಿಂದ ಧರ್ಮದ ವರ್ಗೀಕರಣ[2] :

ಈ ದೃಷ್ಟಿಯಿಂದ ಧರ್ಮದ ಬಗೆ ನಾಲ್ಕು ಎಂದು ವಿದ್ವಾಂಸರ ಅಭಿಪ್ರಾಯ:

೧. ವೈಯಕ್ತಿಕ ಉಪಾಸನೆಯ ಧರ್ಮ ಮೊದಲನೆಯದು: ಈ ತೆರನಾದ ಧರ್ಮದ ಅನುಯಾಯಿಗಳು ತಂತಮ್ಮ ಉಪಾಸನೆಯನ್ನು ತಮ್ಮಷ್ಟಕ್ಕೆಯೇ ನಡೆಸಿ ಮುಗಿಸಬಲ್ಲರು. ವ್ಯಷ್ಟಿಯೇ ಪ್ರಧಾನವಾಗಿರುವ ಈ ಧರ್ಮಗಳಲ್ಲಿ ಸಮಷ್ಟಿ ಎಂಬುದು ಇದ್ದರೂ ಅಷ್ಟೇ, ಇಲ್ಲದಿದ್ದರೂ ಅಷ್ಟೇ. ಇಂಥಾ ಧರ್ಮಗಳು ತಮ್ಮ ಕಿಶೋರಾವಸ್ಥೆಯನ್ನು ದಾಟಿ ಈವರೆಗೂ ಯಾವ ಪ್ರೌಢಿಮೆಯನ್ನೂ ಸಾಧಿಸಿಕೊಂಡದ್ದಿಲ್ಲ ಅನ್ನುತ್ತಾನೆ ಆ್ಯಂಟನಿ ವಾಲ್ಲೀಸ್ ಎಂಬ ವಿದ್ವಾಂಸ.

೨. ಎರಡನೆಯ ಪದ್ಧತಿಯನ್ನು ಶಾಮಾಯ ಪದ್ಧತಿಯ ಧರ್ಮಗಳೆಂದು ವಿಂಗಡಿಸಿದ್ದಾರೆ. ಇವುಗಳಲ್ಲಿ ಮಂತ್ರಮಾಟವೇ ಉಪಾಸನೆಯ ತಿರುಳು. ಮಂತ್ರವಾದಿ ಮಾಟಗಾರರೇ ಇಲ್ಲಿಯ ಪೂಜಾರಿಗಳು. ಮೂಢನಂಬಿಕೆಗಳೇ ಇವರ ವೇದ. ಮಾರಕ ದೇವತೆಗಳೇ ಇವರ ಉಪಾಸನೆಯ ವಸ್ತು.

೩ ಮೂರನೆಯ ಗುಂಪಿನ ಧರ್ಮಗಳಲ್ಲಿ ಸಮಾಜದ ಇಷ್ಟಾನುಸಾರ ನಿಯಮಿತ ಕಾಲಕ್ಕೆ ಮಾತ್ರ ಪೂಜಾರಿಯ ಹೊಣೆಯನ್ನು ನಿರ್ವಹಿಸುವ ಅಧಿಕಾರವನ್ನು ಸಮಾಜ ತನ್ನ ನಿರ್ದಿಷ್ಟ ಸದಸ್ಯರಿಗೆ ವಹಿಸಿಕೊಡುತ್ತದೆ. ಸಮಷ್ಟಿಯ

---

2. Anthony Walles: RELIGION - *AN ANTHROPOLOGICAL VIEW*, Stanford University, Canada.

ಅಧಿಕಾರದಿಂದ, ಸಮಷ್ಟಿಯ ಪ್ರಾತಿನಿಧ್ಯ ಹಿಡಿದು ಪೌರೋಹಿತ್ಯ ನಡೆಯು ತ್ತದೆ. ವ್ಯಷ್ಟಿಗೆ ಇಲ್ಲಿ ಯಾವ ಸ್ಥಾನಮಾನವೂ ಇಲ್ಲ. ಉಪಾಸನೆ ಒಂದನ್ನು ಬಿಟ್ಟರೆ ಎಲ್ಲರೂ ಸರಿಸಮಾನರು. ಇದರಲ್ಲಿ ಧರ್ಮ ಮತ್ತು ರಾಜಕಾರಣಗಳ ಮುಕ್ತ ಮಿಶ್ರಣ ಅಧಿಕವಾಗಿ ಒಳಗೊಂಡು ಬೆಳೆಯುತ್ತದೆ.

೪. ಕೊನೆಯದಾಗಿ ಉಪಾಸನೆಯನ್ನೇ ತಮ್ಮ ಜೀವನೋದ್ದೇಶವನ್ನಾಗಿಟ್ಟು ಕೊಂಡ ಪೌರೋಹಿತ ವರ್ಗವುಳ್ಳ ಧರ್ಮಗಳು. ಇಲ್ಲಿ ಪುರೋಹಿತರಿಗೆ ವಿಶಿಷ್ಟ ಸ್ಥಾನಮಾನಗಳಿರುತ್ತವೆ

ಈ ಕೊನೆಯ ವರ್ಗದಲ್ಲೂ ಎರಡು ವಿಭಾಗಗಳಿವೆ. ವಂಶಪಾರಂಪಾರಿಕ ವಾಗಿ ಪೌರೋಹಿತ್ಯವನ್ನು ಹಿಡಿಯುವ ಧರ್ಮಗಳು ಒಂದು ಕಡೆಯಾದರೆ, ಐಚ್ಛಿಕ ವಾಗಿ ಈ ಮಾರ್ಗವನ್ನಾಗಿರಿಸಿಕೊಂಡು ಅದಕ್ಕಾಗಿಯೇ ಕಲ್ಪಿತವಾದ ಕಟ್ಟು ನಿಟ್ಟು ಗಳನ್ನು ಪರಿಪಾಲಿಸುವುದರ ಜೊತೆಗೆ, ಅದಕ್ಕನುಗುಣವಾದ ತರಬೇತಿ, ವಿದ್ಯಾಭ್ಯಾಸ ಹಾಗೂ ವ್ರತಧಾರಣೆಗಳನ್ನು ಸಾಧಿಸುವವರ ಗುಂಪು ಇನ್ನೊಂದು ಕಡೆ. ಕ್ರೈಸ್ತ ಧರ್ಮವು ಈ ಎರಡನೆಯ ವಿಭಾಗಕ್ಕೆ ಒಳಪಡುತ್ತದೆ. ಪವಿತ್ರ ಬಾಯ್ಬಲ್ ಗ್ರಂಥದ ಆಧಾರದ ಮೇಲೆ ಕ್ರೈಸ್ತಧರ್ಮ ಬೋಧನೆಯನ್ನು ಸೈದ್ಧಾಂತಿಕವಾಗಿ ರೂಪಿಸಿ, ಪರಂಪರಾಗತವಾದ ಅನುಷ್ಠಾನದಿಂದ ಸಂತ ಪುಣ್ಯಪುರುಷರ ಜೀವನಾ ದರ್ಶಗಳ ಮೇರೆಗೆ ಪ್ರತಿಪಾದಿಸುವ ಕ್ರೈಸ್ತಧರ್ಮಸಭೆಯಲ್ಲಿ ವ್ಯಷ್ಟಿಯ ಕಲ್ಪನೆ ಅಪ್ರಧಾನ. ಅಷ್ಟೇ ಅಲ್ಲ ವ್ಯಷ್ಟಿಯಾದವರು ಧರ್ಮಸಭೆಯ ಸಮಷ್ಟಿಗೆ ಮಣಿಯ ಬೇಕೆಂಬ ನಿಯಮವಿದೆ.

ಧರ್ಮಮೀಮಾಂಸೆ :

ಧರ್ಮಮೀಮಾಂಸೆಯನ್ನು ಏರ್ಪಡಿಸಲು ಯಾವ ಸುಲಭವಾದ ದಾರಿಯಿಲ್ಲ. ಇದಕ್ಕೆ ಅಡ್ಡವಾಗುವ ಅಡ್ಡಿಆತಂಕಗಳು ಅನೇಕವಿವೆ. ಇವನ್ನೆಲ್ಲಾ ಪಟ್ಟಿಮಾಡಿ ವಿವರಿಸುವುದು ಪ್ರಸ್ತುತಕ್ಕೆ ವಿಸಂಗತ. ಇಲ್ಲಿಗೆ ಕೇವಲ ಇಷ್ಟನ್ನೇ ತಿಳಿದರೆ ಸಾಕು: ಮೊಟ್ಟಮೊದಲನೆಯದಾಗಿ ಧರ್ಮವೆಂದರೆ ಪ್ರತಿಯೊಬ್ಬ ಮಾನವನಿಗೆ ಪರಮಾತ್ಮನೊಡನಿರುವ ಬಂಧುತ್ವದ ಅರಿವು, ಶ್ರದ್ಧೆ, ಭಕ್ತಿ ಮತ್ತು ಉಪಾಸನೆಗಳ ಛಟ್ಟು ಇಳಿಸಿದ ರೂಪ ಎಂಬುದು ಬಹುತೇಕ ವಿದ್ವಾಂಸರು ಅನುಮೋದಿಸುವ ವ್ಯಾಖ್ಯೆ ಅನ್ನಬಹುದು. ಈ ದೃಷ್ಟಿ ಹಿಡಿದು ಸಾಗುವಾಗ ಧರ್ಮಮೀಮಾಂಸೆಯ ದಾರಿ ಇನ್ನಷ್ಟು ಜಟಿಲ. ನವ್ಯನಾಗರಿಕ ಮಾನವನ ಪ್ರಜ್ಞೆಯಲ್ಲಿ ಧರ್ಮಕ್ಕೆ ಎಡೆಯಿಲ್ಲ. ಹೀಗೆ ಪದಚ್ಯುತಿಗೊಂಡ ಧರ್ಮಕ್ಕೆ ಮೀಮಾಂಸೆಯನ್ನು ಕಟ್ಟುವುದು ಇನ್ನಷ್ಟು ಕಷ್ಟದ ಕೆಲಸ.

ಧರ್ಮವೆಂಬುದು ವಸ್ತುನಿಷ್ಠವಲ್ಲ, ಅದೊಂದು ಕೇವಲ ಕಾಲ್ಪನಿಕ ಪ್ರಪಂಚ ಅನ್ನುತ್ತಾರೆ ಕೆಲವರು. ಇವರಿಗೆ ವಿರೋಧವಾಗಿ ಧರ್ಮಮೀಮಾಂಸೆಯನ್ನು ಪ್ರದರ್ಶಿಸ ಹೊರಟ ದಿಟ್ಟರಾದ ಇತರರು ತಮ್ಮ ಕಾರ್ಯಸಾಧನೆಗಾಗಿ ವಿಭಿನ್ನ ಪದ್ಧತಿಗಳನ್ನು ಕಟ್ಟಿಕೊಂಡಿದ್ದು ನಮಗೆ ಗೋಚರಿಸುತ್ತದೆ. ಆದರೆ ಇವರು ಧರ್ಮಮೀಮಾಂಸೆಗೆ ಅನುಕೂಲರಾಗುವುದರ ಬದಲಿಗೆ, ಅರಿವನ್ನು ಗೊಂದಲಕ್ಕೀಳಿಸಿ ಇನ್ನಷ್ಟು ಎಡೆತೊಡೆಗಳನ್ನೊಡ್ಡಿದ್ದಾರೆ. ಈ ಪದ್ಧತಿಗಳನ್ನು ಇಲ್ಲಿ ಸಂಕ್ಷೇಪವಾಗಿ ನಿರೂಪಿಸಲೇ ಬೇಕು. ಜೊತೆಯಲ್ಲೇ ಅವುಗಳ ಮೌಲ್ಯಮಾಪನವೂ ಒಂದೇ ಮಾತಿನಲ್ಲಿ ನೀಡಲಾಗುವುದು.

ಈ ಸಾಧಕರು ಕಲ್ಪಿಸಿಕೊಂಡ ಪದ್ಧತಿಗಳು ಎಂಟು.[3] ಇವುಗಳ ಪರಿಚಯ, ಅವಗಾಹನೆ ಹಾಗೂ ವಿವೇಚನೆ ಈ ಪ್ರಕಾರವಿದೆ :

೧. ಮೊದಲನೆಯದಾಗಿ ಭಾವದೃಷ್ಟಿಯ ಪದ್ಧತಿ : (Method of abstraction)

ಧರ್ಮದ ಇತಿಹಾಸಕಾರರು ವಿವಿಧ ಧರ್ಮಗಳ ವಾಸ್ತವಿಕತೆಯನ್ನು ಗಮನಿಸದೆಯೇ, ಕೇವಲ ಧರ್ಮ ಎಂಬುದರ ತಿರುಳನ್ನು ಮಾತ್ರ ಅಪಕರ್ಷಣ (distinguish by separation) ಮಾಡ ಬಿಟ್ಟಿಸುತ್ತಿದ್ದಾರೆ. ಹೀಗೆ ಗುರುತಿಸಲಾಗುವ ಅಮೂರ್ತ ಲಕ್ಷಣಗಳಿಂದ ನಿರ್ದಿಷ್ಟ ಸ್ಥೂಲರೂಪದ ಧರ್ಮಗಳ ಪರಿಚಯವನ್ನು ಸಮರ್ಪಕವಾಗಿಯೂ ಆಳವಾಗಿಯೂ ಮಾಡಬರುವಂತಿಲ್ಲ. ತನ್ನಿಮಿತ್ತ ಈ ಪದ್ಧತಿ ಧರ್ಮದ ಬಗ್ಗೆ ವಿವೇಚನೆ ನಡೆಸಲು ಸೂಕ್ತವೆನಿಸಲಾರದು.

೨. ಎರಡನೆಯದು ಸಂಕಲನೆಯ ಪದ್ಧತಿ : (Additive method)

ಇಲ್ಲಿ ಧರ್ಮವೆಂದರೆ ಎಲ್ಲಾ ಧರ್ಮಗಳಲ್ಲೂ ಗೋಚರಿಸುವ ಉತ್ತಮ ಅಂಶಗಳ ಸಂಗ್ರಹ ಎಂದು ಭಾವಿಸಿಕೊಂಡು ಈ ಪದ್ಧತಿ ಬೆಳೆದಿದೆ. ಈ ಪ್ರಕಾರ ಆಯಾ ಧರ್ಮದ ಲಕ್ಷಣಗಳು ಗುರುತಿಸಿ ರಾಶಿಮಾಡಿದ ಮಾತ್ರಕ್ಕೆ ಧರ್ಮದ ಪರಿಚಯವನ್ನು ಮಾಡಿಕೊಂಡ ಹಾಗಾಗಲಾರದು. ಧರ್ಮಕ್ಕೆ ಅವಶ್ಯಕವಾದು ದೇನು, ಏನಿಲ್ಲದಿದ್ದರೆ ಧರ್ಮವೆನಿಸಲಾರದು ಎಂಬುದರ ಬಗ್ಗೆ ನಿರ್ದಿಷ್ಟ ಪೂರ್ವ ತೀರ್ಮಾನವಿದ್ದರೆ ತಾನೇ ಈ ತೆರನಾದ ಉತ್ತಮ ಅಂಶಗಳನ್ನು ಗುರುತಿಸಿ ಸಂಗ್ರಹಿಸಲು ಸಾಧ್ಯವಾಗುವುದು ? ಅನಾವಶ್ಯಕವಾದುದೇನೆಂದು ತೀರ್ಮಾನಿಸ ಲಾದರೂ ಇಂಥಾ ಒರೆಗಲ್ಲು ಇಲ್ಲದೆ ನಡೆಯಲಾರದು. ಇದಕ್ಕೆ ಬೇಕಾದಂಥ

3. K. Rahner (ed.) *Encyclopedia of Theology*, Burms and Oates, London (1975). pp. 1357.

ಮಟ್ಟಕೋಲನ್ನು ಇದುವರೆಗೆ ಯಾರೊಬ್ಬರೂ ತಯಾರಿಸಿಟ್ಟಿದ್ದನ್ನು ನಾವು ಕಾಣಲಾರೆವು. ಹಾಗಾದ್ದರಿಂದ ಈ ಪದ್ಧತಿಯಾದರೂ ಧರ್ಮವಿಮರ್ಶೆಗೆ ಸೂಕ್ತಸಮರ್ಪಕ ದಾರಿಯೆಂದು ಒಪ್ಪಲಾಗದು.

೩. ಮೂರನೆಯ ಪದ್ಧತಿ ಅಂದರೆ ವಿಕಲನೆಯ ಪದ್ಧತಿ: (Method of substraction)

ಐತಿಹಾಸಿಕವಾಗಿ ಬೆಳೆದು ಬಂದಂಥಾ ಧರ್ಮಗಳನ್ನು ತರ್ಕವಿವೇಚನೆಗಳ ದೃಷ್ಟಿಯಿಂದ ಈ ಪದ್ಧತಿ ಹೊರತುಪಡಿಸುತ್ತದೆ. ಮೇಲಿನ ಸಂಕಲನೆಯ ಪದ್ಧತಿಯಲ್ಲಿ ಧರ್ಮವೆಂಬುದು ಕಾಲಕ್ರಮೇಣಕ್ಕೆ ವಿಕಾಸಗೊಂಡು ಬೆಳೆಯುತ್ತದೆ ಎಂದು ಒಪ್ಪಿಕೊಂಡರೆ, ಇಲ್ಲಿ ಮಾತ್ರ ಕಾಲಕ್ರಮೇಣ ಧರ್ಮಗಳು ಅವನತಿಗಿಳಿಯುತ್ತವೆ ಎಂದು ತೀರ್ಮಾನಮಾಡಿದಂತಿದೆ. ಈ ಪದ್ಧತಿ ಕೇವಲ ಅಪ್ಪಟವಾದಂಥ ಧರ್ಮಾನುಸಾರ ಸತ್ಯಗಳನ್ನಷ್ಟೇ ಅರಸುತ್ತದೆ. ತತ್ಪರಿಣಾಮವಾಗಿ ಮೂಡಿಬರುವ ಕಲ್ಪನೆಯಾದರೋ ಧರ್ಮ ಎಂಬುದನ್ನು ಪ್ರಪಂಚದಿಂದಲೇ ಹೊರಗಟ್ಟಿ ಬಿಡುತ್ತದೆ. ಹಾಗಾದರೆ ಯುಗಯುಗಾಂತರಕ್ಕೂ ಮಾನವನ ಮನವನ್ನೊಲಿಸಿ ಆತನನ್ನು ವಶಪಡಿಸಿಕೊಂಡಂಥ ಧರ್ಮ ಎಂಬುದಕ್ಕೆ ತಿರುಳೇ ಇಲ್ಲವೆಂದ ಹಾಗಾಯಿತು. ಆಮೇಲೆ ಧರ್ಮವಿಮರ್ಶೆಗೆ ಆಸ್ಪದವೆಲ್ಲಿ?

೪. ನಾಲ್ಕನೆಯದು ಏಕರೂಪ ಪದ್ಧತಿ: (Method of identity)

ಈ ಪದ್ಧತಿಯಾದರೂ ಐತಿಹಾಸಿಕ ದೃಷ್ಟಿಯಿಂದ ಧರ್ಮವೆಂಬುದು ವಿಕಾಸಗೊಳ್ಳುತ್ತಿದೆ ಎಂಬುದನ್ನು ಗಮನಿಸುವುದಿಲ್ಲ. ಸಂಪ್ರದಾಯ ಪರಂಪರೆಗಳನ್ನಷ್ಟೇ ಗಮನಿಸಲಿಕ್ಕೆಂದು ಇದನ್ನು ಬಳಸುತ್ತಾರೆ. ಧರ್ಮದ ರೂಪ ಒಮ್ಮೆ ಮೂಡಿತೆಂದರೆ ಅದು ಶಾಶ್ವತವಾಗಿ ಒಮ್ಮೆ ತಾಳಿದ ಆಕಾರ ಆಯಾಮಗಳಲ್ಲಿಯೇ ಉಳಿಯುತ್ತದೆ ಎಂಬುದೇ ಈ ಪದ್ಧತಿಯ ಸಿದ್ಧಾಂತ. ಕಾಲಮಾನದಿಂದಲೋ ಅಥವಾ ಪರಿಸರದ ವಿಭಿನ್ನತೆಯಿಂದಲೋ ಧರ್ಮಕ್ಕೆ ವಿಕಾಸಗೊಳ್ಳಲು ಯಾವ ಆಸ್ಪದ ಹಕ್ಕಾದರೂ ಇದೆ ಎಂಬುದಕ್ಕೆ ಇಲ್ಲಿ ಸಮ್ಮತಿಯಿಲ್ಲ. ಇದರ ಪರಿಣಾಮವಾಗಿ ಧರ್ಮ ಎಂಬ ಕಲ್ಪನೆಯೇ ವಿಕೃತಗೊಳ್ಳುವುದು ಸಹಜ ತಾನೇ?

೫. ಐದನೆಯದು ಪೃಥಕ್ಕರಣೆಯ ಪದ್ಧತಿ: (Method of isolation)

ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ, ಧರ್ಮದ ವಿಶಿಷ್ಟವಾದಂಥ ಮುಖವನ್ನಾರಿಸಿಕೊಂಡು, ಅದನ್ನು ತನ್ನ ಮೂಲ ಸಹಜವಾದ ಪರಿಸರದಿಂದಲೂ ಸಮಗ್ರ ವಾಸ್ತವಿಕತೆಯ ಚೌಕಟ್ಟಿನಿಂದಲೂ ಬೇರ್ಪಡಿಸಿಕೊಳ್ಳುವ ದಾರಿ ಹಿಡಿಯುತ್ತ ಈ ಪದ್ಧತಿ ಬೆಳೆದು ಸಾಗಿದೆ. ಇಲ್ಲಿ ಕೇವಲ ಅನುಭವ ಮತ್ತು

ಸ್ಪಂದನ ಸಂವೇದನೆಗಳನ್ನು ಮಾತ್ರ ಲೆಕ್ಕಿಸುತ್ತಾರೆ. ಪವಿತ್ರಪುನೀತತೆಯ ಭಾವನೆ ಸಂವೇದನೆಯೊಂದೇ ಇಲ್ಲಿಯ ಮಟ್ಟಿಗೆ ಧರ್ಮದ ಏಕೈಕ ಗುರಿಯೆಂದು ಪರಿಗಣಿಸುತ್ತಾರೆ. ಇಂಥಾ ಗುರಿ ಧಾರ್ಮಿಕ ಅಭ್ಯಾಸಕ್ಕೆ ಪ್ರೇರಕವಾಗಿದ್ದುದೇ ಈ ಪದ್ಧತಿಯ ವೈಶಿಷ್ಟ್ಯವೆನ್ನಬೇಕು. ಹಾಗೆಯೇ ಧರ್ಮದ ತಿರುಳನ್ನೇ ಅಲಕ್ಷಿಸಿ ಕೈಬಿಟ್ಟದ್ದೂ ಈ ಪದ್ಧತಿಯ ಪ್ರಧಾನ ಕೊರತೆ ಅನ್ನದೆ ಗತ್ಯಂತರವಿಲ್ಲ. ಅದೇ ಮೇರೆಗೆ ಮಿಕ್ಕ ಧಾರ್ಮಿಕ ಪ್ರೇರಣೆ ಪ್ರಚೋದನೆಗಳನ್ನೂ ಸಂಪೂರ್ಣವಾಗಿ ಕಡೆಗಣಿಸಿದುದಾರೂ ಇದರ ಮಹಾದೋಷವೇ ಆಗಿದೆ.

೬. ಆರನೆಯದಾಗಿ ವಿಕಾಸನೆಯ ಪದ್ಧತಿ: (Evolutionist method)

ಇದನ್ನು ವಿಶೇಷವಾಗಿ ಫ್ರಾಯ್ಡ್ (Freud) ಫಾಯರ್‌ಬಾಕ್ (Feurbach) ಮೊದಲಾದವರು ಮನೋವಿಶ್ಲೇಷಣೆಕಾರರು ಬಳಸಿಕೊಂಡಿದ್ದಾರೆ. ವೈಯಕ್ತಿಕ ಹಾಗೂ ಸಾಮೂಹಿಕ ಬೆಳವಣಿಗೆಯ ಅಥವಾ ವಿಕಾಸನೆಯ ಯಾವುದೋ ಒಂದು ನಿರ್ದಿಷ್ಟ ಘಟ್ಟದಲ್ಲಿ ಲೌಕಿಕ ಘಟನೆಗಳೆಲ್ಲಾ ಧರ್ಮವಾಗಿ ಮಾರ್ಪಡುತ್ತವೆ ಅನ್ನುತ್ತಾರೆ ಈ ಪದ್ಧತಿಯ ಉಪಾಸಕರು. ತನ್ನ ಸ್ವಂತದ ಕುಂದುಕೊರತೆ, ಅಲ್ಪತನ, ದುರ್ಬಲತೆ, ನಿಸ್ಸಹಾಯಕತೆ, ಮುಂತಾದ್ದನ್ನೆಲ್ಲಾ ಸಹಿಸಲಾರದ ಮಾನವನು, ಸರ್ವತಂತ್ರ ಸ್ವತಂತ್ರ ಹಾಗೂ ಸರ್ವಶಕ್ತ ದೇವನೊಬ್ಬನನ್ನು ಕಲ್ಪಿಸಿ, ಪ್ರತಿಷ್ಠಿಸಿ, ಆತನು ಸರ್ವಸಿದ್ಧ ಸಂಪೂರ್ಣನೆಂದು ಪರಿಗಣಿಸಿ, ಆತನಿಗೆ ಸರ್ವಜ್ಞಾನ, ಸರ್ವಶಕ್ತಿ, ಸರ್ವಪ್ರೇಮ ಸ್ವಾತಂತ್ರ್ಯವನ್ನು ಆರೋಪಿಸುತ್ತಾನೆ, ಎಂಬುದು ಈ ಪದ್ಧತಿಯ ಮೂಲ ಕಲ್ಪನೆ. ಮನಶ್ಶಾಸ್ತ್ರದ ದೃಷ್ಟಿಯಿಂದ ಧರ್ಮದ ಒಂದು ಮುಖ್ಯ ರೋಗ ನಿವಾರಕವಾಗುವುದೇನೋ ವಿಚಿತ್ರವಲ್ಲ. ಇದು ಸಹಜವಾದುದೇ. ಆದರೆ ಈ ಒಂದೇ ಒಂದು ಮುಖ ಅಥವಾ ಅಂಶದಿಂದ ಮಾತ್ರವೇ ಸಂಪೂರ್ಣ ಧರ್ಮವನ್ನೇ ಅಳೆಯುವುದಂತೂ ನ್ಯಾಯಬದ್ಧವೆನಿಸಲಾರದು.

ಮನೋವಿಶ್ಲೇಷಣೆಕಾರರು ಮನುಷ್ಯನನ್ನು ಧರ್ಮದ ಭ್ರಮೆಯಿಂದ ಬಿಡುಗಡೆ ಮಾಡಿ ಉದ್ಧಾರ ಮಾಡಲು ಹೊರಟಿದ್ದಾರೆ. ಆದರೆ ಇವರ ಪೈಕಿ ಯಾರೊಬ್ಬನೇ ಆಗಲಿ ಧರ್ಮದ ಬಗ್ಗೆ ತಮಗಿರುವ ಕಲ್ಪನೆಯನ್ನು ವೈಜ್ಞಾನಿಕವಾಗಿ ಪ್ರಾಮಾಣಗೊಳಿಸಿ ತೋರಿಸುವ ಗೊಡವೆಗೆ ಮಾತ್ರ ಈವರೆಗೂ ಹೋದವರಿಲ್ಲ. ತಾವು ಹೇಳಿದ್ದೆಲ್ಲಾ ಹಾಗೂ ಹೇಳುವುದೆಲ್ಲಾ ಯಾರೂ ಎಂದೂ ಶಂಕಿಸಲಾಗದಂಥಾ ವೇದವಾಕ್ಯವಾಗಿದೆ ಎಂಬ ರೀತಿಯಿಂದ ಇವರು ಸಾಗುತ್ತಾರೆ; ಕಾರ್ಯವೆಸಗುತ್ತಾರೆ. ಹಾಗೆಯೇ ಮಾನವನ ಆಸೆ, ಭರವಸೆ; ಅಂಜಿಕೆ ಮತ್ತು ನಿರಾಶೆಗಳು ಯಾವಾಗ ಯಾವ ಕಾರಣಕ್ಕಾಗಿ ಹಾಗೂ ಯಾವ ರೀತಿಯಲ್ಲಿ

ಧರ್ಮವಾಗಿ ರೂಪಾಂತರಗೊಳ್ಳುತ್ತವೆ ಎಂಬುದರ ಬಗ್ಗೆ ಇವರಿಂದ ಯಾವ ಸಮರ್ಪಕ ಸಮರ್ಥನೆಯಾದರೂ ಮೂಡಿ ಬಂದುದ್ದಿಲ್ಲ.

೭. ಏಳನೆಯ ಪದ್ಧತಿ ಭಾಷಾವ್ಯಾಖ್ಯಾನಗಳ ಪದ್ಧತಿ : (Method of interpretation)

ಈ ಪಂಥದವರ ಅಭಿಮತದ ಪ್ರಕಾರ ಮನುಷ್ಯನು ತನ್ನ ಅಸ್ತಿತ್ವವೇ ಪ್ರಕೃತ್ಯಾತೀತವಾದುದೆಂದು ನಂಬಿ ಅದನ್ನೇ ಅವಲಂಬಿಸಿ ನಡೆಯುತ್ತಾನೆ. ಧರ್ಮವನ್ನು ಮೆಟ್ಟಿ ತನ್ನ ವಿವೇಕ ಒಂದೇ ಸರ್ವಶ್ರೇಷ್ಠವಾದುದೆಂದು ಒಪ್ಪಿ ನಡೆದಾಗ ಮಾತ್ರ ಇದು ಮೂರ್ತ ರೂಪವನ್ನು ತಾಳುತ್ತದೆ; ಅನ್ನುತ್ತಾರೆ ಇವರು. ಇವರಿಗೆ ಸೈದ್ಧಾಂತಿಕ ವಿವೇಕವೇ ಧರ್ಮ. ತದ್ವಿರುದ್ಧ ಇದು ಅಂಜುಬುರುಕರು ವಾಸ್ತವಿಕತೆಯಿಂದ ಪಲಾಯನ ಮಾಡಲು ಹೂಡುವ ಕುತಂತ್ರ ಅಲ್ಲದೆ ಮತ್ತೇನೂ ಅಲ್ಲ ಎಂದು ಇತರರು ಇವರನ್ನು ಮತ್ತು ಇವರ ಪದ್ಧತಿಯನ್ನು ಖಂಡಿಸಿದ್ದಾರೆ. ಇದಂತೂ ಹೇಗೂ ಇರಲಿ, ಈ ಪದ್ಧತಿಯನ್ನೇ ತಮ್ಮ ವೇದವನ್ನಾಗಿ ಅಂಗೀಕರಿಸಿ ಕೊಂಡವರು, ಮಾನವನ ಅಸ್ತಿತ್ವ ಪ್ರಕೃತ್ಯಾತೀತವಾದುದ್ದಾದರೆ, ಕೇವಲ ವಿವೇಕ ಒಂದೇ ತನ್ನಷ್ಟಕ್ಕೆಯೇ ಸರ್ವತೋಮುಖ ಸ್ವಾತಂತ್ರ್ಯವನ್ನು ಒದಗಿಸುವ ಬಗೆ ಹೇಗೆ ಸಾಧ್ಯ ಎಂಬುದರ ಬಗ್ಗೆ ಸಮರ್ಪಕ ಉತ್ತರವನ್ನು ಇಂದಿನವರೆಗೂ ಯಾರೊಬ್ಬರಾಗಲೀ ಕೊಟ್ಟುದ್ದು ಕಾಣಿಸುವುದಿಲ್ಲ. ನಿರ್ಗುಣ ನಿಸ್ಸೀಮ ವಿವೇಕ ವೆಂಬುದು ಪರಮಾತ್ಮನೊಬ್ಬನದ್ದು ಮಾತ್ರವಾದರೆ. ಸಾಮಾನ್ಯ ಹುಲು ಮಾನ ವನ ಪಾಡೇನು ಎಂಬುದನ್ನು ಇವರು ಸ್ಪಷ್ಟಗೊಳಿಸಲಾರದೆ ಸೋತಿದ್ದಾರೆ. ಪ್ರಾಮಾಣಿಕ ಧರ್ಮ ಭಾವನೆಯಿಂದ ಮಾನವನ ಕುಂದುಕೊರತೆ. ಉದ್ದೇಶ ಲೋಪದೋಷಗಳಿಲ್ಲಾ ಸೂಕ್ತ ಪರಿಹಾರವನ್ನು ಕಾಣಬಹುದು. ಎಂಬ ಧಾರ್ಮಿಕ ವಾದವನ್ನು ವಿವೇಕಶೂನ್ಯ ಕಲ್ಪನೆ ಎಂದು ಇವರ ಪೈಕಿ ಯಾರೊಬ್ಬರೂ ಇದುವರೆಗೆ ಪ್ರಮಾಣಗೊಳಿಸಿ ಸಮರ್ಥಿಸಿಕೊಂಡುದ್ದಿಲ್ಲ.

೮. ಕೊನೆಯದಾಗಿ ಕಾರ್ಯೋನ್ಮುಖ ಪದ್ಧತಿ ಎಂಟನೆಯದು : (Functional method)

ಇತಿಹಾಸಕಾರರ ಪರಿಶ್ರಮವನ್ನು ಅನುಮೋದಿಸುವ ಪದ್ಧತಿಯ ಉಪಾಸಕರು ದೈನಂದಿನ ವ್ಯತ್ಯಾಸಗೊಳ್ಳಬಲ್ಲ ಕಾರ್ಯೋನ್ಮುಖ ಅಂಶಗಳನ್ನಷ್ಟೇ ಅವಲೋಕಿಸು ತ್ತಾರೆ. ಆದರೆ ಈ ಕಾರ್ಯೋನ್ಮುಖತೆಯ ಕಟ್ಟುನಿಟ್ಟಿಗೆ ಕಾರಣಬದ್ಧವಾದ ಯಾವುದೇ ಕ್ರಮ ಮಾತ್ರ ಇಲ್ಲಿ ಕಾಣಿಯದಾಗಿರುವುದೇ ಅಚ್ಚರಿಯ ಸಂಗತಿ. ಆದ್ದರಿಂದ ಧರ್ಮದ ಪರಿಣಾಮವಾಗಿ ನಡೆಯಬೇಕಾದ ಹಾಗೂ ಕಾಲಾನು

ಕಾಲಕ್ಕೆ ಸುಧಾರಣೆಗೊಳ್ಳಬಹುದಾದ ಕಾರ್ಯಗಳಿಗೆ ಇಲ್ಲಿ ಅವಕಾಶ ಇಲ್ಲದ ಹಾಗೆ ಈ ಪದ್ಧತಿ ಸಾಗುತ್ತದೆ ಅನ್ನಬೇಕು.

ಇಷ್ಟೆಲ್ಲಾ ಅನ್ವೇಷಣೆಯ ಪರಿಣಾಮವಾಗಿ ಒಂದು ಸತ್ಯ ಒಡೆದು ಕಾಣಿಸುತ್ತದೆ. ಕ್ರಮವತ್ತಾದ ಅಳತೆಕೋಲನ್ನು ಧರ್ಮಮೀಮಾಂಸೆಗೆ ಒದಗಿಸಿಕೊಟ್ಟ ಮಾತ್ರಕ್ಕೆ ಎಲ್ಲವೂ ಮುಗಿಯಿತೆನ್ನಲಾಗದು. ಇಂಥಾ ಅಳತೆಗೋಲಿನಿಂದಲೇ ಅನೇಕ ಮಂದಿ "ಧರ್ಮ" ಎಂಬ ಪದದ ಶಾಬ್ದಿಕ ವ್ಯಾಖ್ಯಾನ ಒಂದೇ ಮುಖ್ಯವಾದುದೆಂದು ಪರಿಗಣಿಸುತ್ತಲಿದ್ದಾರೆ. ಅಂಥವರ ಪ್ರಯತ್ನವಾದರೂ ಸಾರ್ಥಕಗೊಂಡುದ್ದು ಕಾಣೆ. ಆದ್ದರಿಂದ ನಾವು ತತ್ತ್ವಶಾಸ್ತ್ರಗಳ ಸಂಯೋಜಿತ ನೆರವಿನಿಂದ ಮಾತ್ರ ಧರ್ಮವನ್ನು ಅರ್ಥೈಸಿಕೊಂಡು ಅದರ ವ್ಯಾಖ್ಯೆಯನ್ನರಿತು ಧರ್ಮಮೀಮಾಂಸೆಯನ್ನು ಕಟ್ಟಲು ಸಾಧ್ಯ. ಪುನೀತ ಪಾವನ ಪರಮಾರ್ಥವನ್ನು, ಅಂದರೆ ಮಾನವನಿಗೆ ಪರಮಾತ್ಮನೊಡನಿರುವ ಆಧ್ಯಾತ್ಮಿಕ ಬಂಧುತ್ವವನ್ನು ಹುಡುಕಿ ಅವಲಂಬಿಸುವುದೇ ಧರ್ಮ ಎಂದು ತಿಳಿದರೆ ಸರ್ವತ್ರ ಸಮರ್ಪಕವಾಗಬಲ್ಲುದು ಹಾಗೂ ಪರಮಾರ್ಥಕ್ಕೆ ವಿಶ್ವದ ಮೇಲೆಯೇ ಪ್ರಭುತ್ವ ಇದೆ ಅಂದರೂ ತಪ್ಪಾಗಲಾರದು.

ತತ್ತ್ವಶಾಸ್ತ್ರ, ಮನಶ್ಶಾಸ್ತ್ರ ಹಾಗೂ ದೇವಶಾಸ್ತ್ರಗಳು ಈ ಸತ್ಯದ ಬಗೆಗಿನ ಅಧ್ಯಯನವನ್ನು ನಡೆಸುತ್ತಿವೆ. ಅದೇ ಮೇರೆಗೆ ಜಗದಾದ್ಯಂತ ಧರ್ಮ ಎಂಬುದರ ಬಗ್ಗೆ ಐತಿಹಾಸಿಕ ಅವಲೋಕನ ಅನ್ವೇಷಣೆಗಳನ್ನು ನಡೆಸಿದ್ದಾರೆ, ಇನ್ನೂ ನಡೆಸುತ್ತಲಿದ್ದಾರೆ. ಡಾಕ್ಟರ್ ಮರ್ಸಿಯ ಎಲಿಯಡ್ ಎಂಬುವರು ಈ ದಿಸೆಯಲ್ಲಿ ಅಸಾಧಾರಣವಾದಂಥಾ ಪರಿಶ್ರಮವನ್ನು ತೋರಿಸಿ ಕೃತಾರ್ಥರಾಗಿದ್ದಾರೆ ಅನ್ನಬೇಕು. ಇವರು ಧರ್ಮಧರ್ಮಗಳ ತುಲನಾತ್ಮಕ ಅಧ್ಯಯನ ನಡೆಸಿದ ಮೇಧಾವಿ ವಿದ್ವಾಂಸರ ಪೈಕಿ ಅಗ್ರಗಣ್ಯರು. ಆದ್ದರಿಂದಲೇ ಇವರ ಹೆಸರು ಜಗದ್ವಿಖ್ಯಾತವಾಗಿರುವುದು.

ಇವರೆಲ್ಲರ ಅಭಿಮತದ ಪ್ರಕಾರ ಧರ್ಮನಿಷ್ಠೆಯುಳ್ಳ ಯಾವ ಮನುಷ್ಯನೇ ಇರಲಿ ಎಲ್ಲರೂ ಒಪ್ಪಿಕೊಂಡು ಕಾರ್ಯಗತಗೊಳಿಸಬೇಕಾದ ಧರ್ಮಶ್ರದ್ಧೆಯ ಬಗೆಗಿನ ವ್ಯಾಖ್ಯೆ ಹೀಗಿದೆ:

ಪರಮಾರ್ಥದ ಪಥದಲ್ಲಿ ಪರಮಾತ್ಮನನ್ನು ನೆಚ್ಚಿ ಆತನತ್ತ ಸಾಗುವುದೇ ಧರ್ಮ.

ಪುನೀತತೆಯೇ ಧರ್ಮದ ಹಿನ್ನೆಲೆ ಹಾಗೂ ಚೌಕಟ್ಟು: [4]

ನಮ್ಮ ವಿವೇಚನೆ ಇಲ್ಲಿಂದ ಮುಂದೆ ಸಾಗುವುದಕ್ಕೆ ಅನುಕೂಲವಾಗಲು ಮೊಟ್ಟ ಮೊದಲು ಪುನೀತತೆ ಎಂದರೆ ಏನು ಅಲ್ಲ ಎಂಬುದನ್ನು ಗಮನಿಸುವುದು

4. K Rahner *op CIT* pp. 639 ff

ಉಚಿತ. ಇದು ಪರಮಾತ್ಮನ ಒಂದು ಗುಣ ಅಥವಾ ಲಕ್ಷಣ ಎಂದು ತಿಳಿಯ ಲಾಗದು, ಏಕೆಂದರೆ ಇದೊಂದು ಕೇವಲ ವಿಶೇಷಣವಲ್ಲ ಅಥವಾ ನಾವು ಪರಮಾತ್ಮನಿಗೆ ಕೊಡುವ ಕುಂಟು ಹೆಸರೋ ಬಿರುದೋ ಇದಾಗಿದೆ ಎಂದೂ ಎಷ್ಟು ಮಾತ್ರಕ್ಕೂ ತಿಳಿಯಲಾಗದು. ಮೇಲೆ ಕೊಟ್ಟ ವ್ಯಾಖ್ಯೆಗನುಸಾರ, ಸರ್ವೇಶ್ವರ ಪರಮಾತ್ಮನನ್ನು ಕಾಣಲು ಹೊರಟವನ ಶ್ರದ್ಧೆಯೇ ಪುನೀತತೆ ಎಂದು ನಾವು ತಿಳಿಯಬೇಕು. ಕೇವಲ ಈ ಒಂದೇ ಶಬ್ದ ಹಾಗೂ ಅದರ ತಿರುಳನ್ನು ಕುರಿತು ಖ್ಯಾತ ವಿದ್ವಾಂಸನೊಬ್ಬನು ಒಂದು ದೊಡ್ಡ ಗ್ರಂಥವನ್ನೇ ರಚಿಸಿದ್ದಾನೆ.[5]

ಇನ್ನು ಈ ಪುನೀತತೆಯ ಈ ಅಭಿವ್ಯಕ್ತಿಯನ್ನು ಗುರುತಿಸದೆ ಬಿಡಲಾಗದು. ಹಾಗೆ ಮಾಡಿದರೆ ಮಾತ್ರ ಅದರ ಸಮರ್ಪಕ ಪರಿಚಯವಾಗುವುದು. ಮಾನವನ ಸಮಗ್ರ ಊಹಾಪೋಹೆ ಕಲ್ಪನೆಗಳಲ್ಲೂ ಪುನೀತತೆ ತಳವೂರಿದೆ ಅನ್ನಲಾಗದು. ಕೇವಲ ಸಿದ್ಧಾಂತ ವ್ಯಾಖ್ಯೆಗಳನ್ನಷ್ಟೇ ಹುಡುಕಿ ಸಾಗುವಾತನಿಗೆ ಪುನೀತತೆಯ ವಾಸನೆ ಸುಳಿವೊಂದೂ ಹತ್ತಲೊಲ್ಲದು. ಪರಮಾರ್ಥದ ಸೋಂಕು ಸಾಗಿದಾಗ ಮಾತ್ರ ಅದು ತಪ್ಪದೆ ತಾನಾಗಿಯೇ ಹತ್ತಬಲ್ಲುದು. ಇಂಥಾ ಸೋಂಕು ಹಿಂದೆ ಋಷಿಗಳಿಗೆ ತಾಗಿತ್ತು. ಆದ್ದರಿಂದಲೇ ಅವರು "ಏಕಮೇವಾದ್ವಿತೀಯಂ" ಎಂದೂ, ಜೇಡರ ಹುಳದಿಂದ ಜೇಡರಬಲೆ ಹೊಮ್ಮುವಂತೆ ಪರಮಾತ್ಮನಿಂದಲೇ ಸಕಲ ಬಹುಮುಖ ಸೃಷ್ಟಿಯ ಉಗಮನೆಂದೂ ಸಾರಿದ್ದಾರೆ.[6] ಈ ಪುನೀತತೆಯ ಅನುಭವವನ್ನು ಪಡೆದ ಸಂತ ಪೇತ್ರನು ಯೇಸುಸ್ವಾಮಿಗೆ ಹೀಗೆಂದನು: "ಸ್ವಾಮಿ, ನಾನೊಬ್ಬ ದರಿದ್ರ ಪಾಪಿ. ನನ್ನಿಂದ ದೂರ ಸರಿಯಿರಿ" (ಲೂಕ ೫:೮). ಇದೇ ಪ್ರಕಾರ ಅರ್ಜುನನ ಅನುಭಾವ ಭಗವದ್ಗೀತೆಯಲ್ಲಿ ಘೋಷಿತ ವಾಗಿದೆ:

"ಲೇಲಿಹ್ಯಸೇಗ್ರಸಮಾನ: ಸಮಂತಾಲ್ಲೋಕಾನ್ಸಮಗ್ರ ವದನೈರ್ಜ್ವಲದ್ಭಿ:
ತೇಜೋಭಿರಾಪೂರ್ಯ ಜಗತ್ಸಮಗ್ರಂ ಭಾಸಸ್ತವೋಗ್ರಾ: ಪ್ರತಪಂತಿ ವಿಷ್ಣೋ"
(ಉರಿಯುವ ವದನಗಳಿಂದೆಂಬಂತೆ ಎಲ್ಲಾ ಕಡೆಗಳಿಂದಲೂ ಲೋಕಗಳನ್ನೂ, ಪ್ರಪಂಚಗಳನ್ನೂ, ಎಲ್ಲವನ್ನೂ ನೆಕ್ಕುತ್ತ ನುಂಗಿ ಬಿಡುತ್ತೀ. ಓ ವಿಷ್ಣೋ, ನಿನ್ನ ಉಗ್ರ ಬೆಳಕಿನ ಕಿರಣಗಳು ತೇಜಸ್ಸಿನ ಜ್ವಾಲೆಗಳಿಂದ ಸಮಗ್ರ ಜಗತ್ತನ್ನು ತುಂಬಿ ಎಲ್ಲೆಡೆಯೂ ಸುಡುತ್ತಿವೆ.)

ಇಸ್ಲಾಮಿಯ ಅನುಭವಸಿದ್ಧಿಗಳ ಪಿತಾಮಹನಾದ ಅಲ್ – ಜುನಾಯುದ ಎಂಬಾತನು ಪುನೀತತೆಯ ಅನುಭವದ ಬಗ್ಗೆ ಹೀಗೆಂದಿದ್ದಾನೆ:– "ಧರ್ಮನಿಷ್ಠರಿಗೆ

---

5. R. Otto, *The Idea of Holy*, Oxford University Press. London, 1952.
6. *Mandukopanishat 1:7 ff.*

ಈ ಲೋಕದಿಂದ ಪರಲೋಕಕ್ಕೆ ಹೋಗುವ ಯಾತ್ರೆ ಅತಿ ಸುಲಭ. ಆದರೆ ಒಂದು ವಿಷಯ: ಅಲ್ಲಾನಿಗಾಗಿ ಭೋಗದ ವಸ್ತುಗಳನ್ನು ತ್ಯಜಿಸಿ ದೂರವಾಗುವುದು ಸುಲಭವಲ್ಲ. ಅಲ್ಲಾನ ಬಳಿಗೆ ಹೋಗುವ ಯಾತ್ರೆ ಸ್ವಾರ್ಥದ ದೆಸೆಯಿಂದ ಅಧಿಕ ಕಷ್ಟಕರವಾಗುತ್ತದೆ. ಮತ್ತೆ ಅಲ್ಲಾನ ಪ್ರಸನ್ನತೆಗಾಗಿ ತಾಳ್ಮೆಯಿಂದಿರುವುದಂತೂ ಎಲ್ಲಕ್ಕಿಂತಲೂ ಕಷ್ಟ" [7]

ಹೇಗಿದ್ದರೂ ಸೈದ್ಧಾಂತಿಕ ಆಸಕ್ತಿ, ಸೌಂದರ್ಯದ ಬಗ್ಗೆ ಸಹಾನುಭೂತಿ ಮತ್ತು ನೈತಿಕ ಪರಿಶುದ್ಧಿ, ಈ ಮೂರು ಪುನೀತತೆಯ ಹೊರ ಮೈಯನ್ನು ಚುಂಬಿಸುತ್ತವೆ ವಿನಃ ಅದರ ತಿರುಳನ್ನು ಮಾತ್ರ ಅವು ಎಷ್ಟು ಮಾತ್ರಕ್ಕೂ ತಟ್ಟಲಾರವು; ಅದನ್ನು ಎಂದಿಗೂ ತುಂಬಲಾರವು. ಈ ಮೂರೂ ವಿವೇಕಶಕ್ತಿ (intellect), ಸಂವೇದನಾ ಶಕ್ತಿ (feeling) ಮತ್ತು ಇಚ್ಛಾಶಕ್ತಿಯು (will) ಕೇವಲ ಕಿಂಕರರು ಮಾತ್ರವಾಗಿವೆ. ಮಾನವನು ಎಂದು ತನ್ನನ್ನೇ ಸಂಪೂರ್ಣವಾಗಿ ಪರಮಾರ್ಥದ ವಶಕ್ಕೊಪ್ಪಿಸುತ್ತಾನೋ ಅಂದಿಗೆ ಮಾತ್ರ ಇವುಗಳಾದರೂ ಲೀನವಾಗುತ್ತವೆ. ಒಮ್ಮೆ ಹಾಗಾಯಿತೆಂದರೆ, ಪುನೀತತೆಯು ಸರ್ವಸ್ವವನ್ನೇ ಪಣವಿಟ್ಟಂತಾಗಿ, ಆ ಪ್ರಕಾರ ನಡೆದುಕೊಂಡ ಮಾನವನೂ ಪರಿಪಕ್ವ ಹಣ್ಣಾಗಿ ಬಿಡುತ್ತಾನೆ. ಹೀಗೆ ಪುನೀತತೆಯು ಭಕ್ತನಾದ ಮಾನವನಿಂದ ಎಳೆದು ಹೀರಿಕೊಳ್ಳುವ ಮೊಸಲು ಸಾಮಾನ್ಯ ಅಥವಾ ಅಲ್ಪವಾದುದಲ್ಲ. ಆದ್ದರಿಂದ ಪುನೀತತೆಯನ್ನು ಬಿಟ್ಟರೆ ಧರ್ಮವೆಂಬುದಿಲ್ಲ, ಧರ್ಮಶ್ರದ್ಧೆಯು ಕಾರ್ಯಾಚರಣೆಗೆ ದಾರಿಯಿಲ್ಲ. ಮಾನವ ಬದುಕಿಗೆ ಅರ್ಥವಿಲ್ಲ ಈ ಪುನೀತತೆಯನ್ನು ಮಾನವನು ಮೈಗೂಡಿಸಬಲ್ಲನು ಮಾತ್ರವಲ್ಲ, ತನ್ನ ಪ್ರಕೃತಿಯಿಂದಲೇ ಆತನು ಹೀಗೆ ಮಾಡಲು ಎಳೆಯಲ್ಪಡುತ್ತಾನೆ, ಕರ್ತವ್ಯಬದ್ಧನಾಗಿದ್ದಾನೆ. [8]

ಧರ್ಮದ ದ್ವಿಮುಖ ಆಯಾಮ :

ಈ ಪುನೀತತೆಯ ಶ್ರದ್ಧೆಯ ಮೇಲೆ ತಳವೂರಿದರೆ ಮಾತ್ರ ಧರ್ಮ ಎಂಬುದು ಪ್ರಾಮಾಣಿಕ ಧರ್ಮ ಎನಿಸಬಲ್ಲುದು. ಹಾಗೆ ತಳವೂರಿದಾಗ ಧರ್ಮಕ್ಕೆ ದ್ವಿಮುಖ ಆಯಾಮ ತುಂಬುವುದು ಅನಿವಾರ್ಯ. ಅದರಲ್ಲಿ ಒಂದು ಆಯಾಮ ನೇರವಾಗಿ ಮೇಲಕ್ಕೇರುತ್ತದೆ, ಪರಮಾತ್ಮನನ್ನು ತಲುಪಲು ಪ್ರಯತ್ನಿಸುತ್ತದೆ; ಇದರ ಅವಳಿ ಆಯಾಮ ಸಮಾನಾಂತರ ಸಮತಳದ ಮೇಲೆ ಹಬ್ಬುವಂಥಾದ್ದು. ಮೊದಲನೆ

7. P. C. Zaehner: *Hindu and Muslim Mysticism*, The Athlone Press, London, 1960 p. 153
8. II Vatican Council, Declaration on Religious Freedom: *Humanae Dignitatis, art.* 2.

ಯದು ಮಾನವನನ್ನು ಪರಮಾತ್ಮನತ್ತ ಎತ್ತಿ ಸಾಗಿಸುತ್ತದೆ. ಹಾಗೆಯೇ ಅದೇ ಪರಮಾತ್ಮನ ಒಲವು ಅನುಗ್ರಹ ವರದಾನಗಳನ್ನು ಮಾನವನ ಮೇಲೆ ಇಳಿಸಿ ಹರಿಸುತ್ತದೆ. ಎರಡನೆಯ ಆಯಾಮದಲ್ಲಿ ಮಾನವನು, ಸಕಲ ಮಾನವರು, ಒಬ್ಬನೇ ಪರಮಾತ್ಮನ ಮಕ್ಕಳು, ಪರಸ್ಪರ ಸರಿಸಮಾನರಾದವರು, ಹಾಗೂ ಎಲ್ಲರೂ ಆತನ ಸಹವಾಸವನ್ನು ಸೇರಿ ಬಾಳಬೇಕಾದವರು ಎಂಬ ಸತ್ಯವನ್ನು ಮನಗಂಡು, ತದನುಗುಣವಾಗಿ ಎಲ್ಲರೊಡನೆ ನಡೆದು ಸಹಕರಿಸುತ್ತಾನೆ. ಈ ಮೊದಲನೆಯ ಆಯಾಮವನ್ನು ಭಕ್ತಿಯೆಂದರೂ ಸರಿಯೇ; ಮತ್ತು ಎರಡನೆಯದನ್ನು ಪರಸ್ನೇಹಾನುರಾಗ ಅನ್ನಬಹುದು.

ಭಕ್ತಿ :

ಇಲ್ಲಿ ಒಂದು ಮಾತನ್ನು ಮುಖ್ಯವಾಗಿ ನಾವು ಗಮನಿಸಬೇಕು. ಧರ್ಮಶ್ರದ್ಧೆ ಮತ್ತು ಭಕ್ತಿ ಅಂದರೆ ಎರಡೂ ಒಂದೇ ವಸ್ತು ಎಷ್ಟು ಮಾತ್ರಕ್ಕೂ ಅಲ್ಲ. ಪರಮಾತ್ಮನೊಡನೆ ನಮಗಿರುವ ಸಮಗ್ರ ಸಂಬಂಧಕ್ಕೂ ಶ್ರದ್ಧೆ ಇಲ್ಲದೆ ನಡೆಯದು. ಭಕ್ತಿ ಹಾಗಾಗಬೇಕಿಲ್ಲ. ಹಾಗೆಯೇ ಭಕ್ತಿ ಅಂದರೆ ಕೇವಲ ಉಪಾಸನೆ ಎಂದೂ ತಿಳಿಯಲಾಗದು. ಉಪಾಸನೆಗೆ ಕೇವಲ ಬಾಹ್ಯ ಕ್ರಿಯೆಗಳಿದ್ದರೆ ಸಾಕು, ಅದು ಪೂರ್ತಿಗೊಳ್ಳಬಲ್ಲುದು. ಅದು ಸಾರ್ಥಕವಾಯಿತೋ ಇಲ್ಲವೋ ಎಂಬ ಮಾತು ಬೇರೆ. ಭಕ್ತಿಯ ಸಂಬಂಧ ಕೂಡಿದರೆ ಮಾತ್ರ ಅದು ಸಾರ್ಥಕವಾದೀತು. ಆದ್ದರಿಂದ ಭಕ್ತಿ ಇರಲಿ ಇಲ್ಲದಿರಲಿ, ಉಪಾಸನೆ ನಡೆಯಬಲ್ಲುದು. ಆದರೆ ಭಕ್ತಿ ಮಾತ್ರ ಕೇವಲ ಬಾಹ್ಯಾಚಾರೋಪಚಾರಗಳಿಂದ ಸಾಧ್ಯವೇ ಇಲ್ಲ. ಹೃನ್ಮನಗಳು ಅದಕ್ಕೆ ಪೂರ್ಣ ಒಲಿದು ಅದರಲ್ಲಿ ಲೀನವಾಗಿರಲೇ ಬೇಕು. ಹೀಗೆ ರಾಗ ಅನುರಾಗಗಳಿಂದ ತುಂಬಿರುವ ಭಕ್ತಿಯನ್ನು ನ್ಯಾಯವಾಗಿಯೇ ರಸವೆಂದೂ ಕರೆದಿದ್ದಾರೆ.

ಭಕ್ತಿಯು ಪರಮಾತ್ಮನನ್ನು ಅರಿಯುವುದು ಮಾತ್ರವಲ್ಲ, ಆತನನ್ನು ಅರಿತು ಆ ಅರಿವಿನ ಮೇಲೆ ತಳವೂರಿ ಬೆಳೆಯುತ್ತದೆ ಎಂಬುದೂ ಖಂಡಿತ. ಹೀಗಿದ್ದರೂ ಪರಮಾತ್ಮನನ್ನು ಅರಿತ ಮೇಲೆಯೂ ಆತನ ವಿರೋಧವನ್ನು ಕಟ್ಟಿಕೊಳ್ಳಲು ಸಾಧ್ಯವಾಗಿರುವುದರಿಂದ, ಭಕ್ತಿಯ ಮೂಲಕ ಭಕ್ತನಾದವನು ಪರಮಾತ್ಮನ ಆಶ್ರಯವನ್ನು ಕೋರುತ್ತಾನೆ. ಭಕ್ತಿಯೆಂಬುದು ಒಂದು ಅಥವಾ ಯಾವ ಕ್ರಿಯೆಯಲ್ಲ. ಅಥವಾ ಅದೊಂದು ಆಶೆ ಬಯಕೆ ಎನ್ನಲೂ ಆಗದು. ಆಶೆ ಬಯಕೆಗಳಲ್ಲಿ ಸ್ವಾರ್ಥದ ಬಲ ತುಂಬಿದೆ, ರಾಗ ಅನುರಾಗಗಳಲ್ಲಿ ಹಾಗಲ್ಲ. ಈ ಮಾತಿಗೆ ಶಾಂಡಿಲ್ಯನ ಭಕ್ತಿ ಸೂತ್ರಗಳಲ್ಲಿ ಬೆಂಬಲ ಕಾಣಲು ಸಾಧ್ಯ.

ಈ ರಾಗಾನುರಾಗ ಸ್ಫುಟಗೊಂಡು ತನ್ನ ತುತ್ತತುದಿಗೇರಿದರೆ ನಾರದನ ಭಕ್ತಿ ಸೂತ್ರಗಳ ವಸ್ತು ಗೋಚರಿಸಬಹುದು. ನಾರದನ ಸೂತ್ರಗಳ "ಸಾತು ಅಸ್ಮಿನ್

ಪರಮಪ್ರೇಮರೂಪಾ" ಎಂದೂ ತಿಳಿಯಬಹುದು. ಇದರ ಮೂಲಕ ಭಕ್ತನು ಸಿದ್ಧಿಗಳಿಸುತ್ತಾನೆ, ಅಮೃತನಾಗುತ್ತಾನೆ, ತೃಪ್ತನಾಗುತ್ತಾನೆ. ಇದರ ಅನುಭವದಿಂದ ಮತ್ತನಾಗಲೂ ಬಲ್ಲನು, ಇದರ ಸ್ತಬ್ಧತೆಯಿಂದ ಆತ್ಮಾರಾಮವನ್ನು ಪಡೆಯ ಬಲ್ಲನು. ಹಾಗಿದ್ದರೂ ಇದು "ನ ಕಾಮಯಮಾನಾ" ಆಗಿದ್ದುದರಿಂದ ಇದಕ್ಕೆ ಕಾಮವಾಸನೆ ತಟ್ಟಲಾರದು. ಆದ್ದರಿಂದಲೇ ಭಕ್ತಿಯ ರಾಗಾನುರಾಗವನ್ನು ವರ್ಣಿಸಿ ಹೇಳುವುದು ಸುಲಭವಲ್ಲ. ಭಕ್ತನು ಭಕ್ತಿ ದ್ವಾರ ಸಂಪೂರ್ಣ ಪರಮಾತ್ಮನಿಗೆ ಶರಣಾಗುತ್ತಾನೆ. ಆತನ ವಿಸ್ಮರಣೆಯಿಂದ ತೀವ್ರ ವ್ಯಾಕುಲನಾಗುತ್ತಾನೆ. ಈ ಸತ್ಯಕ್ಕೆ ಪ್ರಬಲ ಸಾಕ್ಷಿಗಳಾಗಿ ನಮಗೆ ಗೋಚರಿಸುವ ಇಬ್ಬರು ವ್ಯಕ್ತಿಗಳೆಂದರೆ ಆವಿಲದ ಸಂತ ತೆರೆಸಮ್ಮ ಮತ್ತು ಶಿಲುಬೆಯ ಸಂತ ಜೊಹಾನ್ನ ಎಂಬವರು. ಯಾವತ್ತೂ ಭಕ್ತಿಯ ಪರಿಣಾಮ ಎಂಬುದು ತನ್ಮಯತೆ ಅಲ್ಲದೆ ಬೇರೆಯಲ್ಲ. ನಿರಂತರ ಪರಮಾತ್ಮನ ಕುರಿತು ಸಲ್ಲಾಪಮಾಡುವುದು, ಆತನನ್ನು ಕೀರ್ತಿಸಿ ಕೊಂಡಾಡುವುದು, ಆತನ ಸ್ಮರಣೆಯಿಂದ ಪುಲಕಿತಗೊಳ್ಳುವುದು ಭಕ್ತಿಯ ಮುಖ್ಯ ಲಕ್ಷಣಗಳಾಗಿವೆ. ಭಕ್ತಿ ಮಾರ್ಗ ಹಿಡಿದರೆ ಏಕ್ಕೆಲ್ಲಾ ಮಾರ್ಗಗಳು ಮುಚ್ಚಿದಂತೆಯೇ.

ಧರ್ಮಶ್ರದ್ಧೆಯ ಈ ಆಯಾಮಕ್ಕೆ ನಾರದನ ಭಕ್ತಿಸೂತ್ರಗಳಲ್ಲಿ ಹನ್ನೊಂದು ಮೆಟ್ಟಲುಗಳನ್ನು ಅಳವಡಿಸಿ ಪಟ್ಟಿಮಾಡಲಾಗಿದೆ. ಈ ಮೆಟ್ಟಲುಗಳ ಒಳ್ಳೆಯ ಅರ್ಥಮಾಡಿಕೊಂಡು ಬಾಳಿ ಸಾತ್ವಿಕರಾಗಲೂ ಸಾಧ್ಯ. ಅಥವಾ ಇವುಗಳ ಅಪಾರ್ಥ ಮಾಡಿಕೊಂಡು ಕೆಟ್ಟುಹೋಗಲೂ ಸಾಧ್ಯ. ಇದರಿಂದ ಸಾಧಿಸಿದ ಪ್ರಾಮಾಣಿಕ ಭಕ್ತಿಯನ್ನು ಸಿದ್ಧಭಕ್ತಿ ಎಂದು ಕರೆದು, ಅಧ್ಯಾತ್ಮಿಕ ಉನ್ನತಿಗೇರಿಸುವ ಹನ್ನೊಂದು ಮೆಟ್ಟಲು ಅಥವಾ ಪಾವಟಿಗೆಗಳನ್ನು ಈ ಪ್ರಕಾರ ಗುರುತಿಸಲಾಗಿದೆ:–

೧. ಮೊದಲನೆಯದು ಗುಣಮಾಹಾತ್ಮ್ಯಾಸಕ್ತಿ: ಪರಮಾತ್ಮನೊಬ್ಬನೇ ಸರ್ವ ಸಂಪನ್ನನೆಂದೊಪ್ಪಿ, ಆತನನ್ನೇ ನೆಚ್ಚಿ ಆತನ ಧ್ಯಾನದಲ್ಲೇ ಮಗ್ನವಾಗುತ್ತಿದೆ ಈ ಭಕ್ತಿ.

೨. ಎರಡನೆಯದು ರೂಪಾಸಕ್ತಿ: ಪರಮಾತ್ಮನು ಸರ್ವ ಸುಂದರನೆಂದು ಮನಗಂಡು ಆತನ ಸಹವಾಸಾನುಭವವನ್ನು ಕೋರುವುದು ಇದರ ಗುರಿ. ಇಲ್ಲಿ ಕೇವಲ ವಿವೇಚನಾಶಕ್ತಿ ಮಾತ್ರವಲ್ಲ ಇಚ್ಛಾಶಕ್ತಿ ಮತ್ತು ಹೃನ್ಮನಗಳ ಕಾರ್ಯವೇ ಅಧಿಕ.

೩. ಪೂಜಾಸಕ್ತಿ ಮೂರನೆಯದು: ಸರ್ವಸಂಪನ್ನ ಸರ್ವಸುಂದರನನ್ನು ಆಶ್ರಯಿಸುವುದು ಮಾತ್ರವಲ್ಲ, ಏಕಾಗ್ರತೆಯಿಂದ ಆತನನ್ನು ಪೂಜಿಸುವುದೂ ಇಲ್ಲಿ ಮುಖ್ಯ.

೪. ನಾಲ್ಕನೆಯದಾಗಿ ಸ್ಮರಣಾಸಕ್ತಿ: ಭಕ್ತನಾದವನು ತನ್ನ ಸ್ಮರಣಾ ಶಕ್ತಿಯನ್ನು ಪರಮಾತ್ಮನಲ್ಲೇ ನೆಡುತ್ತಾನೆ. ತನ್ನನ್ನೇ ತಾನು ಮರೆತು, ಆ ಪರಮಾತ್ಮನು ಏನು ಮಾಡುತ್ತಾನೆ, ಏನು ಮಾಡಬಲ್ಲನು ಎಂಬುದನ್ನೇ ಜ್ಞಾಪಿಸುವುದು ಇದರ ಕರ್ತವ್ಯ ಲಕ್ಷಣ.

೫) ದಾಸ್ಯಾಸಕ್ತಿ ಐದನೆಯದು: ಪರಮಾತ್ಮನ ಸರ್ವಸಿದ್ಧಿಯ ಸಂಪನ್ನತೆಯ ಸಾಗರದಲ್ಲಿ ತನ್ನನ್ನೇ ತೇಲಿಬಿಟ್ಟು, ಸತತ ತನ್ನನ್ನೇ ಆತನ ದಾಸನನ್ನಾಗಿ ಮಾಡಿಬಿಡುವುದು ಇದರ ಉದ್ದೇಶ.

೬) ಸಖ್ಯಾಸಕ್ತಿ ಆರನೆಯ ಮೆಟ್ಟಿಲು: ಕೇವಲ ದಾಸನಾಗಿ ಪೂಜಿಸಿದರೆ ಪರಮಾತ್ಮನಿಗೆ ಸಾಲದು. ಭಕ್ತನಾದವನು ತಾನೇ ಉತ್ತಮನಾಗಿ ಅತನನ್ನು ಪ್ರೀತಿಸಿದಾಗ ಮಾತ್ರ ಆತನ ಸಖ್ಯ ಗೆಳೆತನ ಬೆಳೆಯಲೇ ಬೇಕು. ಇದು ನಿಕಟ ಆತ್ಮೀಯತೆಯ ಲಕ್ಷಣ.

೭) ಏಳನೆಯದಾಗಿ ವಾತ್ಸಲ್ಯಾಸಕ್ತಿ: ಈ ಗೆಳೆತನ ಗಾಢವಾಗುತ್ತ ಬಂದಾಗ, ಕೇವಲ ಗೆಳೆತನವಾಗಿ ಉಳಿಯದೆ, ಹತ್ತಿರದ ಆಪ್ತತ್ವ ಬೆಳೆಯುವುದೇ ಈ ಹಂತ.

೮) ಅನಂತರ ಬರುವುದು ಕಾಂತಾಸಕ್ತಿ: ಆತ್ಮೀಯ ಸಲುಗೆ ಬೆಳೆದು ರೂಢಿಯಾದಾಗ, ಪರಮಾತ್ಮನು ತನ್ನ ಕಾಂತನು, ಹಾಗೂ ತಾನು ಆತನಿಗೆ ಕಾಂತೆ ಎಂಬ ಭಾವನೆಯಿಂದ ಸಾಗುವುದು ಈ ಹಂತ.

೯) ಆತ್ಮನಿವೇದನಾಸಕ್ತಿ ಒಂಬತ್ತನೆಯದು: ಹುಲುಮಾನವನು ಭಕ್ತಿಯಿಂದ ಪುಲಕಿತನಾಗಿ ಉತ್ತಮನಾದಾಗ ತನ್ನನ್ನೇ ಸಂಪೂರ್ಣ ಪರಮಾತ್ಮನವಿಾಸಲೆಂದು ಪರಿಗಣಿಸುವನು.

೧೦) ಆ ನಂತರದ ಹಂತವೇ ತನ್ಮಯಾಸಕ್ತಿ: ತನ್ನ ಅನುರಾಗದ ವಸ್ತುವಾದ ಪರಮಾತ್ಮನು ತನ್ನಿಂದ ಬೇರೆ, ತಾನು ಆತನಿಂದ ಬೇರೆ ಎಂಬುದನ್ನು ಸಹಿಸಲಾರದ, ಆತನಲ್ಲೇ ತನ್ನನ್ನು ತನ್ಮಯಗೊಳಿಸುವುದೇ ಇದರ ವೈಶಿಷ್ಟ್ಯ.

೧೧) ಕಟ್ಟಕಡೆಗೆ ಇರುವುದು ಪರಮವಿರಹಾಸಕ್ತಿ: ಅಂದರೆ ಪರಮಾತ್ಮನ ಪ್ರಾಮುಖ್ಯತೆ, ಸರ್ವ ಸಂಪನ್ನತೆ, ಸರ್ವಸಿದ್ಧಿ. ಸರ್ವಪ್ರೇಮ ಎಷ್ಟು ಮೇಲಾಯಿತೆಂದರೆ, ಭಕ್ತನು ತಾನು ಆ ಅನಂತತೆಯ ಸಮಕ್ಷ ತನ್ನನ್ನೇ ಸಂಪೂರ್ಣ ಅರಿಸಿಕೊಂಡು ಶೂನ್ಯವೆಂಬಂತೆ ನಡೆಯುತ್ತಾನೆ. ಪರಮಾತ್ಮನ ಸಲುವಾಗಿ ಆತನ ಅನುರಾಗಕ್ಕನುಗುಣವಾಗಿ ಮಾತ್ರ ಆತನಿಗೆ ಸ್ವಪ್ರೇಮಾಭಿಮಾನ ಉಳಿಯುತ್ತದೆ.

ಧರ್ಮಶ್ರದ್ಧೆಯು ಈ ಆಯಾಮವನ್ನು ಬೆಳೆಯಿಸಿ ಕಾರ್ಯರೂಪಕ್ಕಿಳಿಸಲು ಅದನ್ನು ಸಕ್ರಿಯವಾಗಿ ಸಾಗಿಸಲು ಧರ್ಮ ಸಮಾಜಗಳಲ್ಲಿ ಪೌರೋಹಿತ್ಯ ಬೆಳೆದು ನಿಂತಿದೆ. ಆದ್ದರಿಂದ ಈ ಆಯಾಮದಲ್ಲಿ ಭಕ್ತರಾದವರು ಹೊಂದಿಕೊಳ್ಳಬೇಕಾದರೆ, ಪುರೋಹಿತರ ನೆರವಿಲ್ಲದೆ ನಡೆಯಲಾರದು. ಮೂಲತಃ ಪುರೋಹಿತರು ಜನಸೇವೆ ಜನಾರ್ಧನಸೇವೆಗಾಗಿಯೇ ಪೌರೋಹಿತ್ಯವನ್ನು ವಹಿಸಿಕೊಂಡರಾದರು. ಮಾನವ ಸಹಜವಾದ ಲೋಪದೋಷಗಳು ಅವರನ್ನೂ ಬಾಧಿಸುವದಿಲ್ಲವೆಂದಲ್ಲ. ಅಂಥಾ ಲೋಪದೋಷಗಳ ಕೈ ಮೇಲಾಯಿತೆಂದರೆ, ಅದರ ದುಷ್ಪರಿಣಾಮದಿಂದಾಗಿ ಅದಕ್ಕೆ ಬಲಿಯಾದವರು ತಮ್ಮ ಪೌರೋಹಿತ್ಯಕ್ಕೆ ದ್ರೋಹ ಬಗೆಯಲೂ ಸಾಧ್ಯವೇ. ಈ ಪ್ರಕಾರ ದ್ರೋಹ ಬಗೆದಿದ್ದಾರೆ ಎಂಬ ನಿದರ್ಶನಗಳು ಇತಿಹಾಸದುದ್ದಕ್ಕೂ ನಮಗೆ ಗೋಚರಿಸದಿಲ್ಲ.

ಅಷ್ಟೇ ಅಲ್ಲದೆ ಶಾಂಡಿಲ್ಯನ ಮತ್ತು ನಾರದನ ಭಕ್ತಿಸೂತ್ರಗಳಲ್ಲಿ ಪರಮಾತ್ಮನ ಮೇಲಿನ ಅನುರಾಗವನ್ನು ಅತಿರೇಕ ಸಂವೇದನಾ ರೂಪಕ್ಕಿಳಿಸಲಾಗಿದೆ. ಸಂವೇದನೆಯ ಪಾತ್ರ ಇದರಲ್ಲಿ ಕಡಿಮೆ ಏನಲ್ಲವಾದರೂ ಕೇವಲ ಅದೊಂದನ್ನೇ ಎತ್ತಿ ಹಿಡಿದರೆ ಎಷ್ಟೊಂದು ಧರ್ಮಾಂಧತೆ ಬೆಳೆಯಲು ಸಾಧ್ಯವೆಂದೂ ತಿಳಿಯಬೇಕು. ಜಗತ್ತಿನಲ್ಲಿ ಧರ್ಮದ ಹೆಸರಿನಿಂದ ನಡೆದ ಇನ್ನೂ ನಡೆಯುತ್ತಲೇ ಇರುವ ಅನ್ಯಾಯ ಅತ್ಯಾಚಾರಗಳ ಮೇಲೆ ನಾವು ಕಣ್ಣೋಡಿಸಿದರೆ ಸಾಕು, ಇದಕ್ಕೆ ಬೇರೆ ಪ್ರಮಾಣ ಬೇಕಿಲ್ಲ. ಅಪ್ಪಟ ಸಾತ್ವಿಕತೆಯನ್ನು ಈ ಪ್ರಕಾರ ಪೈಶಾಚಿಕ ರಾಕ್ಷಸತ್ವಕ್ಕಿಳಿಯುವುದಕ್ಕಿಂತ ಹೀನವಾದ ಅಧರ್ಮ ಇರಲು ಸಾಧ್ಯವೇ?

ಪರಸ್ನೇಹಾನುರಾಗ:

ಧರ್ಮಶ್ರದ್ಧೆಯು ಅವಳಿ ಆಯಾಮಗಳಲ್ಲಿ ಮೇಲಕ್ಕೇರಿಸಿದ ಹಾಗೂ ಕೆಳಕ್ಕೆ ಹರಿಸುವ ಆಯಾಮವನ್ನು ಭಕ್ತಿ ಎಂದು ತಿಳಿದು ಅದರ ನೈಜ ಪರಿಚಯವನ್ನು ಮಾಡಿಯಾಯಿತು. ಇನ್ನುಳಿದ ಆ ಎರಡನೆಯ ಸಮಾನಾಂತರ ಸಮತಳದ ಆಯಾಮ, ಅಂದರೆ ಪರಸ್ನೇಹಾನುರಾಗ, ಕೇವಲ ಅನ್ನಸಂತರ್ಪಣೆಯಿಂದ ಇದನ್ನು ಗುರುತಿಸಲೂ ಆಗದು ಅಥವಾ ಅದರ ಸಾಧನೆಯನ್ನು ಮಾಡಿ ಮುಗಿಸಿದ ಹಾಗೂ ಆಗಲಾರದು.

ಧರ್ಮಶ್ರದ್ಧೆಯುಳ್ಳವರು ತಾವು ಹೇಗೋ ಹಾಗೆಯೇ ಪರರೂ ಪರಮಾತ್ಮನ ಮಕ್ಕಳು ಎಂದು ತಿಳಿದು ಆ ಪ್ರಕಾರವೇ ಅವರನ್ನು ಪ್ರೀತಿಸಿ ನಡೆಯುವುದೇ ಈ ಆಯಾಮ. "ನಾವು ಪರಮಾತ್ಮನ ಮಕ್ಕಳು ಎನಿಸಿಕೊಂಡಿರಬೇಕಾದರೆ, ಪಿತ ದೇವನು ನಮ್ಮನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತಾನೆಂದು ಗಮನಿಸಿರಿ." (೧ ಯೊಹಾನ್ನ ೩:೧)

"ನಾವು ಒಬ್ಬರನೊಬ್ಬರು ಪ್ರೀತಿಸಬೇಕೆಂಬುದೇ ಮೊತ್ತ ಮೊದಲಿನಿಂದಲೂ ನೀವು ಕೇಳಿದ ಸಂದೇಶ" (೧ ಯೊಹಾನ್ನ ೩ : ೧೧)

"ನಾವು ನಮ್ಮ ಸಹೋದರರನ್ನು ಪ್ರೀತಿಸುವುದರಿಂದ ಸಾವಿನಿಂದ ಜೀವಕ್ಕೆ ಸಾಗಿದ್ದೇವೆಂದು ತಿಳಿದಿದ್ದೇವೆ. ಪ್ರೀತಿಸದೆ ಇರುವಾತನು ಸಾವಿನಲ್ಲೇ ನೆಲೆಸಿರುತ್ತಾನೆ" (೧ ಯೊಹಾನ್ನ ೩:೧೪)

"ಪ್ರಿಯರೇ ನಾವು ಒಬ್ಬರನ್ನೊಬ್ಬರು ಪ್ರೀತಿಸೋಣ. ಪ್ರೀತಿ ದೇವರಿಂದ ಉಗಮವಾದುದು ಪ್ರೀತಿಸುವವನು ದೇವರ ಮಗನು. ಅವನು ದೇವರನ್ನು ಬಲ್ಲವನು. ಪ್ರೀತಿಸದವನು ದೇವರನ್ನು ಬಲ್ಲವನಲ್ಲ. ಏಕೆಂದರೆ ದೇವರು ಪ್ರೀತಿಸ್ವರೂಪಿ" (೧ ಯೊಹಾನ್ನ ೪:೭-೮).

ಪವಿತ್ರ ಬಾಯ್ಬಲ್ ಗ್ರಂಥದ ಬೋಧೆ ಪ್ರೀತಿಯನ್ನೇ ದೇವರ ಮುಖ್ಯ ವರವೆನ್ನುತ್ತಿದೆಯಾದರೆ, ದಕ್ಷಿಣ ಭಾರತದ ಧರ್ಮಬೋಧೆಯಲ್ಲಿ ಅದೇ ಪ್ರೀತಿ ಹೇಗೆ ದೇವರ ಕ್ರಿಯೆ ಹಾಗೂ ಮಾನವರನ್ನು ದೇವರ ಮಕ್ಕಳೆಂದು ಗುರುತಿಸುತ್ತದೆ ಎಂಬ ಬೋಧೆ ಇರುವುದನ್ನು ನಾವು ಗಮನಿಸದೆ ಬಿಡಲಾಗದು. ಇದಕ್ಕೆ ನಿದರ್ಶನ ತಿರುಕ್ಕುರಳ್ ಗ್ರಂಥದಿಂದ ಆರಿಸಿದ್ದೇವೆ:

ಪ್ರೀತಿಯನ್ನು ಹೊಡೆದೋಡಿಸಬಲ್ಲ ಸಿಡಿಲ್ಮಿಂಚಿದೆಯೆ? ಪ್ರೀತಿಸುವವರ ಕಣ್ಣೀರೇ ಅದನ್ನು ತಿಳಿಸಬಲ್ಲುದು.

ಪ್ರೀತಿಯಿಲ್ಲದವರು ಎಲ್ಲವನ್ನೂ ಒಳಗೆ ಹಾಕುವರು. ಪ್ರೀತಿಸುವವರು ತಮ್ಮ ಮೂಳೆಗಳನ್ನೇ ಕಿತ್ತುಕೊಡುವರು.

ದೇಹಕ್ಕೆ ಆತ್ಮನಿದ್ದಂತೆ ಬದುಕಿಗೆ ಪ್ರೀತಿ ಬೇಕೆಂಬುದು ಋಷಿಗಳ ಬೋಧನೆ.

ಪ್ರೀತಿಯಿಂದಲೇ ಪರಸ್ನೇಹಾನುರಾಗ ಹುಟ್ಟುತ್ತದೆ. ಇದರಿಂದಲೇ ಗೆಳೆತದನ ಅಮೂಲ್ಯ ಬಂಧುತ್ವ ಉಗಮಿಸುತ್ತದೆ.

ಪ್ರೀತಿಪೂರ್ಣ ಬಾಳ್ವೆ ಇಹದಲ್ಲಿ ಸುಖವಿತ್ತು ಪರದಲ್ಲಿ ಸೌಭಾಗ್ಯವನ್ನು ನೀಡುತ್ತದೆ. ಪ್ರೀತಿಯೇ ನೀತಿ. ಇದು ಕೇಡಿನ ವಿರೋಧ ಸಿದ್ಧಾಂತದ ಎಂಬುದನ್ನು ಜನರು ತಿಳಿಯಲಾರರು.

ಮೂಳೆಯಿಲ್ಲದ ವಸ್ತುಗಳನ್ನು ಸೂರ್ಯನ ಕಿರಣಗಳು ಸುಟ್ಟುಹಾಕುವಂತೆ, ನೀತಿಯೆಂಬುದು ಪ್ರೀತಿ ಶೂನ್ಯವಾದ ಬಾಳನ್ನು ಸುಟ್ಟು ಹಾಕುತ್ತದೆ.

ಅಂತರಾಳದಲ್ಲಿ ಪ್ರೀತಿಯಿಲ್ಲದ ಬಾಳ್ವೆ ಮರುಭೂಮಿಯಲ್ಲಿ ಹೂಬಿಡಲು ಪ್ರಯತ್ನಿಸುವ ಮರದಂತೆ ಬಾಡಿಹೋಗುವುದು.

ಪ್ರೀತಿಯು ಅವಯವ ಒಳಗಡೆಯಲ್ಲಿ ಬೆಳೆಯಲಾರದಾದರೆ, ದೇಹದ ಹೊರಗಿನ ಅವಯವಗಳು ಯಾತಕ್ಕಾದಾವು?

ಪ್ರೀತಿಯ ಮಾರ್ಗವೇ ಜೀವಕ್ಕೆ ಮೂಲ. ಪ್ರೀತಿಶೂನ್ಯರ ಮೂಲ ನಿರ್ಜೀವ ಕಳೇಬರ." (ತಿರುಕ್ಕುರಳ್ ೮:೧-೧೦).

ಆದ್ದರಿಂದ ಸಕಲ ಮಾನವರೂ ಒಬ್ಬನೇ ಪರಮಾತ್ಮನ ಮಕ್ಕಳು, ಪರಸ್ಪರ ಸರಿಸಮಾನರು ಎಂಬ ಭಾವನೆ ಧರ್ಮಶ್ರದ್ಧೆಯುಳ್ಳ ಎಲ್ಲರನ್ನೂ ಒಂದುಗೂಡಿಸುತ್ತದೆ. ಪ್ರೀತಿಯ ಬಂಧನವೇ ಅವರನ್ನು ಜೊತೆಗೂಡಿಸಿ ಬಿಗಿಯುವ ಬೆಸುಗೆ. ಈ ಒಂದೇ ದಾರಿಯಲ್ಲಿ ಸಾಗಿ ಸಕಲರೂ ಮೋಕ್ಷಭಾಗ್ಯಕ್ಕೆ ಸೇರಬೇಕು. ಈ ಸತ್ಯವನ್ನು ಮನಗಂಡು, ತದನುಸಾರ ಸಕಲರೊಡನೆ ವ್ಯವಹರಿಸಿ ನಡೆದು ಕೃತಾರ್ಥನಾಗುತ್ತಾನೆ ಧರ್ಮಶ್ರದ್ಧೆಯಿಂದ ಬೆಳಗಿದ ಭಕ್ತ.

ಸಮಾರೋಪ:

ತಾನು ಹೇಗೆ ಭಗವದ್ಭಕ್ತಿಯಿಂದ ಪರಮಾತ್ಮನಲ್ಲಿ ನಡೆದುಕೊಳ್ಳುತ್ತಾನೋ ಅದೇ ಪ್ರಕಾರ ಭಕ್ತ ಭ್ರಾತೃಪ್ರೇಮದಿಂದ ಸಕಲಮಾನವರಲ್ಲಿಯೂ ನಡೆದುಕೊಳ್ಳುತ್ತಾನೆ. ಧರ್ಮದ ತತ್ತ್ವಸಾರ ಹೀಗಿರುವಾಗ, ಧರ್ಮನಿಷ್ಠೆ ಎಂಬುದು ವಿರೋಧ ಕಲಹಗಳನ್ನು ಹುಟ್ಟಿಸಲು ಹೇಗೆ ಸಾಧ್ಯ ?

ಆದರೆ ಧರ್ಮಪಥದಲ್ಲಿ ನಡೆಯುವವರು ಸ್ವತಂತ್ರ ವ್ಯಕ್ತಿಗಳು, ವೈಯಕ್ತಿಕ ಲೋಪದೋಷ, ಆಸೆದುರಾಸೆಗಳಿಗೆ ಒಳಪಟ್ಟವರು. ಇವರ ಅಲ್ಪತನ ಧರ್ಮದ ಹಿರಿಮೆಯೂ ಅಲ್ಲ ಗರಿಮೆಯೂ ಅಲ್ಲ. ಇಂತಹ ಕುಂದುಕೊರತೆನ್ಯೂನತೆಗಳನ್ನು ಮೆಟ್ಟಿ ಕಳೆದು, ಆದರ್ಶ ಪರಮಾರ್ಥಕ್ಕೆ ಏರುವಾಗ ಮಾತ್ರ ವಿರೋಧ ವೈಮನಸ್ಸು, ಹಗೆ ದ್ವೇಷ ಎಲ್ಲವೂ ನೀಗಿ ಹೋಗುವವು. ಆಗ ಮಾತ್ರ ಪ್ರಾಮಾಣಿಕವಾಗಿ ಧರ್ಮಧರ್ಮಕ್ಕೆ ವಿರೋಧವಿಲ್ಲ ಎಂದು ಯಾರೇ ಆಗಲಿ ಎದೆ ತಟ್ಟಿ ಹೇಳಬಲ್ಲರು.

ಈ ಪ್ರಾಮಾಣಿಕತೆಯ ಅರಿವು ಶಕ್ತಿ ನಮ್ಮಲ್ಲಿ, ನಮ್ಮ ರಾಜ್ಯ ಬಾಂಧವರಲ್ಲಿ, ನಮ್ಮ ದೇಶಬಾಂಧವರಲ್ಲಿ ಮೂಡಿ ಬಂದಾಗ ರಾಷ್ಟ್ರೀಯ ಭಾವೈಕ್ಯ ಸಾಧ್ಯವಾಗುತ್ತದೆ.

ಸಲಹಾ ಗ್ರಂಥಗಳು

1. Arberry A. J.: *Suffism*, Vikas Publishing House, Ghaziabad, U. P. 1979.
2. Choudury K. P. S.: *Modern Indian Mysticism*, Motilal Banarsids, Delhi, 1981
3. Dom Le Saux: *Sagesse Hindoue Mysticism Chretienne*, Editions du Centurion, Paris, 1965

4. de Chardin Teilhard, S. J. : *Le Milieu Divin*, Fontana Books, England 1964

5. de Chardin Teilhard, : *The Hymn of the Universe*, Fontana Books, 1970

6. de Chardin Teilhard, : *The Phenomenon of Man*, Fontana Books, England 70

7. Dhavamony, M, S. J. : *Love of God According to Saiva Siddhanta*, Oxford at the Clarendon Press, 1971

8. Eliade, Mircea : *History of Religious Ideas* Collins, London, 1981

9. Eliade, Mircea : *Images and Symbols*, Harvill press, London, 1952

10. Eliade, Mircea : *Patterns in Comparative Religion* Sheed and Ward, London 1958

11. Eliade, Mircea : *Myths Dreams and* Mysticism Fontana Books, England, 1960

12. Eliade, Mircea : Myths, *Rites and Symbols*, 2 vols Harper, U. S. A., 1976

13. Gibran Kalil : *The Broken Wings*, Bantam Books, U.S.A.

14. Gibran Kalil : *A Self Portrait*, Bantam Books, U. S. A.

15. Gibran Kalil : *A Tear and a Smile*, Bantam Books, U. S. A.

16. Gibran Kalil : *Thoughts and Meditations* Bantam Books, U. S. A.

17. Gibran Kalil : *The Voice of the Master*, Bantam Books, U. S. A.

18. Gibran Kalil : *The Wisdom of Girban*, ed, Joseph Sheban, Bantam Books, U. S. A.

19. Groeschel B. U. : *Spiritual Passages*, Gorssroad, New York, 1984

20. Johnston William; S. J. : *The Mirror* Mind. Collins, London, 1981

21. Johnston William : *Silent Music*, Collins. London. 1979
22. Kakar, S. : *Shamans, Mystics and Doctors*, Oxford University Press, Delhi, 1979
23. Keen, Sam : To *A Dancing God*, Fontana Books, England 1970
24. Maloney George, S. J. : *Invaded by God*, Dimension Books, U. S. A., 1976
25. Maloney George S. J. : *Broken dut Loved*, Dimension Books, U. S. A. 1981
26. Maloney George S. J. : *Nesting in the Rock*, Dimension Books, U. S. A. 1977
27. Meulder de Ed., S. J. . *All Men Became Brothers*, St Paul's Publications, Allahabad, 1980
28. Meulder de Ed., S. J. : *When Two Great Hearts Meet*: St Paul's Publications Allahabad, 1976
29. Oman J. C. : *The Mystics Ascetics and Saints* of India Oriental Publishing, Delhi, 1977
30. Otto Rudolf : *The Idea of the Holy*, Oxford University Press, London, 1952
31. Rahner Karl S. J. . *Encyclopedia of Theology*, Burns and Oates, London 1975
32 Rahner Karl, (ed) : *Sacramentum Mundi [6 volumes,]* Burns and Oates, London, 1969
33. Smart Ninian : *Religious Experience of Mankind*, Fontana Books, England 1974
34. Talbot Michel : *Mysticism and the New Physics*, Bantam Books, U. S. A. 1981
35. Underhill E. : *Mysticism*, Mentor Books, U. S. A. 1974
36. Vanover R. : *Eastern Cysticism*, Mentor Books, U. S. A. 1977
37. Woods, R., O. P. : *Understanding Mysticism*, Image Books, U. S. A. 1980

38. *Vatican Council 11; documents* edited by A. Flannery O. P., St Paul's Publications, Bandra, Bombay 400050, 1975

39. Zaehner R. C. : *Our Savage God,* Collins, London, 1974

40. Zaehner R. C. : *Mysticism, Sacred and Profane,* Oxford University Press, 1973

41. Zaehner R. C. : *The Bhagavadgita,* Oxford University Press, London, 1975.

42. Zaehner R. C. : *Hindu and Muslim Mysticism,* The Athlone Press, London 1960

ರಾಷ್ಟ್ರೀಯ ಭಾವೈಕ್ಯ ಮತ್ತು ವೈದಿಕಧರ್ಮ

ದಯಾನಂದ ನರಸಿಂಹ ಶಾನಭಾಗ

ವೈದಿಕ ಧರ್ಮದ ಇನ್ನೊಂದು ಹೆಸರು ಹಿಂದೂಧರ್ಮ. ಅದುವೆ ಹೆಚ್ಚು ಬಳಕೆಯಲ್ಲಿರುವ ಹೆಸರು. ಈ ವೈದಿಕ ಅಥವಾ ಹಿಂದೂ ಧರ್ಮದ ವೈಶಿಷ್ಟ್ಯಗಳು ಅನೇಕ. ಅದು ಪುರಾತನ, ಸನಾತನ, ಚಿರಂತನ, ಅಕ್ಷಯ, ಅವಿನಾಶಿ ಮತ್ತು ಚಿರಂಜೀವಿ. ಜಗತ್ತಿನ ನಾನಾ ಮಾನವ ಜನಾಂಗಗಳಿಗೆ ಬಾಳುವ ವಿಧಾನ ಕಲಿಸಿದ ಜಗದ್ಗುರು. ಅವರಿಗೆಲ್ಲ ಸಂಕಟಸಮಯದಲ್ಲಿ ಹಿರಿಯಣ್ಣನಂತೆ ರಕ್ಷಣೆ ಮಾಡಿದ ಕೀರ್ತಿ ಹಿಂದುಗಳದು.[1] ಮನುಷ್ಯನು ಭೌತಿಕ ಮತ್ತು ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಳ್ಳುವ ಮಾರ್ಗವನ್ನೂ ವೈದಿಕ ಧರ್ಮವು ತೋರಿಸಿ ಕೊಟ್ಟಿದೆ. ಅದರಂತೆಯೇ ಸಕಲ ಚರಾಚರ ಪ್ರಾಣಿಗಳು ಸಹಕಾರ ಭಾವನೆಯ ಮೂಲಕ ಸುಖಶಾಂತಿಗಳಿಂದ ಬದುಕುತ್ತ ಸಂಪೂರ್ಣ ಸೃಷ್ಟಿಯ ಹಿತಸಾಧಿಸುವ ರೀತಿಯನ್ನೂ ನಿರ್ದೇಶಿಸಿದೆ. ಇದಕ್ಕೆ ಆಧಾರವೆಂದರೆ ಹಿಂದುಗಳು ಕಂಡುಹಿಡಿದ 'ವಿವಿಧತೆಯಲ್ಲಿ ಏಕತೆ' ಎಂಬ ಸತ್ಯಸಂಗತಿ. ಈ ಸತ್ಯಸಂಗತಿಯೇ ರಾಷ್ಟ್ರೀಯ ಭಾವೈಕ್ಯಕ್ಕೆ ಭದ್ರ ಬುನಾದಿ. ನಮ್ಮ ಸುತ್ತಲಿನ ಚರಾಚರವಿಶ್ವವನ್ನು ಗಮನಿಸಿದರೆ ಕಂಡು ಬರುವ ಪ್ರಮುಖ ಸಂಗತಿ ಎಂದರೆ ಅದರ ವಿವಿಧತೆ ಅಥವಾ ನಾನಾತ್ವ

ಭೂಮಿಯ ಯಾವ ಒಂದು ಭಾಗವೂ ಇನ್ನೊಂದರಂತಿಲ್ಲ. ಬೇರೆಬೇರೆ ಸ್ಥಳಗಳ ನೀರಿನ ಗುಣ ಬೇರೆ ಬೇರೆ. ವನಸ್ಪತಿಗಳೂ ಭಿನ್ನಭಿನ್ನ. ಅವುಗಳ ಆಕಾರ, ರಚನೆ, ಭಿನ್ನವಾಗಿರುವಂತೆ ಬೇರು, ಕಾಂಡ, ಎಲೆ, ಹೂ, ಹಣ್ಣು, ಬೀಜಗಳೂ ನಾನಾವಿಧ ಒಬ್ಬನೇ ಸೂರ್ಯನ ಬಿಸಿಲಿನ ಪರಿಣಾಮ ಒಂದೊಂದು ಕಡೆ ಒಂದೊಂದು ವಿಧ. ಮೋಡಗಳಿಂದ ಬೀಳುವ ಮಳೆಯ ಪ್ರಮಾಣವೂ ಭಿನ್ನಭಿನ್ನ. ಗಾಳಿಯ ವೇಗವೂ ವಿಭಿನ್ನ ಅಲ್ಲಲ್ಲಿ ಹುಟ್ಟುವ ಜೀವಿಗಳ ಬಣ್ಣ ಬೇರೆ, ಆಕಾರ ಬೇರೆ, ಗಾತ್ರ, ಶಕ್ತಿ, ಸತ್ವ ಬೇರೆ. ಒಂದೇ ಜಾತಿಯ ಪ್ರಾಣಿಗಳಲ್ಲಿಯೂ ಒಂದರಂತೆ ಇನ್ನೊಂದಿಲ್ಲ. 'ಅದೇ ರೀತಿ ಮನುಷ್ಯರಲ್ಲಿಯೂ ಒಬ್ಬನಂತೆ ಇನ್ನೊಬ್ಬನಿಲ್ಲ. ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಅಣ್ಣ-ತಮ್ಮಂದಿರ ಬಣ್ಣ, ಆಕಾರ

---

1) ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ ।
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ ॥ ಮನುಸ್ಮೃತಿ.

ಗಾತ್ರ, ಎತ್ತರ, ಶಾರೀರಿಕ ಶಕ್ತಿ, ಬೌದ್ಧಿಕ ಸಾಮರ್ಥ್ಯ, ಆಂತರಿಕ ಸತ್ವ, ಸಹಜ ಸ್ವಭಾವ, ಒಲವು-ನಿಲುವುಗಳು, ಪ್ರವೃತ್ತಿ-ನಿವೃತ್ತಿಗಳು, ಅಭಿರುಚಿ-ಆಕಾಂಕ್ಷೆಗಳು, ಕೆಲಸ-ಕಾರ್ಯಗಳು, ಆಯುಷ್ಯ-ಸಾಧನೆಗಳು ಇವೆಲ್ಲ ಭಿನ್ನ ಭಿನ್ನ. ಹೀಗೆ ನಮ್ಮ ಸುತ್ತಲಿನ ಚರಾಚರ ಸೃಷ್ಟಿಯಲ್ಲಿ ತೋರುವ ವಿವಿಧತೆ ನಾನಾವಿಧ ಮತ್ತು ನಾನಾ ಮಾದರಿಯದು.

ಆದರೆ ಈ ನಾನಾ ತರಹದ ವಿವಿಧತೆಗಳ ಮೂಲಭೂತ ಲಕ್ಷಣವೆಂದರೆ ಮನುಷ್ಯನು ಇದನ್ನು ನಿರಾಕರಿಸಲೂ ಅಸಮರ್ಥ, ಪರಿವರ್ತಿಸಲೂ ಅಶಕ್ತ. ಅವನಿಗಿರುವ ಒಂದೇ ಮಾರ್ಗವೆಂದರೆ ಅವನು ಇದನ್ನು ಒಪ್ಪಿಕೊಂಡು ಇದರೊಡನೆ ಬದುಕುತ್ತ ತನ್ನ ಉನ್ನತಿ ಸಾಧಿಸಿಕೊಳ್ಳಬೇಕು. ಈ ಸತ್ಯವನ್ನು ಕಂಡುಕೊಂಡ ವೈದಿಕ ಋಷಿ-ಮುನಿಗಳು ಮಾನವನ ಸಾರ್ಥಕ ಬದುಕಿಗೆ ಆಧಾರವಾಗಿ ಮತ್ತು ಸಮಗ್ರ ಮಾನವಸಮಾಜದ ಹಿತಸಾಧನೆಗಾಗಿ 'ವಿವಿಧತೆಯಲ್ಲಿ ಏಕತೆ' ಎಂಬ ಸರ್ವೋಪಕಾರಕ ಜೀವನ ಸೂತ್ರವನ್ನು ಸೂಕ್ಷ್ಮಾವಲೋಕನದಿಂದ ಮನಗಂಡು ಬೋಧಿಸಿದರು. ಇದಕ್ಕೆ ಅವರು ಕೊಟ್ಟ ಅನೇಕ ಉದಾಹರಣೆಗಳಲ್ಲಿ ನಮ್ಮ ಶರೀರದ ಉದಾಹರಣೆಯೂ ಒಂದು. ಇದು ಪ್ರತಿಯೊಬ್ಬರಿಗೂ ಅನುಭವಗಮ್ಯ.

ಮನುಷ್ಯನ ಶರೀರದ ಅವಲೋಕನ ಮಾಡಿದರೆ ಕಾಣುವ ಸಂಗತಿ ಎಂದರೆ ವೈವಿಧ್ಯ ಅಥವಾ ನಾನಾತ್ವ. ಯಾವುದೇ ಒಂದು ಅಂಗವು ಇನ್ನೊಂದರಂತೆ ಇಲ್ಲ. ಪ್ರತಿಯೊಂದರ ಶಕ್ತಿ, ಸಾಮರ್ಥ್ಯ, ಕೆಲಸ, ಸಾಧನೆ, ಆಕಾರ, ಗಾತ್ರ, ಎಲ್ಲವೂ ಬೇರೆಬೇರೆ. ಅವೆಲ್ಲ ಪರಸ್ಪರ ಸಹಕಾರದಿಂದ ಕಾರ್ಯ ಮಾಡಿದರೇನೇ ಇಡಿಯ ಶರೀರದ ಮತ್ತು ಆಯಾ ಅಂಗಾಂಗಗಳ ಹಿತ ಸಾಧ್ಯ. ಅವೆಲ್ಲವುಗಳಲ್ಲಿ ಅಡಗಿರುವ ಪ್ರಾಣ ಶಕ್ತಿ ಒಂದೇ. ಅವೆಲ್ಲವುಗಳಲ್ಲಿ ಹರಿಯುವ ರಕ್ತ ಒಂದೇ ಅವು ಬಹಿರಂಗವಾಗಿ ಭಿನ್ನ-ಭಿನ್ನವಾಗಿದ್ದರೂ ಅಂತರಿಕವಾಗಿ ಅವೆಲ್ಲ ಒಂದೇ. ಅವುಗಳ ಕೆಲಸಕಾರ್ಯ ಬೇರೆಯಾದರೂ ಗುರಿಯೊಂದೇ. ಈ ಮಾತು ಚರಾಚರ ಸೃಷ್ಟಿಗೂ ಅನ್ವಯಿಸುತ್ತದೆ. ಇಡಿಯ ಮಾನವ ಜನಾಂಗಕ್ಕೆ ಹಿತವಾಗಬೇಕಾದರೆ ಅದರ ಪರಿಣಾಮಕಾರಿ ಸಾಧನವೆಂದರೆ ಸಹಬಾಳ್ವೆ, ಸಹಕಾರ, ಸಹಮತ. ತದ್ವಿರುದ್ಧವಾಗಿ ಸಂಘರ್ಷ-ಅಸಹಕಾರಗಳು ಸಕಲರಿಗೂ ವಿನಾಶಕಾರಿ. ಅದಕ್ಕಾಗಿ ವೈದಿಕ ಋಷಿಗಳು ಜಗತ್ತಿಗೆ ಸಾರಿ ಹೇಳಿರುವ ಬಾಳಮಂತ್ರವೆಂದರೆ— "ಸಂಗಚ್ಛಧ್ವಂ, ಸಂವದಧ್ವಂ ಸಂ ವೋ ಮನಾಂಸಿ ಜಾನತಾಮ್" (ಋಗ್ವೇದ ೧೦-೧೯೧-೨) ಅರ್ಥಾತ್ "ಒಟ್ಟಿಗೆ ನಡೆಯಿರಿ, ಒಂದೇ ಮಾತನ್ನಾಡಿರಿ, ಒಂದೇ ಅರ್ಥ ಅರಿಯಿರಿ." ರಾಷ್ಟ್ರೀಯ ಭಾವೈಕ್ಯಕ್ಕೆ ಈ ಮಂತ್ರವೇ ಭದ್ರಬುನಾದಿ. ಅದಕ್ಕನುಸಾರವಾಗಿ ಬಾಳಬೇಕಾದರೆ "ನಾವೆಲ್ಲ ಒಂದು, ಒಂದೇ ತಾಯಿಯ ಮಕ್ಕಳು. ನಮ್ಮಲ್ಲಿ

ಹರಿಯುವ ರಕ್ತ ಒಂದೇ. ನಮ್ಮ ಬಾಳಗುರಿ ಒಂದೇ," ಎಂದು ಮುಂತಾದ ಅರಿವು ನಮ್ಮಲ್ಲಿ ಒಡಮೂಡಬೇಕು. ಗಟ್ಟಿಯಾಗಿ ಬೇರೂರಬೇಕು ಕಾರ್ಯದಲ್ಲಿ ಕಾಣಿಸುವಷ್ಟು ಪ್ರಭಾವಿಯಾಗಿರಬೇಕು. ಅದಕ್ಕೆ ಪ್ರೇರಕವಾಗಿ ನಮ್ಮ ಋಷಿ–ಮುನಿಗಳು ಅನೇಕ ಸಂಗತಿಗಳನ್ನು ವಿಧಿಸಿದರು.

ರಾಷ್ಟ್ರೀಯ ಭಾವೈಕ್ಯದ ಭಾವನೆಯು ಹಿಂದುಸ್ಥಾನಕ್ಕೆ ಎಷ್ಟೊಂದು ಅಗತ್ಯವೆಂದರೆ, ಅದು ಇಲ್ಲವಾದರೆ "ಇದೊಂದು ಅಖಂಡ ರಾಷ್ಟ್ರವೇ ?" ಎಂದು ಭ್ರಮಿಸಲು ಸಾಕಾಗುವಷ್ಟು ಕಾರಣಗಳು ನಮ್ಮ ಈ ದೇಶದಲ್ಲಿವ. ಚರಾಚರ ಸೃಷ್ಟಿಯಲ್ಲಿ ಕಂಡುಬರುವ ವೈವಿಧ್ಯಗಳನ್ನು ಮೇಲೆ ನೋಡಿದ್ದೇವೆ. ಎಲ್ಲ ವೈವಿಧ್ಯಗಳೂ ನಮ್ಮ ಹಿಂದುಸ್ತಾನ ಅಥವಾ ಭಾರತದಲ್ಲಿವೆ. ಆದಕ್ಕಾಗಿ ನಮ್ಮ ದೇಶವನ್ನು 'ಜಗತ್ತಿನ ಸಂಕ್ಷಿಪ್ತ ಆವೃತ್ತಿ' ಎಂಬುದಾಗಿ ಬಣ್ಣಿಸಿರುವರು.[2] ಈ ದೇಶದ ವಿಶಾಲತೆಯು ಮೂಲಕ ಈ ಭೂಭಾಗದಲ್ಲಿ ಅನೇಕ ವಿಧದ ವೈವಿಧ್ಯಗಳಿರುವದರಿಂದ ಇದೊಂದು "ಅಖಂಡ ರಾಷ್ಟ್ರವೇ ಅಲ್ಲ, ನಾನಾರಾಷ್ಟ್ರಗಳ ಸಮೂಹ ಅಥವಾ ಒಂದು ರೀತಿಯಿಂದ 'ಸಂಯುಕ್ತ ರಾಷ್ಟ್ರಸಂಘ'" ಎಂಬುದಾಗಿ ಭ್ರಮಿಸಿದವರೂ ಇದ್ದಾರೆ.[3] ಅದಕ್ಕಾಗಿ ರಾಷ್ಟ್ರೀಯ ಭಾವೈಕ್ಯದ ಕುರಿತು ವಿಚಾರ ಮಾಡುವ ಮೊದಲು 'ರಾಷ್ಟ್ರ'ವೆಂದರೇನೆಂಬುದನ್ನು ಅರಿತುಕೊಳ್ಳುವದು ಅಗತ್ಯ.

ಯಾವುದೇ ಒಂದು ದೇಶವು ಅಥವಾ ಜನಾಂಗವು ರಾಷ್ಟ್ರವೆಂದೆನಿಸಿಕೊಳ್ಳಲು ಅತ್ಯಗತ್ಯವಾದ ಎರಡು ಸಂಗತಿಗಳೆಂದರೆ- ಒಂದು ನಿಶ್ಚಿತವಾದ ಭೂಭಾಗ ಮತ್ತು

---

2) "The Vastness of India has produced a corresponding Variety in respect of both physical features and social conditions for which India has been aptly desribed as 'the epitome of the world'-R. K, Mookerji *Hindu Civilization [HC]* Bharatiya Vidya Bhavan Bombay 1977. P. 4.4."

3) "India is commonly thought of and Spoken of as a single country. But this is not true, — India is rather a collection of Countries'' "This is the first and most essential thing to learn about India that there is not and never was an India or even any country of India, possessing, according to Éuropeam idea, any sort of unity, Physical, political .... "Radha Kumud Mookerji *Fundamental Unity of India [F. U. I.]* Bharatiya Vidya Bhavan, Bombay, 1954. 25-26 ಪುಟಗಳಲ್ಲಿ ಉದ್ಧೃತ-

ಆ ಭೂಭಾಗದಲ್ಲಿ ವಾಸಿಸುವ ಜನರಲ್ಲಿ 'ತಾವೆಲ್ಲ ಒಂದು' ಎಂಬ ಭಾವನೆ. ಇದನ್ನು ವಿಚಾರವಂತರು ತಮ್ಮ ತಮ್ಮ ರೀತಿಯಲ್ಲಿ ವರ್ಣಿಸಿದ್ದಾರೆ. ಇದು ಯೋಗಿ ಅರವಿಂದರ ನುಡಿ:- "ದೇಶವೇ ರಾಷ್ಟ್ರೀಯತ್ವದ ಪ್ರತಿಷ್ಠಾ ಭೂಮಿ'.... ಆ ದೇಶವು ರಾಷ್ಟ್ರವೆನ್ನಿಸಿಕೊಳ್ಳಲು ಜನತೆಯಲ್ಲಿ ತಾವೆಲ್ಲಾ ಒಂದೇ ಎಂಬ ಐಕ್ಯತೆಯ ಪ್ರಜ್ಞೆ ಮೂಡಿರಬೇಕು".... "ತಮ್ಮ ದೇಶದ ಹಿತದಲ್ಲಿ ತಮ್ಮ ಹಿತವಿದೆ; ತಮ್ಮ ದೇಶದ ಗೌರವದಲ್ಲಿ ತಮ್ಮ ಗೌರವವಿದೆ; ತಮ್ಮ ದೇಶ ಬಾಂಧವರ ಉನ್ನತಿಯಲ್ಲಿ ತಮ್ಮ ಉನ್ನತಿ ಇದೆ ಎಂಬ ಕರ್ತವ್ಯ ಬುದ್ಧಿಯೇ ರಾಷ್ಟ್ರೀಯತೆಯ ಕುರುಹು."[4]

"ರಾಷ್ಟ್ರದ ಮೊಟ್ಟ ಮೊದಲು ಅವಶ್ಯಕತೆ. ಅದು ಬದುಕಿ ಬೆಳೆದು ಅಭಿವೃದ್ಧಿ ಹೊಂದಲು ಆಧಾರವಾಗುವಂತೆ ಸಾಧ್ಯವಾದ ಮಟ್ಟಿಗೂ ನಿಸರ್ಗಸಿದ್ಧ ಮೇರೆಗಳಿಂದ ರೂಪಿತವಾದ ಒಂದು ಅಖಂಡ ಭೂಪ್ರದೇಶ. ಎರಡನೆಯ ಅಗತ್ಯವೆಂದರೆ ಆ ವಿಶಿಷ್ಟ ಪ್ರದೇಶದ ಜನರು ಅದು ತಮ್ಮ ಮಾತೃಭೂಮಿ, ತಮ್ಮ ಪೋಷಣೆಯ, ಭದ್ರತೆಯ ಮತ್ತು ಏಳಿಗೆಯ ಕ್ಷೇತ್ರವೆಂದು ಅಭಿಮಾನವನ್ನೂ ಭಕ್ತಿಯನ್ನೂ ಬೆಳೆಸಿಕೊಂಡಿರಬೇಕು. ಒಟ್ಟಿನಲ್ಲಿ ತಾವು ಆ ನೆಲದ ಮಕ್ಕಳು ಎಂಬ ಭಾವನೆ ಅವರಿಗಿರಬೇಕು..... ಅವರೆಲ್ಲರಿಗೆ ಸಮಾನವಾದ ಜೀವನದ ಆದರ್ಶಗಳು, ಸಂಸ್ಕೃತಿ, ಭಾವ-ಭಾವನೆಗಳು, ನಂಬಿಕೆ ಮತ್ತು ಪರಂಪರೆ ಇವುಗಳ ಏಕಸೂತ್ರದಿಂದ ರೂಪಿತವಾದ ಒಂದು ವಿಶಿಷ್ಟ ಜೀವನ ವಿಧಾನವನ್ನು ಅವರು ಬೆಳೆಸಿಕೊಂಡಿರಬೇಕು. ಸಮಾನ ಪರಂಪರೆ ಮತ್ತು ಗುರಿಗಳು, ಅವರೆಲ್ಲರ ಹಿಂದಿನ ಬಾಳಿನ ಸುಖ-ದುಃಖಗಳ ಸಮಾನ ನೆನಪುಗಳು, ಸ್ನೇಹ-ವೈರಗಳ ಸಮಾನ ಭಾವನೆಗಳು ಇವುಗಳಿಂದ, ಜತೆಗೆ ಅವರೆಲ್ಲರ ಹಿತಾಸಕ್ತಿಗಳು ಅಖಂಡವಾಗುವಂತೆ ಹೆಣೆದುಕೊಂಡಿದ್ದು, ಆ ಜನ ಒಂದು ಸುಬದ್ಧ ಮತ್ತು ಸುವ್ಯವಸ್ಥಿತ ಸಮಾಜವಾಗಿರಬೇಕು. ಹೀಗೆ ಒಂದು ನಿರ್ದಿಷ್ಟ ಪ್ರದೇಶದ ಮಕ್ಕಳಾಗಿ ಬಾಳುತ್ತಿರುವವರನ್ನು ಒಂದು 'ರಾಷ್ಟ್ರ' ಎಂದು ಕರೆಯಬಹುದು."[5]

ಹೀಗೆ ರಾಷ್ಟ್ರದ ಪ್ರಥಮ ಅವಶ್ಯಕತೆ ಒಂದು ನಿಶ್ಚಿತವಾದ ಭೌಗೋಲಿಕ ಭೂಭಾಗವಾಗಿದೆ. ಮತ್ತು ನಮ್ಮ 'ಹಿಂದುಸ್ಥಾನ'ವೆಂದು ಕರೆಯಲಾಗುವ ಭೂಭಾಗವು ಹಾಗೆ ಭೌಗೋಲಿಕವಾಗಿ ಒಂದು ಅಖಂಡ ದೇಶವಾಗಿದೆ ಎಂಬುದರ ಬಗ್ಗೆ ಸಂಶಯವೇ ಇಲ್ಲ. ರಾಧಾಕುಮುದ ಮುಖರ್ಜಿಯವರು ತೋರಿಸಿರುವಂತೆ ಉತ್ತರದಲ್ಲಿ ಹಿಮಾಲಯ ಮತ್ತು ದಕ್ಷಿಣದಲ್ಲಿ ಮಹಾಸಾಗರಗಳಿಂದ ಸುತ್ತುವರೆದ

---

೪) ಎ.ಎಸ್. ನಂಜುಂಡಸ್ವಾಮಿ, ಭಾರತೀಯ ರಾಷ್ಟ್ರೀಯತೆಯ ವಿಕಾಸ, ಪ್ರಸಾರಾಂಗ ಮಾನಸಗಂಗೋತ್ರಿ, ಮೈಸೂರು ೧೯೭೫, ಪುಟ-೨-೩ ರಲ್ಲಿ ಉದ್ಧೃತ

೫) ಮಾ. ಸ. ಗೋಳವಲಕರ್. ಚಿಂತನಗಂಗಾ. ಸಾಹಿತ್ಯ ಸಂಘ, ಬೆಂಗಳೂರು, ೧೯೭೨. ಪುಟ ೧೨೩-೧೨೪

ಹಿಂದುಸ್ಥಾನವು ಒಂದು ನಿಶ್ಚಿತ ಮೇರೆಗಳುಳ್ಳ ಭೂಪ್ರದೇಶವಾಗಿದ್ದು ಇದು ನಿಸರ್ಗದ ಕೊಡುಗೆಯಾಗಿದೆ.[6] ಆದರೆ ಈ ರೀತಿ ಭೌಗೋಲಿಕವಾಗಿ ಈ ಭೂ ಪ್ರದೇಶವು ಅಖಂಡ ಘಟಕವಾಗಿದ್ದರೂ ಇದೊಂದು ರಾಷ್ಟ್ರವೆಂಬ ಕಲ್ಪನೆ ಇಲ್ಲಿಯ ಮಕ್ಕಳಾದ ವೈದಿಕ ಹಿಂದುಗಳಿಗೆ ಇದ್ದಿರಲಿಲ್ಲವೆಂದೂ, ಬ್ರಿಟಿಷರು ಇಲ್ಲಿಗೆ ಬಂದಮೇಲೆ ಈ ಸಮಗ್ರದೇಶವನ್ನು ತಮ್ಮ ಆಡಳಿತಾಧಿಕಾರದಲ್ಲಿ ತಂದ ಬಳಿಕವೇ ಇಲ್ಲಿ ರಾಷ್ಟ್ರೀಯತೆಯ ಉಗಮವಾಯಿತೆಂದೂ ನಂಬುವವರೂ ಇದ್ದಾರೆ.[7] ಆದರೆ ಇದೊಂದು ಭ್ರಮೆ.

ವೈದಿಕ ಋಷಿ-ಮುನಿಗಳು "ವಯಂ ರಾಷ್ಟ್ರೇ ಜಾಗೃಯಾಮ ಪುರೋಹಿತಾಃ[8]" ಅರ್ಥಾತ್ "ಅರಿತ ಮುಂದಾಳುಗಳಾದ ನಾವು ಈ ರಾಷ್ಟ್ರದಲ್ಲಿ ರಾಷ್ಟ್ರೀಯ ಭಾವನೆಯಿಂದ ಜಾಗೃತರಾಗಿರುವೆವು." ಎಂಬುದಾಗಿ ಅತಿಪ್ರಾಚೀನ ಕಾಲವಾದ ವೇದ ಕಾಲದಲ್ಲಿಯೇ ಘೋಷಿಸಿ ಆ ರೀತಿ ಬದುಕುತ್ತ ಬಂದರು. ಜೀವಾತ್ಮನಿಗೆ ದೇಹದ ಅವಶ್ಯಕತೆ ಇರುವಂತೆ ರಾಷ್ಟ್ರಕ್ಕೆ ನಿಶ್ಚಿತ ಭೂಪ್ರದೇಶ

---

6) There is hardly any part of a Continent that is so clearly separated and marked out by nature as a region by itself as undivided India. Mountain- guarded in the north and seagrit in the south, India is lindisputably a geographical unit, and is effectively isolated by sharply defined boundaries from the rest of the world"— R. K. Mookerji. H. C. 1977, P. 44.

೭) "ಬ್ರಿಟಿಶರ ಆಳ್ವಿಕೆಯ ಫಲ-ನಮ್ಮ ರಾಷ್ಟ್ರೀಯತೆ ಎಂಬ ಒಂದು ನಂಬಿಕೆ ಎಲ್ಲೆಲ್ಲೂ ಪ್ರಚಲಿತವಿದೆ. ಕೆಲವು ಪ್ರಸಿದ್ಧ ಪಂಡಿತರೂ ಇದೇ ಅಭಿಪ್ರಾಯ ತಳೆದಿರುವುದು ವಿಷಾದಕರ ಸಂಗತಿ. 'ಬ್ರಿಟಿಶರು ಬರುವ ಮೊದಲು ಭಾರತದಲ್ಲಿ ರಾಷ್ಟ್ರೀಯತೆಯ ಪ್ರಶ್ನೆಯೇ ಇರಲಿಲ್ಲ. ಏಕೆಂದರೆ ಬ್ರಿಟಿಷರು ಬರುವ ಮುನ್ನ ಭಾರತವು ರಾಷ್ಟ್ರವೇ ಆಗಿರಲಿಲ್ಲ. ಜನರಲ್ಲಿ ಯಾವ ಬಗೆಯ ಐಕ್ಯತೆಯೂ ಇರಲಿಲ್ಲ. ಹೀಗಾಗಿ ನಮಗೆ ಮೊದಲ ಬಾರಿಗೆ ಒಂದು ಆಡಳಿತ, ಒಂದೇ ಕಾಯಿದೆ ಕ್ರಮ, ಒಂದು ಸಂಪರ್ಕಭಾಷೆ, ಒಂದು ಶಿಕ್ಷಣ ಪದ್ಧತಿಯನ್ನು ಕೊಟ್ಟವರು ಬ್ರಿಟಿಶರೇ. ಎಲ್ಲಕ್ಕೂ ಮಿಗಿಲಾಗಿ ರಾಷ್ಟ್ರದ ಕಲ್ಪನೆ ಅರಳಿಸಿ ನಮ್ಮನ್ನು ಸಂಘಟಿಸಿದವರು ಅವರೇ. ೧೮೮೫ ರಲ್ಲಿ ಎ. ಓ. ಹ್ಯೂಮ್ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮಹಾಸಭೆಗೆ ಭದ್ರ ಬುನಾದಿ ಹಾಕಿದ್ದೇ ಭಾರತದ ರಾಷ್ಟ್ರೀಯತೆ ಜನ್ಮ ತಾಳಲು ಕಾರಣ. ಹೀಗಾಗಿ ಭಾರತದ ರಾಷ್ಟ್ರೀಯತೆಯ ಜನಕ ಎ. ಓ. ಹ್ಯೂಮನೇ'' ಎಂಬುದು ಅವರ ವಾದ— ಡಾ. ಫತ್ತೇಸಿಂಗ್. ಭಾರತದ ರಾಷ್ಟ್ರೀಯತೆ. ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು, ೧೯೭೧. ಪು: ೧೧.

೮) ಯಜುರ್ವೇದ ೯-೨೩.

ಅಗತ್ಯವೆಂಬುದನ್ನೂ ಹಿಂದುಗಳ ಹಿಂದುಸ್ಥಾನಕ್ಕೆ ಅಂತಹ ಭೂಪ್ರದೇಶವನ್ನು ಭಗವಂತನೇ ದಯಪಾಲಿಸಿರುವನೆಂದೂ ಹಿಂದುಗಳು ನಂಬಿ ಎತ್ತಿ ತೋರಿಸಿದರು:-

"ಪೃಥಿವ್ಯೈ ಸಮುದ್ರಪರ್ಯಂತಾಯಾ ಏಕರಾಟ್ ಇತಿ,"

"ಸಮುದ್ರದವರೆಗಿನ ಭೂಭಾಗವು ಒಂದೇ ರಾಷ್ಟ್ರವೆಂದು," ವೈದಿಕ ದೃಷ್ಟಾರರು ಘೋಷಿಸಿದರು.

ಹಿಮಾಲಯಾತ್ ಸಮಾರಭ್ಯ ಯಾವದಿಂದುಸರೋವರಮ್ ।
ತಂ ದೇವನಿರ್ಮಿತಂ ದೇಶಂ ಹಿಂದುಸ್ಥಾನಂ ಪ್ರಚಕ್ಷತೇ ॥

[ಹಿಮಾಲಯದಿಂದ ಹಿಂದೂಮಹಾಸಾಗರದವರೆಗೆ ಹಬ್ಬಿರುವ ಈ ದೇಶವು ದೇವರಿಂದ ನಿರ್ಮಿತವಾಗಿದ್ದು ಅದನ್ನು 'ಹಿಂದುಸ್ಥಾನ' ವೆಂದು ಕರೆಯುತ್ತಾರೆ.] ಎಂದು "ಬಾರ್ಹಸ್ಪತ್ಯಶಾಸ್ತ್ರ"ದಲ್ಲಿ ಹೇಳಿರುವದಾದರೆ ವಿಷ್ಣುಪುರಾಣ (೩-೩-೧) ದಲ್ಲಿ

ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್ ॥
ವರ್ಷಂ ತದ್ಭಾರತಂ ನಾಮ ಭಾರತೀ ಯತ್ರ ಸಂತತಿಃ ॥

(ಸಮುದ್ರದ ಉತ್ತರಕ್ಕೆ ಮತ್ತು ಹಿಮಾಲಯದ ದಕ್ಷಿಣಕ್ಕೆ ಅರ್ಥಾತ್ ಹಿಮಾಲಯದಿಂದ ಹಿಂದೂ ಮಹಾಸಾಗರದವರೆಗೆ ಹಬ್ಬಿರುವ ದೇಶವು 'ಭಾರತ' ಮತ್ತು ಅಲ್ಲಿಯ ಮಕ್ಕಳು ಭಾರತೀಯರು) ಎಂದು ನಿರ್ದೇಶಿಸಿದೆ. ಆದುದರಿಂದ ಹಿಂದುಸ್ಥಾನ, ಹಿಂದೂದೇಶ, ಭಾರತ, ಭರತವರ್ಷ, ಭರತಖಂಡ- ಇತ್ಯಾದಿ ಎಲ್ಲ ಹೆಸರುಗಳು ನಮ್ಮ ದೇಶಕ್ಕೆ ಅನ್ವಯಿಸುತ್ತವೆಂಬುದನ್ನು ತಿಳಿಯಬೇಕು. ಈ ನಮ್ಮ ದೇಶದ ವಿಸ್ತಾರವು ಒಂದು ಸಾವಿರ ಯೋಜನವೆಂದು ಹೇಳುವಾಗ ಚಾಣಕ್ಯನು ಅದರ ಉತ್ತರ-ದಕ್ಷಿಣಗಡಿಗಳನ್ನು ನಿರ್ದೇಶಿಸಿರುತ್ತಾನೆ:-

ಹಿಮವತ್ಸಮುದ್ರಾಂತರಮುದೀಚೀನಂ ।
ಯೋಜನಸಹಸ್ರಪರಿಮಾಣಮ್ ॥

ಎರಡನೆಯದಾಗಿ, ತಮ್ಮ ತಾಯ್ನಾಡಾದ ಹಿಂದುಸ್ಥಾನವು ವೈದಿಕ ಹಿಂದುಗಳಿಗೆ ಕೇವಲ ಒಂದು ಭೂಭಾಗವಾಗಿರಲಿಲ್ಲ. ಇದೊಂದು ಕಲ್ಲು, ಮಣ್ಣು, ಗಿಡ-ಗಂಟೆ-ನದಿ-ಸಮುದ್ರ-ಬೆಟ್ಟ-ಕೊಳ್ಳಗಳಿಂದ ಕೂಡಿರುವ ಒಂದು ಜಡ ಭೂಪ್ರದೇಶವಾಗಿರಲಿಲ್ಲ. ಯಾಕೆಂದರೆ 'ರಾಷ್ಟ್ರ'ವಾಗಿ ಬದುಕ ಬೇಕಾದರೆ ಆ ಭೂಪ್ರದೇಶದ ಮಕ್ಕಳಲ್ಲಿ ಅದರ ಬಗೆಗೆ ಭಕ್ತಿ ಭಾವನೆ ಮತ್ತು ಸಮರ್ಪಣಾಭಾವನೆ

ಇರಬೇಕಾಗುತ್ತದೆ. ೯ ಅಂತಹ ಭಕ್ತಿ ಉದ್ಭವಿಸುವಂತೆ ತಮ್ಮ ತಾಯ್ನಾಡಿನ ಹಿರಿಮೆ–ಗರಿಮೆ–ಮೌಲ್ಯಗಳನ್ನು ಹಿಂದುಗಳು ಬಣ್ಣಿಸಿರುವರು. ಇದು ಕೇವಲ ತಾಯ್ನಾಡು ಅಥವಾ ಮಾತೃಭೂಮಿಯಲ್ಲ, ಇದುವೇ ಕರ್ಮಭೂಮಿ, ಪುಣ್ಯ ಭೂಮಿ, ದೇವಭೂಮಿ, ಮೋಕ್ಷಭೂಮಿ, ಪರಮ ಪವಿತ್ರ ನಾಡು ಎಂದು ಮುಂತಾಗಿ ಹಿಂದುಗಳು ಬಣ್ಣಿಸಿರುವರು. ೧೦ ನಮ್ಮ ಭಾರತ ಹಾಗೂ ಮತ್ತಿತರ ದೇಶಗಳಿರುವ ಭೂಭಾಗದ ಹೆಸರು 'ಜಂಬೂದ್ವೀಪ' ಮತ್ತು ಈ ಜಂಬೂದ್ವೀಪದಲ್ಲಿ

---

೯) "ರಾಷ್ಟ್ರ 'ರಾ' ಧಾತುವಿನಿಂದ ಹುಟ್ಟಿದೆ. 'ರಾ' ಎಂದರೆ ಕೊಡುಗೆ 'ರಾತಿ' ಎಂದರೆ ಕೊಡುವವನು, ಒದಗಿಸುವವನು. ರಾಷ್ಟ್ರದಲ್ಲಿಯ ಪ್ರತಿಯೊಬ್ಬ ಪ್ರಜೆಯೂ ತನ್ನನ್ನು ರಾಷ್ಟ್ರಕ್ಕೆ ಸಮರ್ಪಿಸಿಕೊಂಡಿರುತ್ತಾನೆ. ಅವನು 'ರಾತಿ', ಈ ಸಮರ್ಪಣ ಭಾವವಿಲ್ಲದವ 'ಅರಾತಿ' ಅಂದರೆ ದಸ್ಯು. ಪರೋಪಜೀವಿ, ಅವನಿಗೆ ರಾಷ್ಟ್ರದಲ್ಲಿ ನೆಲೆಯಿಲ್ಲ-ಡಾ. ಫತ್ತೇಸಿಂಗ, ಅಲ್ಲೇ, ಪುಟ೧೨.

ಈ ಸಂದರ್ಭದಲ್ಲಿ England, with all thy faults I love thee still (ಇಂಗ್ಲಂಡ್, ನಿನ್ನಲ್ಲಿ ದೋಷಗಳಿದ್ದರೂ ನಿನ್ನನ್ನು ಪ್ರೀತಿಸುತ್ತೇನೆ) ಎಂಬ ಇಂಗ್ಲಂಡದೊಳಗಿನ ಮಕ್ಕಳ ಹಾಡನ್ನು ಇಲ್ಲಿ ಸ್ಮರಿಸಬಹುದು.

೧೦) ಓದಿರಿ– "ಇದು ನಮ್ಮ ಪವಿತ್ರನಾಡು, ಭಾರತ. ದೇವತೆಗಳೇ ಅದರ ಕೀರ್ತಿಯನ್ನು ಹಾಡುವ ನಾಡು– ... ನಾವು ಅವನ್ನು ಕಂಡು ಅವಳನ್ನು ಪೂಜಿಸಲೆಂದು ವಿಶ್ವದ ದಿವ್ಯಮಾತೆ, ಜಗನ್ಮಾತೆ, ಆದಿಶಕ್ತಿ, ಮಹಾಮಾಯೆ, ಮಹಾದುರ್ಗೆ, ಮೈತಾಳಿದ ಜೀವಂತ ಅವತಾರ ಎಂದು ಮಹಾಯೋಗಿ ಅರವಿಂದರು ಚಿತ್ರಿಸಿಕೊಂಡ ನಾಡು.... ಮಾತೃಭೂಮಿ, ಧರ್ಮ ಭೂಮಿ, ಕರ್ಮಭೂಮಿ, ಪುಣ್ಯಭೂಮಿ; ನಿಜವಾಗಿಯೂ ದೇವಭೂಮಿ ಮತ್ತು ಮೋಕ್ಷ ಭೂಮಿ ಎಂದು ನಮ್ಮ ದ್ರಷ್ಟಾರರು ಹಾಗೂ ಋಷಿಗಳಿಂದ ಆರಾಧಿತವಾದ ನಾಡು; ಅತಿ ಪ್ರಾಚೀನ ಕಾಲದಿಂದ ತನ್ನ ಹೆಸರಿನಿಂದಲೇ ನಮ್ಮ ಹೃದಯಗಳಲ್ಲಿ ಪರಿಶುದ್ಧ ಪವಿತ್ರ ಭಕ್ತಿ ಪ್ರವಾಹದ ತರಂಗಗಳನ್ನೆಬ್ಬಿಸಿದ ಭಾರತಮಾತೆ ಎಂಬ ಹೆಸರಿನಿಂದ ಬೆಳಗುವ ಪ್ರೀತಿಯ ಪವಿತ್ರನಾಡು– ಇವಳೇ ನಮ್ಮೆಲ್ಲರ ತಾಯಿ, ನಮ್ಮ ವೈಭವಶಾಲಿನಿಯಾದ ಮಾತೃಭೂಮಿ (ಪುಟ ೪೫_೪೬) "ವಾಸ್ತವಿಕವಾಗಿ ಸದಾಕಾಲಕ್ಕೂ ನಮ್ಮ ರಾಷ್ಟ್ರೀಯ ಜೀವನದ ಕೇಂದ್ರ ವಸ್ತುವು ಆಗಿದ್ದಾಳೆ, ಭೂಮಿ ಗಾಳಿ ಮತ್ತು ನೀರುಗಳನ್ನು ಕೊಟ್ಟು ನಮ್ಮ ಪೋಷಣೆಗೆ ಮತ್ತು ಸುಖಕ್ಕೆ ವಿವಿಧ ಸಾಮಗ್ರಿಗಳನ್ನಿತ್ತು ನಮ್ಮನ್ನು ತಾಯಿಯಂತೆ ಅವಳು ಪಾಲಿಸಿದ್ದಾಳೆ. ಅಭೇದ್ಯ ಹಿಮಾಲಯ ಪರ್ವತ ಉತ್ತರದಲ್ಲಿ, ಹಿಂದಿನ ಕಾಲದಲ್ಲಿ ನಮ್ಮ ಸ್ವಾತಂತ್ರ್ಯಯೋಧರಿಗೆ ರಕ್ಷಣೆಯನ್ನೂ ಆಶ್ರಯವನ್ನೂ ನೀಡಿದ ಅರಾವಳಿ, ವಿಂಧ್ಯ ಮತ್ತು ಸಹ್ಯಾದ್ರಿಗಳಂತಹ ಪರ್ವತಶ್ರೇಣಿಗಳು ದೇಶದಲ್ಲಿ ಅಲ್ಲಲ್ಲಿ ಹೀಗೆ ವ್ಯವಸ್ಥೆಗೊಳಿಸಿ ತಂದೆಯಂತೆ ಆಕೆ ನಮ್ಮನ್ನು ರಕ್ಷಿಸಿದ್ದಾಳೆ. ಧರ್ಮಭೂಮಿ ಮತ್ತು ಮೋಕ್ಷ ಭೂಮಿಯಾಗಿ ಆಕೆ ನಮ್ಮ ಆಧ್ಯಾತ್ಮಿಕ ಗುರುವಾಗಿದ್ದಾಳೆ. ನಮ್ಮ ಮಾತೃಭೂಮಿಯೇ ತಾಯಿ, ತಂದೆ, ಗುರು ಎಲ್ಲ ಆಗಿದೆ ನಮಗೆ" (೯೪-೫) – ಮಾಸ. ಗೋಳವಲಕರ್, ಅಲ್ಲೇ.

ನಮ್ಮ ಭಾರತ ಶ್ರೇಷ್ಠವಾದುದು. ಏಕೆಂದರೆ ಇದು ಕರ್ಮ ಭೂಮಿ.[11] ಇಲ್ಲಿ ಯಥೋಚಿತವಾದ ಕರ್ಮಗಳನ್ನು ಮಾಡಿ ಮನುಷ್ಯನಾದವನು ಸ್ವರ್ಗವನ್ನೂ ಮೋಕ್ಷವನ್ನೂ ಪಡೆಯಬಲ್ಲನು. ಹೀಗೆ ಇದು ಮೋಕ್ಷದಾಯಕ ಭೂಮಿಯಾಗಿರುವ ದರಿಂದ ದೇವತೆಗಳೂ ಕೂಡಾ ಭಾರತೀಯರ ಸೌಭಾಗ್ಯವನ್ನು ಹಾಡಿ ಹೊಗಳು ತ್ತಾರಂತೆ:-

> ಗಾಯಂತಿ ದೇವಾಃ ಕಿಲ ಗೀತಕಾನಿ |
> ಧನ್ಯಾಸ್ತು ಯೇ ಭಾರತ ಭೂಮಿಭಾಗೇ |
> ಸ್ವರ್ಗಾಪವರ್ಗಾಸ್ಪದಹೇತುಭೂತೇ
> ಭವಂತಿ ಭೂಯಃ ಪುರುಷಾಃ ಸುರತ್ವಾತ್ ‖[12]

("ಭಾರತದಲ್ಲಿ ಹುಟ್ಟಿದ ಮನುಷ್ಯರು ಸುದೈವಿಗಳು; ದೇವತೆಗಳಿಗಿಂತ ಮಿಗಿಲಾದವರು; ಏಕೆಂದರೆ ಅದು ಸ್ವರ್ಗ-ಮೋಕ್ಷಗಳಿಗೆ ಬಾಗಿಲು." ಎಂದು ದೇವತೆಗಳು ಹಾಡುತ್ತಾರೆ.)

ಭಾರತದಲ್ಲಿಯ ನದಿಗಳೆಲ್ಲ ಹಿಂದುಗಳಿಗೆ ತಾಯಿಯಂತೆ ಪಾವನ. ಬೆಟ್ಟ-ಪರ್ವತಗಳೆಲ್ಲ ದೇವ ಸನ್ನಿಧಿಯುಳ್ಳ ಪವಿತ್ರ ತಾಣಗಳು; ಆರಾಧ್ಯ ದೇವತೆಗಳ

---

೧೧) ಅ) ಅತ್ರಾಪಿ ಭಾರತಂ ಶ್ರೇಷ್ಠಂ ಜಂಬುದ್ವೀಪೆ ಮಹಾಮುನೇ ‖
ಯತೋ ಹಿ ಕರ್ಮಭೂರೇಷಾ ತತೋಽನ್ಯಾ ಭೋಗ ಭೂಮಯಃ ‖
(ವಿಷ್ಣು ಪುರಾಣ ೨-೩-೨೧)

ಆ) ಜಾಂಬವೇ ಭಾರತಂ ವರ್ಷಂ ತೀರ್ಥಂ ತ್ರೈಲೋಕ್ಯವಿಶ್ರುತಮ್
ಕರ್ಮಭೂಮಿರ್ಯತ: ಪುತ್ರ ತಸ್ಮಾತ್ ತೀರ್ಥಂ ತದುಚ್ಯತೇ ‖
[ಬ್ರಹ್ಮ ಪು. ೭೦- ೨೧]

ಇ) ಭಾರತಂ ನಾಮ ಯದ್ವರ್ಷಂ ದಕ್ಷಿಣೇನ ಮಯೋದಿತಮ್ |
ತತ್ಕರ್ಮಭೂಮಿರ್ನಾನ್ಯತ್ರ ಸಂಪ್ರಾಪ್ತಿ: ಪುಣ್ಯಪಾಪಯೋ: |
ಏತತ್ಪ್ರಧಾನಂ ವಿಜ್ಞೇಯಂ ಯತ್ರ ಸರ್ವಂ ಪ್ರತಿಷ್ಠಿತಮ್
(ಮಾರ್ಕಂಡೇಯ-ಪು. ೫೫-೨೧-೨೨)

೧೨) ವಿಷ್ಣು ಪುರಾಣ [೨-೩-೨೩]
'ಅಹೋಂಬತೈಷಾ ಕಿಮಕಾರಿ ಶೋಭನಂ
ಪ್ರಸನ್ನ ಏಷಾಂ ಸ್ವಿದುತ ಸ್ವಯಂ ಹರಿ:
ಯೈರ್ಜನ್ಮ ಲಬ್ಧಂ ನೃಷು ಭಾರತಾಜಿರೇ
ಮುಕುಂದಸೇವೋಪಯಿಕಂ ಸ್ಪೃಹಾ ಹಿನ:
[ಭಾಗವತ ೫-೧೯-೨೦]

ಭಾರತದಲ್ಲಿ ಜನ್ಮ ಪಡೆದವರು ಪುಣ್ಯವಂತರು ಅವರ ಮೇಲೆ ಸ್ವತಃ ಪರಮಾತ್ಮನು ಸಂಸಂತುಷ್ಟನು. ಪರಮಾತ್ಮನ ಸೇವೆಗೆ ಅವಕಾಶ ಮಾಡಿಕೊಡುವ ಅಲ್ಲಿಯೇ ಜನ್ಮ ಪಡೆಯ ಬೇಕೆಂಬುದೂ ನಮ್ಮ ಬಯಕೆ. ಎಂದು ದೇವತೆಗಳು ಉದ್ಗರಿಸುತ್ತಾರೆ.

ನೆಲೆಗಳು. ಕಾಳಿದಾಸನು ಹಿಮಾಲಯ ಪರ್ವತವನ್ನು 'ದೇವತಾತ್ಮಾ'[13] ಎಂದು ಬಣ್ಣಿಸಿರುವದು ಸಕಲ ಹಿಂದುಗಳ ಭಾವನೆಯನ್ನು ಪ್ರತಿಬಿಂಬಿಸುತ್ತದೆ. ಹೀಗೆ ತಾಯ್ನಾಡಿನ ಹಿರಿಮೆ–ಗರಿಮೆಗಳನ್ನು ಮನಗಾಣಿಸಿಕೊಂಡಿರುವದರಿಂದ ಎಂದೆಂದಿಗೂ ಯಾವದೇ ರೂಪದಲ್ಲಾದರೂ ಈ ತಾಯಿಯ ಉದರದಲ್ಲಿಯೇ ಜನಿಸಬೇಕೆಂಬುದು ಹಿಂದುಗಳ ಪ್ರಾರ್ಥನೆಯಾಗಿದೆ. ಆ ಪ್ರಾರ್ಥನೆ ಈ ಶ್ಲೋಕದಲ್ಲಿ ಸ್ಪಷ್ಟವಾಗಿ ಮೂಡಿ ಬಂದಿದೆ–

ನ ಮೇ ವಾಂಛಾಸ್ತಿ ಯಶಸಿ ವಿದ್ವತ್ತ್ವೇ ನ ಚ ವಾ ಸುಖೇ
ಪ್ರಭುತ್ವೇ ನೈವ ವಾ ಸ್ವರ್ಗೇ ಮೋಕ್ಷೇಽಪ್ಯಾನಂದದಾಯಕೇ |
ಪರಂತು ಭಾರತೇ ಜನ್ಮ ಮಾನವಸ್ಯ ಚ ವಾ ಪಶೋಃ
ವಿಹಂಗಸ್ಯ ಚ ವಾ ಜಂತೋಃ ವೃಕ್ಷಪಾಷಾಣಯೋರಪಿ ||

(ನನಗೆ ಕೀರ್ತಿ, ಪಾಂಡಿತ್ಯ, ಸುಖ, ಅಧಿಕಾರ, ಸ್ವರ್ಗ ಅಥವಾ ಮೋಕ್ಷದ ಬಯಕೆಯಿಲ್ಲ. ಆದರೆ ಭಾರತದಲ್ಲಿ ಜನ್ಮಬೇಕು; ಮನುಷ್ಯ, ಪಶು, ಪಕ್ಷಿ, ಹುಳ, ಮರ, ಅಥವಾ ಕಲ್ಲು-ಯಾವ ರೂಪದಲ್ಲಾದರೂ ಅಡ್ಡಿಯಿಲ್ಲ.)[14]

---

೧೩) "ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ
ಹಿಮಾಲಯೋ ನಾಮ ನಗಾಧಿರಾಜಃ |
ಪೂರ್ವಾಪರೌ ತೋಯನಿಧೀ ವಗಾಹ್ಯ
ಸ್ಥಿತಃ ಪೃಥಿವ್ಯಾ ಇವ ಮಾನದಂಡಃ
(ಕುಮಾರ ಸಂಭವ, ೧-೧)

೧೪] -ಓದಿರಿ-
ಬರಲಿ ಬ್ರಾಹ್ಮಣರಲ್ಲಿ ಜನ್ಮವು
ಬರಲಿ ಮಾದಿಗರಲ್ಲಿ ಇಲ್ಲವೆ
ಇರದು ಚಿಂತೆಯು, ತಾಯೆ! ನಿನ್ನುದರದಲಿ ಜನಿಸುವೆ|
ಪರಮಭಾಗ್ಯವು ಎಂಬುದರಿಯೇವೇ ?
ಮರೆಯದಲೆ ಪ್ರತಿಜನ್ಮದಲಿ ಶ್ರೀ-
ಧರನು ಪಯದಿಂದೆನಗೆ ನಿನ್ನಲಿ ಕೊಡಲಿ ಜನ್ಮವನು ||
ಇರಲೆನಗೆ ಕರಕನ್ನ ಉಣ್ಣಲು
ಬರಿಯ ನೆಲ ಇರಲೆನಗೆ ಮಲಗಲು
ಹರಕು ಬಟ್ಟೆಗಳೆನ್ನ ಮೈಯನು ಮುಚ್ಚಲಿರಲೆನಗೆ||
ಮುರುಕು ಗುಡಿಸಲು ಇರಲಿ ಚಾಟಿಗೆ
ಸಿರಿಯರಸಿ! ಮತ್ತೇನ ಬೇಡೆನು
ಭರತ ಭುವಿಯೊಳಿರುವುದೇ ನನಗೊಂದು ಸುಖವಹುದು।
ಧನವ ಬೇಡೆನು ನಾನು ನಾರಾ-
ಯಣನೆ! ಸನ್ಮಾನವನು ವಿದ್ವ-
ಜ್ಜನರ ಸಭೆಯಲಿ ಬೇಡೆನೈ, ನಾ ಬೇಡೆ ಕೀರ್ತಿಯನು

(ಮುಂದಿನ ಪುಟಕ್ಕೆ)

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ" ಎಂಬ ಶ್ರೀರಾಮನ ಉದ್ಗಾರ ವೈದಿಕ ಹಿಂದುವಿನ ನಾಡನಿಷ್ಠೆಯ ಪ್ರತೀಕ. ಈ ಭಾವನೆಯಿಂದ ಪ್ರೇರಿತರಾಗಿಯೇ ನಮ್ಮ ಕ್ರಾಂತಿಕಾರಿಗಳು ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ನೇಣಿನ ಕುಣಿಕೆಗೆ ನಗು–ನಗುತ್ತ ಕುತ್ತಿಗೆ ಸೇರಿಸಿದರು.! ಪುನಃ ಇಲ್ಲಿಯೇ ಹುಟ್ಟಿ ಹೋರಾಡಬೇಕೆಂದು ಸಂಕಲ್ಪಿಸಿದರು!!

ವೈದಿಕ ಹಿಂದುಗಳು ತಮ್ಮ ತಾಯ್ನಾಡಿನ ಒಂದು ಹೆಸರಾದ ಭಾರತದ ವಿವರಣೆಯನ್ನು ಕೊಟ್ಟ ರೀತಿ ಇಂತಿದೆ:–

ಭಾತಿ ಸರ್ವೇಷು ಶಾಸ್ತ್ರೇಷು ರತಿಃ ಸರ್ವೇಷು ಜಂತುಷು |
ತರಣಂ ಸರ್ವಭೂತಾನಾಂ ತಸ್ಮಾದ್ ಭಾರತಮುಚ್ಯತೇ ||

ಅಂದರೆ, "ಭಾರತದಲ್ಲಿ ಎಲ್ಲ ಶಾಸ್ತ್ರಗಳೂ ಬೆಳಗುತ್ತಿವೆ. ಇಲ್ಲಿ ಸಕಲ ಪ್ರಾಣಿಗಳಿಗೂ ಲೇಸನ್ನೇ ಮಾಡಲಾಗುತ್ತಿದೆ. ಮತ್ತು ಎಲ್ಲ ಪ್ರಾಣಿಗಳಿಗೂ ಸಂಸಾರ ಬಂಧನದಿಂದ ಬಿಡುಗಡೆ ನೀಡಲಾಗುತ್ತದೆ. ಆದುದರಿಂದ ಈ ನಾಡನ್ನು "ಭಾರತ" ಎಂದು ಕರೆಯುತ್ತಾರೆ." ಇದು ನಿಜವೆಂಬುದು ನಮ್ಮ ನಾಡಿನ ಚರಿತ್ರೆಯನ್ನು ವಸ್ತುನಿಷ್ಠವಾಗಿ ಅಭ್ಯಸಿಸಿದವರಿಗೆ ಮನಗಾಣುವದು.

ಅಲ್ಲದೆ ವೈದಿಕ ಹಿಂದುಗಳು ಕಂಡುಹಿಡಿದ ಇನ್ನೊಂದು ಸತ್ಯ ಸಂಗತಿ ಎಂದರೆ ತಮ್ಮ ತಾಯ್ನಾಡು ಸಮಗ್ರವಾಗಿ, ಇಡಿಯಾಗಿ ಪವಿತ್ರವಾಗಿದೆಯೆಂಬುದು. ಅದರ ಪಾವಿತ್ರ್ಯ ಯಾವುದೇ ಭಾಗಕ್ಕೆ ಮಾತ್ರ ಸೀಮಿತವಾಗಿಲ್ಲ. ಎಲ್ಲ ಭಾಗಗಳೂ, ಅವುಗಳ ಭೂಸತ್ವ, ವಾಯುಗುಣ, ಜಲಸಮೃದ್ಧಿ, ವನಸ್ಪತಿ ಸಂಪತ್ತು, ಪಶು-ಪಕ್ಷಿ-ಜೀವರಾಶಿಗಳು ಮತ್ತು ಮನುಷ್ಯ ಸಮೂಹಗಳ ಗಾತ್ರ, ಬಣ್ಣ, ಯಾವುದೇ ವಿಧವಾಗಿದ್ದರೂ ಎಲ್ಲ ಭೂಭಾಗಗಳು ಸಮಾನವಾಗಿ ಪವಿತ್ರ. ದೇಶ ವಿಶಾಲವಾಗಿರುವದರಿಂದ ಪ್ರಾದೇಶಿಕವಾಗಿ ನಿಸರ್ಗನಿರ್ಮಿತವಾದ ಭಿನ್ನತೆ ಇರುವದು ಸಹಜವೇ. ಅದೇ ರೀತಿ ಆಡಳಿತ ಸೌಕರ್ಯಕ್ಕಾಗಿ ನಾಡಿನ ವಿಚಾರವಂತರು ಪ್ರಾಂತ ಅಥವಾ ರಾಜ್ಯಗಳಲ್ಲಿ ಸಮಗ್ರ ದೇಶವನ್ನು ವಿಂಗಡಿಸಿದ್ದಿರಬಹುದು. ಆದರೆ ಯಾವುದೇ ಪ್ರಾಂತವು ಉಚ್ಚವಲ್ಲ, ಯಾವುದೇ ರಾಜ್ಯವು ಕನಿಷ್ಠವಲ್ಲ. ಅದರ ವಿಸ್ತಾರ, ಸಂಪತ್ತು, ಭಾಷೆ, ಮಳೆ, ಬೆಳೆ, ಸ್ಥಾನ, ಮಾನ ಯಾವುದೇ ಆಗಿದ್ದರೂ ಈ ರೀತಿಯ ಪ್ರಾದೇಶಿಕ ಬಾವನೆಯಾಗಲೀ ಪ್ರಾಂತೀಯ

(ಹಿಂದಿನಪುಟದಿಂದ)

ಕನಸು ಮನಃನಲಿರಲಿ ಕರುಣಾ–
ಭನನೆ ಧ್ಯಾನವು ಜನ್ಮ ಭೂಮಿಯು
ತನುವು ಸವೆಯುತಲಿರಲಿ ಹಗಲಿರುಳವಳ ಸೇವೆಯಲಿ

–ಸಾಲಿ ರಾಮಚಂದ್ರರಾಯರು.

ಶ್ಲೋಕಾವಲಿಂದ, ವಿಕ್ರಮ ಪ್ರಕಾಶನ. ಬೆಂಗಳೂರು. ೧೯೬೦. ಪು. ೧೫೪-೫

ದುರಭಿಮಾನವಾಗಲೀ ಭುಗಿಲೆದ್ದು ರಾಷ್ಟ್ರೀಯ ಹಿತಕ್ಕೆ ಧಕ್ಕೆ ತಗಲಬಾರದೆಂದು ನಮ್ಮ ಪ್ರಾಚೀನ ಋಷಿ–ಮುನಿಗಳು ಎಚ್ಚರಿಕೆ ವಹಿಸಿ, ಸಮಗ್ರ ದೇಶವು ಸಮಾನ ವಾಗಿ ಪವಿತ್ರವಾಗಿದೆ, ಎಂಬುದರ ಸ್ಮರಣೆ ಸದಾ ಸರ್ವದಾ ಪ್ರತಿಯೊಬ್ಬರ ಮನಸ್ಸಿನಲ್ಲಿ ಜಾಗೃತವಾಗಿರುವಂತೆ ಧಾರ್ಮಿಕ ವಿಧಿ-ವಿಧಾನಗಳನ್ನು ಹಾಕಿ ಕೊಟ್ಟರು. ಏಕೆಂದರೆ ಹಿಂದುವಿನ ನಿತ್ಯಜೀವನದಲ್ಲಿ ಧರ್ಮ ಹಾಸುಹೊಕ್ಕಾಗಿದೆ. ವೈದಿಕ ಹಿಂದೂ ಆದವನು ಎಲ್ಲ ಧಾರ್ಮಿಕ ಕಾರ್ಯಗಳ ಆರಂಭದಲ್ಲಿ ತಾನು ಮಾಡಲಿರುವ ಕಾರ್ಯದ ಉಚ್ಚಾರಮಾಡಿ ಅದನ್ನು ಮಾಡುವ ಸಂಕಲ್ಪ ಮಾಡುತ್ತಾನೆ. ಆ ಸಂಕಲ್ಪದಲ್ಲಿ ತಾನಿರುವ ಪ್ರದೇಶದ ಉಲ್ಲೇಖ ಮಾಡುವಾಗ "ಬ್ರಹ್ಮಾಂಡೇ, ಭೂಲೋರ್ಕೇ, ಜಂಬುದ್ವೀಪೇ, ಭರತಖಂಡೇ ಭಾರತ ವರ್ಷೇ...." ಎಂಬುದಾಗಿ ಉಚ್ಚರಿಸಿ ಆ ಬಳಿಕ ತಾನಿರುವ ಸ್ಥಳದ ಹೆಸರನ್ನು ಉಚ್ಚರಿಸುತ್ತಾನೆ. ಹಿಂದುವು ತಾನು ಸ್ನಾನ ಮಾಡುವ ನೀರಿನಲ್ಲಿ ದೇಶದ ತುಂಬೆಲ್ಲ ಹಬ್ಬಿರುವ ನದಿಗಳ ನೀರಿನ ಪಾವಿತ್ರ್ಯ ಹಾಗೂ ಸನ್ನಿಧಾನ ಕಾಣಲು ಈ ಕೆಳಗಿನ ಶ್ಲೋಕ ಉಚ್ಚರಿಸ ಬೇಕೆಂದು ವಿಧಿಸಿದೆ–

ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ।
ನರ್ಮದೇ ಸಿಂಧು ಕಾವೇರಿ ಜಲೇsಸ್ಮಿನ್ ಸನ್ನಿಧಿಂ ಕುರು ॥

(ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದೆ, ಸಿಂಧು, ಕಾವೇರಿ, –ನೀವೆಲ್ಲ ಈ ನೀರಿನಲ್ಲಿ ಸೇರಿರಿ.) ಈ ನದಿಗಳು ಹಿಂದುಸ್ಥಾನದ ಬೇರೆ ಬೇರೆ ಪ್ರದೇಶಗಳಲ್ಲಿ ಹರಿಯುತ್ತವೆ ಎಂಬುದನ್ನು ಗಮನಿಸಬೇಕು. ಶಿವಪುರಾಣ (೨-೧೨) ದಲ್ಲಿ ಗಂಗಾ, ಗೋದಾವರಿ, ಕಾವೇರಿ, ತಾಮ್ರಪರ್ಣಿ, ಸಿಂಧು, ಸರಯು ಮತ್ತು ರೇವಾ ನದಿಗಳನ್ನು 'ಸಪ್ತಗಂಗಾ' ಎಂದು ಕರೆದಿರುವದು ಗಮನಾರ್ಹ. ಅದೇ ರೀತಿ ಈ ಕೆಳಗಿನ ಶ್ಲೋಕವು ಭಾರತದೊಳಗಿನ 'ಕುಲಪರ್ವತ' ಗಳನ್ನು ಉಲ್ಲೇಖಿಸುತ್ತದೆ.–

ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನೃಕ್ಷ ಪರ್ವತಃ ।
ವಿಂಧ್ಯಶ್ಚ ಪಾರಿಯಾತ್ರಶ್ಚ ಸಪ್ತೈತೇ ಕುಲಪರ್ವತಾಃ ॥

ಈ ಪರ್ವತಗಳೆಲ್ಲ ದೇಶದ ನಾನಾ ಬಾಗಗಳಲ್ಲಿ ಹಬ್ಬಿವೆ. ಇದೇ ರೀತಿ ಮೋಕ್ಷ ದಾಯಕ 'ಸಪ್ತಪುರಿ'ಗಳೂ ದೇಶದ ಅನ್ಯಾನ್ಯ ಬಾಗಗಳಲ್ಲಿವೆ.–

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ ।
ಪುರೀ ದ್ವಾರಾವತೀ ಚೈವ ಸಪ್ತೈತಾ ಮೋಕ್ಷದಾಯಿಕಾಃ ॥

ಹಿಮಾಲಯದಿಂದ ಕನ್ಯಾಕುಮಾರಿಯ ವರೆಗಿನ ಇಡಿಯ ದೇಶ ಸಕಲರಿಗೂ ಪವಿತ್ರ, ಪುಣ್ಯಕರ, ಪೂಜ್ಯ, ಉಪಾಸ್ಯವೆಂಬುದನ್ನು ಮನಗಾಣಿಸಲು ಹಿಂದೂ ದೇಶದ ವಿಚಾರವಂತರು ಹಿಂದುಗಳ ತೀರ್ಥಕ್ಷೇತ್ರಗಳನ್ನು ಬೇರೆ ಬೇರೆ ಭಾಗಗಳಲ್ಲಿ ತೋರಿಸಿಕೊಟ್ಟರು. ಉತ್ತರದ ಹಿಮಾಲಯದ ಕೈಲಾಸ ಶಿಖರದಲ್ಲಿ ನೆಲೆಸಿರುವ

ಶಿವನಿಗಾಗಿ ದಕ್ಷಿಣದ ತುತ್ತತುದಿಯ ಕನ್ಯಾಕುಮಾರಿಯಲ್ಲಿ ಪಾರ್ವತಿಯು ತಪಸ್ಸನ್ನಾಚರಿಸುತ್ತಿದ್ದಾಳೆ. ಸಕಲರಿಗೂ ಮರ್ಯಾದಾ ಪುರುಷೋತ್ತಮನಾದ ಶ್ರೀರಾಮಚಂದ್ರನ ವರ್ಣನೆಯಲ್ಲಿ–

'ಸಮುದ್ರ ಇವ ಗಾಂಭೀರ್ಯೇ ಧೈರ್ಯೇಣ ಹಿಮವಾನ್ ಇವ ॥

(ಸಮುದ್ರದಂತೆ ಗಂಭೀರ, ಹಿಮಾಲಯದಂತೆ ಧೀರ) ಎಂಬುದಾಗಿ ಹಿಮಾಲಯ ಮತ್ತು ಹಿಂದೂಮಹಾಸಾಗರಗಳನ್ನು ಉಲ್ಲೇಖಿಸಿದ್ದಾರೆ. [15]

ಪವಿತ್ರವಾದ ಚತುರ್ಧಾಮಗಳು – ಉತ್ತರದಲ್ಲಿ ಬದರಿ, ಪೂರ್ವದಲ್ಲಿ ಜಗನ್ನಾಥಪುರಿ, ದಕ್ಷಿಣದಲ್ಲಿ ರಾಮೇಶ್ವರ ಮತ್ತು ಪಶ್ಚಿಮದಲ್ಲಿ ದ್ವಾರಕಾ. ಕೇರಳದ ಕಾಲಟಿಯಲ್ಲಿ ಜನಿಸಿದ ಶಂಕರಾಚಾರ್ಯರು ಭಾರತದ ಅಖಂಡತೆಯನ್ನು ಬಿಂಬಿಸಲು ಬದರಿ, ಪುರಿ, ದ್ವಾರಕಾ ಮತ್ತು ದಕ್ಷಿಣದ ಶೃಂಗೇರಿ ಹೀಗೆ ನಾಲ್ಕೂ ಕಡೆಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ನಾಲ್ಕು ಪವಿತ್ರ ತೀರ್ಥಗಳು:– ಉತ್ತರದಲ್ಲಿ ತಪ್ತಕುಂಡ, ಪೂರ್ವದಲ್ಲಿ ಶ್ವೇತಗಂಗಾ, ದಕ್ಷಿಣದಲ್ಲಿ ಧನುಸ್ತೀರ್ಥ ಮತ್ತು ಪಶ್ಚಿಮದಲ್ಲಿ ಗೋಮತೀಕುಂಡ. ನಾಲ್ಕು ಸರೋವರಗಳು– ಉತ್ತರದಲ್ಲಿಮಾನಸ, ಪೂರ್ವದಲ್ಲಿ ಬಿಂದು, ದಕ್ಷಿಣದಲ್ಲಿ ಪಂಪಾ, ಮತ್ತು ಪಶ್ಚಿಮದಲ್ಲಿ ನಾರಾಯಣ.

ಹಿಂದುಗಳಿಗೆಲ್ಲ, ವಿಶೇಷವಾಗಿ ಶಿವಭಕ್ತರಿಗೆಲ್ಲ ಪೂಜ್ಯವಾದ ಹನ್ನೆರಡು ಜ್ಯೋತಿರ್ಲಿಂಗಗಳು ದೇಶದ ನಾನಾ ಬಾಗಗಳಲ್ಲಿ ಸ್ಥಾಪಿತವಾಗಿವೆ.–

ಸೌರಾಷ್ಟ್ರೇ ಸೋಮನಾಥಂ ಚ ಶ್ರೀಶೈಲೇ ಮಲ್ಲಿಕಾರ್ಜುನಮ್ ।
ಉಜ್ಜಯಿನ್ಯಾಂ ಮಹಾಕಾಲಮೋಂಕಾರ ಮಮಲೇಶ್ವರಮ್ ॥
ಪರಲ್ಯಾಂ ವೈದ್ಯನಾಥಂ ಚ ಡಾಕಿನ್ಯಾಂ ಭೀಮಶಂಕರಮ್ ।
ಸೇತುಬಂಧೇ ತು ರಾಮೇಶಂ ನಾಗೇಶಂ ದಾರುಕಾವನೇ ॥
ವಾರಾಣಸ್ಯಾಂ ತು ವಿಶ್ವೇಶಂ ತ್ರ್ಯಂಬಕಂ ಗೌತಮೀ ತಟೇ ।
ಹಿಮಾಲಯೇ ತು ಕೇದಾರಂ ಘುಶ್ಮೇಶಂ ಚ ಶಿವಾಲಯೇ ॥
ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ ।
ಸಪ್ತಜನ್ಮಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥

---

೧೫) ಓದಿರಿ "ನಮ್ಮ ಜನತೆಯ ಶೀಲ ಮತ್ತು ಸಂಸ್ಕೃತಿಗಳ ಮೇಲೆ ಅಚ್ಚೊತ್ತಿರುವ ಮುದ್ರೆ ಯನ್ನೊತ್ತಿದ ಮಹಾಮಹಿಮರಲ್ಲಿ ಶ್ರೀರಾಮಚಂದ್ರ ಒಬ್ಬ. ಚಿತ್ತಶಾಂತಿ, ಮನೋ ವೈಶಾಲ್ಯ ಮತ್ತು ಜ್ಞಾನ ಭಾವಗಳ ಗಹನತೆ, ಇಂತಹ ಆವನ ಗುಣಗಳನ್ನು ಅಳತೆಗೆ ನಿಲುಕದ ಸಮುದ್ರದ ಆಳ ಮತ್ತು ಗಾಂಭೀರ್ಯಗಳಿಗೆ ಹೋಲಿಸುತ್ತಾರೆ. ಅವನ ಅದಮ್ಯ ಶೌರ್ಯ ಮತ್ತು ಚಿತ್ತ ಸ್ಮರಣೆಗಳನ್ನು ಪ್ರಚಂಡ, ಅಜೇಯ ಹಿಮಾಲಯಕ್ಕೆ ಹೋಲಿಸುತ್ತಾರೆ.
'ಸಮುದ್ರ ಇವ ಗಾಂಭೀರ್ಯೇ ಧೈರ್ಯೇಣ ಹಿಮವಾನಿವ'
ಮಾ. ಸ. ಗೋಳವಲಕರ್ ಚಿಂತನಗಂಗಾ ಪುಟ ೯೯.

[ಗುಜರಾಥ ಸೌರಾಷ್ಟ್ರದಲ್ಲಿಯ ಸೋಮನಾಥ, ಆಂಧ್ರದ ಶ್ರೀಶೈಲದಲ್ಲಿಯ ಶ್ರೀಮಲ್ಲಿಕಾರ್ಜುನ, ಮಧ್ಯಪ್ರದೇಶದ ಉಜ್ಜೈನಿಯಲ್ಲಿಯ ಶ್ರೀಮಹಾಕಾಲ, ನರ್ಮದಾನದಿಯ ದಡದ ಮೇಲಿನ (ಮ. ಪ್ರ. ಮಾಳವಾಪ್ರಾಂತ) ಶ್ರೀಓಂಕಾರೇಶ್ವರ, ಮಹಾರಾಷ್ಟ್ರದ ಪರಲಿಯಲ್ಲಿ ಶ್ರೀವೈದ್ಯನಾಥ. ಭೀಮಾನದೀ ದಡದ ಡಾಕಿನಿಯಲ್ಲಿಯ ಶ್ರೀ ಭೀಮಶಂಕರ, ತಮಿಳುನಾಡಿನ ರಾಮೇಶ್ವರದಲ್ಲಿಯ ಶ್ರೀ ರಾಮೇಶ್ವರ, ಗುಜರಾಥದ ದಾರುಕಾವನ (ಬರೋಡಾ ಬಳಿ)ದಲ್ಲಿಯ ಶ್ರೀ ನಾಗೇಶ, ಉತ್ತರ ಪ್ರದೇಶದ ಕಾಶಿಯಲ್ಲಿಯ ಶ್ರೀ ವಿಶ್ವನಾಥ, ಮಹಾರಾಷ್ಟ್ರದ ಗೋದಾವರಿ ದಡದಲ್ಲಿಯ ಶ್ರೀ ತ್ರ್ಯಂಬಕೇಶ್ವರ, ಹಿಮಾಲಯದಲ್ಲಿಯ ಶ್ರೀಕೇದಾರೇಶ್ವರ, ಎಲ್ಲೋರಾದಲ್ಲಿಯ ಶ್ರೀಘುಶ್ಮೇಶ್ವರ ಇವು ಹನ್ನೆರಡು ಜ್ಯೋತಿರ್ಲಿಂಗಗಳು]

ಶಾಕ್ತರಿಗೆ ಪೂಜ್ಯವಾದ ಶಕ್ತಿ ಪೀಠಗಳು, ವೈಷ್ಣವರಿಗೆ ಪೂಜ್ಯವಾದ ವಿಷ್ಣು ಸ್ಥಾನಗಳು ದೇಶದ ತುಂಬ ಪಸರಿಸಿವೆ. [16]

ಈ ರೀತಿಯಾಗಿ ವೈದಿಕ ಹಿಂದೂ ಧರ್ಮದಲ್ಲಿ ಅಡಕವಾಗಿರುವ ಎಲ್ಲ ಮತ-ಸಂಪ್ರದಾಯಗಳ ಅನುಯಾಯಿಗಳಿಗೆ ಪವಿತ್ರ ಮತ್ತು ಪೂಜ್ಯವಾದ ತೀರ್ಥಕ್ಷೇತ್ರ, ಪುಣ್ಯಕ್ಷೇತ್ರ, ಪವಿತ್ರಧಾಮ, ಪಾವನಪೀಠ, ಪುನೀತಮಠ ಮುಂತಾದವುಗಳನ್ನು ದೇಶದತುಂಬ ಸ್ಥಾಪಿಸಿದ್ದಷ್ಟೇ ಅಲ್ಲ, ಇವುಗಳಿಗೆ ಭೆಟ್ಟಿನೀಡುವ ಮೂಲಕ ಸಮಗ್ರ ದೇಶದ ಪರಿಚಯವಾಗಿ ದೇಶಭಕ್ತಿ-ನಿಷ್ಠೆ-ಶ್ರದ್ಧೆ ದೃಢವಾಗಬೇಕೆಂದು ವೇದಾನುಯಾಯಿ ಹಿಂದೂಧರ್ಮ ಶಾಸ್ತ್ರಕಾರರೂ, ಸ್ಮೃತಿಕಾರರೂ ಪವಿತ್ರ ಕ್ಷೇತ್ರಗಳ ತೀರ್ಥಯಾತ್ರೆಯನ್ನು ಮಾಡಬೇಕೆಂದು ವಿಧಿಸಿದರು. ಅದೂ ಕೂಡಾ ಕಾಲ್ನಡಿಗೆಯಿಂದ. ಕಾಲ್ನಡಿಗೆಯ ತೀರ್ಥಯಾತ್ರೆಯಿಂದ ಸಮಗ್ರ ತಾಯ್ನಾಡಿನ ಪ್ರತ್ಯಕ್ಷ ದರ್ಶನವಾಗುತ್ತದೆ; ಅಲ್ಲಲ್ಲಿಯ ಸಮಾಜ ಬಾಂಧವರ ಸಂಪರ್ಕ, ಪರಿಚಯ, ಪ್ರೀತಿ, ವಿಶ್ವಾಸ, ಮುಂತಾದ ರಾಷ್ಟ್ರೀಯ ಭಾವೈಕ್ಯಕ್ಕೆ ಕಾರಣವಾಗುವ ಸಂಗತಿಗಳು ಅನಾಯಾಸ ಘಟಿಸುತ್ತವೆ. ಬಹಿರಂಗದಲ್ಲಿ ಬೇರೆ ಬೇರೆಯಾಗಿ ಕಾಣಿಸಿದರೂ ಅಂತರಂಗದಲ್ಲಿ ತಾವೆಲ್ಲ ಒಂದೇ ಎಂಬ ಭಾವನೆ ಒಡಮೂಡಿ ಒಂದಾಗಿ ಬಾಳಲು ಪ್ರೇರಣೆ ನೀಡುತ್ತದೆ. ಈ ತೀರ್ಥಯಾತ್ರೆಯಲ್ಲಿಯೂ ಒಂದು ಮಹತ್ವದ ಹಾಗೂ ಅತ್ಯುಪಯುಕ್ತ ಅಂಶವಿದೆ. ಅದೆಂದರೆ ಹಿಂದೂ ಆದವನು ಜೀವನದಲ್ಲಿ ಒಮ್ಮೆಯಾದರೂ ಕಾಶಿ-ರಾಮೇಶ್ವರಗಳ ದರ್ಶನ ಮಾಡಬೇಕೆಂದೂ ಕಾಶಿಯಿಂದ ಗಂಗಾಜಲವನ್ನೊಯ್ದು ರಾಮೇಶ್ವರದಲ್ಲಿರುವ ಶಿವಲಿಂಗಕ್ಕೆ ಅಭಿಷೇಕ ಮಾಡಬೇಕೆಂದೂ. ರಾಮೇಶ್ವರದ ಸಮುದ್ರದ ನೀರನ್ನೊಯ್ದು ಕಾಶಿಯಲ್ಲಿರುವ ಶ್ರೀ ವಿಶ್ವೇಶ್ವರನಿಗೆ ಅಭಿಷೇಕ ಮಾಡಬೇಕೆಂದೂ ಹಾಗೆ ಮಾಡಿದರೆ ಮಾತ್ರ ಯಾತ್ರೆ ಸಂಪೂರ್ಣ

---

೧೬) ವಿಷ್ಣುಸ್ಥಾನಗಳು ಮತ್ತು ಶಕ್ತಿಪೀಠಗಳ ವಿವರಗಳಿಗೆ ನೋಡಿರಿ ರಾಧಾಕುಮುದ ಮುಖರ್ಜಿ, *F. U. I.* ಪುಟ ೬೦-೫೩

ಮತ್ತು ಸಫಲನೆಂದೂ ವಿಧಿಸಿದೆ. ಕಾಲ್ನಡಿಗೆಯಿಂದ ಮಾಡುವ ಈ ಯಾತ್ರೆ ರಾಷ್ಟ್ರೀಯ ಭಾವೈಕ್ಯಕ್ಕೆ ಎಷ್ಟೊಂದು ಸಹಾಯಕವೆಂದು ಊಹಿಸಿ ಅರಿಯಬಹುದಾಗಿದೆ.

ಹೀಗೆ ರಾಷ್ಟ್ರೀಯ ಭಾವೈಕ್ಯಕ್ಕೆ ಅಡ್ಡಿಯಾಗಿ ಉದ್ಭವಿಸಬಹುದಾದ ಪ್ರಾದೇಶಿಕ ಭೇದ ಭಾವವನ್ನು ನಿವಾರಿಸಲು ಹಿಂದುಗಳು ಕೈಕೊಂಡ ಕ್ರಮಗಳನ್ನು ಅವಲೋಕಿಸಿದ ಬಳಿಕ ಮತ-ಸಂಪ್ರದಾಯಗಳ ಭಿನ್ನತೆಯಿಂದ ಉಂಟಾಗಬಹುದಾದ ಆತಂಕಗಳನ್ನು ನಿವಾರಿಸಿದ ಬಗೆಯನ್ನು ನೋಡೋಣ. ವೈದಿಕ ಹಿಂದೂ ಧರ್ಮದ ಒಂದು ವೈಶಿಷ್ಟ್ಯವೆಂದರೆ ಉದಾರತೆ. ಈ ಉದಾರತೆಯ ಮೂಲಕ ಮನುಷ್ಯನ ವಿಕಾಸಕ್ಕೆ ಅಗತ್ಯವಿರುವ ವಿಚಾರಸ್ವಾತಂತ್ರ್ಯ ಮತ್ತು ಉಪಾಸನಾ ಸ್ವಾತಂತ್ರ್ಯಗಳನ್ನು ಸಕಲ ಮಾನವ ಜನಾಂಗಕ್ಕೆ ನೀಡಿದೆ.

ವಿಚಾರ ಸ್ವಾತಂತ್ರ್ಯದ ಮೂಲಕ ಜಗತ್ತು-ಜೀವ-ಭಗವಂತ-ಸೃಷ್ಟಿಕರ್ತ ಅವರಲ್ಲಿಯ ಸಂಬಂಧ ಮುಂತಾದ ವಿಷಯಗಳನ್ನು ಕುರಿತು ಹಿಂದೂಗಳಲ್ಲಿ ಅನ್ಯಾನ್ಯ 'ದರ್ಶನ'ಗಳು ಅಥವಾ ಅಭಿಪ್ರಾಯಗಳು ಹುಟ್ಟಿಕೊಂಡವು. ಅದೇ ರೀತಿ ಉಪಾಸನಾ ಸ್ವಾತಂತ್ರ್ಯದ ಮೂಲಕ ಭಗವಂತನನ್ನು ಆರಾಧಿಸುವ ನಾನಾ ತರಹದ ವಿಧಿ-ವಿಧಾನ-ಮಾರ್ಗಗಳೂ, ಮತ-ಸಂಪ್ರದಾಯಗಳೂ ಪ್ರಚಾರಕ್ಕೆ ಬಂದವು. ಇದು ಸಹಜವೇ ಆಗಿತ್ತು. ಕೂರ್ಮ ಪುರಾಣದಲ್ಲಿ ಈ ಮಾತು ಹೇಳಲ್ಪಟ್ಟಿದೆ.

ಭಾರತೇಷು ಸ್ತ್ರೀಯಃ ಪುಂಸೋ ನಾನಾವರ್ಣಾಃ ಪ್ರಕೀರ್ತಿತಾಃ |
ನಾನಾ ದೇವಾರ್ಚನೇ ಯುಕ್ತಾಃ ನಾನಾ ಕರ್ಮಾಣಿ ಕುರ್ವತೇ ||

[ಭಾರತದಲ್ಲಿಯ ಸ್ತ್ರೀ-ಪುರುಷರು ಅನೇಕ ವರ್ಣದವರು; ಅವರೆಲ್ಲರ ದೇವ ಪೂಜಾ ವಿಧಾನ ಬೇರೆ, ಕಾಯಕ ಬೇರೆ.]

ಆದರೆ ಇವುಗಳಲ್ಲಿ ಘರ್ಷಣೆಯಾಗದಂತೆ ಎಚ್ಚರಿಕೆ ವಹಿಸಿದ ವೈದಿಕ ಹಿಂದೂ ಋಷಿ-ಮುನಿಗಳು ಇವುಗಳ ಮೂಲದಲ್ಲಿ ಅಡಗಿರುವ ಸತ್ಯ ಸಂಗತಿಯನ್ನು ಕಂಡುಕೊಂಡು ಅದನ್ನು ಎಲ್ಲ ಮತ-ಸಂಪ್ರದಾಯದವರಿಗೂ ತಿಳಿಸಿ ಹೇಳಿದರು. ಈ ಚರಾಚರ ವಿಶ್ವವನ್ನು ತನ್ನ ಕೈಗೊಂಬೆಯಂತೆ ಆಡಿಸುತ್ತಿರುವ ಒಂದು ಪರಾಶಕ್ತಿಯುಂಟೆಂದೂ ಅದನ್ನು 'ಇದಮಿತ್ಥಮ್' (ಇದು ಹೀಗೇ) ಎಂಬುದಾಗಿ ನಿಶ್ಚಿತವಾಗಿ ಬಣ್ಣಿಸ ಬರುವದಿಲ್ಲವೆಂದೂ ನುಡಿದಿರುವರು. ನೋಡಿರಿ-

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ'-
-(ತೈತ್ತಿರೀಯ ಉಪ-೨-೯-೨೨)

"ಅದು ಬಣ್ಣನೆಗೆ, ಚಿಂತನೆಗೆ, ಶಬ್ದಗಳಿಗೆ ನಿಲುಕದ ವಸ್ತು"ವೆಂದೂ ಸಾರಿ ಹೇಳಿ ಆ ಶಕ್ತಿಯನ್ನು ಬುದ್ಧಿವಂತರು ನಾನಾವಿಧವಾಗಿ ಬೇರೆ ಬೇರೆ ಹೆಸರುಗಳಿಂದ

ಕರೆಯುತ್ತಾರೆಂದೂ ವೇದದ್ರಷ್ಟಾರರೇ ಸಾರಿ ಹೇಳಿದರು. ಅವರು ಹೇಳಿದ- 'ಏಕಂ ಸದ್ ವಿಪ್ರಾ ಬಹುಧಾ ವದಂತಿ' ಎಂಬುದನ್ನು ಬಸವಣ್ಣನವರು 'ದೇವನೊಬ್ಬ ನಾಮ ಹಲವು' ಎಂದು ತಿಳಿಗನ್ನಡದಲ್ಲಿ ತಿಳಿಸಿ ಹೇಳಿರುವರು.

ವೇದಗಳ ಅರ್ಥ ಅರಿಯಲು ಸಹಾಯಕವಾಗುವ 'ನಿರುಕ್ತ'ವನ್ನು ಬರೆದಿರುವ ಯಾಸ್ಕಾಚಾರ್ಯರು ಇದನ್ನು ಹೀಗೆ ಸ್ಪಷ್ಟಪಡಿಸಿದ್ದಾರೆ.-

ಮಾಹಾ ಭಾಗ್ಯಾದ್ದೇವತಾಯಾ ಏಕ ಆತ್ಮಾ ಬಹುಧಾ ಸ್ತೂಯತೇ ॥

(ಪರಮಾತ್ಮನು ಅನಂತಗುಣಪರಿಪೂರ್ಣನು. ಅವನು ಒಬ್ಬನೇ. ಅವನನ್ನು ನಾನಾವಿಧವಾಗಿ ಕೊಂಡಾಡುತ್ತಾರೆ.)

ಇಲ್ಲಿ ಚಕ್ರವರ್ತಿ ರಾಜಗೋಪಾಲಾಚಾರಿಯವರ ಅಭಿಪ್ರಾಯ ಗಮನಾರ್ಹಃ – "ಸರ್ವೋತ್ತಮನ ಪ್ರತಿಯೊಂದು ನಾಮವೂ ಸಾಧಕರ ಧಾರ್ಮಿಕ ಅನುಭೂತಿಯ ಭಾವನಾಪರವಶತೆಯಿಂದ ಪಾವನಗೊಳ್ಳುತ್ತದೆ. ಭಕ್ತನೊಬ್ಬ ಉಚ್ಚರಿಸುವ ಹೆಸರು ದೇವರು, ಯಹೋವ, ಭಗವಂತ, ಈಶ್ವರ, ಅಲ್ಲಾ, ಹರಿ, ಶಿವ, ನಾರಾಯಣ ಯಾವುದೇ ಆಗಿದ್ದರೂ ಅದು ಒಂದು ಬಗೆಯ ಅಸ್ಪಷ್ಟ ರೀತಿಯಲ್ಲಿ ಅವನು ವಿಶ್ವರಹಸ್ಯದೊಂದಿಗೆ ಮತ್ತು ಪೂಜಿಸಬೇಕೆಂಬ ಅವನ ಅಂತಃ ಪ್ರೇರಣೆಯೊಂದಿಗೆ ಸಂಬಂಧವನ್ನು ಕಲ್ಪಿಸುತ್ತದೆ." [17]

ಕರ್ನಾಟಕದ ಪ್ರಸಿದ್ಧ ಬೇಲೂರಿನ ಶ್ರೀ ಚನ್ನಕೇಶವ ದೇವಾಲಯದಲ್ಲಿ ಇಂದಿಗೂ ಭಕ್ತಿಯಿಂದ ಹೇಳುವ ಒಂದು ಶ್ಲೋಕವು 'ದೇವನೊಬ್ಬ ನಾಮ ಹಲವು' ಎಂಬ ಹಿಂದೂಗಳ ದೃಢನಂಬಿಕೆಗೆ ಉತ್ತಮ ಸಾಕ್ಷಿಯಾಗಿದೆಃ

ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ|
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ|
ಸೋಽಯಂ ನೋ ವಿದಧಾತು ವಾಂಛಿತಫಲಂ ತ್ರೈಲೋಕ್ಯನಾಥೋ ಹರಿಃ||

[ಮೂಜಗದೊಡೆಯ ಶ್ರೀಹರಿ ನಮ್ಮ ಬಯಕೆ ಈಡೇರಿಸಲಿ. ಅವನನ್ನು ಶೈವರು 'ಶಿವ,' ವೇದಾಂತಿಗಳು 'ಬ್ರಹ್ಮ', ಬೌದ್ಧರು 'ಬುದ್ಧ', ನೈಯಾಯಿಕರು 'ಕರ್ತೃ,' ಜೈನರು 'ಅರ್ಹನ್', ಮತ್ತು ಮೀಮಾಂಸಕರು 'ಕರ್ಮ' ಎಂಬುದಾಗಿ ಹೆಸರಿಸಿ ಪೂಜಿಸುತ್ತಾರೆ] [18]

---

(೧೭) ಹಿಂದೂಧರ್ಮ: ಸಿದ್ಧಾಂತ ಮತ್ತು ಜೀವನ ಮಾರ್ಗ
ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು. ೧೯೮೧. ಮುನ್ನುಡಿ. ಪುಟ ix

(೧೮) ಓದಿರಿ.- ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ.
ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ|
ರುಚೀನಾಂ ವೈಚಿತ್ರ್ಯಾದೃಜುಕುಟಿಲ ನಾನಾಪಥಜುಷಾಂ
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ||
—ಪುಷ್ಪದಂತ- ಶಿವಮಹಿಮ್ನಸ್ತೋತ್ರ.

ಇನ್ನೊಂದು ಪ್ರಸಿದ್ಧ ಶ್ಲೋಕವು ಒಂದು ಅನುಭವಸಿದ್ಧವಾದ ಉಪಮೆ-ಯೊಡನೆ ಎಲ್ಲತರಹದ ಪೂಜೆ ಒಬ್ಬನೇ ಆಗಿರುವ ಪರಮಾತ್ಮನಿಗೆ ತಲುಪುತ್ತದೆ ಎಂದು ಪ್ರತಿಪಾದಿಸುತ್ತದೆ:–

ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್ ।
ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ ॥

[ಆಕಾಶದೊಳಗಿನ ಮೋಡಗಳಿಂದ ಸುರಿದ ಮಳೆನೀರು ಎಲ್ಲೆಡೆಗಳಿಂದ ಹರಿದು ಕೊನೆಯಲ್ಲಿ ಸಮುದ್ರವನ್ನೇ ಸೇರುವಂತೆ ಎಲ್ಲ ದೇವತೆಗಳಿಗೆ ಮಾಡಿದ ಪೂಜೆ-ನಮಸ್ಕಾರಗಳು ಆ ಕೇಶವನನ್ನೇ ತಲುಪುತ್ತವೆ]

ಚರಾಚರ ಸೃಷ್ಟಿಯನ್ನು ಅಂತರ್ಬಾಹ್ಯ ವ್ಯಾಪಿಸಿ ಸರ್ವರ ಅಂತರ್ಯಾಮಿಯಾಗಿದ್ದು ಅದನ್ನು ನಿಯಮಿಸುವ ಪರಮಾತ್ಮನು ಒಬ್ಬನೇ ಎಂದು ವೈದಿಕ ಋಷಿಗಳು ಸಾರಿ ಹೇಳಿದರು—

ಏಕೋ ದೇವಃ ಸರ್ವಭೂತೇಷು ಗೂಢಃ
ಸರ್ವವ್ಯಾಪೀ ಸರ್ವಭೂತಾಂತರಾತ್ಮಾ।
ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥ [19]

[ಒಬ್ಬನೇ ಆಗಿರುವ ಪರಮಾತ್ಮನು ಎಲ್ಲ ಜೀವಿಗಳಲ್ಲಿಯೂ ಅಡಗಿರುವನು; ಎಲ್ಲವನ್ನು ವ್ಯಾಪಿಸಿರುವನು; ಎಲ್ಲ ಜೀವಿಗಳ ಅಂತರಾತ್ಮನು ಎಲ್ಲ ಕರ್ಮಗಳ ಅಧಿಪತಿಯು; ಎಲ್ಲ ಜೀವಿಗಳಲ್ಲಿ ವಾಸಿಸಿರುವನು; ಅವನು ಸಾಕ್ಷಿಯು, ಚೇತನನು, ಒಬ್ಬನು ಮತ್ತು ನಿರ್ಗುಣನು]

ಆದುದರಿಂದ ವೈದಿಕ ಹಿಂದುಗಳು ಮತ–ಸಂಪ್ರದಾಯ ಭೇದದಿಂದ ಪಕ್ಷಪಾತ ಮಾಡದೇ ಸಕಲರನ್ನು ಸಮಾನವಾಗಿ ಕಂಡ ಉದಾಹರಣೆಗಳು ನಮ್ಮ ಕರ್ನಾಟಕದಲ್ಲಿಯೇ ಸಾಕಷ್ಟಿವೆ. ನಮ್ಮಲ್ಲಿ ಹರಿಹರ, ಶಂಕರನಾರಾಯಣ, ವೆಂಕಟಶಿವ, ಶಿವರಾಮ, ಮೊದಲಾದ ದೇವತೆಗಳ ಮಂದಿರಗಳಿವೆ. ಅದೇ ರೀತಿ ಕರ್ನಾಟಕದ ಅನೇಕ ಅರಸರು ವಿಷ್ಣು, ಶಿವ, ಜಿನ, ಬೌದ್ಧ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದರು. ಈ ವಿಷಯದಲ್ಲಿ ದಾಖಲೆಗಳನ್ನು ಕಾಣುವೆವು. ಕೈದಾಳದ ಶ್ರೀ ಗಂಗಾಧರೇಶ್ವರ ದೇವಾಲಯದ ಶಾಸನವು, ಹೊಯ್ಸಳ ವೀರನಾರ-ಸಿಂಹನ ಆಶ್ರಿತ ಸಾಮಂತ ಗೂಳಿಬಾಚಿಯ ಬಗ್ಗೆ ಹೀಗೆ ಹೇಳುತ್ತದೆ—

ಉದ್ಧರಿಸಿ ಜೈನಭವನಮ–
ನುದ್ಧರಿಸಿ ಶಿವಾಲಯಂಗಳಂ ಮುದದಿಂದ ।

---

೧೯) ಶ್ವೇತಾಶ್ವತರ ಉಪನಿಷತ್– ೬-೧೧-

ನುದ್ಧರಿಸಿದ ವಿಷ್ಣುಗೇಹಮು-
ನುದ್ಧರಿಸಿದ ನತ್ತಿ ಬಾಚಿ ಜಸದುನ್ನತಿಯಂ ||

ಈ ಶಾಸನದ ಧ್ಯಾನಶ್ಲೋಕದ ಹೇಳಿಕೆಯೂ ಗಮನಾರ್ಹ.-

ಶಿವಾಯ ಧಾತ್ರೇ ಸುಗತಾಯ ವಿಷ್ಣವೇ
ಜಿನಾಯ ತಸ್ಮೈ ಸಕಲಾತ್ಮನೇ ನಮಃ ||

[ಶಿವ, ಬ್ರಹ್ಮ, ಬುದ್ಧ, ವಿಷ್ಣು, ಜಿನ, ಆಗಿರುವ ಆ ಸಕಲಾತ್ಮನಿಗೆ ನಮಸ್ಕಾರವು] ಆದುದರಿಂದ ಮತ-ಸಂಪ್ರದಾಯಗಳ ನಂಬಿಗೆ, ಆಚರಣೆ, ಊಟ-ಉಡುಗೆ, ಪೂಜೆ-ಪುರಸ್ಕಾರ ಮುಂತಾದವುಗಳಲ್ಲಿ ಭಿನ್ನತೆಯಿದ್ದರೂ ನಿಜವಾಗಿ ಅವೆಲ್ಲವೂ ಒಬ್ಬನೇ ಪರಮಾತ್ಮನ ಆರಾಧನೆಗಳಾಗಿರುವದರಿಂದ ಅವೆಲ್ಲ ಒಂದೇ ಎಂಬ ಸತ್ಯ ಸಂಗತಿಯನ್ನು ವೈದಿಕ ಹಿಂದೂಧರ್ಮ ಬೋಧಿಸಿ ರಾಷ್ಟ್ರೀಯ ಭಾವೈಕ್ಯಕ್ಕೆ ಮತ-ಸಂಪ್ರದಾಯಗಳು ಅಡ್ಡಿಯಾಗದಂತೆ ನೋಡಿಕೊಂಡಿತು.

ಪ್ರಾದೇಶಿಕ ಭಿನ್ನತೆ, ಸಂಪ್ರದಾಯ-ಭಿನ್ನತೆಗಳಂತೆಯೇ ಹಿಂದುಸ್ತಾನದ ವಿಶಾಲತೆಯ ಮೂಲಕ ಸಹಜವಾಗಿ ಜನ್ಮತಾಳಿದ ಇನ್ನೊಂದು ಭಿನ್ನತೆಯೆಂದರೆ ಭಾಷಾ ಭಿನ್ನತೆ. ಈ ಭಿನ್ನತೆ ವೇದಕಾಲದಲ್ಲಿಯೂ ಇದ್ದಿರಬೇಕೆಂಬ ಊಹೆಗೆ— ಅಥರ್ವವೇದದ ಪೃಥ್ವೀ ಸೂಕ್ತದೊಳಗಿನ ಈ ಮಾತು ಕಾರಣವಾಗಿದೆ-

ಜನಂ ಬಿಭ್ರತೀ ಬಹುಧಾ ವಿವಾಚಸಂ
ನಾನಾ ಧರ್ಮಾಣಂ ಪೃಥಿವೀಂ ಯಥೌಕಸಮ್ || ೪೫

[ಈ ನಾಡು, ವಿವಿಧ ಭಾಷೆ, ವಿವಿಧ ಧರ್ಮಗಳ, ಜನರ ವಾಸಸ್ಥಾನವಾಗಿದೆ.] ಇದರ ಬಗ್ಗೆಯೂ ಹಿಂದೂ ವಿಚಾರವಂತರು ಯೋಚಿಸಿ ಈ ಭಿನ್ನತೆಯ ಮೂಲದಲ್ಲಿರುವ ಏಕತೆಯನ್ನು ಕಂಡುಹಿಡಿದರು. ಅದೆಂದರೆ ಭಾರತೀಯ ಭಾಷೆಗಳಿಗೆಲ್ಲ ತಾಯಿಯಾದ ಸಂಸ್ಕೃತಭಾಷೆ. ಸಂಸ್ಕೃತದ ಹಿರಿಮೆಯು ಕನ್ನಡದ ಜ್ಯೇಷ್ಠ ಕವಿವರೇಣ್ಯ ಶ್ರೀ ಕುವೆಂಪು ಅವರ ಶಬ್ದಗಳಲ್ಲಿ ಹೀಗೆ ಮೂಡಿಬಂದಿದೆ—

ಪೃಥಿವಿಯಾ ಪ್ರಥಮ ಪ್ರಭಾತದಲಿ
ಇತಿಹಾಸ ದೃಷ್ಟಿಗಸ್ಪಷ್ಟ ಅಜ್ಞಾನ ಪ್ರಾಚೀನದಲಿ
ಚಿರಧವಲ ಹಿಮಶೈಲ ಪೃಥುಲೋರುಪ್ರೇಮದಲಿ
ನವಜಾತ ಶಿಶುವಾಗಿ ನಲಿದ ಮಂಗಲಮಯಿ
ಆರ್ಯಮಾತೆಯಾ ಮೊದಲ ತೊದಲ ನಾಗರಿಕತೆಯ
ಸಾಮಗಾನದ ವಾಣಿಯಿಂದ ಮೂಡಿದ ಮೂರ್ತಿ
ನೀನೆಲೌ ಸಂಸ್ಕೃತದ ವಾಗ್ದೇವಿ!
ಆರ್ಯರಾಗಿಹ ನಾವು ನಿನ್ನ
ಮೊಲೆವಾಲ ಸವಿಯಿಲ್ಲದೆಯೆ ಬದುಕುವೆವೆ?

ನೀನಿಲ್ಲದೆಲ್ಲಿಯದು ಭರತ ಖಂಡದ ಬದುಕು
ಸಂಪತ್ತು ಸಂಸ್ಕೃತಿ? [20]

ಸಕಲ ಭಾರತೀಯ ಭಾಷೆಗಳಿಗೂ ಸಂಸ್ಕೃತವು ತಾಯಿಯ ಸ್ಥಾನದಲ್ಲಿದೆ. ಹಲವು ಭಾಷೆಗಳಿಗೆ ಸಾಕ್ಷಾತ್ ತಾಯಿಯಾಗಿದ್ದರೆ ಕೆಲವುಗಳಿಗೆ ಸಾಕು ತಾಯಿಯಾಗಿದ್ದಾಳೆ. ಎಲ್ಲ ಭಾಷೆಗಳ ಪದಸಂಪತ್ತಿಗೆ ಇಂದಿಗೂ ಸಂಸ್ಕೃತವೇ ಅಕ್ಷಯಗಣಿ. ಭಾರತೀಯ ನಾನಾ ಭಾಷೆಗಳ ಸಾಹಿತ್ಯದಲ್ಲಿ ಮೂಡಿ ಬಂದಿರುವ ವಿಷಯಸಮೃದ್ಧಿಗೆ ಸಂಸ್ಕೃತ ಸಾಹಿತ್ಯವೇ ಕಾರಣ, ಪ್ರೇರಣೆ. ಸಂಸ್ಕೃತದ ಮಹತ್ವ ಸಾಮಾನ್ಯವಲ್ಲ.

"ವೇದವಾಣಿಯೆನಿಸಿ, ದೇವವಾಣಿಯೆನಿಸಿ, ಋಷಿವಾಣಿಯೆನಿಸಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಪಶ್ಚಿಮ ಸಮುದ್ರದಿಂದ ಪೂರ್ವಸಮುದ್ರದವರೆಗೆ ಷಡ್ದರ್ಶನಗಳನ್ನೂ ಚತುರ್ದಶವಿದ್ಯೆಗಳನ್ನೂ, ೬೪ ಕಲೆಗಳನ್ನೂ, ಅಷ್ಟಾದಶ ಪುರಾಣಗಳನ್ನೂ, ಕಾವ್ಯನಾಟಕೇತಿಹಾಸಗಳನ್ನೂ, ಮಂತ್ರ-ತಂತ್ರ-ರಹಸ್ಯಗಳನ್ನೂ ಇಡಿಯ ಭಾರತದ ಸಕಲ ಜನತೆಗೆ ನಾಲ್ಕೈದು ಸಹಸ್ರವರ್ಷಗಳಷ್ಟು ದೀರ್ಘ ಕಾಲ ಒದಗಿಸುತ್ತ ಅನಭಿಷಿಕ್ತ ರಾಷ್ಟ್ರಭಾಷೆಯಾಗಿರುವ ಸಂಸ್ಕೃತಭಾಷೆ ಇಂದು ಕೇವಲ ಭಾರತದ ಭಾಷೆಯಾಗಿ ಉಳಿದಿಲ್ಲ. ವಿಶ್ವದ ಮಹಾವಿದ್ಯಾಲಯಗಳಲ್ಲೆಲ್ಲ ಅಧ್ಯಯನಕ್ಕೆ ಯೋಗ್ಯವೆಂದು ಮಾನ್ಯತೆ ಪಡೆದಿರುವ ವಿಶ್ವಭಾಷೆಯಾಗಿದೆ" [21]

---

೨೦) 'ಶಿಕ್ಷಣದಲ್ಲಿ ಸಂಸ್ಕೃತ' ರಾಷ್ಟ್ರೀಯ ವಿದ್ಯಾಲಯ ಸಂಸ್ಕೃತ ಅಧ್ಯಯನ ಸಂಸ್ಥೆ, ಬೆಂಗಳೂರು. ೧೯೮೦. ಮುಖಪುಟ ಅದರಲ್ಲಿ ಮತ್ತೂ ನೋಡಿರಿ.

1) Sanskrit is the mother who bore nourished and cherished her daughters, the literatures in the regional languages of India-Kuvempu. ಪುಟ. ೫.

೨) ಸಂಸ್ಕೃತವು ಭಾರತವನ್ನೇ ಒಂದಾಗಿ ಬೆಸೆದಿರುವ ಭಾಷೆ; ಭಾರತೀಯ ಸಂಸ್ಕೃತಿಯ ಸಂವಾಹಕ. ಭಾರತೀಯ ಜ್ಞಾನ ವಿಜ್ಞಾನಗಳ ಗಣಿ. ಭಾರತೀಯ ಭಾಷೆಗಳಿಗೆ ಅಕ್ಷಯಪಾತ್ರೆ– ಸಿದ್ದಯ್ಯ ಪುರಾಣಿಕ. ಪು. ೧೦.

೩) ಸಂಸ್ಕೃತ ನಮ್ಮ ಭಾಷೆಗಳಿಗೆ ಗಂಗಾನದಿಯಾಗಿದೆ. ಒಮ್ಮೆ ಇದು ಬತ್ತಿ ಹೋದರೆ ಎಲ್ಲ ಭಾಷೆಗಳೂ ನಿರ್ಮಾಲ್ಯವಾಗುತ್ತವೆಂದು ನನಗೆ ಅನ್ನಿಸುವದು–ಮಹಾತ್ಮಾ ಗಾಂಧಿ– ಪುಟ ೧೧.

೪) ಸಂಸ್ಕೃತವು ಯಾವುದೇ ನಿರ್ದಿಷ್ಟಪ್ರಾಂತ, ರಾಷ್ಟ್ರ, ಅಥವಾ ಧರ್ಮದ ಭಾಷೆಯಲ್ಲ, ಬದಲಾಗಿ ಇಡಿಯ ರಾಷ್ಟ್ರದ ಭಾಷೆ-ಕರಣಸಿಂಗ್ ಪುಟ ೧೩

5) Sanskrit is the mother of many languages and perhaps the greatest unifying factor in India today- B. K. Nehru, ಪುಟ. ೧೫

೨೧) ಡಾ. ಕೇ. ಕೃಷ್ಣಮೂರ್ತಿ, ೧೩-೧೦-೧೯೭೮ ರಂದು ಶ್ರೀಸಿದ್ಧಗಂಗಾ ಕ್ಷೇತ್ರದಲ್ಲಿ ಜರುಗಿದ ದ್ವಿತೀಯ ಅಖಿಲ ಕರ್ನಾಟಕ ಸಂಸ್ಕೃತ ಸಮ್ಮೇಳನದ ಅಧ್ಯಕ್ಷ ಭಾಷಣ. ಪುಟ ೩-೪

ಆದುದರಿಂದ ದೇಶದ ವಿಸ್ತಾರದ ಮೂಲಕ ಸಹಜವಾಗಿ ಜನ್ಮ ತಳೆದ ಭಾಷಾಭಿನ್ನತೆಯ ಮೂಲದಲ್ಲಿರುವ ಏಕತೆಯನ್ನು ಕಂಡುಹಿಡಿದ ಹಿಂದೂ ಧರ್ಮವು ಅದನ್ನು ಪ್ರಭಾವಿಯಾಗಿ ಮನವರಿಕೆ ಮಾಡಿಕೊಟ್ಟು ರಾಷ್ಟ್ರೀಯ ಭಾವೈಕ್ಯಕ್ಕೆ ಉಂಟಾಗಬಹುದಾದ ಈ ಆತಂಕವನ್ನೂ ಯಶಸ್ವಿಯಾಗಿ ನಿವಾರಿಸಿತು.

ಕೊನೆಯದಾಗಿ ಉಳಿಯುವದು ರಾಜಕೀಯ ಆಡಳಿತದ ಭಿನ್ನತೆ. ಬ್ರಿಟಿಶರು ಬಂದ ಬಳಿಕವೇ ಇಡಿಯ ಭಾರತವು ಒಂದೇ ರಾಜಕೀಯ ಆಡಳಿತದಲ್ಲಿ ಅಂತರ್ಗತ ವಾದುದರಿಂದ ನಮ್ಮಲ್ಲಿ 'ನಾವೆಲ್ಲ ಒಂದು' ಎಂಬ ರಾಷ್ಟ್ರೀಯ ಭಾವನೆ ನಿರ್ಮಾಣ ವಾಯಿತೆಂದು ನಂಬುವವರೂ ಇದ್ದಾರೆ. ನಂಬಿಸುವವರೂ ಇದ್ದಾರೆ. ಆದರೆ ರಾಜಕೀಯವಾಗಿ ನಮ್ಮಲ್ಲಿ ಅನೇಕ ರಾಜ್ಯಗಳಿದ್ದರೂ 'ನಾವೆಲ್ಲ ಒಂದೇ ರಾಷ್ಟ್ರಕ್ಕೆ ಸೇರಿದವರು' ಎಂಬ ಭಾವನೆ ವೈದಿಕ ಹಿಂದುಗಳಲ್ಲಿ ಐತಿಹಾಸಿಕ ಕಾಲದಿಂದಲೂ ಇತ್ತೆಂಬುದನ್ನು ಮೇಲೆ ನೋಡಿದ್ದೇವೆ. ವೇದ ದ್ರಷ್ಟಾರರ "ವಯಂ ರಾಷ್ಟ್ರೇ ಜಾಗೃಯಾಮ ಪುರೋಹಿತಾಃ" ಎಂಬ ಪ್ರಾರ್ಥನೆಯನ್ನು ಮೇಲೆ ಉಲ್ಲೇಖಿಸ ಲಾಗಿದೆ. ಅಲ್ಲದೇ ಬಹುಪ್ರಾಚೀನಕಾಲದ ಹಿಂದೂ ಸಾಹಿತ್ಯದಲ್ಲಿ ಬರುವ 'ಅಧಿರಾಜ', 'ರಾಜಾಧಿರಾಜ', 'ಸಮ್ರಾಟ್', 'ಏಕರಾಟ್', 'ಸಾರ್ವಭೌಮ', 'ರಾಜರಾಜ', 'ವಿಶ್ವರಾಟ್', 'ಚಕ್ರವರ್ತಿ' ಮೊದಲಾದ ಪದಗಳು ಅನೇಕ ವಿಧದ ಅರಸರು ಹಿಂದುಸ್ಥಾನದಲ್ಲಿದ್ದರೆಂಬುವನ್ನೂ, ಅನ್ಯಾನ್ಯ ರಾಜ್ಯಗಳಲ್ಲಿ ವಿಭಜಿಸಲ್ಪಟ್ಟಿ ದ್ದರೂ ಎಲ್ಲರನ್ನು ಅಂಕಿತದಲ್ಲಿಟ್ಟುಕೊಂಡ ಪರಾಕ್ರಮಶಾಲಿ ಚಕ್ರವರ್ತಿಗಳಿದ್ದ ರೆಂಬುದನ್ನೂ ಸೂಚಿಸುತ್ತವೆ. ಅಶ್ವಮೇಧ, ರಾಜಸೂಯ, ವಾಜಪೇಯ ಮುಂತಾದ ಯಜ್ಞ-ಯಾಗಗಳ ಆಚರಣೆಯೂ ಇದಕ್ಕೆ ಸಾಕ್ಷಿಯಾಗಿದೆ. ಸಮ್ರಾಟ್ ಅಶೋಕ, ಚಂದ್ರಗುಪ್ತಮೌರ್ಯ, ಸಮುದ್ರಗುಪ್ತ ಮೊದಲಾದ ಪ್ರಾಚೀನ ಚಕ್ರವರ್ತಿಗಳು ಸಮಗ್ರ ಹಿಂದುಸ್ಥಾನವನ್ನೇ ಆಳುತ್ತಿದ್ದರೆಂಬುದಕ್ಕೆ ಐತಿಹಾಸಿಕ ದಾಖಲೆಗಳಿವೆ.[22]

'ರಾಜ್ಯಗಳು ಭಿನ್ನವಾದರೂ ರಾಷ್ಟ್ರ ಒಂದೇ' ಎಂಬ ಕಲ್ಪನೆ ದೃಢವಾಗಿ ಬೇರೂರಲು ಹಿಂದುಗಳು ವಿಧಿಸಿರುವ ರಾಜಪಟ್ಟಾಭಿಷೇಕ ಸಮಾರಂಭದ ಒಂದು ವಿಧಿಯನ್ನು ಗಮನಿಸಬೇಕು ಅದೆಂದರೆ ಪಟ್ಟಾಭಿಷೇಕದ ಸಮಯದಲ್ಲಿ ಅರಸನ ಶರೀರಕ್ಕೆ ಲೇಪಿಸಲು ಎಲ್ಲ ಕಡೆಯ ಪುಣ್ಯಕ್ಷೇತ್ರಗಳ ಮೃತ್ತಿಕೆ ಹಾಗೂ ಅರಸನ

---

22) History records the names of many Indian rulers who succeeded in realising their ambition of establishing a suzerainty over the whole of India which was accordingly thought of and used as a unit, as the common field of national activity—R. K. Mookerji, *F. U. I* ಪುಟ ೭ -೮; ಇದರ ಮುಂದಿನ ಪುಟಗಳನ್ನು ಓದಿರಿ.

ಅಭಿಷೇಕಕ್ಕಾಗಿ ಎಲ್ಲ ನದಿ–ಸರೋವರ–ತೀರ್ಥ–ಸಮುದ್ರಗಳ ನೀರನ್ನು ತರಬೇಕಾಗುತ್ತಿತ್ತು. ಆದುದರಿಂದ ಯಾವುದೇ ಪ್ರದೇಶದ ಅರಸನಾಗುವದಾದರೂ ತಾನು ವಿಶಾಲವಾದ ಅಖಂಡ ರಾಷ್ಟ್ರದ ಸಂತಾನವೆಂಬುದನ್ನು ಅವನು ಮರೆಯಲಾಗದು. ಪ್ರಾಂತೀಯ ಮರಭಿಮಾನವಾಗಲಿ, ಪ್ರಾದೇಶಿಕ ದುರಭಿನಿವೇಶವಾಗಲಿ ಅವನಲ್ಲಿ ಕೋರಿಹುಳದಂತೆ ಸೇರಬಾರದು.

ಪ್ರಾಚೀನ ಭಾರತದಲ್ಲಿ ಅರಸೊತ್ತಿಗೆ ಇದ್ದಂತೆ ಗಣರಾಜ್ಯಗಳೂ ಇದ್ದವು. ಈ ಗಣರಾಜ್ಯಗಳು ಒಂದು ವಿಧದಿಂದ ಪ್ರಜಾಪ್ರಭುತ್ವ ರಾಜ್ಯಗಳೇ ಆಗಿದ್ದವು. ಈ ಗಣರಾಜ್ಯಗಳಲ್ಲಿ ಬಹುಮತಕ್ಕಿಂತ ರಾಜ್ಯದ ಹಿತವೇ ಮುಖ್ಯವಾಗಿತ್ತೆಂಬುದು ಶ್ರೀಕೃಷ್ಣನ ಒಂದು ಮಾತಿನಿಂದ ಸ್ಪಷ್ಟವಾಗುತ್ತದೆ.—

ನೈಕಮಿಚ್ಛೇದ್ ಗಣಂ ಹಿತ್ವಾ ಸ್ಯಾಚ್ಚೇದನ್ಯಪರಿಗ್ರಹಃ |
ಯಸ್ತ್ವೇಕೋ ಬಹುಭಿಃ ಶ್ರೇಯಾನ್ ಕಾಮಂ ತೇನ ಗಣಂ ನಯೇತ್ ‖ [23]

[ಸಾಮಾನ್ಯವಾಗಿ ಎಲ್ಲ ನಿರ್ಣಯಗಳಲ್ಲಿ ಒಬ್ಬನ ಅಭಿಪ್ರಾಯಕ್ಕಿಂತ ಗಣದ ಅಂದರೆ ಅನೇಕರ ಅಭಿಪ್ರಾಯ ಮಿಗಿಲಾದುದು. ಆದರೆ ಒಬ್ಬಂಟಿಗನಾದ ಪ್ರಜೆಯು ನಿಜವಾಗಿಯೂ ಗಣಕ್ಕೆ ಹಿತಕರವಾಗುವ ಅಭಿಪ್ರಾಯ ಕೊಟ್ಟರೆ ಅವನ ಅಭಿಪ್ರಾಯ ಸ್ವೀಕರಿಸಬೇಕು ಮತ್ತು ಬಹುಮತವನ್ನು ಕಡೆಗಣಿಸಬೇಕು.]

ಮಹಾಭಾರತದ ಶಾಂತಿಪರ್ವದಲ್ಲಿ ಈ ಗಣರಾಜ್ಯಗಳ ಉನ್ನತಿ–ಅವನತಿ ಕುರಿತು ಭೀಷ್ಮ–ಯುಧಿಷ್ಠಿರರ ಸಂವಾದದ ಮಧ್ಯದಲ್ಲಿ ಬಂದ ಮಾತುಗಳು ಸೂಚಕವಾಗಿವೆ. "ಒಗ್ಗಟ್ಟೇ ಬಲ, ಒಡಕೇ ಸಾವು" ಎಂಬುದು ಅದರ ಸಾರ "ಭೇದಮೂಲೋ ವಿನಾಶೋ ಹಿ ಗಣಾನಾಮುಪಲಕ್ಷಯೇ" [ಒಡಕಿನಿಂದಲೇ ಗಣಗಳ ವಿನಾಶ] ಎಂದು ಯುಧಿಷ್ಠಿರನು ಹೇಳಿದ್ದನ್ನು ಭೀಷ್ಮನು—

ಭೇದೇ ಗಣಾ ವಿನೇಶುರ್ಹಿ ಭಿನ್ನಾಸ್ತು ಸುಜಯಾ ಪರೈಃ |
ತಸ್ಮಾತ್ ಸಂಘಾತಯೋಗೇನ ಪ್ರಯತೇರನ್ ಗಣಾಃ ಸದಾ ‖

[ಒಡಕಿನಿಂದ ಗಣರಾಜ್ಯಗಳು ನಾಶವಾಗುತ್ತವೆ; ಒಡಕಿನಿಂದಾಗಿ ಅವುಗಳನ್ನು ವೈರಿಗೂ ಗೆಲ್ಲುವುದು ಸುಲಭಸಾಧ್ಯ. ಎಂದೆಂದಿಗೂ ಸಂಘಟಿತವಾಗಿರಬೇಕು.] ಎಂಬುದಾಗಿ ಭೀಷ್ಮನು ವಿಸ್ತರಿಸಿ ಹೇಳುತ್ತಾನೆ." [24] ಅದುದರಿಂದ 'ಸಂಘಾತಮೇವಾಹುರ್ಗಣಾನಾಂ ಶರಣಂ ಮಹತ್' (ಅಲ್ಲೇ, ಶ್ಲೋಕ ೩೨) ಎಂದು ಭೀಷ್ಮನು

---

೨೩) ಜೀವೋತ್ತಮ [ತ್ರೈಮಾಸಿಕ] ಕುಮಟಾ– ಸಂ ೧೭–೧ (೨೦-೯-೧೯೭೪) ಪುಟ ೪೩ ರಲ್ಲಿ ಉಧೃತ.

೨೪) ಮಹಾಭಾರತ, ಶಾಂತಿಪರ್ವ, ಅಧ್ಯಾಯ ೧೦೭, ಶ್ಲೋಕ ೮ ಮತ್ತು ೧೪

ಗಣರಾಜ್ಯಗಳ ಸರ್ವತೋಮುಖ ಅಭಿವೃದ್ಧಿಗೆ ಸಂಘಟನೆಯೇ ಆಧಾರವೆಂದು ನಿರ್ಣಯ ಸಾರುತ್ತಾನೆ.

ಈ ರೀತಿಯಾದ ರಾಷ್ಟ್ರೀಯ ಭಾವನೆಯಿದ್ದಾಗ ನಮ್ಮ ರಾಷ್ಟ್ರದಲ್ಲಿಯ ಚಿಕ್ಕ ಪುಟ್ಟ ರಾಜ್ಯಗಳು ಕೂಡ ಉನ್ನತಿ ಸಾಧಿಸಿದ್ದನ್ನು, ಪರಸ್ಪರ ಒಡಕು–ದ್ವೇಷ ನಿರ್ಮಾಣವಾದಾಗ ಬಲಾಢ್ಯ ರಾಜ್ಯಗಳೂ ಕೂಡಾ ಶತ್ರುವಶವಾಗಿದ್ದನ್ನು ನಮ್ಮ ದೇಶದ ಇತಿಹಾಸ ನಮೂದಿಸಿದೆ.

ಸಂಘಟನೆ, ಸಹಕಾರ, ಸಹಮತಿ, ಸಹಬಾಳ್ವೆ ಮುಂತಾದವೆಲ್ಲ ಒಂದು ರಾಷ್ಟ್ರದ ಉನ್ನತಿ ವೈಭವಗಳಿಗಷ್ಟೇ ಅಲ್ಲ, ಸಮಗ್ರ ಮಾನವ ಜನಾಂಗದ ಉನ್ನತಿ ಅಭಿವೃದ್ಧಿಗಳಿಗೂ ಕಾರಣವಾಗುತ್ತವೆಯೆಂದು ವೈದಿಕ ಹಿಂದೂ ಧರ್ಮವು ಸಾರಿ ಹೇಳಿದೆ. ಋಗ್ವೇದ ಮತ್ತು ಅಥರ್ವವೇದಗಳಲ್ಲಿಯ 'ಸಂಜ್ಞಾನ ಸೂಕ್ತ' ಗಳು ಹಿಂದೂ ಧರ್ಮದ ಈ ಸಂಘಟನಾ ಸಂದೇಶವನ್ನು ಜಗತ್ತಿಗೆ ಸಾರಿ ಹೇಳಿವೆ. ಅವುಗಳೊಳಗಿನ ಎರಡು ಶ್ಲೋಕಗಳು ಇಂತಿವೆ–

ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ ।
ಸಮಾನಮಸ್ತು ವೋಮನೋ ಯಥಾ ವಃ ಸುಸಹಾಸತೀ ॥

(ಋಗ್ವೇದ ೧೦–೧೯೧-೪)

(ನಿಮ್ಮೆಲ್ಲರ ಅಭಿಪ್ರಾಯ ಒಂದೇ ಆಗಿರಲಿ, ನಿಮ್ಮೆಲ್ಲರ ಹೃದಯದ ಭಾವನೆ ಒಂದೇ ಆಗಿರಲಿ, ನಿಮ್ಮ ಮನಸ್ಸಿನೊಳಗಿನ ವಿಚಾರಗಳು ಒಂದೇ ಆಗಿರಲಿ, ನಿಮ್ಮ ಸಹವಾಸ ಪರಸ್ಪರ ಸುಖದಾಯಕವಾಗಲಿ)

ಸಹೃದಯಂ ಸಾಂಮನಸ್ಯಮವಿದ್ವೇಷಂ ಕೃಣೋಮಿವಃ ।
ಅನ್ಯೋನ್ಯಮಭಿನವತ ವತ್ಸಂ ಜಾತಮಿವಾ ಘ್ನ್ಯಾ ॥

(ಅಥರ್ವವೇದ, ಪೈಪ್ಪಲಾದ ಶಾಖಾ ೧೫-೧೯–೧)

(ನಾನು ನಿಮ್ಮನ್ನು ಸಮಾನ ಹೃದಯ, ಸಮಾನ ಮನಸ್ಸಿನವರನ್ನಾಗಿ ಮಾಡುವೆ. ನೀವು ಪರಸ್ಪರ ದ್ವೇಷಿಸದಂತೆ ಮಾಡುವೆ. ಆಕಳು ಕರುವನ್ನು ಪ್ರೀತಿಸುವಂತೆ ನೀವು ಪರಸ್ಪರ ಪ್ರೀತಿಸಿರಿ.)

ಹೀಗೆ ರಾಷ್ಟ್ರೀಯ ಭಾವೈಕ್ಯಕ್ಕಷ್ಟೇ ಅಲ್ಲ ಜಾಗತಿಕ ಭಾವೈಕ್ಯಕ್ಕೆ ಕಾರಣವಾಗಬಲ್ಲ ಪ್ರಬಲ ಮತ್ತು ಪ್ರಭಾವಿ ಮಾರ್ಗವನ್ನು ತೋರಿಸಿರುವದು ಹಿಂದೂ ಧರ್ಮದ ಒಂದು ಮಹತ್ವದ ವೈಶಿಷ್ಟ್ಯವಾಗಿದೆ. ಇವನ್ನು ಅರಿತು ಸಕಲ ರಾಜ್ಯಗಳೂ, ರಾಷ್ಟ್ರಗಳೂ ಸಹಬಾಳ್ವೆ ಮಾಡತೊಡಗಿದರೆ ಜಾಗತಿಕ ಶಾಂತಿ ಕನಸಾಗಿ ಉಳಿಯದೇ ನನಸಾಗುವದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ●

ರಾಷ್ಟ್ರೀಯ ಭಾವೈಕ್ಯ ಮತ್ತು ಜೈನಧರ್ಮ

● ಡಾ. ಎಸ್.ಪಿ. ಪಾಟೀಲ

ಜೈನಧರ್ಮವು ವಾಸ್ತವ ಸತ್ಯದ ತಳಹದಿಯ ಮೇಲೆ ನೆಲೆಸಿದ್ದು, ಸಾಮಾಜಿಕ ಹಿತವನ್ನು ಸನ್ಮಾರ್ಗದ ಮೂಲಕ ಸಾಧಿಸುವ ಉದಾತ್ತ ಮಾನವೀಯ ತತ್ವಗಳನ್ನಾಧರಿಸಿದೆ. ಅದು ವ್ಯಕ್ತಿಯನ್ನು ಮೂಲಘಟಕವನ್ನಾಗಿ ಪರಿಗಣಿಸಿ ಪ್ರತಿಯೊಂದುಜೀವಿಯ ಕಲ್ಯಾಣವನ್ನು ಸಾಧಿಸುವಲ್ಲಿ ಅನುಸರಿಸಬೇಕಾದ ಮಾರ್ಗವನ್ನು ತೋರುತ್ತದೆ.

ಜಿನನನ್ನು ದೇವನೆಂದು ಪೂಜಿಸುವವರು ಜೈನರು. ಅದರಂತೆ ಜಿನನಿಂದ ಬೋಧಿಸಲ್ಪಟ್ಟ ಧರ್ಮವು ಜೈನಧರ್ಮ. ಜಿನನು ಸೃಷ್ಟಿಕರ್ತನಾದ ದೇವನಲ್ಲ. ತನ್ನ ತಪಸ್ಸಿನಿಂದ ಅಷ್ಟಕರ್ಮಗಳನ್ನು ಗೆದ್ದುಕೊಂಡು ಜಿನನಾದವನು: ಹುಟ್ಟು ಸಾವುಗಳನ್ನು ಗೆದ್ದವನು. ಅವನಂತೆ ಕರ್ಮಗಳನ್ನು ಗೆಲ್ಲುವವರು ಜಿನರಾಗುವರು, ಪರಮಾತ್ಮರಾಗುವರು, ಸರ್ವಜ್ಞರಾಗುವರು. ಹೀಗೆ ಮುಕ್ತರಾಗುವ, ಪರಮಾತ್ಮರಾಗುವ ಅವಕಾಶ ಪ್ರತಿಯೊಂದು ಜೀವಿಗೂ ಇದೆ. ಜಿನನಾದ ಜೀವಿಯು ಸರ್ವಜ್ಞ, ವೀತರಾಗಿಯಾಗಿರುವನು. ಅಲ್ಲಿ ರಾಗ-ದ್ವೇಷಾದಿಗಳಿಗೆ ಅವಕಾಶವಿರುವದಿಲ್ಲ. ಇದರಿಂದಾಗಿ ಅವನ ಬೋಧೆ ರಾಗರಹಿತ, ಸತ್ಯಧರ್ಮವಾಗಿರುತ್ತದೆ. ಅಂಥ ಜಿನನು 'ಮೋಕ್ಷಮಾರ್ಗವನ್ನು ತೋರುವಂಥವನೂ, ಕರ್ಮವನ್ನು ನಾಶಮಾಡುವವನೂ, ವಿಶ್ವತತ್ವವನ್ನು ತಿಳಿದವನೂ ಆದ ಅವನಿಗೆ ಅವನ ಗುಣವನ್ನು ಪಡೆಯಬೇಕೆಂಬ ಬಯಕೆಯಿಂದ ನಮಸ್ಕರಿಸುವುದಾಗಿ ಆಚಾರ್ಯ ಉಮಾಸ್ವಾಮಿಯವರು ಹೇಳಿದ್ದಾರೆ.[1] ಅವನು ದಯೆಯ ಸಮುದ್ರ, ಸತ್ಯದ ತವರುಮನೆ, ಶೀಲದ ಜನ್ಮಭೂಮಿ, ಕಾಂತಿಯ ಗಣಿ, ಶಾಂತಿಯ ಮನೆ, ಅನಂತ ಗುಣಗಳ ಮಂಗಳಾಲಯ, ಜಯಶ್ರೀ ಇರುವ ಸ್ಥಾನ ಎನಿಸಿದ ಜಗನ್ನುತ ವರ್ಧಮಾನ! ನಿನ್ನ ನಿರ್ದುಷ್ಟವಾದ

---

1. ಮೋಕ್ಷಮಾರ್ಗಸ್ಯ ನೇತಾರಂ ಭೇತ್ತಾರಂ ಕರ್ಮಭೂಭೃತಮ್
ಜ್ಞಾತಾರಂ ವಿಶ್ವತತ್ವಾನಾಂ ವಂದೇ ತದ್ ಗುಣಲಬ್ಧಯೇ ||
ಉಮಾಸ್ವಾತಿ: ತತ್ವಾರ್ಥಸೂತ್ರ. ೧.

ಮಾರ್ಗವುನಮಗೆ ಮುಕ್ತಿಯ ಸಿದ್ಧಿಯನ್ನು ನೀಡಲಿ' ಎಂದು ಅಚಣ್ಣಕವಿ ಬೇಡಿಕೊಂಡಿದ್ದಾನೆ.[1]

'ಇಷ್ಟಸ್ಥಾನೆ ಧತ್ತೆ ಇತಿ ಧರ್ಮಃ' ಎಂದು ಆಚಾರ್ಯ ಪೂಜ್ಯಪಾದರು 'ಸರ್ವಾರ್ಥಸಿದ್ಧಿ'ಯಲ್ಲಿ ಸಾರಿದ್ದಾರೆ. ಜೀವಿಗೆ ಇಷ್ಟವಾದ ಸ್ಥಾನದಲ್ಲಿರುವುದೇ ಧರ್ಮ. ಅಂಥ ಇಷ್ಟವಾದ ಸ್ಥಾನವೆಂದರೆ ದುಃಖರಹಿತವಾದ, ಶಾಶ್ವತ ಆನಂದವನ್ನು ಅನುಭವಿಸುವ ಮೋಕ್ಷವೇ ಇಷ್ಟಸ್ಥಾನವಾಗಿರುತ್ತದೆ. ಧರ್ಮದ ಈ ಸ್ವರೂಪವನ್ನು ಸಮಂತಭದ್ರಾಚಾರ್ಯರು 'ರತ್ನಕರಂಡ ಶ್ರಾವಕಾಚಾರ' ದಲ್ಲಿ ಹೀಗೆ ವಿವರಿಸಿದ್ದಾರೆ: ಯಾವುದು ಜೀವಿಗಳನ್ನು ಚತುರ್ಗತಿ ಭ್ರಮಣರೂಪವಾದ ಸಂಸಾರದುಃಖದಿಂದ ಪಾರುಮಾಡಿ, ಉತ್ತಮವಾದ ಸುಖದಲ್ಲಿರಿಸುತ್ತದೆಯೋ ಅಂತಹ ಕರ್ಮಗಳನ್ನು ನಾಶ ಮಾಡುವುದೊ ಅಂಥ ಉತ್ಕೃಷ್ಟವಾದ ಧರ್ಮವನ್ನು ಉಪದೇಶಿಸುತ್ತೇನೆ.[2]

ಹೀಗೆ ವಿಚಾರ ಮತ್ತು ಆಚಾರಗಳು ಜೈನಧರ್ಮದ ಪ್ರಮುಖ ಅಂಗಗಳಾಗಿವೆ. ಜೈನಧರ್ಮದ ವಿಚಾರವು ಸ್ಯಾದ್ವಾದವನ್ನಾಧರಿಸಿದೆ. ಅದರಂತೆ ಆಚಾರಕ್ಕೆ ಅಹಿಂಸೆ ತಳಹದಿಯಾಗಿದೆ. ಹೀಗಾಗಿ ಸಕಲ ಪ್ರಾಣಿಮಾತ್ರಗಳಿಗೂ ಧಕ್ಕೆಯಾಗದಂತೆ, ಹಿಂಸೆಯಾಗದಂತೆ 'ಬದುಕು, ಬದುಕುಗೊಡು' (Live and Let live) ಎಂಬ ವ್ಯಾಪಕ ಸಿದ್ಧಾಂತಕ್ಕೆ ಬೆಲೆ ಬಂದಿದೆ. ಹೀಗೆ ಸಕಲ ಜೀವಿಮಾತ್ರಗಳ ಹಿತವನ್ನು ಬಯಸುವುದೇ ಜಿನನ ಉಪದೇಶದ ಸಾರವಾಗಿದೆ. ಅದಕ್ಕಾಗಿಯೇ ಅವನನ್ನು 'ಆಪ್ತ' 'ಹಿತೋಪದೇಶಿ' ಎಂದು ಕರೆಯುವುದು. ಅವನ ಉಪದೇಶ ಯಾವುದೇ ಒಂದು ವರ್ಗ, ವರ್ಣ, ಸಂಪ್ರದಾಯದವರಿಗೆ ಮಾತ್ರ ಸೀಮಿತವಾಗಿರದೆ ಸಕಲ ಜೀವಮಾತ್ರಗಳ ಹಿತದೃಷ್ಟಿಯಿಂದ ಕೂಡಿರುವುದು ಗಮನಾರ್ಹವಾಗಿದೆ.

ಈ ವಿಶ್ವದ ಮೂಲದಲ್ಲಿ ಜೀವ ಮತ್ತು ಅಜೀವ ಎಂಬ ಎರಡು ತತ್ವಗಳು ಮುಖ್ಯ. ಇವುಗಳ ಪರಸ್ಪರ ಸಂಪರ್ಕ, ಸಂಬಂಧದಿಂದಾಗಿ ಜೀವವು ಅನೇಕ ಪ್ರಕಾರದ ಅನುಭವ ಅವಸ್ಥೆಗಳನ್ನು ಹೊಂದುತ್ತದೆ. ಅದನ್ನೇ 'ಬಂಧ' ಎನ್ನುವುದು ಈ ಸಂಪರ್ಕದ ಸಂಬಂಧವನ್ನು ತಡೆದು, ಮೊದಲಿನ ಬಂಧಗಳನ್ನು ನಾಶಮಾಡಿದಾಗ

---

1. ದಯೆಯ ಪಯೋಧಿ, ಸತ್ಯದ ತವರ್ಮನೆ, ಶೀಲದ ಜನ್ಮಭೂಮಿ ಕಾಂ
ತಿಯ ಕಣಿ ಶಾಂತಿಯಾಗರಮನಂತ ಗುಣಂಗಳ ಮಂಗಳಾಲಯಂ
ಜಯ ರಮೆಯಿಕ್ಕೆ ದಾನಮೆನಸಿರ್ದ ಜಗನ್ನುತ ವರ್ಧಮಾನ ನಿ
ನ್ನಯ ನಿರವದ್ಯಮಾರ್ಗಮೆಮಗೀಗಪವರ್ಗದ ಸಿದ್ಧಿಯಂ ಜಿನಾ ॥

2. ದೇಶಯಾಮಿ ಸಮೀಚೀನಂ ಧರ್ಮಂ ಕರ್ಮ ನಿಬರ್ಹಣಂ
ಸಂಸಾರ ದುಃಖಿತ ಸತ್ವಾನ್ ಯೋಧರತ್ಯುತ್ತಮೇ ಸುಖೇ ॥
ರತ್ನಕರಂಡಶ್ರಾವಕಾಚಾರ-೨.

ಜೀವವು ಶುದ್ಧಾವಸ್ಥೆಯನ್ನು ತಾಳಿ ಮುಕ್ತನಾಗಲು ಸಾಧ್ಯವಿದೆ. ಹೀಗೆ ಜೀವ ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ ಮತ್ತು ಮೋಕ್ಷ– ಸಪ್ತತತ್ವಗಳು ಜೈನದರ್ಶನವನ್ನು ಪ್ರತಿಪಾದಿಸುತ್ತವೆ. ಇಲ್ಲಿ ವ್ಯಕ್ತಿಯ ಮುಕ್ತಿ ಅಂತಿಮ ಗುರಿಯಾಗಿದ್ದರೂ, ಅದನ್ನು ಸಾಧಿಸುವಲ್ಲಿ ಅವನು ಅನುಸರಿಸಬೇಕಾದ ಮಾರ್ಗವು ಭೌತಿಕ ಬದುಕನ್ನು, ಲೌಕಿಕವನ್ನು ಸುವ್ಯವಸ್ಥಿತ ಆರೋಗ್ಯಕರವಾಗಿ ಇಡುವಲ್ಲಿ ನೆರವಾಗುವಂತಿದೆ.

ಸಂಸಾರಿ ಆತ್ಮನು ಕರ್ಮಬದ್ಧನು. ಜೀವನು ನೋಡುವ, ತಿಳಿಯುವ ಗುಣವುಳ್ಳವನು; ಅಮೂರ್ತಿಕನೂ ಕರ್ತನೂ ಭೋಕ್ತನೂ ಸ್ವದೇಹ ಪರಿಮಾಣ ವುಳ್ಳವನೂ; ತನ್ನ ಉತ್ಥಾನ–ಪತನಗಳಿಗೆ ತಾನೇ ಕಾರಣೀಭೂತನೂ ಆಗಿದ್ದಾನೆ. ಇಂಥ ಜೀವಿಗಳಲ್ಲಿ ಸಂಸಾರಿಜೀವಿ ಮತ್ತು ಮುಕ್ತಜೀವಿಗಳೆಂದು ಎರಡು ಪ್ರಕಾರ ಗಳು. ಕರ್ಮಬಂಧನಕ್ಕೆ ಸಿಲುಕಿ ಒಂದು ಗತಿಯಿಂದ ಇನ್ನೊಂದು ಗತಿಯಲ್ಲಿ ಜನ್ಮವೆತ್ತುತ್ತ ಸಂಸಾರಚಕ್ರದಲ್ಲಿ ಸುತ್ತುವ ಜೀವಿಗಳು ಸಂಸಾರಿ ಜೀವಿಗಳು. ಈ ಬಂಧನದಿಂದ ಬಿಡುಗಡೆಯಾದವರು ಮುಕ್ತಜೀವಿಗಳು.

ಸಂಸಾರಿ ಜೀವಿಗಳಲ್ಲಿ ನಾಲ್ಕು ಪ್ರಕಾರಗಳು : ೧. ನಾರಕಿ, ೨. ತಿರ್ಯಂಚ ೩. ಮನುಷ್ಯ ಮತ್ತು ೪. ದೇವ. ಮನುಷ್ಯ ಪಶು-ಪಕ್ಷಿ ಕ್ರಿಮಿ-ಕೀಟಗಳಲ್ಲದೆ, ಪೃಥ್ವಿ, ಜಲ, ಅಗ್ನಿ, ವಾಯು ಮತ್ತು ವನಸ್ಪತಿಗಳಲ್ಲಿಯೂ ಜೀವವಿರುತ್ತದೆ ಎಂಬ ಅಂಶವು ಗಮನಾರ್ಹ. ಈ ನಾಲ್ಕು ವರ್ಗಗಳು ಸೇರಿ ಸಂಸಾರವೆನ್ನಿಸಿ ಕೊಳ್ಳುತ್ತದೆ. ಈ ಸಂಸಾರವು ಕರ್ಮ ಬಂಧನದ ಫಲ. ಈ ಚಕ್ರದಿಂದ ಚತುರ್ಗತಿ ಯಿಂದ ತಪ್ಪಿಸಿಕೊಂಡು, ಹುಟ್ಟು-ಸಾವುಗಳಿಂದ ಬಿಡುಗಡೆ ಪಡೆಯುವುದೇ ಮೋಕ್ಷ. ಕಾರ್ಮಣ ಶರೀರದ ವಿನಾಶವೇ ಪರಮಮುಕ್ತಿ. ಈ ಕಾರ್ಮಣ ಶರೀರದ ನಿರ್ಮಾಣ ಮತ್ತು ಅದರ ವಿನಾಶದ ಉಪಾಯವನ್ನು ಉಮಾಸ್ವಾಮಿ ಆಚಾರ್ಯರು 'ತತ್ವಾರ್ಥಸೂತ್ರ' ದಲ್ಲಿ ಶಾಸ್ತ್ರೀಯವಾಗಿ ವಿವರಿಸಿದ್ದಾರೆ :

ಜೀವಾಜೀವಾಸ್ರವ ಬಂಧ ಸಂವರ ನಿರ್ಜರಾ ಮೋಕ್ಷಾಸ್ತತ್ವಂ [1]

ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷ ಇವು ಸಪ್ತತತ್ವಗಳು. ಜೀವವು ಜ್ಞಾನ ದರ್ಶನ ಸ್ವರೂಪವುಳ್ಳುದು, ಚೈತನ್ಯಯುತ ದ್ರವ್ಯವಾಗಿರುತ್ತದೆ. ಅಜೀವವು ಚೈತನ್ಯರಹಿತ ದ್ರವ್ಯವು. ಜೀವದ ವಿಶಿಷ್ಟ ಮಾನಸಿಕ ಅನುಭವಕ್ಕನುಗುಣವಾಗಿ ತನ್ನೆಡೆಗೆ ಎಳೆದುಕೊಳ್ಳುವ ಕರ್ಮಾಣುಗಳ ಒಳಗೆ ಹರಿಯುವಿಕೆ, ಕರ್ಮಗಳ ಆಗಮನವೇ 'ಆಸ್ರವ' ಹೀಗೆ ಆತ್ಮಪ್ರದೇಶದಲ್ಲಿ ಪ್ರವೇಶಿಸಿದ ಕರ್ಮಾಣುಗಳು ಆತ್ಮನೊಂದಿಗೆ ಸಂಬಂಧಿತಗೊಳ್ಳುವುದೇ 'ಬಂಧ'

1. ಉಮಾಸ್ವಾಮಿ : ತತ್ವಾರ್ಥಸೂತ್ರ I. 4.

ವಾಗಿರುತ್ತದೆ. 'ಕಾರಣಂ ಪರಿಣಾಮಃ ಸ್ಯಾದ್ಬಂಧನೇ ಪುಣ್ಯಪಾಪಯೋಃ' [1] ಪುಣ್ಯಪಾಪಗಳ ಬಂಧಕ್ಕೆ ಮನಸ್ಸಿನ ಶುಭಾಶುಭಗಳೇ ಕಾರಣವೆಂದು ಜಿನಸೇನಾಚಾರ್ಯರು ತಿಳಿಸಿದ್ದಾರೆ. ಈ ಕರ್ಮಬಂಧದ ತೀವ್ರತೆ ವಿವಿಧವಾಗಿರುತ್ತದೆ.

ಆತ್ಮಪ್ರದೇಶದೆಡೆ ಆಗುವ ಕರ್ಮಗಳ ಆಗಮನ (ಆಸ್ರವ)ವನ್ನು ತಡೆಯುವ ಪ್ರಥಮ ಪ್ರಯತ್ನ 'ಸಂವರ'ವಾಗಿದೆ. 'ಆಸ್ರವ ನಿರೋಧಃ ಸಂವರಃ.' [2] ಇಂದ್ರಿಯಗಳ ಭೋಗಕ್ಕೆ ಒಳಗಾಗದೆ, ತನ್ನ ಸಹಜಸ್ವರೂಪವನ್ನು ಕುರಿತು ಧ್ಯಾನಿಸುವುದರಿಂದ ಇದು ಸಾಧ್ಯ. ಇದರಿಂದ ಹೊಸದಾಗಿ ಒಳಗೆ ಬರುವ ಕರ್ಮವನ್ನು ತಡೆಗಟ್ಟಲು ಸಾಧ್ಯ. ಅದರಂತೆ ಆತ್ಮಪ್ರದೇಶದಿಂದ 'ತಪಸಾ ನಿರ್ಜರಾಚ'[3] ಎಂದು ಕರ್ಮಗಳನ್ನು ಹೊರಹಾಕುವುದಕ್ಕೆ ನಿರ್ಜರೆ ಎನ್ನುವರು. ಹೀಗೆ ಹೊಸ ಕರ್ಮಗಳನ್ನು ತಡೆಯುವಿಕೆ ಹಾಗೂ ಪೂರ್ವಸಂಚಿತ ಕರ್ಮಗಳ ನಾಶದಿಂದ ಕಾರ್ಮಣಶರೀರವು ಕ್ರಮೇಣ ಕೃಶವಾಗುತ್ತ ಹೋಗಿ ಆತ್ಮನ ಸ್ವಾಭಾವಿಕ ಗುಣಗಳು ವ್ಯಕ್ತವಾಗಿ ಬಿಡುಗಡೆ ಅಥವಾ ಮೋಕ್ಷ ಲಭಿಸುತ್ತದೆ. ಆತ್ಮ ಪರಮಾತ್ಮನಾಗುತ್ತಾನೆ. ಅನಂತಜ್ಞಾನ, ಅನಂತ ದರ್ಶನ, ಅನಂತ ವೀರ್ಯ ಮತ್ತು ಅನಂತ ಸುಖಗಳುಳ್ಳ ಶುದ್ಧಜೀವ ಪರಮಾತ್ಮನಾಗುತ್ತಾನೆ.

ಮುಕ್ತನಾಗುವ, ಪರಮಾತ್ಮನಾಗುವ ಗುರಿಯನ್ನು ಸಾಧಿಸಲು ಅನುಸರಿಸಬೇಕಾದ ಮಾರ್ಗವನ್ನು 'ಸಮ್ಯಕ್ ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ' [4] ಎಂದು ಆಚಾರ್ಯ ಉಮಾಸ್ವಾಮಿಯವರು ತಿಳಿಸಿದ್ದಾರೆ. ಯಥಾರ್ಥ ದೇವ-ಗುರು-ಶಾಸ್ತ್ರಗಳಿಂದ ಪ್ರತಿಪಾದಿತವಾದ ತತ್ವದ ಮೇಲೆ ಶ್ರದ್ಧೆಯನ್ನಿಡುವುದು ಸಮ್ಯಕ್ ದರ್ಶನವಾಗಿದೆ. ಸಂಶಯ, ವಿಪರ್ಯಾಯ, ಮತ್ತು ಅನಧ್ಯವಸಾಯ ರಹಿತವಾದ ಜ್ಞಾನ ಸಮ್ಯಕ್ ಜ್ಞಾನ, ಮತ್ತು ಸಂಸಾರಕ್ಕೆ ಕಾರಣವಾದ ಕಾಮ-ಕ್ರೋಧಗಳಿಂದ ದೂರವಾದ ಸರಿಯಾದ ಆಚರಣೆ ಸಮ್ಯಕ್ ಚಾರಿತ್ರ್ಯ-ಈ ಮೂರು ಒಟ್ಟಾಗಿ ಕಾರ್ಯರೂಪಕ್ಕೆ ಬರುವುದೇ ಮೋಕ್ಷಮಾರ್ಗವಾಗಿದೆ. ದರ್ಶನವು ಅಂತರಂಗದ ಶುದ್ಧಿಗೆ ಕಾರಣವಾದರೆ ಜ್ಞಾನವು ಬಹಿರಂಗದ ಬೋಧೆಯನ್ನು ನೀಡುವುದು. ದರ್ಶನದಿಂದ ಒಂದು ಹೊಸ ಚೈತನ್ಯ ಲಭಿಸುತ್ತದೆ, ಅರಿವು ಮೂಡುತ್ತದೆ. ಅದರಿಂದಾಗಿ ಸಂಸಾರದ ಇತರ ತತ್ವಗಳ ಜ್ಞಾನ ಲಭಿಸಿ ದ್ವೇಷ-ಅಸೂಯೆಗಳ ಸ್ಥಾನದಲ್ಲಿ ಸ್ನೇಹ-ದಯೆ-ಸಹಾನುಭೂತಿ ಭಾವಗಳು ಜಾಗೃತ

1. ಮಹಾಪುರಾಣ; XX-108.
2. ತತ್ವಾರ್ಥಸೂತ್ರ, IX-1;
3. ಅದೇ IX-3;
4. ಅದೇ. I-1.

ವಾಗುತ್ತವೆ. ಆಗ ದುರಾಚಾರದ ಬದಲು ಸದಾಚಾರ ನೆಲೆಗೊಳ್ಳುವುದು. ತನ್ನ ಹಾಗೂ ಇತರರ ಹಿತ, ಕಲ್ಯಾಣದ ಬಗೆಗಿನ ಭಾವನೆಗೆ ಪ್ರೇರಣೆ ದೊರೆಯುತ್ತದೆ. ಮನದಲ್ಲಿನ ವಿಷಮ ಭಾವನೆಗಳು ದೂರವಾಗಿ ಆತ್ಮಹಿತ–ಪರಹಿತ ಸಾಧಿಸುವಲ್ಲಿ ಸಮ್ಯಕ್ ಜ್ಞಾನ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಮ್ಯಕ್ ದರ್ಶನ ಮತ್ತು ಜ್ಞಾನಗಳ ಮೂಲಕ ಪಡೆದ ಅರಿವನ್ನು ಕಾರ್ಯಗತಗೊಳಿಸುವುದೂ, ಅನುಷ್ಠಾನಕ್ಕೆ ತರುವುದೂ ಅಷ್ಟೇ ಮಹತ್ವದ್ದಾಗಿದೆ. ಸಮ್ಯಕ್ ಚಾರಿತ್ರ್ಯ ಇದನ್ನು ಒಳಗೊಂಡಿರುತ್ತದೆ. ಕೇವಲ ಶ್ರದ್ಧೆಯಿಂದಾಗಲಿ, ಸಿದ್ಧಾಂತಗಳ ತಿಳುವಳಿಕೆಯಿಂದಾಗಲಿ ಏನನ್ನೂ ಸಾಧಿಸಲಿಕ್ಕಾಗುವುದಿಲ್ಲ. ಅವೆರಡೂ ವಾಸ್ತವ ಬದುಕಿನಲ್ಲಿ ಕಾರ್ಯಗತವಾದಾಗಲೇ ಅವುಗಳ ಮಹತ್ವ ಹೆಚ್ಚುವಂತೆ, ಅವುಗಳ ಸಾರ್ಥಕತೆ ವ್ಯಕ್ತವಾಗುತ್ತದೆ. ಆದುದರಿಂದ ಜೈನಧರ್ಮವು ಚಾರಿತ್ರ್ಯಕ್ಕೆ ವಿಶೇಷ ಮಹತ್ವವನ್ನಿತ್ತಿದೆ. ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ಚಾರಿತ್ರ್ಯ ಈ ಮೂರನ್ನೂ ಪ್ರತ್ಯೇಕವೆಂದೆನಿಸದೇ ಏಕಕಾಲಕ್ಕೆ ಸಮಪ್ರಾಶಸ್ತ್ಯದಿಂದ ಕಾರ್ಯಗತಗೊಳಿಸುವುದನ್ನು ಪ್ರತಿಪಾದಿಸುತ್ತದೆ. ಅದು ಕೇವಲ ಶ್ರದ್ಧೆ, ತಿಳುವಳಿಕೆ, ಉಪದೇಶ ರೂಪದಲ್ಲಿ ಮಾತ್ರ ಉಳಿಯದೆ ಆಚರಣೆಯಲ್ಲಿ ಸಾಕಾರಗೊಳ್ಳುವುದು ಮಹತ್ವದ್ದಾಗಿದೆ. “ಈ ರತ್ನತ್ರಯಗಳಿಗೆ ಧರ್ಮವೆಂದೂ ಹೇಳುತ್ತಾರೆ ಇವುಗಳಿಗೆ ವಿಪರೀತವಾದವುಗಳು ಸಂಸಾರ ದು:ಖಕ್ಕೆ ಕಾರಣವಾಗುತ್ತವೆ. ಆತ್ಮ ಪರಮಾತ್ಮಗಳಲ್ಲಿ ಶ್ರದ್ಧೆಯನ್ನಿಡುವುದು ಸಮ್ಯಕ್ ದರ್ಶನವಾದರೆ, ಜೀವ ಅಜೀವಗಳ ಸ್ವಭಾವವನ್ನು ಸಂಶಯಾದಿಗಳಿಲ್ಲದೆ ತಿಳಿಯುವುದು ಸಮ್ಯಕ್ ಜ್ಞಾನ, ತನ್ನಾತ್ಮನನ್ನು ತಾನೇ ತಿಳಿಯಲು ಸಂಯಮಾದಿಗಳನ್ನು ಆಚರಿಸುವುದೇ ಸಮ್ಯಕ್ ಚಾರಿತ್ರ್ಯವಾಗಿದ್ದು ಈ ಮೂರು ಆತ್ಮನಿಗೆ ಸಂಬಂಧಪಟ್ಟ ವಿಚಾರಗಳಾಗಿವೆ. ಈ ರತ್ನತ್ರಯಗಳು ಆತ್ಮನನ್ನು ಬಿಟ್ಟು ಬೇರೆ ಯಾವ ದ್ರವ್ಯದಲ್ಲಿಯೂ ಇರುವದಿಲ್ಲ. ಆದಕಾರಣ ರತ್ನತ್ರಯದಿಂದ ಕೂಡಿದ ಆತ್ಮನೇ ಮೋಕ್ಷಕ್ಕೆ ಕಾರಣನಾಗಿದ್ದಾನೆ ಎಂದು ಸಮಂತಭದ್ರಾಚಾರ್ಯರು ತಿಳಿಸಿದ್ದಾರೆ.[1]

ಜೈನ ನೀತಿ ಶಾಸ್ತ್ರದ ಪ್ರಕಾರ ನೀತಿಯ ಆಚರಣೆಯನ್ನು ಎರಡು ರೀತಿಯಲ್ಲಿ ವಿಧಿಸಲಾಗಿದೆ. ಸಂಸಾರಿಯಾದ ಸಾಮಾನ್ಯ ಗೃಹಸ್ಥ ಹಾಗೂ ಸಂಸಾರ ಬಂಧನವನ್ನು ತೊರೆದ ಮುನಿಗಳ ಜೀವನ ಕ್ರಮವನ್ನು ಗಮನದಲ್ಲಿರಿಸಿಕೊಂಡು ಈ ನಿಯಮಗಳನ್ನು ವಿಧಿಸಲಾಗಿದೆ ಆದರೆ ಇವೆರಡೂ ಪ್ರತ್ಯೇಕ ಮಾರ್ಗಗಳಾಗಿರದೆ ಒಂದಕ್ಕೊಂದು ಪೂರಕವಾಗಿ, ಹಂತ ಹಂತದ ಬೆಳವಣಿಗೆಯ ಕ್ರಮಕ್ಕೆ ಪೋಷಕವಾಗಿವೆ.

---

1. ಸದ್ದೃಷ್ಟಿ ಜ್ಞಾನ ವೃತ್ತಾನಿ ಧರ್ಮಂ ಧರ್ಮೇಶ್ವರಾ ವಿದು:
ಯದೀಯ ಪ್ರತ್ಯನೀಕಾನಿ ಭವಂತಿ ಭವಪದ್ಧತಿಃ
ರತ್ನಕರಂಡಶ್ರಾವಕಾ. ೨೬–೩

ಗೃಹಸ್ಥನಾದವನು ಲೋಕಮೂಢ, ದೇವಮೂಢ ಮತ್ತು ಪಾಷಂಡಿಮೂಢ ಈ ಮೂಢತ್ರಯಗಳನ್ನು ತೊರೆಯಬೇಕು. ಅದರಂತೆ ಬುದ್ಧಿವಂತಿಕೆಯ ಮದ, ದೇವ ಪೂಜೆಯನ್ನು ವಿಜೃಂಭಣೆಯಿಂದ ಮಾಡಿದೆನೆಂಬ ಮದ, ಉತ್ತಮ ಕುಲ ವಂಶದ ಮದ, ಜಾತಿಯ ಮದ, ದೈಹಿಕ–ಮಾನಸಿಕ ಸಾಮರ್ಥ್ಯದ ಮದ, ಮಂತ್ರಶಕ್ತಿಗಳ ಮದ, ತಪಸ್ಸಿನ ಫಲದ ಮದ ಮತ್ತು ರೂಪ ಮದ ಇವುಗಳನ್ನು ತೊರೆಯಬೇಕು.[1]

ಹಿಂಸಾನೃತಚೌರ್ಯೇಭ್ಯೋ ಮೈಥುನ ಸೇವಾ ಪರಿಗ್ರಹಾಭ್ಯಾಂ ಚ
ಪಾಪಪ್ರಣಾಲಿಕಾಭ್ಯೋ ವಿರತಿಃ ಸಂಜ್ಞಸ್ಯ ಚಾರಿತ್ರಮ್ ॥ [2]

ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಮತ್ತು ಅಪರಿಗ್ರಹ–ಇವುಗಳನ್ನು ಗೃಹಸ್ಥನಾದವನು ಆಚರಿಸಬೇಕು. ಸಮಂತಭದ್ರಾಚಾರ್ಯರ ಈ ಸೂತ್ರದ ಭಾವವೇ ಕನ್ನಡಕವಿ ಜನ್ನನಲ್ಲಿಯೂ ವ್ಯಕ್ತವಾಗಿದೆ;

ಕೊಲಲುಂ ಪುಸಿಯಲುಮಾಗದು ಸಲಲಾಗದು ಪೆರರ ಪೆಂಡಿರೊಳ್ಕರ್
ವಸಣಂ
ಕಳಲಾಗದು ತೀರದುದಕ್ಕಿಲವ| ರಾಲಾಗದು ಪರತ್ರೈಯುಂ ಬಯಸುವವಂ ||
ಇವುವೊತ್ತುಮೊಂದಲಣುವ್ರತ| ಮಿವುವುಮನುಳಿದೆ ನಡೆಪೊಡೈಹಿಕಾ
ಮುತ್ರಿಕಮೆಂ
ಬಿವರೊಳ್ ಸಮುಸುಖಿಯಪ್ಪಂ| ಭವಭವದೊಳ್ ದುಃಖಿಯಪ್ಪನಿವು
ಮನುಳ್ವಾತಂ [3]

ಪಂಚಾಣುವ್ರತಗಳಲ್ಲಿ ಅಹಿಂಸೆ ಪ್ರಮುಖವಾದುದು ಉಳಿದ ನಾಲ್ಕು ವ್ರತಗಳು ಇದರಲ್ಲಿ ಸಮಾವೇಶವಾಗುತ್ತವೆ. ಹಿಂಸೆಯಲ್ಲಿ ದ್ರವ್ಯಹಿಂಸೆ ಮತ್ತು ಭಾವ ಹಿಂಸೆಗಳೆಂದು ಎರಡು ಪ್ರಕಾರ. ಒಂದು ಜೀವಿಗೆ ಹಿಂಸೆಯನ್ನು ನೀಡುವುದು ದ್ರವ್ಯ ಹಿಂಸೆಯಾದರೆ, ಆ ಕುರಿತು ಮನಸ್ಸಿನಲ್ಲಿ ಯೋಚಿಸುವುದು ಭಾವ ಹಿಂಸೆಯಾಗುವುದು. ಇದನ್ನು ಪ್ರತಿಪಾದಿಸುವಲ್ಲಿ ಆಚಾರ ಮತ್ತು ವಿಚಾರಗಳ ಶುದ್ಧತೆಯ ಮಹತ್ವವನ್ನು ಎತ್ತಿ ಹಿಡಿಯಲಾಗಿದೆ. ಪ್ರಮಾದ ಮಾಡಹೊರಟ ವ್ಯಕ್ತಿಯು ತನ್ನ ಹಿಂಸಾತ್ಮಕ ಭಾವನೆಯಿಂದಾಗಿ ತನಗೆ ತಾನೇ ಮೊದಲು ಹಿಂಸೆ

---

1. ಜ್ಞಾನಂ ಪೂಜಾಂ ಕುಲಂ ಜಾತಿಂ ಬಲಮೃದ್ಧಿಂ ತಪೋವಪುಃ
ಅಷ್ಟಾವಾಶ್ರಿತ್ಯ ಮಾನಿತ್ವಂ ಸ್ಮಯಮಾಹುರ್ಗತಸ್ಮಯಾಃ
ರತ್ನಕರಂಡಶ್ರಾವಕಾಚಾರ 25–

2. ರತ್ನಕರಂಡ ಶ್ರಾವಕಾಚಾರ-೪೯

3 ಜನ್ನ: ಯಶೋಧರ ಚರಿತೆ; ೪: ೨೨,೨೩.

ಮಾಡಿಕೊಳ್ಳುವನೆಂದು ಆಚಾರ್ಯ ಪೂಜ್ಯಪಾದರು ತಿಳಿಸಿದ್ದಾರೆ.[1] ಅಹಿಂಸೆಯನ್ನು ಪ್ರತಿಪಾದಿಸುವಲ್ಲಿ ಜೈನಾಚಾರ್ಯರು ವಾಸ್ತವವನ್ನು ಅಲ್ಲಗಳೆಯದೆ ಸಂಸಾರಿವ್ಯಕ್ತಿಗೆ ಬದುಕುವಲ್ಲಿ ಕೈಕೊಳ್ಳಬೇಕಾದ ಕಾರ್ಯದಲ್ಲಿ ಉಂಟಾಗುವ ಹಿಂಸೆಯನ್ನು ಮನ್ನಿಸಿ, ಅದನ್ನು ಸೂಕ್ಷ್ಮವಾಗಿ ಮುನಿಗಳು ಆಚರಿಸಬೇಕೆಂದು ತಿಳಿಸಿದ್ದಾರೆ. ಆರಂಭೀ, ಉದ್ಯೋಗಿ, ವಿರೋಧಿ ಹಿಂಸೆಗಳ ವಿಷಯದಲ್ಲಿ ಗೃಹಸ್ಥನಿಗೆ ರಿಯಾಯತಿಯನ್ನು ತೋರಿದ್ದು ಸಂಕಲ್ಪ ಹಿಂಸೆಯನ್ನು ತ್ಯಜಿಸಲು ತಿಳಿಸಿದ್ದಾರೆ. 'ತನ್ನನ್ನು ಇತರರೊಡನೆ ಸಮಾನವೆಂದು ಭಾವಿಸಿಕೊಳ್ಳುವುದು ಅಥವಾ ಇತರರೊಡನೆ ತನ್ನನ್ನು ಸಮೀಕರಿಸಿಕೊಳ್ಳುವುದೇ ಅಹಿಂಸಾತತ್ವದ ಉಗಮಸ್ಥಾನ'ವಾಗಿದೆ. ತನ್ನ ಆತ್ಮನಲ್ಲಿ ರಾಗದ್ವೇಷಾದಿ ವಿಕಾರಗಳು ಉತ್ಪನ್ನವಾಗದಿರುವುದು ಅಹಿಂಸೆ, ಉತ್ಪತ್ತಿಯಾಗುವುದು ಹಿಂಸೆ ಎಂದು ಆಚಾರ್ಯ ಅಮೃತಚಂದ್ರಸೂರಿ ಅವರು ವಿವರಿಸಿದ್ದಾರೆ.[2] ಅಹಿಂಸೆ ಹೇಡಿಯ ಧರ್ಮವಲ್ಲ. ವೀರರ ಧರ್ಮವಾಗಿದೆ. ನಡೆ–ನುಡಿಗಳಲ್ಲಿ ಪರಿಶುದ್ಧವಾಗಿ ಸಂಯಮದಿಂದ ಕೂಡಿದ ವ್ಯಕ್ತಿ ಅದನ್ನು ಆಚರಿಸಲು ಸಾಧ್ಯ.

ಸತ್ಯವ್ರತವು ಅಹಿಂಸೆಯಲ್ಲಿಯೇ ಸಮಾವೇಶವಾಗುತ್ತದೆ. ಹಿತಮಿತ ಮಾತು ಭಾವನೆಯ ಶುದ್ಧತೆಗೆ ನೆರವಾಗುವುದು. ಮಾತು ಒಳ್ಳೆಯ ಪರಿಣಾಮ ಬೀರುವಂತೆ ಅನಿಷ್ಟವನ್ನೂ ಉಂಟುಮಾಡಬಲ್ಲದು. ಆದುದರಿಂದ ಭಾಷೆ ಉಚಿತವಾಗಿರಬೇಕು. ಸತ್ಯವನ್ನು ಒಳಗೊಂಡಿರಬೇಕು.

ತನಗೆ ಸೇರದ ಪರರ ವಸ್ತುಗಳನ್ನು ತೆಗೆದುಕೊಳ್ಳುವುದು, ಅಪಹರಿಸುವುದು ಕಳ್ಳತನವಾಗಿದೆ. ಬೇರೆಯವರ ವಸ್ತು, ಸಂಪತ್ತು ಇವುಗಳನ್ನು ಪ್ರತ್ಯಕ್ಷ ಅಪಹರಿಸುವಂತೆಯೇ, ಅವುಗಳ ಕುರಿತು ಆಶೆಪಡುವುದು, ಕದಿಯಲು ಯೋಚಿಸುವುದು ಕೂಡ ಚೌರ್ಯವಾಗಿದೆ. ಅಳತೆ ತೂಕಗಳಲ್ಲಿ ವ್ಯತ್ಯಾಸವನ್ನುಂಟುಮಾಡಿ ಲಾಭಪಡೆಯುವುದು ಸಹ ಚೌರ್ಯವಾಗಿದೆ. ಆದುದರಿಂದ ಪರರ ವಸ್ತುಗಳ ಕುರಿತು ಆಶೆ ಮಾಡದಿರುವುದು ಅಚೌರ್ಯವ್ರತವಾಗಿದೆ.

ಶ್ರಾವಕ–ಶ್ರಾವಕಿಯರು ಸ್ವಪತಿ-ಪತ್ನಿಯರಲ್ಲಿ ಮಾತ್ರ ತೃಪ್ತರಾಗಿರಬೇಕು. ಅದನ್ನು ಬಿಟ್ಟು ಪರರನ್ನು ಮೋಹಿಸುವುದು, ಬಯಸುವುದು ಅಬ್ರಹ್ಮಚರ್ಯವಾಗಿದೆ.

---

1. ಸ್ವಯಮೇವಾತ ನಾಽಽತ್ಮನಾಂ ಹಿನಸ್ತ್ಯಾತ್ಮಾ ಪ್ರಮಾದವಾನ್
ಪೂರ್ವಂ ಪ್ರಾಣ್ಯಯಂತರಾಣಾಂ ತು ಪಾಶ್ಚಾತ್ಸ್ಯಾದ್ವಾ ನಾವಧಃ
— ಸರ್ವಾರ್ಥಸಿದ್ಧಿ; VII : 13.

2. ಅಪ್ರಾದುರ್ಭಾವ ಬಲು! ರಾಗಾದೀನಾಂ ಭವತ್ಯಹಾ ಸೇತಿ
ತೇಷಾಮೇವಪ್ರೋತ್ಪತ್ತಿಃ ಹಿಂಸೇತಿ ಜಿನಾಗಮಸ್ಯ ಸಂಕ್ಷೇಪಃ ॥
—ಪುರುಷಾರ್ಥಸಿದ್ಧ್ಯುಪಾಯ ೪

ವಿಷಯಾಸಕ್ತಿಯನ್ನು ಹೆಚ್ಚಿಸುವ ಮಾತುಕತೆಗಳನ್ನು ತೊರೆಯುವುದು ಅಗತ್ಯ. ವಿಷಯಾಸಕ್ತನು ರಾಗದ್ವೇಷಾದಿಗಳಿಗೆ ಬಲಿಯಾಗಿ ತನಗೂ ಇತರರಿಗೂ ಹಾನಿಯನ್ನು ಮಾಡುತ್ತಾನೆ.

ಗೃಹಸ್ಥನಾದವನು ತನ್ನ ಸಂಪತ್ತಿಗೆ, ಸಂಗ್ರಹ ಪ್ರವೃತ್ತಿಗೆ ಮರ್ಯಾದೆಯನ್ನು ಹಾಕಿಕೊಂಡು ಲೋಭವನ್ನು ನಿಯಂತ್ರಿಸುವುದು ಅಗತ್ಯ. 'ಬಹ್ವಾರಂಭ ಪರಿಗ್ರಹತ್ವಂ ನಾರಕಸ್ಯಾಯುಷಃ[1]' 'ಅಲ್ಪಾರಂಭ ಪರಿಗ್ರಹತಂ ಮಾನುಷಸ್ಯ'[2] ಬಹು ಆರಂಭಗಳು ನರಕಕ್ಕೆ ಕಾರಣ, ಮನುಷ್ಯನೆನಿಸಿಕೊಳ್ಳುವವನು ಅಲ್ಪಾರಂಭಿಯಾಗಿರಬೇಕು ಎಂದು ಆಚಾರ್ಯ ಉಮಾಸ್ವಾಮಿ ಅವರು ತಿಳಿಸಿದ್ದಾರೆ. ಆಶೆಗೆ ಮಿತಿಯಿಲ್ಲ. ಅದು ಜೀವಿಗಳನ್ನು ಸದಾ ಸುಡುತ್ತದೆ. ಇಂದ್ರಿಯಗಳಿಗೆ ಪ್ರಿಯವಾದ ಭೋಗಮೂಲಕವಾದ ಈ ಜ್ವಾಲೆಗಳಿಗೆ ಶಾಂತಿಯಾಗದೆ ಅವುಗಳ ವೃದ್ಧಿಯಾಗುತ್ತದೆ"[3] ಹೆಣ್ಣು, ಹೊನ್ನು, ಮಣ್ಣಿನ ಆಶೆಯಿಂದ ವೈರ–ವಿರೋಧ–ಸಂಘರ್ಷಗಳಿಗೆ ದಾರಿಯಾಗುವುದು. ಆದುದರಿಂದ ತನ್ನ ಅಗತ್ಯತೆಯನ್ನು ನಿಯಂತ್ರಿಸಿ. ಹೆಚ್ಚಿನದಕ್ಕೆ ಆಶೆಪಡದೆ ಇರುವ, ಸ್ವಯಂ ಬಂಧನಕಾರಿಯಾದ 'ಅಪರಿಗ್ರಹ ವ್ರತ'ವು ವ್ಯಕ್ತಿಯೊಂದಿಗೆ ಸುತ್ತಲಿನ ಸಮಾಜದ ಹಿತವನ್ನು ಸಾಧಿಸುವ ಉಪಯುಕ್ತ ವ್ರತವಾಗಿದೆ. ಅತಿಯಾದ ಸಂಗ್ರಹದಿಂದ ಉಂಟಾಗುವ ಮೇಲು–ಕೀಳು, ಉಚ್ಚ-ನೀಚ, ಭೇದ ಅಳಿಸುವಲ್ಲಿ ಈ ವ್ರತ ತುಂಬ ಉಪಯುಕ್ತವಾಗಿದೆ. ತನ್ನಲ್ಲಿ ಸಂಗ್ರಹವಾದ ಹೆಚ್ಚಿನ ಸಂಪತ್ತನ್ನು ಆಹಾರ, ಅಭಯ, ಔಷಧ, ಶಾಸ್ತ್ರ,- ಈ ಚತುರ್ವಿಧ ದಾನಕ್ಕಾಗಿ ಉಪಯೋಗಿಸುವುದರಿಂದ ಅದು ಸುತ್ತಲಿನ ಜನರ ಅಭ್ಯುದಯಕ್ಕೆ ನೆರವಾಗಲು ಅವಕಾಶವಿದೆ. ಸಾಮಾಜಿಕ ಕಟ್ಟಳೆಗಳಿಗಿಂತ ಸ್ವಯಂ ನಿಯಂತ್ರಣದ ಈ ವ್ರತ ಸಮಾಜದಲ್ಲಿನ ವರ್ಗ, ವರ್ಣ ಹೋರಾಟವನ್ನು ಕಡಿಮೆಗೊಳಿಸಿ ಭಾವೈಕ್ಯಕ್ಕೆ ನೆರವಾಗುವುದು.

ದೇವಪೂಜಾಗುರೂಪಾಸ್ತಿ | ಸ್ವಾಧ್ಯಾಯಃ ಸಂಯಮ ತಪಃ
ದಾನಂ ಚೇತಿ ಗೃಹಸ್ಥಾನಾಂ | ಷಟ್ಕರ್ಮಾಣಿ ದಿನೇದಿನೇ

ಎಂಬುದಾಗಿ ಗ್ರಹಸ್ಥನ ನಿತ್ಯ ಕ್ರಿಯೆಯನ್ನು ವಿವರಿಸಲಾಗಿದೆ. ಇದನ್ನೇ ಕನ್ನಡ ಕವಿ ರತ್ನಾಕರವರ್ಣಿ ಸುಂದರವಾಗಿ ವರ್ಣಿಸಿದುದನ್ನು ಕಾಣಬಹುದು :

ತನುವಂ ಸಂಘದ ಸೇವೆಯೊಳ್ ಮನಮನಾತ್ಮಧ್ಯಾನದಭ್ಯಾಸದೊಳ್
ಧನಮಂ ದಾನಸುಪೂಜೆಯೊಳ್ದಿನಮನರ್ಹದ್ಧರ್ಮ ಕಾರ್ಯಪ್ರವ

1. ತತ್ವಾರ್ಥಸೂತ್ರ : XV-6.
2. ಅದೇ XVII-6.
3. ಸಮಂತಭದ್ರಾಚಾರ್ಯ ; ಸ್ವಯಂಭೂಶತಕ-82.

ರ್ತನೆಯೊಳ್ಪರ್ನನೊಲ್ದು ನೋಂಪಿಗಳೊಳಿರ್ದಾಯುಷ್ಯಮಂ ಮೋಕ್ಷ ಚಿಂ

ತನೆಯೊಳ್ ತೀರ್ಚುವ ಸದ್ಗೃಹಸ್ಥನನಘಂ ರತ್ನಾಕರಾಧೀಶ್ವರಾ ॥೪೩॥

ತನು-ಮನ-ಧನಗಳನ್ನು ಸಮಾಜ, ಆತ್ಮಧ್ಯಾನ, ದಾನಗಳಲ್ಲಿ ಅಳವಡಿಸುವ ಮೂಲಕ ಆತ್ಮೋನ್ನತಿ ಸಾಧ್ಯ. ಪಂಚ ಅಣುವ್ರತಗಳೊಂದಿಗೆ ಗುಣವ್ರತ, ಶಿಕ್ಷಾವ್ರತಗಳನ್ನೂ ಧಾರಣಮಾಡಲು ಸೂಚಿಸಲಾಗಿದೆ. ಕ್ರೋಧ, ಮಾನ, ಮಾಯಾ, ಲೋಭಗಳಂಥ ಕಷಾಯಗಳನ್ನು ತೊರೆದು ಮನ, ವಚನ, ಕಾಯ ಗಳಿಂದ ಶ್ರಾವಕನು ಗೃಹಸ್ಥ ಧರ್ಮವನ್ನು ಪರಿಪಾಲಿಸುತ್ತ ಮುಂದುವರಿಯುವ ದನ್ನು ಹನ್ನೊಂದು ಪ್ರತಿಮೆಗಳು ತಿಳಿಸುತ್ತವೆ. ಕೊನೆಯ ನೆಲೆಯಲ್ಲಿ ಅವನು ಸಂಸಾರ ಬಂಧನದಿಂದ ತನ್ನ ಸಂಬಂಧವನ್ನು ಕಳಚಿಕೊಂಡು ತ್ಯಾಗಿ ಆಗುತ್ತಾನೆ.

ಮುನಿಯಾದವನು ಅಹಿಂಸಾದಿ ವ್ರತಗಳನ್ನು ಸೂಕ್ಷ್ಮರೂಪದಲ್ಲಿ ಮಹಾ ವ್ರತಗಳನ್ನಾಗಿ ಆಚರಿಸುತ್ತಾನೆ. ಪರಿಗ್ರಹರೂಪಿಯಾದ ಬಟ್ಟೆಗಳನ್ನು ತ್ಯಜಿಸಿ ದಿಗಂಬರನಾಗಿರುವನು. ಕೇವಲ ಬಟ್ಟೆಯನ್ನು ಮಾತ್ರ ತೊರೆಯುವದಲ್ಲ. ಅದ ರೊಂದಿಗೆ ಮನಸ್ಸೂ ದಿಗಂಬರವಾಗಿ ಎಲ್ಲವನ್ನು ತೊರೆಯಬೇಕು.

ಮೋಹ ತಿಮಿರಾಪಹರಣೇ ದರ್ಶನ ಲಾಭದವಾಪ್ತ ಸಂಜ್ಞಾನಃ

ರಾಗದ್ವೇಷನಿವೃತ್ತ್ಯೈ, ಚರಣಂ ಪ್ರತಿಪದ್ಯತೋ ಸಾಧುಃ [1]

ದರ್ಶನಶಕ್ತಿಯನ್ನು ಸಂಪಾದಿಸುವದಕ್ಕಾಗಿ ರಾಗ-ದ್ವೇಷಗಳನ್ನು ದೂರ ಮಾಡಿ ಚಾರಿತ್ರ್ಯಧಾರಣ ಮಾಡಿದವನನ್ನೇ ಸಾಧುವೆಂದು ಕರೆಯುವವಾಗಿ ಸಮಂತ ಭದ್ರಾಚಾರ್ಯರು ತಿಳಿಸಿದ್ದಾರೆ. 'ಸಕಲ ಕಷಾಯ ವಿಮುಕ್ತಂ ವಿಶದಮುದಾಸೀನ ಮಾತ್ಮರೂಪಂ ತತ್' ಎಂದು ಕಷಾಯಗಳಿಂದ ಬಿಡುಗಡೆ ಹೊಂದುವುದನ್ನು ಅಮೃತಚಂದ್ರಾಚಾರ್ಯರು ಹೇಳಿದ್ದಾರೆ.[2] ಶತ್ರು ಮಿತ್ರರಲ್ಲಿ, ಸುಖ, ದುಃಖ ದಲ್ಲಿ ಹೊಗಳಿಕೆ-ತೆಗಳಿಕೆಯಲ್ಲಿ, ಮಣ್ಣು-ಹೊನ್ನಿನಲ್ಲಿ, ಜೀವನ-ಮರಣದಲ್ಲಿ ಸಮ ಭಾವವುಳ್ಳವನೇ ಶ್ರಮಣ-ಜೈನಮುನಿ ಎಂಬುದಾಗಿ ಕುಂದಕುಂದಾಚಾರ್ಯರು ತಿಳಿಸಿದ್ದಾರೆ.

ಮುನಿ ನಾಲ್ಕು ಸಮಿತಿಗಳನ್ನು, ಇಪ್ಪತ್ತೆಂಟು ಮೂಲಗುಣಗಳನ್ನು ಧರಿಸು ತ್ತಾನೆ. ಇಪ್ಪತ್ತೆರಡು ಪರಿಷಹ, ದಶಧರ್ಮ [ಉತ್ತಮ ಕ್ಷಮಾಮೊದಲಾಗಿ], ಹನ್ನೆರಡು ಅನುಪ್ರೇಕ್ಷೆ, ಮೂರುಗುಪ್ತಿ, ಹನ್ನೆರಡು ತಪಗಳ ಮೂಲಕ ಹದಿನಾಲ್ಕು ಗುಣ ಸ್ಥಾನಗಳ ಮಾರ್ಗವಾಗಿ ಅಷ್ಟಕರ್ಮಗಳಿಂದ ಮುಕ್ತನಾಗಿ ಜೀವವು ಶುದ್ಧ, ಶಾಶ್ವತ ಅನಂತ ಜ್ಞಾನ, ದರ್ಶನ, ಸುಖ, ವೀರ್ಯವನ್ನು ಸಂಪಾದಿಸಿ ಸಿದ್ಧಾವಸ್ಥೆಯನ್ನು ಪಡೆಯುತ್ತದೆ.

---

1. ರತ್ನಕರಂಡ ಶ್ರಾವಕಾಚಾರ-47
2. ಪುರುಷಾರ್ಥಸಿದ್ಧ್ಯುಪಾಯ-39

ಮುನಿ–ಆರ್ಯಿಕೆ, ಶ್ರಾವಕ–ಶ್ರಾವಕಿ ಇವರ ಸಮುದಾಯವನ್ನು ಜೈನ ಸಂಘ ಒಳಗೊಂಡಿರುತ್ತದೆ. ಮುನಿ–ಆರ್ಯಿಕೆಯರು ಸಂಸಾರ ತ್ಯಜಿಸಿದವರಾದರೆ ಶ್ರಾವಕ–ಶ್ರಾವಕಿಯರು ಸಂಸಾರಿಗಳು, ಇವರು ಪರಸ್ಪರ ಪೂರಕವಾಗಿ ಸುಸಂಗತ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತೆ ವ್ಯವಸ್ಥೆಗೊಳಿಸಲಾಗಿದೆ. ಸನ್ಯಾಸ ಸ್ವೀಕರಿಸಿದ ಸಾಧುವು ಆಚಾರ್ಯರ ನೇತೃತ್ವದಲ್ಲಿ ಸಂಘದಲ್ಲಿದ್ದು ದೀರ್ಘಕಾಲದ ಪರೀಕ್ಷೆಯ ನಂತರ ಪ್ರತ್ಯೇಕವಾಗಿ ವಿಹಾರ ಮಾಡಲು ಅವಕಾಶವಿದೆ. ಇದರಿಂದಾಗಿ ಅವರಲ್ಲಿ ವೈರಾಗ್ಯ ಭಾವನೆ ಪ್ರಬಲವಾಗಿರುತ್ತದೆ.

ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ ಮತ್ತು ಧ್ಯಾನದ ಕಡೆಗೆ ಸಾಧುಗಳ ಲಕ್ಷ್ಯವು ಎಳೆಯಲ್ಪಟ್ಟಿದೆ. ತನ್ನ ದೋಷಗಳನ್ನು ಆಚಾರ್ಯರಲ್ಲಿ ತಿಳಿಸಿ ಅದಕ್ಕೆ ಪ್ರಾಯಶ್ಚಿತ್ತವನ್ನು ಭಕ್ತಿಯಿಂದ ಸ್ವಿಕರಿಸುವುದು, ಹಿರಿಯ ಆಚಾರ್ಯರಿಗೆ ನಮಸ್ಕರಿಸಿ ರೋಗಿ, ಅಶಕ್ತ ಸಾಧುಗಳ ಸೇವೆ ಮಾಡುವುದು ವೈಯ್ಯಾವೃತ್ತ್ಯವಾಗಿದೆ. ಈ ಸೇವೆಯನ್ನು ಅಭ್ಯಂತರ ತಪಸ್ಸೆಂದು ಪರಿಗಣಿಸಿ ವಿಶೇಷ ಮಹತ್ವವನ್ನು ನೀಡಲಾಗಿದೆ. ಇಂಥ ಸಾಧುಗಳನ್ನು ತೀರ್ಥಂಕರರಂತೆ ಭಕ್ತಿಯಿಂದ ಗೃಹಸ್ಥರು ಪೂಜಿಸಬೇಕೆಂಬುದೇ ಪಂಡಿತ ಆಶಾಧರರ ಅಭಿಪ್ರಾಯವಾಗಿದೆ.[1] ಜೈನಸಂಘದಲ್ಲಿ ಎಲ್ಲ ವರ್ಗಗಳ ಜನರೂ ಸೇರಲಿಕ್ಕೆ ಉದಾರ ಅವಕಾಶವಿದ್ದಿತು. "ಉಪಕರಣ, ಆಚಾರ ಹಾಗೂ ಶರೀರದ ಶುದ್ಧತೆಯಿಂದ ಶೂದ್ರನೂ ಜೈನಧರ್ಮದ ಅಧಿಕಾರಿಯಾಗಬಲ್ಲನು. ಏಕೆಂದರೆ ಕಾಲಲಬ್ಧಿಯೇ ಮೊದಲಾದವುಗಳ ಪ್ರಾಪ್ತಿಯಿಂದ ಜಾತಿಯಲ್ಲಿ ಹೀನನಾದವನು ಧರ್ಮದ ಅಧಿಕಾರಿಯಾಗುವನು ಎಂಬುದನ್ನು ಸಾಗಾರ ಧರ್ಮಾಮೃತ ಸಾರುತ್ತದೆ.[2] 'ಜೈನಸಂಘದಲ್ಲಿ ನಾಲ್ಕು ವರ್ಣಗಳ ಜನರು ಸಮ್ಮಿಳಿತರಾಗಲು ಅವಕಾಶವಿತ್ತು. ಶೂದ್ರನಿಗೂ ಧರ್ಮ ಸೇವನೆಯ ಅಧಿಕಾರವಿತ್ತು.[3]

ಜೈನಸಂಘದಲ್ಲಿ ಸ್ತ್ರೀಯರಿಗೂ ಗೌರವದ ಸ್ಥಾನವಿದ್ದಿತು. ಪರಸ್ಪರ ತಿಳುವಳಿಕೆ, ಪ್ರೀತಿ, ವಿಶ್ವಾಸ, ವಾತ್ಸಲ್ಯ ಹಾಗೂ ಐಕ್ಯಭಾವಕ್ಕೆ ಇದರಲ್ಲಿ ವಿಶೇಷ ಸ್ಥಾನವಿದೆ. ಇದರಿಂದಾಗಿ ಆರೋಗ್ಯಕರ ಸಮಾಜ ರಚನೆಗೆ ಅಗತ್ಯವಾದ

---

1. ವಿನ್ಯಸ್ಯೈದಂ ಯುಗೀನೇಷು ಪ್ರತಿಮಾಸು ಜಿನಾನಿವ
   ಭಕ್ತ್ಯಾ ಪೂರ್ವಮುನೀನರ್ಚೇತ್ ಕುತಃ ಶ್ರೇಯೋಽತಿ ಚರ್ಚಿನಾಂ ॥
   –ಸಾಗಾರ ಧರ್ಮಾಮೃತ-64.
2. ಶೂದ್ರೋಽಪ್ಯುಪಸ್ಕರಾಚಾರವಪುಶುದ್ಧ್ಯಾಸ್ತು ತಾದೃಶಃ
   ಜಾತ್ಯಾ ಹೀನೋಽಪಿ ಕಾಲಾದಿಲಬ್ಧೌಹ್ಯಾತ್ಮಾಸ್ತಿ ಧರ್ಮಭಾಕ್ ॥
   ಸಾಗಾರ ಧರ್ಮಾಮೃತ-22.
3. ಜೈನಧರ್ಮ-ಕೈಲಾಶಚಂದ್ರ ಶಾಸ್ತ್ರಿ,– ಅನು: ಪಂ, ಭುಜಬಲ ಶಾಸ್ತ್ರಿ;
   ಪಂ. ದೇವಕುಮಾರ ಜೈನ, 1969, ಪು. 338-9;

ಆದರ್ಶಗಳು ಇಲ್ಲಿ ಅಡಕವಾಗಿವೆ. ವಿಶಾಲತೆ-ಉದಾರತೆ-ಮತ್ತು ಸಂಘಟನಾಶಕ್ತಿಗಳಿಂದಸಮಾಜದ ಆರೋಗ್ಯಕರ ಬೆಳವಣಿಗೆಗೆ ಜೈನ ಚತುರ್ವಿಧ ಸಂಘ ನೆರವಾಗುತ್ತದೆ.

ಭಾರತೀಯ ಪರಂಪರೆಯಲ್ಲಿ ಜೀವನದ ಅಂತಿಮ ಧ್ಯೇಯ ಕುರಿತಂತೆ ಚರ್ಚಿಸುವಾಗ ನಾಲ್ಕು ಪುರುಷಾರ್ಥಗಳನ್ನು ಒಪ್ಪಿಕೊಳ್ಳಲಾಗಿದೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ- ಇವೇ ಆ ನಾಲ್ಕು ಪುರುಷಾರ್ಥಗಳಾಗಿವೆ. ಇವುಗಳಲ್ಲಿ ಧರ್ಮ–ಅರ್ಥಗಳನ್ನು ಒಂದು ಗುಂಪಾಗಿ, ಕಾಮ–ಮೋಕ್ಷಗಳನ್ನು ಇನ್ನೊಂದು ಗುಂಪಾಗಿ ವಿಭಾಗಿಸಬಹುದಾಗಿದೆ. ಇವುಗಳಲ್ಲಿ ಕಾಮ–ಮೋಕ್ಷಗಳೇ ನಿಜವಾದ ಪುರುಷಾರ್ಥಗಳು: ಕಾಮವು ಸಂಸಾರಿಕ ಸುಖವಾದರೆ, ಮೋಕ್ಷವು ಸಂಸಾರದ ಸುಖ–ದುಃಖಗಳಿಂದ ಮುಕ್ತವಾಗುವುದಾಗಿದೆ. ಇವೆರಡೂ ಪರಸ್ಪರ ವಿರುದ್ಧವಾದವು. ಇವನ್ನು ಸಾಧಿಸಲು ಸಾಧನಗಳೆಂದರೆ ಧರ್ಮ ಮತ್ತು ಅರ್ಥಗಳು. ಅರ್ಥದಿಂದ ಲೌಕಿಕ ಸುಖ ಸಂತೋಷದ ಅನುಕೂಲತೆಗಳು ದೊರೆಯುವುದೇನೋ ನಿಜ. ಆದರೆ ಆ ಅರ್ಥವು ಧರ್ಮಮೂಲವಾಗಿ ಪಡೆದುದಾಗಿರಬೇಕು. ಅರ್ಥ, ಕಾಮಗಳು ಸಹ ಧರ್ಮವನ್ನಾಶ್ರಯಿಸಿಯೇ ಇರಬೇಕಾದುದು ಅಗತ್ಯ. ಧರ್ಮವೆಂಬುದು ವೈಯಕ್ತಿಕ ಆಚಾರ–ವಿಚಾರ,–ದೈಹಿಕ-ಬೌದ್ಧಿಕ, ಆಧ್ಯಾತ್ಮಿಕ ಸಾಧನೆಗಳ ಮೂಲಕ ಮುಕ್ತನಾಗುವುದನ್ನು ಅನುಸರಿಸಬೇಕು. ವ್ಯಕ್ತಿಯ ಬದುಕು ಸಾರವತ್ತಾಗಿರಬೇಕು. ತನ್ನ ಕರ್ತವ್ಯ ಪಾಲನೆಯೊಂದಿಗೆ ನೈತಿಕ ನಿಯಮಗಳಿಗೆ ತನ್ನನ್ನು ತೊಡಗಿಸಿಕೊಂಡು ಬದುಕುವುದು, ತನ್ನೊಂದಿಗೆ ಸಮುದಾಯದ ಹಿತ ರಕ್ಷಣೆಗೆ ನೆರವಾಗುವದು. ಹೀಗೆ ಪುರುಷಾರ್ಥಗಳು ಪುರುಷಪ್ರಯತ್ನ ಹಾಗೂ ವ್ಯಕ್ತಿ ಅನುಸರಿಸಬೇಕಾದ ಮಾರ್ಗವನ್ನು ತೋರುತ್ತವೆ.

ಸಮಾಜ–ರಾಷ್ಟ್ರವೆಂಬುದು ವ್ಯಕ್ತಿಗಳ ಸಮೂಹ. ವ್ಯಕ್ತಿಯ ಆರೋಗ್ಯಕರ ಆಚಾರ–ವಿಚಾರ ವ್ಯಕ್ತಿಯಂತೆಯೇ ಸುತ್ತಲಿನ ಸಮಾಜಕ್ಕೆ ನೆರವಾಗುತ್ತದೆ. ಕರ್ಮದ ಆಸ್ರವ ಹಾಗೂ ಅದು ಜೀವಿಯೊಂದಿಗೆ ಬಂಧವಾಗುವ ವಿಷಯವು ಕರ್ಮಸಿದ್ಧಾಂತವನ್ನು ವಿಷದವಾಗಿ ನಿರೂಪಿಸುತ್ತದೆ. ಕರ್ಮವನ್ನು ದೈವ, ಪರಕೀಯಶಕ್ತಿ, ವ್ಯಕ್ತಿಯನ್ನು ನಿಷ್ಕ್ರಿಯಗೊಳಿಸುವ ಸಿದ್ಧಾಂತವೆಂದು ತಪ್ಪಾಗಿ ಭಾವಿಸಲಾಗುತ್ತಿದೆ. ಇಲ್ಲಿ ಕರ್ಮವೆಂಬುದು ವ್ಯಕ್ತಿ ತಾನು ಮಾಡಿದುದನ್ನು ಅನುಭವಿಸಬೇಕೆಂದೂ, ತನ್ನ ಯಶಾಪಯಶಗಳಿಗೆ ತಾನೇ ಕಾರಣ, ಬಾಹ್ಯಶಕ್ತಿ–ಪ್ರಭಾವಗಳಿಂದ ತನ್ನ ಉದ್ಧಾರವನ್ನು ತಾನೇ ಸಾಧಿಸಬೇಕು ಎಂಬುದಾಗಿ ಪುರುಷ ಪ್ರಯತ್ನದ ಮಹತ್ವವನ್ನು ಸಾರುವುದಾಗಿದೆ. ಕರ್ಮಸಿದ್ಧಾಂತವು ಜೈನ ಮನೋವಿಜ್ಞಾನಶಾಸ್ತ್ರವಾಗಿದೆ. ಭಾವಾವೇಶಗಳ ಪರಿಣಾಮದಿಂದಾಗಿ ಕರ್ಮಬಂಧವನ್ನು ತಡೆಯುವ, ಅದನ್ನು ನಾಶಪಡಿಸುವ ಸಂವರ, ನಿರ್ಜರ ತತ್ವಗಳನ್ನು ನಿರೂಪಿಸುತ್ತದೆ. ಬಾಹ್ಯಾಚರಣೆಗಳಿಗಿಂತ ಅಂತರಂಗ ಶುದ್ಧಿ ಹಾಗೂ ಅದರ ಯಥಾರ್ಥ

ಆಚರಣೆ ಮುಖ್ಯ. ತನ್ನ ಪರಿಶುದ್ಧ ನಿಷ್ಕಲಂಕ ಚಾರಿತ್ರ್ಯದಿಂದ ಇವೆರಡನ್ನು ಸಾಧಿಸಲು ಸಾಧ್ಯ. ಆದುದರಿಂದ ಜೀವಿಯ ಆಚಾರವನ್ನು-ಚಾರಿತ್ರ್ಯವನ್ನು ನಿರ್ದೇಶಿಸುವ ನೈತಿಕ ತತ್ವಗಳು ತುಂಬ ಮಹತ್ವದ್ದಾಗಿವೆ.

ಕರ್ನಾಟಕವು ಜೈನಧರ್ಮದ ಪ್ರವರ್ಧಮಾನ ಸ್ಥಿತಿಗೆ ನೆಲೆವೀಡಾದುದನ್ನು ಒಂದು ಶಾಸನವು ಸಾರುತ್ತದೆ.

ಜಿನಧರ್ಮಾವಾಸಮಾದತ್ತಮಳ ವಿನಯದಾಗರಮಾದತ್ತು ಪದ್ಮಾ
ಸನನಿವಾಸಮಾದತ್ತತಿಶಯ ಯಶೋಧಾಮಮಾದತ್ತು ವಿದ್ಯಾ
ಧನ ಜನ್ಮಸ್ಥಾನಮಾದತ್ತು ಸಮತರಳ ಗಂಭೀರ ಸದ್ಗೇಹಮಾದ
ತ್ತೆನಿಸಲ್ಕೆಂತುಳ್ಳ ನಾನಾ ಮಹಿಮೆಯೊಳಗಂ ಚಾರುಕರ್ನಾಟದೇಶಂ [1]

ಜೈನಧರ್ಮದ ಉದಾರ ಧೋರಣೆಗಳು ವಾಸ್ತವದಲ್ಲಿ ಕಾರ್ಯರೂಪಕ್ಕೆ ಬಂದುದರ ಸುಂದರ ಚಿತ್ರಣ ಇದಾಗಿದೆ. ವಿನಯ, ಯಶ, ವಿದ್ಯೆ ಮೊದಲಾದ ಮಾನವನ ಉನ್ನತಿಗೆ ಸಾಧನವಾಗಬಲ್ಲ ಗುಣಗಳ ಅಧಿಕತೆ ನಾಡಿನ ಜನತೆಯ ಅಭ್ಯುದಯಕ್ಕೆ ಕಾರಣವಾಗಿ ಪರಿಣಮಿಸಿವೆ. ಉದಾತ್ತತೆ, ಸಕಲ ಪ್ರಾಣಿಮಾತ್ರಗಳ ಹಿತವೇ ಮುಖ್ಯ, ಸಾರವತ್ತಾದುದೆಂಬುದನ್ನು ಸಾರುವುದು ಜೈನಧರ್ಮ. ಅದು ಸಾಕಾರಗೊಳ್ಳುವುದು ಪೊಳ್ಳು ಆದರ್ಶಗಳಿಂದಲ್ಲ.

ಭವಾವರಾಶಿ ನಿಮಗ್ನರಂ ದಯೆ, ದಮಂ, ದಾನಂ, ತಪಂ, ಶೀಲಮೆಂ
ಬಿವೆ ಮೊಯಾಗಿರೆ ಸಂದ ಧರ್ಮಮೆ ವಲಂ ಪೊತ್ತೆತ್ತುಗುಂ ಮುಕ್ತಿಪ
ರ್ಯವಸಾನಂಬರಮಾನುಷಂಗಿಕ ಫಲಂ ಭೂಪೇಂದ್ರ ದೇವೇಂದ ೦
ಜ್ಯವಿಲಾಸಂ ಪೇರತಲ್ತು ನಂಬು ಖಚರಕ್ಷ್ಮಾಪಾಲ ಚೂಡಾಮಣಿ [2]

ಸಂಸಾರಚಕ್ರದಲ್ಲಿ ಸಿಲುಕಿದ ಸರ್ವ ಜೀವಿಗಳನ್ನು ದಯೆ, ಅನುಕಂಪೆ, ದಾನ, ತಪಸ್ಸು ಮತ್ತು ಶೀಲ (ಚಾರಿತ್ರ್ಯ)ಗಳ ಮೂಲಕ ಮೋಕ್ಷಕ್ಕೆತ್ತುವ ಅವುಗಳ ಉದ್ಧಾರವನ್ನು ಬಯಸುವ, ಆ ಉಪಕ್ರಮದಲ್ಲಿ ಕಾರ್ಯಪ್ರವೃತ್ತವಾಗುವ ಕ್ರಮವೇ ನಿಜವಾದ ಧರ್ಮದ ರೀತಿ. ಅದು ಮಾನವನ ಮುಕ್ತಿಗೆ ಕಾರಣವಾಗುತ್ತದೆ. ತನ್ನ ಸುತ್ತಲಿನ ಜೀವರಾಶಿಗಳ ಬಗ್ಗೆ ಪ್ರತಿಯೊಬ್ಬ ತಾಳಬೇಕಾದ ಮನೋಭಾವವನ್ನು ಪಂಪಕವಿ ಆದಿಪುರಾಣದಲ್ಲಿ ನಿರ್ದೇಶಿಸಿದ್ದಾನೆ. ಈ ಆದರ್ಶ ನೈತಿಕ ಮೌಲ್ಯಗಳ ಕುರಿತ ಮಾತುಗಳು ಕೇವಲ ಪ್ರವಚನ, ಉಪದೇಶ, ಬರವಣಿಗೆಯ ಮಟ್ಟದಲ್ಲಿ ಮಾತ್ರ ಉಳಿಯದೆ ವ್ಯಕ್ತಿಯ ವ್ಯಕ್ತಿತ್ವದ ಅಭೇದ್ಯ ಅಂಗವಾಗಿ ಬಾಲ್ಯದಿಂದಲೇ ರಕ್ತಗತವಾಗಿ ಬೆಳೆದು ಬರುತ್ತಿದ್ದುದನ್ನು ಶಾಸನವೊಂದು ತಿಳಿಸುತ್ತದೆ:

1. ಶಾಸನಪದ್ಯಮಂಜರಿ–240
2. ಆದಿಪುರಾಣ; 2-7.

ಕೆರೆಯಂ ಕಟ್ಟಿಸು ಬಾವಿಯಂ ಸವಸು, ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್ ನಂಬಿದ
ರ್ಗೆರೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ
ಯೆರೆದಳ್ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಮಾತ್ಯನಾ [1]

ಸ್ವಾರ್ಥವನ್ನು ತೊರೆದು ಸಮಾಜಕ್ಕಾಗಿ, ಮೌಲ್ಯಕ್ಕಾಗಿ ಬದುಕಬೇಕೆಂಬ ಆದರ್ಶವನ್ನು ಅಂದಿನ ತಾಯಂದಿರು ಮಕ್ಕಳಿಗೆ ಬಾಲ್ಯದಿಂದಲೇ ಬೋಧಿಸಿ ಅನೇಕ ಆದರ್ಶ ಕಾರ್ಯಗಳಿಗೆ ಪ್ರೇರಣೆಯುಂಟಾಗುವುದಕ್ಕೆ ಕಾರಣವಾಗಿದ್ದಾರೆ.

ಈ ಆದರ್ಶಗಳು, ನೈತಿಕ ಮೌಲ್ಯಗಳು ಕೇವಲ ಧಾರ್ಮಿಕ ರಂಗಕ್ಕೆ ಮಾತ್ರ ಸೀಮಿತವಾಗಿರದೆ ರಾಜಕೀಯ ಸಾಮಾಜಿಕ ಆಡಳಿತ ರಂಗವನ್ನೂ ವ್ಯಾಪಿಸಿ ಜನಜೀವನದಲ್ಲಿ ನೆಮ್ಮದಿಗೆ ಕಾರಣವಾದುದಕ್ಕೆ ಆದರ್ಶ ತಾಯಿಂದಿರಂತೆಯೆ ಅಧಿಕಾರದ ತುತ್ತತುದಿಯಲ್ಲಿದ್ದು ಆಡಳಿತದ ಹೊಣೆ-ಹೊತ್ತ ರಾಜರಿಗೆ ಅವರ ಗುರುಗಳು ನೀಡುತ್ತಿದ್ದ ಮಾರ್ಗದರ್ಶನ ಅಷ್ಟೇ ಪ್ರಾಮಾಣಿಕವೂ ಸುಸಂಗತವೂ ಆಗಿದ್ದಿತು.

ಗಂಗವಂಶ ಸ್ಥಾಪಕರಲ್ಲಿ ಮೊದಲಿಗರಾದ ಮಾಧವ-ದಡಿಗರಿಗೆ ಗುರುಗಳಾದ ಜೈನಮುನಿ ಸಿಂಹನಂದಿ ನೀಡಿದ ಉಪದೇಶವೂ ಆದರ್ಶ ರಾಜನ ಕಾರ್ಯ ವಿಧಾನಕ್ಕೆ, ರಾಷ್ಟ್ರೀಯ ಭಾವೈಕ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ:

ನುಡಿದುದನಾರೊಳಂ ನುಡಿದು ತಪ್ಪಿದೊಡಂ ಜಿನಶಾಸನಕ್ಕೊಡಂಬ-
ಡದೊಮನ್ಯನಾರಿಗೆರೆದಟ್ಟಿದೊಡಂ, ಮಧು ಮಾಂಸ ಸೇವೆಗೆಯ್ದೊಡಂ
ಕುಲೀನರಪ್ಪನವರ ಕೊಳ್ಕೊಡೆಯಾದೊಡಮರ್ಥಿಗರ್ಥಮಂ
ಕುಡದೊಡೆ ಮಹಾಮಾಂಗಣದೊಳೋಡಿದೊಡಂ ಕಿಡುಗುಂ ಕುಲವ್ರತಂ

ವಚನ ಪರಿಪಾಲನೆ, ಬ್ರಹ್ಮಚರ್ಯ, ಮಧು ಮದ್ಯಮಾಂಸಗಳ ನಿಷೇಧ, ರಣಾಂಗಣದಲ್ಲಿ ಶೌರ್ಯಪ್ರದರ್ಶನ ಇವೆಲ್ಲವುಗಳ ಪಾಲನೆ ಸರ್ವಶ್ರೇಷ್ಠವಾದುದು. ಇದಕ್ಕೆ ತಪ್ಪಿದರೆ ಕುಲವ್ರತಕ್ಕೆ ಅಪಾಯವೆಂದು ಜಿನಶಾಸನವೆಂದು ಪಾಲಿಸಿಕೊಂಡು ಮುನ್ನಡೆದು ವೈಯಕ್ತಿಕ, ಧಾರ್ಮಿಕ ಸಾಮಾಜಿಕ ಮತ್ತು ರಾಷ್ಟ್ರದ ಕುರಿತು ಪ್ರತಿಯೊಬ್ಬನಿಗಿರಬೇಕಾದ ಜವಾಬುದಾರಿಯ ಕುರಿತು ಇಲ್ಲಿ ಎಚ್ಚರಿಕೆ ನೀಡಲಾಗಿದೆ.

ತನ್ನ ಜೀವ ತನಗೆ ಪ್ರಿಯವಾಗಿರುವಂತೆ ಇತರ ಪ್ರಾಣಿಗಳಿಗೆ ಅವುಗಳ ಪ್ರಾಣ ಪ್ರಿಯವಾದುದು, ಬದುಕುವ ಆಶೆ ತನ್ನಂತೆಯೇ ಇತರರಿಗೂ ಇರುವುದೆಂಬುದನ್ನು ಅರಿಯಬೇಕು. "ಪರಸ್ಪರೋಪಗ್ರಹೊ ಜೀವಾನಮ್"-ಜೀವಿಗಳು

1. ಎಸ್- ಅಯ್. ಆಯ್. ಸಂ. IV ನಂ. 267.

1. ಉಮಾಸ್ವಾಮಿ: ತತ್ವಾರ್ಥಸೂತ್ರ; V. 21.

ಪರಸ್ಪರ ಉಪಕಾರ ಮಾಡಬೇಕು. ಅದೇ ಜೀವಿಯ ಲಕ್ಷಣವೆಂದು ಸೂಚಿಸುವಲ್ಲಿ ಭಾವೈಕ್ಯದ ಪರಮೋಚ್ಚ ಧೋರಣೆಯನ್ನು ಕಾಣುತ್ತೇವೆ.

ರಾಗ-ದ್ವೇಷಾದಿಗಳ ಮೂಲಕ ವ್ಯಕ್ತಿ ಇನ್ನೊಬ್ಬರಿಗೆ ತಿಳದೋ ತಿಳಿಯದೆಯೋ ಮನನೋಯುವಂತೆ ನಡೆದುಕೊಳ್ಳಬಹುದು. ಇಂಥ ಸೂಕ್ಷ್ಮ ಮಾನಸಿಕ ಚಟುವಟಿಕೆಗಳನ್ನು ಗ್ರಹಿಸಿದ ಜೈನಾಚಾರ್ಯರು ರಾಗ-ದ್ವೇಷಾದಿಗಳು ಬೆಳೆದು ಭಾವೈಕ್ಯಕ್ಕೆ ಅಡ್ಡಿಯಾಗದಂತೆ ಸಮಾಜದ ತನ್ಮೂಲಕ ವ್ಯಕ್ತಿಯ ಆತ್ಮಹಾನಿಯಾಗದಂತೆ ಅದಕ್ಕೆ ತಾರಕೋಪಾಯವನ್ನು ಸೂಚಿಸಿದ್ದಾರೆ—

ಖಮ್ಮಾಮಿ ಸವ್ವ ಜೀವಾಣಂ
ಸವ್ವೇ ಜೀವಾ ಖಮಂತು ಮೇ
ಮೆತ್ತಿನೋ ಸವ್ವ ಭೂತೇಸು
ವೈರಂ ಮಜ್ಝುಂಣಕೇಣಚ [1]

'ನಾನು ಸಮಸ್ತ ಜೀವಿಗಳನ್ನು ಕ್ಷಮಿಸಿದ್ದೇನೆ. ಎಲ್ಲ ಜೀವಿಗಳೂ ನನ್ನನ್ನು ಕ್ಷಮಿಸಲಿ, ಎಲ್ಲರಲ್ಲಿಯೂ ನನಗೆ ಮಿತ್ರತ್ವವಿದೆ. ನನಗೆ ಯಾರೊಡನೆಯೂ ವೈರವಿಲ್ಲ' ಎಂದು ಪ್ರತಿಯೊಬ್ಬ ಶ್ರಾವಕನು ತನ್ನಿಂದಾದ ದೋಷವನ್ನು ಪರಿಹರಿಸಿಕೊಂಡು ಸರ್ವಜೀವಿ ಮಾತ್ರಗಳಲ್ಲಿಯೂ ಕ್ಷಮೆಯನ್ನು ಯಾಚಿಸಿ ಪರಸ್ಪರ ಭಾವಶುದ್ಧಿಗೆ ದಾರಿಮಾಡಿಕೊಡುವ ಈ 'ಕ್ಷಮಾವಲಿ' ರೋಷ, ವೈರ, ಕ್ರೋಧಗಳನ್ನು ಅಳಿಸಿ ಭಾವೈಕ್ಯ ಸಾಧಿಸುವಲ್ಲಿ ಪರಿಣಾಮಕಾರಿಯಾಗಿದೆ. ಇದರೊಂದಿಗೆ ನಿತ್ಯ 'ಸಾಮಾಯಿಕ'ದಲ್ಲಿ ಪ್ರತಿಯೊಬ್ಬನು ಪ್ರಾರ್ಥಿಸುವ—

ಸತ್ವೇಷು ಮೈತ್ರಿಂ, ಗುಣಿಷು ಪ್ರಮೋದಂ, ಕ್ಲಿಷ್ಟೇಷು ಜೀವೇಷು
ಕೃಪಾಪರತ್ವಮ್
ಮಾಧ್ಯಸ್ಥ ಭಾವಂ ವಿಪರೀತ ವೃತ್ತೌ ಸದಾಮಮಾತ್ಮಾ ವಿದಧಾತು
ದೇವ [2]

ನನ್ನ ಆತ್ಮನು ಯಾವಾಗಲೂ ಪ್ರಾಣಿ ಮಾತ್ರಗಳಲ್ಲಿ ಮಿತ್ರಭಾವವನ್ನೂ, ಗುಣವಂತರಲ್ಲಿ ಪ್ರೀತಿಯನ್ನೂ, ದುಃಖಿ-ಕಷ್ಟಗಳಲ್ಲಿದ್ದ ಜೀವಿಗಳಲ್ಲಿ ದಯಾಭಾವವನ್ನೂ, ವಿಪರೀತ ವ್ಯಾಪಾರವುಳ್ಳ (ದುಷ್ಟ) ಜೀವಿಗಳಲ್ಲಿ ಮಾಧ್ಯಸ್ಥ [ತಟಸ್ಥ] ಭಾವವನ್ನು ಹೊಂದಲಿ ಎಂದು ನೆನೆಯುವದು. ನಿತ್ಯವೂ ಸಕಲ ಪ್ರಾಣಿಗಳಲ್ಲಿ ಮಿತ್ರಭಾವ, ದಯಾಭಾವಿಟ್ಟು, ವಿರೋಧ, ತಿರಸ್ಕಾರವನ್ನು ತೊರೆದು ಮಾಧ್ಯಸ್ಥ ಭಾವವನ್ನು ನೆನೆಯುವ ಉಪಕ್ರಮ ಸ್ವಾಭಾವಿಕವಾಗಿಯೇ ಕಷಾಯಗಳಿಂದ

1. ವಟ್ಟಕೇರಸ್ವಾಮಿ: ಮೂಲಾಚಾರ
2. ಅಮಿತಗತಿ ಆಚಾರ್ಯ: ಸಾಮಾಯಿಕಪಾಠ. 1

ಬಿಡುಗಡೆಹೊಂದಲು ನೆರವಾಗುವುದರಲ್ಲಿ ಸಂದೇಹವಿಲ್ಲ. ಭಾವೈಕ್ಯಕ್ಕೆ ಈಭಾವನೆ ಗಿಂತ ಬೇರೆ ಉಪಯುಕ್ತ ಮಾರ್ಗವು ಸಾಧ್ಯವೆ ಎಂಬುದನ್ನು ಯೋಚಿಸಬೇಕಾಗು ತ್ತದೆ. ನಿತ್ಯವೂ ಈ ಭಾವನೆಯನ್ನು ಪುನಃ ಪುನಃ ಸ್ಮರಣೆಗೆ ಸ್ವಯಂ ತಂದು ಕೊಳ್ಳುವ ಮೂಲಕ ಅದು ದೃಢಗೊಳ್ಳುವುದರಲ್ಲಿ, ಕಾರ್ಯರೂಪಕ್ಕೆ ಬರುವುದರಲ್ಲಿ ಪರಿಣಾಮಕಾರಿಯಾಗುತ್ತದೆಂಬುದನ್ನು ಮತ್ತೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಇದೇ ಸಂದರ್ಭದಲ್ಲಿ ಸ್ವಾಮಿ ಸಮಂತ ಭದ್ರಾಚಾರ್ಯರು 'ಯುಕ್ತ್ಯನು ಶಾಸನ' ದಲ್ಲಿ ಪ್ರಸ್ತಾಪಿಸಿದ ಒಂದು ಮಹತ್ವದ ಅಂಶವನ್ನು ಗಮನಿಸುವುದಗತ್ಯ:

ಸರ್ವಾಂತವತ್ತದ್ಗುಣ ಮುಖ್ಯ ಕಲ್ಪಮ್
ಸರ್ವಾಂತಶೂನ್ಯಂ ಚ ಮಿಥೋऽನಪೇಕ್ಷಂ
ಸರ್ವಾಪದಾಮಂತಕರಂ ನಿರಂತಂ
ಸರ್ವೋದಯ ತೀರ್ಥಮಿದಂ ತವೈವ [1]

ವರ್ಧಮಾನ ಮಹಾವೀರ ತೀರ್ಥಂಕರರ ಪ್ರವಚನರೂಪಿ ಶಾಸನದ ಮೂಲಕ ಸಂಸಾರ ಸಾಗರದಿಂದ ಪಾರಾಗಲು ಸಾಧ್ಯವಿದ್ದು ಅದು ಎಲ್ಲ ದುಃಖಗಳಿಂದ ಪಾರು ಮಾಡುವುದಾಗಿದೆ ಹಾಗೂ ಇದು ಎಲ್ಲ ಪ್ರಾಣಿಗಳ ಅಭ್ಯುದಯಕ್ಕೆ ಕಾರಣವಾಗಿದೆ. ಆತ್ಮ ವಿಕಾಸದ ಸರ್ವೋದಯತೀರ್ಥವಾಗಿದೆ ಎಂದು ಹೇಳುವಲ್ಲಿ ವೀತರಾಗಿ ಭಾವ ವುಳ್ಳ ಸರ್ವಜೀವಿ ಮಾತ್ರಗಳ ಅಭ್ಯುದಯವನ್ನು ಬಯಸುವ ಮಾರ್ಗವನ್ನು 'ಸರ್ವೋದಯ' ವೆಂದು ಸಮಂತ ಭದ್ರಾಚಾರ್ಯರು ಕರೆದುದು ಔಚಿತ್ಯಪೂರ್ಣ ವಾಗಿದೆ. 'ಸರ್ವೋದಯ'ಪದವು ಇಂದು ವ್ಯಾಪಕವಾದ ರೀತಿಯಲ್ಲಿ ಬಳಕೆಯಾಗು ತ್ತಿದ್ದರೂ ಕ್ರಿ.ಶ. ೨-೪ ನೆಯ ಶತಮಾನದಲ್ಲಿದ್ದ ಸಮಂತಭದ್ರಾಚಾರ್ಯರು ಇಷ್ಟು ಪ್ರಾಚೀನ ಕಾಲದಲ್ಲಿ ಈ ದಿಶೆಯಲ್ಲಿ ಆಲೋಚಿಸಿ ಈ ಪದವನ್ನು ಬಳಸಿದುದು ಅವರ ದೂರದರ್ಶಿತ್ವಕ್ಕೆ ಸಾಕ್ಷಿ.

ಜೈನಧರ್ಮವು ಸಮಾನತೆಯ ಮನೋಭಾವಕ್ಕೆ ವಿಶೇಷ ಮಹತ್ವವನ್ನು ನೀಡುತ್ತದೆ. ಗೃಹಸ್ಥನಾಗಿರಲಿ, ಮುನಿಯಾಗಿರಲಿ, 'ಕರೇಮಿ ಭಂತೇ ಸಮ ಇಯಂ,' (ದೇವನೆ ಸಮತಾ ಭಾವವನ್ನು ಆಚರಿಸುತ್ತೇನೆ) ಎಂದು ಪ್ರತಿಜ್ಞೆ ಮಾಡುತ್ತಾನೆ. 'ಸಾವಜ್ಜಂ ಜೋಗಂ ಪಚ್ಚಕ್ಖಾಮಿ' (ನನ್ನ ಶಕ್ತಿಗೆ ತಕ್ಕಂತೆ ಹಾನಿಕಾರಕವಾದ ಚಟುವಟಿಕೆಗಳಿಂದ ದೂರವಾಗಿರುತ್ತೇನೆ) ಎಂದೂ ಪ್ರತಿಜ್ಞೆ ಮಾಡುವ ಮೂಲಕ ಸಮತೆಯನ್ನು ಕಾಪಾಡಿಕೊಂಡು ಬರುತ್ತಾನೆ.

ಅದರಂತೆ ಗೃಹಸ್ಥನು ನಿತ್ಯ ಪೂಜೆಯ ಅಂತ್ಯದಲ್ಲಿ ಪಠಿಸುವ ಶಾಂತಿಮಂತ್ರವು ಅವನು ತನ್ನ ಸುತ್ತಲಿನ ಜೀವರಾಶಿ, ರಾಷ್ಟ್ರಗಳ ಸೌಖ್ಯಕ್ಕಾಗಿ ಪ್ರಾರ್ಥಿಸುವ

1. ಸಮಂತಭದ್ರಾಚಾರ್ಯ: ಯುಕ್ತ್ಯನುಶಾಸನ; 61.

ಶಾಂತಿಪಾಠ'ವು ರಾಷ್ಟ್ರೀಯ ಐಕ್ಯ. ಹಿತ, ಪ್ರಗತಿ-ಸುಖ ಸಮೃದ್ಧಿಯನ್ನು ಬಯಸುವುದಾಗಿದೆ :

ಸಂಪೂಜಕಾನಾಂ ಪ್ರತಿಪಾಲಕಾನಾಂ ಯತೀಂದ್ರ ಸಾಮಾನ್ಯತಪೋಧನನಾಂ
ದೇಶಸ್ಯಪುರಸ್ಯರಾಜ್ಞಃ ಕರೋತು ಶಾಂತಿಂ ಭಗವಾನ್ ಜಿನೇಂದ್ರಃ ||
ಕ್ಷೇಮಂ ಸರ್ವಪ್ರಜಾನಾಂ ಪ್ರಭವತು ಬಲವಾನ್ ಧಾರ್ಮಿಕೋಭೂಮಿಪಾಲಃ
ಕಾಲೇಕಾಲೇ ಚ ಸಮ್ಯಗ್ವರ್ಷತು ಮಘವಾ ವ್ಯಾಧಯೋಯಾಂತುನಾಶಂ
ದುರ್ಭಿಕ್ಷಂ ಚೋರಮಾರೀಕ್ಷಣಮಪಿ ಜಗತಾಂ ಮಾಸ್ಮಭೂಜ್ಜೀವಲೋಕೇ
ಜೈನೇಂದ್ರಂ ಧರ್ಮಚಕ್ರಂಪ್ರಭವತು ಸತತಂಸರ್ವಸೌಖ್ಯಪ್ರದಾಯಿ [1]

ಭಗವಾನ್, ನಾವು ಈವರೆಗೆ ಮಾಡಿದ ದೀರ್ಘಪೂಜೆ ಸ್ವಾರ್ಥಕ್ಕಾಗಿ ಅಲ್ಲ. ಲೋಕದ ಎಲ್ಲ ಪ್ರಜೆಗಳಿಗೂ ಶಾಂತಿಯಾಗಬೇಕು; ಕುಶಲವಾಗಬೇಕು ಎಂಬ ಉದಾತ್ತ ಭಾವನೆಯು ನಮ್ಮಲ್ಲಿದೆ. ಶಾಸಕನು ಧಾರ್ಮಿಕನಾಗಿರಲಿ, ಅವನ ಶಾಸನದಿಂದಲೇ ದುಷ್ಟನಿಗ್ರಹ, ಶಿಷ್ಟ ಪರಿಪಾಲನೆ ಎಂಬ ಧರ್ಮದ ರಕ್ಷಣೆಯಾಗುತ್ತದೆ. ಮತ್ತು ಲೋಕದಲ್ಲಿ ಶಾಂತಿ-ನೆಲೆಸುವುದಕ್ಕಾಗಿ ಯೋಗ್ಯಕಾಲದಲ್ಲಿ ಮಳೆ ಬಂದು ಸಸ್ಯ ಬೆಳೆಯಲಿ, ಸಮಸ್ತ ರೋಗ ರುಜಿನಗಳು ದೂರವಾಗಲಿ. ದುರ್ಭಿಕ್ಷೆ ಕಳ್ಳತನ, ಮಾರಿ ಮೊದಲಾದ ಭಯಗಳು ಈ ಲೋಕದಿಂದ ದೂರವಿರಲಿ, ಒಂದು ಕ್ಷಣವೂ ಉಳಿಯದಿರಲಿ.

ಜಗತ್ತಿನ ಪ್ರಾಣಿಮಾತ್ರಗಳಿಗೆಲ್ಲ ಸುಖದಾಯಕವಾಗುವಂತೆ ಮಳೆ-ಬೆಳೆಯಾಗಿ ರೋಗ-ರುಜಿನಗಳ ನಾಶವಾಗಿ, ರಾಜ-ಮಂತ್ರಿಗಳಲ್ಲಿ ಗುಣಾಧಿಕ್ಯವುಂಟಾಗಿ ಎಲ್ಲೆಡೆ ಶಾಂತಿ-ಭಾವೈಕ್ಯ ನೆಲಸಲೆಂಬ ಈ ಶಾಂತಿಪಾಠದ ನಿತ್ಯ ಸ್ಮರಣೆ ಕೋರಿಕೆ ಆದರ್ಶ ಪ್ರಾಯವಾಗಿದೆ; ಭಾವೈಕ್ಯಕ್ಕೆ ಪೋಷಕವಾಗಿದೆ.

ಜೈನಧರ್ಮವು ವಿಚಾರ ಹಾಗೂ ಜೀವನ ಕುರಿತ ವ್ಯವಸ್ಥೆಗಳ ವಿಷಯದಲ್ಲಿ ಸಂಕುಚಿತ ದೃಷ್ಟಿಕೋನಕ್ಕೆ ಒಳಗಾಗಿಲ್ಲ. ಅದರ ಧೋರಣೆ ರಾಷ್ಟ್ರೀಯ ದೃಷ್ಟಿಯಿಂದ ಯಾವಾಗಲೂ ಉದಾರ, ಉದಾತ್ತವಾಗಿದೆ. ಯಾವುದೇ ಒಂದು ಪ್ರದೇಶವನ್ನು ಅದು ತನ್ನ ವಿಶೇಷ ಮನ್ನಣೆಯ ಸ್ಥಾನವೆಂದು ಕಂಡಿಲ್ಲ. ತೀರ್ಥಂಕರರೆಲ್ಲ ಉತ್ತರ ಭಾರತದಲ್ಲಿ ಜನ್ಮವೆತ್ತಿ, ತಪಸ್ಸುಮಾಡಿ ನಿರ್ವಾಣ ಹೊಂದಿದುದರಿಂದ ಆ ಪ್ರದೇಶವು ಸ್ವಾಭಾವಿಕವಾಗಿಯೇ ಜೈನರ ಶ್ರದ್ಧಾ-ಭಕ್ತಿಯ ಸ್ಥಾನವಾಗಿ ಪರಿಣಮಿಸಿದೆ. ಆದರೆ ದಕ್ಷಿಣ ಭಾರತದ ಬಗ್ಗೆ ಅನಾಸ್ಥೆ, ಅನಾದರವಾಗಿ ಅದು ಪರಿಣಮಿಸಿಲ್ಲ ತೀರ್ಥಂಕರರ ಉಪದೇಶದ ಸಾರವಾದ ಸಿದ್ಧಾಂತದ ಬಗ್ಗೆ ಗಾಢವಾದ ವ್ಯಾಸಂಗದ ಮೂಲಕ, ಪಾಂಡಿತ್ಯಪೂರ್ಣ ಟೀಕೆ ಟಿಪ್ಪಣಿಗಳ ಮೂಲಕ ಅದನ್ನು

1. ಸ್ತೋತ್ರಸಂಗ್ರಹ: ಸಂ. ಡಿ. ಪುಟ್ಟಸ್ವಾಮಿ, 1958, ಪು. 145.

ಶ್ರೀಮಂತಗೊಳಿಸಿದವರು ದಕ್ಷಿಣ ಭಾರತದ ಆಚಾರ್ಯರು. ಜೈನಧರ್ಮಾಂತರ ಗತವಾದ ಈ ಭಾವೈಕ್ಯ ರಾಷ್ಟ್ರದ ವಿವಿಧ ರಂಗದಲ್ಲಿಯೂ ಅಷ್ಟೇ ಪ್ರಭಾವಿಯಾಗಿ ಕಾಣಿಸಿಕೊಂಡುದೊಂದು ವಿಶೇಷ.

ದಕ್ಷಿಣ ಭಾರತದ ತಮಿಳುನಾಡು, ಕರ್ನಾಟಕಗಳಲ್ಲಿ ಲಭ್ಯವಾಗುವ ಶಿಲ್ಪ ಪ್ರಾಚೀನ ಅವಶೇಷಗಳು ಈ ನಾಡಿನ ಜೀವನಾಡಿಯೊಂದಿಗೆ ಜೈನಧರ್ಮ ಬೆಳೆದು ಬಂದುದಕ್ಕೆ ನಿದರ್ಶನವಾಗಿವೆ. ಶ್ರವಣಬೆಳಗೊಳದ ಗೊಮ್ಮಟ ವಿಗ್ರಹ, ಮೂಡ ಬಿದರೆಯ ಸಾವಿರಕಂಬದ ಬಸದಿ-ಜೈನಧರ್ಮದ ವೈಭವದ ಕಾಲವನ್ನು ಸೂಚಿಸು ವಂತೆ ಈ ನಾಡಿನ ಜನತೆಯ ಹೃದಯ ಮಂದಿರವನ್ನು ಅದು ಪ್ರವೇಶಿಸಿ, ಅವರೆಲ್ಲರ ಶ್ರದ್ಧಾಭಕ್ತಿಯ ಗೌರವಸ್ಥಾನವಾಗಿ ಪರಿಣಮಿಸಿದುದನ್ನು ಎತ್ತಿ ತೋರುತ್ತದೆ. ನಾಡಿನ ರಾಜಮಹಾರಾಜರು, ಮಂತ್ರಿಮಾನ್ಯರು, ಅಂತಃಪುರದ ಸ್ತ್ರೀರತ್ನ ಇವರೆಲ್ಲರ ಉದಾರ ದಾನದತ್ತಿಗಳು ಸಾಂಸ್ಕೃತಿಕ ಮಹತ್ವವನ್ನು ಸಾರುತ್ತವೆ.

ಜೈನರು ಲೋಕಭಾಷೆಗೆ ಮನ್ನಣೆ ನೀಡಿದವರು. ಜನರಾಡುವ ಭಾಷೆಯ ಲ್ಲಿಯೇ ಧರ್ಮಬೋಧೆ, ಸಾಹಿತ್ಯರಚನೆ ಮಾಡುವ ಮೂಲಕ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ, ಪರಸ್ಪರ ತಿಳಿವಳಿಕೆಗೆ ನೆರವಾದವರು. ಕನ್ನಡ-ತಮಿಳು ಮೊದಲಾದ ಭಾಷೆಗಳ ಆರಂಭಕಾಲದ ಸಾಹಿತ್ಯ ಶ್ರೇಷ್ಠ ಮಟ್ಟದ ಜೈನಕವಿಗಳಿಂದಲೇ ನಿರ್ಮಾಣ ವಾದುದು ಅವರ ಭಾಷಾಧೋರಣೆ ತನ್ಮೂಲಕ ಭಾವೈಕ್ಯಕ್ಕೆ ನಿದರ್ಶನವಾಗಿದೆ. ಭಾಷೆಯ ಮೂಲಕವಾಗಿ ಬಿರುಕುಂಟಾಗಬಹುದಾದ ಪರಿಸ್ಥಿತಿಯನ್ನು ಮೀರಿ ಭಾವೈಕ್ಯವನ್ನು ಈ ಮೂಲಕವೂ ಸಾಧಿಸುವ, ಸಾಧಿಸಿರುವ ಈ ಪ್ರಯತ್ನ ಪ್ರಶಂಸ ನೀಯವಾಗಿದೆ.

ಈ ಸಾಹಿತ್ಯ ನಿರ್ಮಾಣದ ಉದ್ದೇಶವು ಕೇವಲ ಧರ್ಮಪ್ರಚಾರ ಮಾತ್ರ ವಾಗಿರದೆ ಜನತೆಯಲ್ಲಿ ನೀತಿಯುತ ಚಾರಿತ್ರನಿರ್ಮಾಣ ಮಾಡುವುದೇ ಮುಖ್ಯ ಗುರಿಯಾಗಿದ್ದಿತು ಎಂಬುದನ್ನು ಗಮನಿಸುವುದಗತ್ಯ.

ಪಾಪಮಿದು ಪುಣ್ಯಮಿದು ಹಿತರೂಪಮಿದಹಿತ ಪ್ರಕಾರಮಿದು
ಸುಖಮಿದು ದುಃ
ಖೋಪಾತ್ತಮಿದೆಂದರಿಪುಗುಮಾ ಪರಮಃಕವಿ ಪ್ರಧಾನರಾ
ಕಾವ್ಯಂಗಳ್ [1]

ಅಂದಿನ ಮೌಲ್ಯಗಳಾದ ಪುಣ್ಯ-ಪಾಪಗಳ ಚೌಕಟ್ಟಿನಲ್ಲಿಯೇ ಸಾಮೂಹಿಕ ಹಿತ-ಅಹಿತಗಳನ್ನು ಮನನಂಬುಗುವಂತೆ ತಿಳಿಹೇಳುವ ಉದಾತ್ತಕಾರ್ಯವನ್ನು ಈ ಕವಿ ಶ್ರೇಷ್ಠರು ಕೈಕೊಂಡುದನ್ನು ಕಾಣುತ್ತೇವೆ. ಈ ಆದರ್ಶ ಅವರ ವ್ಯಕ್ತಿತ್ವಕ್ಕೆ

೧. ಕವಿರಾಜಮಾರ್ಗ ೧-೧೮

ಹಿಡಿದ ಕನ್ನಡಿಯಾಗಿದ್ದಿತು. ಆದುದರಿಂದಲೇ ಕನ್ನಡದ ಶ್ರೇಷ್ಠಕವಿ ಪಂಪ 'ಮನುಷ್ಯ ಜಾತಿತಾನೊಂದೆವಲಂ' ಎಂದು ಜಾತಿ–ಮತ–ಪಂಥಗಳ ಅಡ್ಡಗೋಡೆಗಳಿಂದ ವಿಭಜಿಸಲ್ಪಡಬಹುದಾಗಿದ್ದ ಮನುಷ್ಯರಿಗೆ ಮನುಷ್ಯ ಜಾತಿ ತಾನೊಂದೇ ಎಂದು ಘೋಷಿಸಿದುದು ಕೇವಲ ಆವೇಶದ ಆಡಂಬರದ ಮಾತಾಗಿರದು. ವೈದಿಕ ಜೈನ ಪರಂಪರೆಯ ಒಳ್ಳೆಯ ಸಂಸ್ಕಾರವನ್ನು ಮೈಗೂಡಿಸಿಕೊಂಡು, ಮಡಿವಂತಿಕೆ, ಸಂಕುಚಿತತೆಯನ್ನು ತೊರೆದು, ಮೌಲ್ಯಗಳಿಗಾಗಿ ಬದುಕಿದ ಪಂಪನಂಥ ಪ್ರತಿಭಾವಂತ ಕವಿ ಈ ಉದಾತ್ತ ಧೋರಣೆಯನ್ನು ಪ್ರತಿಪಾದಿಸಬಲ್ಲವನಾಗಿದ್ದಾನೆ.

ಆ ಪೂರ್ವದಲ್ಲಿಯೇ ಕನ್ನಡಭಾಷೆ, ಕನ್ನಡನಾಡು ಅಮೋಘವರ್ಷ ನೃಪತುಂಗನಿಂದಾಗಿ ಪಡೆದ ಸ್ವರೂಪವನ್ನು 'ಕವಿರಾಜಮಾರ್ಗ'ದಿಂದ ತಿಳಿಯುತ್ತೇವೆ. 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾ ವಲಯವಿಶೇಷಂ' ಇದು ಕನ್ನಡನಾಡಿನ ಭೌಗೋಲಿಕ ಗಡಿಗಳನ್ನು ಮಾತ್ರ ಗುರುತಿಸುವ ಸೂಚನೆಯಲ್ಲ, ಅದಕ್ಕೂ ವ್ಯಾಪಕವಾದ ಕನ್ನಡದ ಭಾವೈಕ್ಯವನ್ನು ಸೂಚಿಸುವ ಮಹತ್ವದ ಅಂಶವಾಗಿರುವುದನ್ನು ಪ್ರೊ. ಎಂ. ವಿ. ಸೀತಾರಾಮಯ್ಯನವರು ಗುರುತಿಸಿದ್ದಾರೆ. ಈ ಮಹೋಲಕ 'ತನ್ನ ಕಾಲದ ಭಾಷೋಪಲಕ್ಷಿತ ಭೌಗೋಳಿಕ ಎಲ್ಲೆ ಕಟ್ಟನ್ನು ಗಟ್ಟಿಯಾಗಿ ಗುರುತಿಸಿ ಕನ್ನಡದ ಭಾವೈಕ್ಯಕ್ಕೆ ಬುನಾದಿ ಹಾಕಿದನು.'

ಪ್ರಾಂತೀಯತೆಯ ಸಂಕುಚಿತ ಭಾವನೆ ಇಲ್ಲವೆ ದೇಶಬಾಹ್ಯದ ಅನುಚಿತ ಅನುರಾಗಗಳಂಥ ದೋಷಗಳಿಂದ ನಿಷ್ಕಲಂಕವಾಗಿದ್ದ ಜೈನರ ದೇಶಭಕ್ತಿಯು ಯಾವಾಗಲೂ ವಿಶುದ್ಧವೂ ಅಚಲವೂ ಸ್ಥಿರವೂ ಎಂದು ಹೇಳಲಾಗುತ್ತದೆ. ಅದರಂತೆ ಧರ್ಮಪ್ರಚಾರಕ್ಕಾಗಿ, ಆತ್ಮರಕ್ಷಣೆಗಾಗಿ ಜೈನರು ದೇಶದ ಹೊರಗೆ ಹೋಗಿಲ್ಲ. ಇತರ ಜನತೆಯ ಧಾರ್ಮಿಕ ನಂಬುಗೆಗಳನ್ನು ಜೈನಧರ್ಮವು ಉಪೇಕ್ಷಿಸಿಲ್ಲ. ಅವುಗಳನ್ನು ತಮ್ಮ ಪರಂಪರೆಯ ಚೌಕಟ್ಟಿನಲ್ಲಿ ಸೇರಿಸಿಕೊಂಡಿದ್ದಾರೆ. ರಾಮ–ಲಕ್ಷ್ಮಣ, ಕೃಷ್ಣ–ಬಲದೇವರಂಥ ಸರ್ವ ಜನಾದರಣೀಯ ವ್ಯಕ್ತಿಗಳನ್ನು ಜೈನ ಧರ್ಮವು ತೀರ್ಥಂಕರರೊಂದಿಗೆ ತ್ರಿಷಷ್ಠಿಶಲಾಕಾ ಪುರುಷರಲ್ಲಿ ಸಮಾವೇಶಗೊಳಿಸಿ , ತಮ್ಮ ಪರಂಪರೆಯ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬರುವುದರೊಂದಿಗೆ ಅನ್ಯಧರ್ಮೀಯರ ಭಾವನೆಗಳನ್ನು ಮನ್ನಿಸಿದ್ದಾರೆ. ಅದರಂತೆ ನಾಯಕ ಪ್ರತಿನಾಯಕರನ್ನು ಕಾಣುವ ಜೈನಕವಿಗಳ ಉದಾರ ಮನೋಭಾವ ಉಲ್ಲೇಖನೀಯವಾಗಿದೆ. ರಾಮಾಯಣ–ಮಹಾಭಾರತಗಳ ಪ್ರತಿನಾಯಕರಾದ ರಾವಣ

೧. ಎಂ. ವಿ. ಸೀತಾರಾಮಯ್ಯ: 'ಭಾವೈಕ್ಯಸಾಧನೆ'; ಸಾಧನೆ ೧೦-೪ ಪು ೧೨-೩
೨. ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ–ಪು.೩-೪.

ದುರ್ಯೋಧನರು ಕೇವಲ ದುಷ್ಟರಾಗಿರದೇ ಅವರಲ್ಲೂ ಒಳ್ಳೆಯ ಗುಣಗಳು ನೆಲೆಸಿದ್ದವು. ಮಾನಸಿಕ ದೌರ್ಬಲ್ಯ ಮೂಲವಾಗಿ ಅವರು ನೈತಿಕ ಅಧಃಪತನ ಹೊಂದಿದರೂ ಅವರನ್ನು ಕಾಣುವಲ್ಲಿ ಸಹಾನುಭೂತಿ ಅಗತ್ಯ. ಹೀಗೆ ಇತರರ ವಿಷಯದಲ್ಲಿ ಸಹಾನುಭೂತಿ ಪರ ದೃಷ್ಟಿ ಬೆಳೆಯುವುದು ಅನೈಕವನ್ನು, ಏಕಾಂಗ ದೃಷ್ಟಿಯನ್ನು ನಿವಾರಿಸುವಲ್ಲಿನ ಪ್ರಥಮ ಹೆಜ್ಜೆಯಾಗಿದ್ದು ಭಾವೈಕ್ಯದ ಬೆಳವಣಿಗೆಗೆ ಸಹಕಾರಿಯಾಗಿದೆ.

ಸಾಹಿತ್ಯ, ಭಾಷೆಯಂತೆಯೇ ಶಿಲ್ಪಕಲೆಗೆ ಜೈನಧರ್ಮದಿಂದ ಸಂದ ಕಾಣಿಕೆ ವಿಶೇಷವಾಗಿದೆ. ಸೌಂದರ್ಯೋಪಾಸನೆಗೆ ಕುರುಹಾಗಿದೆ. ಕಲೆಯ ಧ್ಯೇಯ ಜೀವನದ ಉತ್ಕರ್ಷವಾಗಿದ. ಜೈನ ತೀರ್ಥಂಕರ ವಿಗ್ರಹಗಳ ವೀತರಾಗ ಭಾವ ಅನುಪಮವಾದುದಾಗಿದೆ, ಶಾಂತಿ, ಅಹಿಂಸೆ, ಅಪರಿಗ್ರಹಗಳ ಸಂದೇಶವನ್ನು ಬೀರುವ ವಿಗ್ರಹಗಳು ಕ್ಷೋಭೆಗೊಳಗಾದ ಮಾನವನಿಗೆ ಶಾಂತಿಯನ್ನು ನೀಡುವಂತಿವೆ. ಜಿನಮಂದಿರಗಳ ಮುಂದಿನ ಮಾನಸ್ತಂಭಗಳು ಶಿಲ್ಪಕಲೆಯ ವಿಶಿಷ್ಟ ಮಾದರಿಗಳಾಗಿರುವಂತೆಯೇ ಮಾನವನ ಮಾನ, ಗರ್ವವನ್ನು ದೂರಮಾಡಿ ವಿನಯ, ನಮ್ರತೆಯ ಭಾವಕ್ಕೆ ಪ್ರೇರಣೆ ನೀಡುವಂಥವುಗಳಾಗಿವೆ. ಜೈನ ಗುಹೆಗಳು ಜನವಸತಿಯಿಂದ ದೂರದಲ್ಲಿದ್ದು ಮುನಿಗಳ ಏಕಾಂತವಾಸಕ್ಕೆ ನೆಲೆಯಾಗಿದ್ದು ಧ್ಯಾನ, ವಂದನೆಗಳಿಗಾಗಿ ಜೈನ ಮೂರ್ತಿಗಳ ಸ್ಥಾಪನೆಯಿಂದ ಪವಿತ್ರಸ್ಥಾನಗಳಾಗಿ ಪರಿಣಮಿಸಿವೆ. ಸಮವಸರಣದ ಸುಂದರ ಸೃಷ್ಟಿ, ಅಲ್ಲಿನ ವೀತರಾಗಿಯಾದ ತೀರ್ಥಂಕರರ 'ದಿವ್ಯಧ್ವನಿ' ಹಾಗೂ ಸಕಲ ಪ್ರಾಣಿಮಾತ್ರಗಳ ಹಿತ ಅದರ ಗುರಿಯಾದುದು ಅದರ ವ್ಯಾಪಕ ಉದ್ದೇಶವನ್ನು ಸೂಚಿಸುತ್ತದೆ. ಒಟ್ಟನಲ್ಲಿ ಶಿಲ್ಪ, ಸಾಹಿತ್ಯ. ಕಲೆಗಳ ಮೂಲಕ ಮಾನವನ ಮಾನಸಿಕ ಸ್ವಾಸ್ಥ್ಯ, ಸಂಕುಚಿತ ದೃಷ್ಟಿಯಿಂದ ಬಿಡುಗಡೆ, ಉದಾರ-ಉದಾತ್ತ ಸೌಂದರ್ಯೋಪಾಸನೆಯನ್ನು ಬಿಂಬಿಸುವ ಜೈನಧರ್ಮದ ಧೋರಣೆ ಅನುಕರಣೀಯವಾಗಿದೆ.

ಜೈನಧರ್ಮವು ಇಹದೊಂದಿಗೆ ಪರವನ್ನೂ ಕುರಿತು ಚಿಂತನೆ ಕೈಕೊಂಡಿದೆ. ಕೇವಲ ಆದರ್ಶದ ನೆಲೆಯಲ್ಲಿ ನಿಂತು ಅವಾಸ್ತವವನ್ನು ಬೆಂಬಲಿಸುವುದಕ್ಕಿಂತ ವಾಸ್ತವ ಸತ್ಯಗಳನ್ನು ಗಣನೆಗೆ ತೆಗೆದುಕೊಂಡು ಅವುಗಳ ಪರಿಶೀಲನೆಯಿಂದ ಅನುಸರಿಸಬೇಕಾದ ಮಾರ್ಗವನ್ನು ಸೂಚಿಸಿದೆ. ಅಹಿಂಸೆ ಅದರ ಜೀವಾಳವಾಗಿದೆ. "ಅಹಿಂಸಾ ಪರಮೋಧರ್ಮಃ" ಎನ್ನುವಲ್ಲಿ ಅಹಿಂಸೆಯೇ ಧರ್ಮದ ಲಕ್ಷಣವೆಂಬುದನ್ನು ಸಾರಿದೆ. "ದಯಾಮೂಲೊ ಭವೇದ್ಧರ್ಮೊ ದಯಾ ಪ್ರಾಣಾನುಕಂಪನಮ್" ಧರ್ಮವು ದಯಾಮೂಲಕವಾಗಿದೆ. ಹಾಗೂ ಜೀವನ ಮಾರ್ಗದಲ್ಲಿ ಅನುಕಂಪೆಯ ಭಾವವನ್ನು ಇರಿಸಿಕೊಳ್ಳುವುದು ದಯೆಯಾಗಿದೆ ಎಂದು

'ಗದ್ಯ ಚಿಂತಾಮಣಿ'ಯ ಹೇಳಿಕೆಯಾಗಿದೆ. 'ದಯಾ ದೀಧಿತಿ ಧರ್ಮಚಕ್ರವರ್' ಕರುಣೆಯ ಕಿರಣಗಳಿಂದ ಧರ್ಮಚಕ್ರವೆಂದು ಸ್ವಾಮಿಸಮಂತಭದ್ರಾಚಾರ್ಯರು ಧರ್ಮಚಕ್ರ ಪರಿವರ್ತನೆಯ ಸಂದರ್ಭದಲ್ಲಿ ದಯೆ–ಕರುಣೆಗಳ ಬಗ್ಗೆ ವಿವರಿಸಿದ್ದಾರೆ.

ಜೈನಧರ್ಮವು ಕಳೆದ ಮೂರು-ನಾಲ್ಕು ಸಾವಿರ ವರ್ಷಗಳಿಂದ ತನ್ನ ಅಧ್ಯಾತ್ಮಿಕ ಭೂಮಿಕೆ, ನೈತಿಕ ವಿನ್ಯಾಸ, ವ್ಯಾವಹಾರಿಕ ಉಪಯುಕ್ತತೆ ಮತ್ತು ಸಮತೋಲ ದೃಷ್ಟಿ–ಈ ಆಂತರಿಕ ಗುಣಗಳ ಬಲದಿಂದ ಈ ದೇಶದ ಜನಜೀವನದಲ್ಲಿ ನೆಲಸಿನಿಂತಿದೆ.[1] ಅದು ವರ್ಣಜಾತಿರೂಪ ಸಾಮಾಜಿಕ ವಿಭಜನೆಗೆ ಎಂದೂ ಮಹತ್ವಕೊಟ್ಟಿಲ್ಲ. ರಾಷ್ಟ್ರೀಯ ದೃಷ್ಟಿಯಿಂದ ಇದನ್ನು ಗಮನಿಸುವುದಗತ್ಯ. ಕನ್ನಡದ ಜನತೆಯ ಕವಿ ಸರ್ವಜ್ಞ ತನ್ನ ವ್ಯಾಪಕ ಪರಿಶೀಲನೆಯ ಪರಿಣಾಮವಾಗಿ ಜೈನಧರ್ಮದ ಆಚರಣೆಯಲ್ಲಿನ ಸರ್ವಹಿತದೃಷ್ಟಿಯನ್ನು ಕುರಿತು ವ್ಯಕ್ತಪಡಿಸಿದ ಅಭಿಪ್ರಾಯ ಮಹತ್ವಪೂರ್ಣವಾಗಿವೆ;

ಉಪ್ಪು ಸಪ್ಪನೆಯಕ್ಕು | ಕಪ್ಪುರವು ಕರಿದಕ್ಕು
ಸರ್ಪನಿಗೆ ಬಾಲವೆರಡಕ್ಕು | ಶ್ರವಣರು
ತಪ್ಪಾಡಿದಂದು ಸರ್ವಜ್ಞ ॥
ಕೊಲುವ ಧರ್ಮವನೊಯ್ದು | ಒಲೆಯೊಳಗೆ ಇಕ್ಕುವಾ
ಕೊಲಲಾಗದೆಂಬ ಜೈನನಾ | ಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ ॥

ಜೈನಧರ್ಮವು ಜೀವನವನ್ನು ಕುರಿತು ವಿಶಾಲ ಮನೋಭಾವವನ್ನಿರಿಸಿ ಕೊಂಡು ಅದು ಆತ್ಮಹಿತವನ್ನು ಸಾಧಿಸುವಂತೆಯೇ ಸಮಾಜ ಹಿತಕ್ಕೆ ಪೂರಕವಾಗು ವಂತೆ ಚಾರಿತ್ರ್ಯವನ್ನು ರೂಪಿಸಿಕೊಳ್ಳುವುದನ್ನು ಪ್ರತಿಪಾದಿಸುತ್ತದೆ. ವ್ಯಕ್ತಿಯ ಮೂಲಕ ಸಮಾಜದ ಏಳ್ಗೆ ಅದರ ಗುರಿಯಾಗಿದೆ. 'ದಯಾಮೂಲೋಧರ್ಮೋ' ಅದರ ಆಧಾರಸ್ತಂಭವಾಗಿದೆ. ನೈತಿಕ ಪರಿಶುದ್ಧ ಜೀವನದ ಅವಶ್ಯಕತೆಯನ್ನು ಅದು ಎತ್ತಿ ಹಿಡಿಯುತ್ತದೆ ಅಂಧಾನುಕರಣೆಯ ಕ್ರಿಯಾಕಾಂಡವನ್ನು ನಿಷೇಧಿ ಸುವ ಮೂಲಕ ಬೌದ್ಧಿಕಮಟ್ಟವನ್ನು ಎತ್ತರಿಸಿ ಚಾರಿತ್ರ್ಯದ ಮೂಲಕ ತನ್ನ ಗುರಿಯನ್ನು ತಲುಪುವ ಮಾರ್ಗವನ್ನು ತೋರುತ್ತದೆ. ಪುರುಷಪ್ರಯತ್ನ, ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯಗಳಂತೆ ಅಪರಿಗ್ರಹ ವ್ರತದ ಮೂಲಕ ತನ್ನ ಆಶೆ–ಆಕಾಂಕ್ಷೆಗಳಿಗೆ ಕಡಿವಾಣವನ್ನು ಹಾಕಿಕೊಳ್ಳುವ, ಸ್ವಯಂ ನಿಯಂತ್ರಣ ವನ್ನು ಸೂಚಿಸುತ್ತದೆ. "ಇಲ್ಲಿನ ಸಂಯಮವು ನಿಷೇಧಾತ್ಮಕ ನಿಯಂತ್ರಣವಲ್ಲ.

೧. ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ, ಪು ೪೬೮

ವಿಧೇಯಾತ್ಮಕ ಶಕ್ತಿಯಾಗಿದೆ" [1] ಸಂಯಮವು ಬುದ್ಧಿ–ನೀತಿಗಳ ಸಮ್ಮಿಶ್ರದ ಸರ್ವೋತ್ಕೃಷ್ಟ ಉದಾಹರಣೆಯಾಗಿದೆ. ಸಾಮಾಜಿಕ ದೃಷ್ಟಿಯು ನಮ್ಮ ಜೀವನದ ಸ್ವಭಾವವಾಗಬೇಕು. [2] ಈ ಸಂಯಮದ ಮೂಲಕ ನಿರಾಶೆಗಿಂತ ಸಂತೃಪ್ತಿಯ ಮನೋಭಾವ ಜಾಗೃತೆಗೆ ಸಹಾಯವಾಗುತ್ತದೆ.

ಅಪರಿಗ್ರಹವ್ರತವು ಹೆಚ್ಚಿನ ಸಂಪತ್ತನ್ನು ದಾನದ ಮೂಲಕ ವಿನಿಯೋಗಿಸಲು ಪ್ರೇರೇಪಿಸುತ್ತದೆ. ಆಹಾರ, ಅಭಯ, ಔಷಧ ಮತ್ತು ಶಾಸ್ತ್ರದಾನಗಳೆಂಬ ನಾಲ್ಕು ರೀತಿಯಲ್ಲಿ ದಾನಮಾಡುವ ಮೂಲಕ ಜಿನಮಂದಿರ, ವಿದ್ಯಾಮಂದಿರ, ಆರೋಗ್ಯಮಂದಿರ, ಧರ್ಮಶಾಲೆಗಳಂಥ ಸಾರ್ವಜನಿಕ ಉಪಯುಕ್ತ ಸಂಸ್ಥೆಗಳು ಕಾರ್ಯಪ್ರವೃತ್ತವಾಗಲು ಸಹಾಯವಾದಿದೆ. ದೇಶದ ವಿವಿಧ ಪ್ರದೇಶಗಳಲ್ಲಿ ತಲೆ ಎತ್ತಿ ನಿಂತು ಸರ್ವಜನೋಪಯೋಗಿ ಸೇವೆಗಾಗಿ ನಿರ್ಮಾಣವಾದ ಇಂಥ ಅನೇಕ ಸಂಸ್ಥೆಗಳು ದಾನಗುಣದ ಸಾರ್ಥಕತೆಯಾ ಕುರುಹುಗಳಾಗಿರುವಂತೆಯೇ ಪರಸ್ಪರ ತಿಳಿವಳಿಕೆ, ಸಹಕಾರಕ್ಕೆ ನೆರವಾಗಿವೆ.

ಜೈನಧರ್ಮವು ಭಾಷೆ, ವರ್ಣ, ವರ್ಗ ವ್ಯವಸ್ಥೆಗಳ ಅಡೆ–ತಡೆಗಳಿಂದ ಮುಕ್ತವಾಗಿದ್ದು ಭಾವೈಕ್ಯದತ್ತ ದಿಟ್ಟ ಹೆಜ್ಜೆಯನ್ನಿಟ್ಟಿದೆ. ಹುಟ್ಟಿನಿಂದ ವ್ಯಕ್ತಿಯ ಹಿರಿಮೆ ವ್ಯಕ್ತವಾಗದೆ ಗುಣಗಳಿಂದ ಅದು ವ್ಯಕ್ತವಾಗುವುದನ್ನು ಮನ್ನಿಸುತ್ತದೆ. ಸರ್ವೋದಯವೇ ಅದರ ಗುರಿಯಾಗಿರುತ್ತದೆ. ಧರ್ಮ ಧರ್ಮಗಳಲ್ಲಿ ಅದು ಭೇದ-ಭಾವವನ್ನು ಎನಿಸುವದಿಲ್ಲವೆಂಬುದಕ್ಕೆ ಸುಂದರ ಉದಾಹರಣೆಯೊಂದು ಶಾಸನ ಪದ್ಯದಿಂದ ತಿಳಿದು ಬರುತ್ತದೆ.

ಶ್ರೀಮತ್ ನಮೋ ನಿತ್ಯಂ ಕೇಶವಾಯ ಚ
ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ
ಅರ್ಹಶ್ಚೇತಿ ಜೈನಶಾಸನಮಿತಿ ಕರ್ಮೇತಿ ಮೀಮಾಂಸಕಾಃ
ಸೋಽಯಂ ವೋವಿಧಧಾತು ವಾಂಛಿತಫಲಂ ಶ್ರೀ ಕೇಶವಸ್ಸದಾ [3]

ಹೇಮಚಂದ್ರನ ಈ ಪದ್ಯ ವಿವಿಧ ಮತ–ಧರ್ಮಗಳಲ್ಲಿನ ವಿರೋಧ–ಹೋರಾಟಗಳ ಇಂದಿನ ದಿನದಲ್ಲಿ ತುಂಬ ಉಪಯುಕ್ತವಾಗಿದೆ. ವೈಷ್ಣವ ಮತ್ತು ಜೈನರಲ್ಲಿ ಉಂಟಾದ ಭಿನ್ನಾಭಿಪ್ರಾಯ ಕುರಿತು 'ವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ

---

೧. ಮಿರ್ಜಿ ಅಣ್ಣಾರಾಯರು.: ಜೈನಧರ್ಮ ಪು ೭೭೭.
೨. ಅದೇಪು. ೭೭೭.
೩. ಎ. ಕ. ೫. ಪು ೯೭

ಭೇದವಿಲ್ಲ' [1] ವೆಂದು ಬುಕ್ಕರಾಯನು ನೀಡಿದ ನಿರ್ಣಯ ಕರ್ನಾಟಕದ ಧಾರ್ಮಿಕ ಸಹಿಷ್ಣುತೆಗೆ, ಭಾವೈಕ್ಯಕ್ಕೆ ನೀಡಿದ ಉತ್ಕೃಷ್ಟ ಉದಾಹರಣೆಯಾಗಿದೆ.

ಕಸವರಮೆಂಬುದು ನೇರೆಸೈ | ರಿಸಲಾರ್ಪೊಡೆ ಪರವಿಚಾರಮುಂ
ಧರ್ಮಮುಮಂ
ಕಸವೇಂ ಕಸವರಮೇನು | ಬ್ಬಸವಂ ಬಸಮಲ್ಲದಿರ್ದು ಮಾಡುವವೆಲ್ಲಂ [2]

ಐಶ್ವರ್ಯ ಯಾವುದು ? ಬೇರೆಯವರ ವಿಚಾರಗಳನ್ನು ಬೇರೆಯವರ ಧರ್ಮಗಳನ್ನು ಒಳ್ಳೆಯ ರೀತಿಯಿಂದ ಮನ್ನಿಸಬೇಕು. ಇದೇ ನಿಜವಾದ ಐಶ್ವರ್ಯ. ನಾವು ತಿಳಿದಿರುವ ಐಹಿಕವಾದ ಅಥವಾ ದ್ರವ್ಯರೂಪದ ಐಶ್ವರ್ಯವೆನ್ನುವುದು ಕಸ ಹೇಗ್ಹೋ ಹಾಗೆಯೆ ಬೆಲೆಯಿಲ್ಲದ್ದು.

ಪರಸ್ಪರ ತಿಳಿವಳಿಕೆ ಸಾಹಚರ್ಯ ಸಮನ್ವಯ ಸ್ವಾರ್ಥರಹಿತ ಸರ್ವ ಪ್ರಾಣಿ ಮಾತ್ರಗಳ ಹಿತ ಧೋರಣೆಯ ಆಚರಣೆ ಭಾವೈಕ್ಯಕ್ಕೆ ಅಗತ್ಯವಾದುದು. ರಾಷ್ಟ್ರ ಕಲ್ಪನೆಗಿಂತ ಸರ್ವ ಜೀವಿಗಳನ್ನೇ ಅಂದಿನ ಸಂಬರ್ಭದಲ್ಲಿ ಗಮನದಲ್ಲಿರಿಸಿಕೊಂಡುದಾಗಿದೆ. ಇದನ್ನು ಸಾಧಿಸುವಲ್ಲಿ ಜೈನಧರ್ಮದ ನೈತಿಕ ನಿಯಮಗಳು, ಸಿದ್ಧಾಂತದ ನಿಲವು, ಪುರುಷಾರ್ಥಕ್ಕೆ ನೀಡಿದ ಪ್ರಾಶಸ್ತ್ಯ ನೆರವಾಗುತ್ತವೆ. ಅದು ವಾಸ್ತವವನ್ನಾಧರಿಸಿದ ಸಾಮಾಜಿಕ ನಿಷ್ಠೆ, ಸಾಮೂಹಿಕ ಹಿತವನ್ನಾಧರಿಸಿದ ರಾಷ್ಟ್ರೀಯ ತತ್ತ್ವ-ಧೋರಣೆಯನ್ನು ಸ್ವೀಕರಿಸಿದ್ದು, ಸಂಕುಚಿತ ಪ್ರವೃತ್ತಿಗೆ ಎಳ್ಳಷ್ಟು ಅವಕಾಶ ನೀಡದಿರುವ ಮೂಲಕ ತನ್ನ ಕಾಣಿಕೆಯನ್ನು ನೀಡುವಲ್ಲಿ ಯಶಸ್ವಿಯಾಗಿದೆ, ಆಗುತ್ತಲಿದೆ.

೧. ಎ. ಕ. ೨ ನಂ. ೩೪೪
೨. ಕವಿರಾಜಮಾರ್ಗ ೩-೧೭೬

ರಾಷ್ಟ್ರೀಯ ಭಾವೈಕ್ಯ ಮತ್ತು ಬೌದ್ಧಧರ್ಮ

ತಾಳಜೆ ವಸಂತಕುಮಾರ

ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ಬೌದ್ಧಧರ್ಮದ್ದು ಅತಿ ಮುಖ್ಯವಾದ ಪಾತ್ರವಿದೆ. ಭಾರತೀಯ ಸಂಸ್ಕೃತಿಯೆಂದೊಡನೆ ಕೇವಲ ಹಿಂದೂ ಸಂಸ್ಕೃತಿಯಷ್ಟೇ ಅಲ್ಲ; ಅದು ವಿಭಿನ್ನ ಪರಂಪರೆಗಳ ಸಂಯೋಜಿತ ರೂಪದ್ದಾಗಿದೆ. ಈ ವೈವಿಧ್ಯದಲ್ಲೂ ಐಕ್ಯವನ್ನು ಸಾಧಿಸಿದೆ. ಈ ಏಕತಾಭಾವವು ಆರಾಧನಾಂಶದಲ್ಲಿ, ದಾರ್ಶನಿಕ ವಿಚಾರಪ್ರಣಾಲಿಗಳಲ್ಲಿ ಹಾಗೂ ಜನಜೀವನದ ಸರ್ವಾಂಗಗಳಲ್ಲಿ ಅಭಿವ್ಯಕ್ತಗೊಳ್ಳುತ್ತಿದೆ. ಇದನ್ನು ಇನ್ನೂ ಸರಳಗೊಳಿಸಿ ಹೇಳುವುದಾದರೆ, ಹಿಂದೂ ಸಂಸ್ಕೃತಿಯು ಬುದ್ಧನನ್ನು ಕೂಡಾ ತನ್ನ ಆರಾಧನಾಕಕ್ಷೆಯಲ್ಲಿ ಸೇರಿಸಿ, ಆತನನ್ನು ವಿಷ್ಣುವಿನ ಒಂದು ಅವತಾರವಾಗಿಯೇ ಕಲ್ಪಿಸಿಕೊಂಡಿತು. ಅಷ್ಟೇ ಅಲ್ಲದೆ ಬೌದ್ಧಧರ್ಮದ ಅತ್ಯುತ್ತಮ ಅಂಶಗಳಾದ ಅಹಿಂಸೆಯ ಪರಿಕಲ್ಪನೆ, ಯೌಗಿಕ ಮಾರ್ಗ, ತಾತ್ವಿಕ ಚಿಂತನಾಕ್ರಮ, ಶೂನ್ಯಸಿದ್ಧಾಂತ– ಇತ್ಯಾದಿಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಬೆಳೆಯಿತು. ಬೌದ್ಧರಾದರೂ ಹಿಂದೂ ದೇವತೆಗಳಾದ ಶಿವ ಅಥವಾ ವಿಷ್ಣುವನ್ನು ನೇರವಾಗಿ (ಅದೇ ರೂಪದಲ್ಲಿ) ಆರಾಧಿಸದಿದ್ದರೂ, ಅವರ ದೇವತಾವರ್ಗದಲ್ಲಿ ಅಸಂಖ್ಯಾತವಾಗಿ ಬೆಳೆದು ಬಂದ ನಾನಾ ಸ್ವರೂಪಗಳಲ್ಲಿ ಹೆಚ್ಚಿನ ಸ್ಫೂರ್ತಿ ಹಿಂದೂ ಧರ್ಮದಿಂದಲೂ ಬಂದಿದೆ ಹೀಗೆ ಪರಸ್ಪರ ಕೊಳು-ಕೊಡೆಗಳು ನಿರಂತರವಾಗಿ ನಡೆದಿವೆ. ಅದರ ಜೊತೆ ಜೊತೆಗೇ ರಾಷ್ಟ್ರದ ಭಾವೈಕ್ಯಕ್ಕೆ ತಮ್ಮವೇ ಆದ ಅಮೂಲ್ಯ ಕೊಡುಗೆಗಳನ್ನು ಕೊಟ್ಟಿವೆ.

‘ಭಾರತೀಯ ಸಂಸ್ಕೃತಿಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಪ್ರಾಧಾನ್ಯವಿದೆ ವಕ್ತಿಗೂ ಈಶ್ವರ ಮತ್ತು ಜಡ ಪ್ರಪಂಚಗಳಿಗೂ ಇರತಕ್ಕ ಸಂಬಂಧದ ವಿಷಯವಾಗಿ ಭಾರತೀಯ ದರ್ಶನಗಳಲ್ಲಿ ಭಿನ್ನಾಭಿಪ್ರಾಯಗಳು ಕಂಡುಬಂದರೂ, ಪ್ರತಿ ವ್ಯಕ್ತಿಯೂ ತನ್ನ ನೈಜವಾದ ಸ್ವಭಾವಾನುಸಾರ ಯಥಾಯೋಗ್ಯವಾಗಿ ಸ್ವತಂತ್ರನೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟಿರುವುದು[1] ರಿಂದ ಸಮಾಜದ ನಿರುಂಕುಶಾಧಿಕಾರಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ಅವಕಾಶವಿಲ್ಲ ಎಂಬೀ ಮಾತುಗಳು ನಮ್ಮ ಸಂಸ್ಕೃತಿಯ ಒಳನೋಟವನ್ನು ಕಾಣಿಸುತ್ತವೆ. ನಮ್ಮ ದೇಶದ ನಿಡುಗಾಲದ ಇತಿಹಾಸವನ್ನು ಗಮನಿಸಿದರೆ ಯಾವಾಗೆಲ್ಲ ಇಲ್ಲಿ ಸಮಾಜದ ನಿರಂಕುಶ ಅಧಿಕಾರವು ಮೊದಲಾಯಿತೋ ಆವಾಗೆಲ್ಲ ಅದರ ವಿರುದ್ಧ ವೈಯುಕ್ತಿಕ ಸ್ವಾತಂತ್ರ್ಯದ

ಕಹಳೆ ಮೊಳಗಿವುದನ್ನು ಕಾಣುತ್ತೇವೆ. ಬೌದ್ಧಧರ್ಮದ ಉಗಮದಲ್ಲೂ ಈ ಬಗೆಯ ಐತಿಹಾಸಿಕ ಅನಿವಾರ್ಯತೆ ಇದ್ದೇ ಇತ್ತು.

ಬೌದ್ಧಧರ್ಮವು ಒಂದು ಹೊಸಧರ್ಮವಾಗಿ ಉಗಮಗೊಂಡಿತು ಎಂಬುದಕ್ಕೆಲ್ಲ. ಅದು ಇಲ್ಲಿಯ ಸನಾತನ ಧರ್ಮದ ಒಂದು ಹೊಸ ಶಾಖೆಯೇ ಆಗಿ ಮೂಡಿಬಂತು. ಆದುದರಿಂದ ರಾಧಾಕೃಷ್ಣನ್ನರ ಈ ಮಾತುಗಳು–

"ಭಾರತೀಯ ಆಧ್ಯಾತ್ಮಿಕತೆಯು ಸುರಕ್ಷೆ, ನಿರ್ಭೀತಿ, ಅಭಯ ಮೋಕ್ಷ ಮತ್ತು ನಿರ್ವಾಣಗಳನ್ನು ಅನ್ವೇಷಿಸುತ್ತದೆ. ಪ್ರಾಪಂಚಿಕ ವಿಷಯಗಳಿಗೆ ಅತೀತನಾಗುವ ಬಯಕೆ ಮಾನವನಲ್ಲಿ ತೀರಾ ಸಹಜವಾಗಿದೆ. ವಿಷಯ ಲಾಲಸೆಗಳಿಂದ ತನ್ನ ಆತ್ಮವನ್ನು ಮುಕ್ತವಾಗಿಸುವ ಆಸೆ ಅವನಲ್ಲಿ ಅಂತರ್ಗತವಾಗಿರುತ್ತದೆ. ಕತ್ತಲೆಯಿಂದ ಬೆಳಕಿನೆಡೆಗೆ, ಚೈತನ್ಯದೆಡೆಗೆ ಸಾಗಲು ಆತ ಉತ್ಸುಕನಾಗಿರುತ್ತಾನೆ"[2]

—ಮನನೀಯವಾಗುತ್ತವೆ.

ಭಾರತೀಯ ಇತಿಹಾಸದಲ್ಲಿ ಸನಾತನ ವೈದಿಕಧರ್ಮದ ಮೂಲ ಆಶಯಗಳಿಗೆ ವ್ಯತಿರಿಕ್ತವಾದ ಪುರೋಹಿತಶಾಹಿ ಆಚರಣೆಗಳೇ ಪ್ರಬಲವಾದಾಗ ಧರ್ಮವು ಕೇವಲ ಯಾಂತ್ರಿಕವಾದ ಆಚರಣಾವಿಧಿಗಳಿಗೆ ಬಲಿಯಾಗಿ ಹೋದುದನ್ನು ಕಾಣುತ್ತೇವೆ. ಕರ್ಮಸಿದ್ಧಾಂತವೂ ಹಾದಿ ತಪ್ಪಿ ಅಂಧವಿಶ್ವಾಸಗಳ ತವರುಮನೆಯಾದ ಇಂಥ ಒಂದು ಸಂಧಿಕಾಲದಲ್ಲಿ ಬೌದ್ಧಧರ್ಮವು ಉದಯಿಸಿತು. ಭಾರತೀಯ ಸಂಸ್ಕೃತಿಯ ಪ್ರಧಾನ ಶಾಖೆಯಾಗಿ ಬೆಳಗಿತು.

'ಬುದ್ಧನು ವ್ಯಕ್ತಿಯ ಸ್ವಂತ ಅನುಭವಗಳಿಗೆ ವಿಶೇಷ ಪ್ರಾಧಾನ್ಯವನ್ನು ಕೊಟ್ಟನು. ವೇದ ಪ್ರಾಮಾಣ್ಯ ಅಥವಾ ಶಾಸ್ತ್ರಪ್ರಾಮಾಣ್ಯಕ್ಕಿಂತ ಅಂತರಂಗ ಪ್ರಾಮಾಣ್ಯವೇ ದೊಡ್ಡದು ಎಂಬುದು ಅವನ ನಿಲುವಾಗಿತ್ತು. ಹಾಗಾಗಿಯೇ ತನ್ನ ಶಿಷ್ಯರೇ ಆದರೂ ತನ್ನ ಉಪದೇಶಗಳನ್ನು ಪರೀಕ್ಷಿಸಿ, ಸರಿಯೆಂದು ತೋರಿದರೆ ಮಾತ್ರ ಸ್ವೀಕರಿಸಬೇಕು ಎಂದು ಹೇಳಿದನು. ಜಾಗ್ರತ ಹೃದಯದ ಸತತ ಸಾಧನೆಯಿಂದ ಮಾತ್ರ ಚಿರಂತನ ಸತ್ಯ ಗೋಚರಿಸಬಲ್ಲುದು. ಪ್ರತಿಯೊಬ್ಬ ಸಾಧಕನೂ ತನ್ನ ಮಾರ್ಗದಲ್ಲಿ ತಾನೇ ನಡೆದು ಬೆಳಕನ್ನು ಕಂಡುಕೊಳ್ಳಬೇಕು' ಎಂದು ಸ್ವಪ್ರಯತ್ನಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾನೆ"[3] ಎಂಬ ಮಾತುಗಳು ಸತ್ಯವಾದವು.

---

1. ಶ್ರೀಕಂಠಶಾಸ್ತ್ರಿ, ಎಸ್. ಭಾರತೀಯ ಸಂಸ್ಕೃತಿ. ಪು. 6.
2. Radhakrishnan S. 2500 years of Buddhism. Inti. h. IX.
3. ತಿಪ್ಪೇರುದ್ರಸ್ವಾಮಿ. ಎಚ್; ಕ. ಅ. ಸಂ. ಸಾ. ಚ. ಸಂ. 1 ಪು 162.

ಅಂತೆಯೇ ಇಲ್ಲಿಯ ಮಹತ್ವದ ಇನ್ನೊಂದು ಅಂಶವೆಂದರೆ ನೈತಿಕ ಅಧಿಷ್ಠಾನವು ಎಲ್ಲಕ್ಕಿಂತ ಮುಖ್ಯವಾದುದು. ಈ ನೈತಿಕತೆಯ ಉದ್ದೇಶವಾದರೂ ಚಿತ್ತಶಾಂತಿಯನ್ನು ಗಳಿಸುವುದೇ ಆಗಿದೆ. ಮನಸ್ಸಿನಲ್ಲಿರುವ ಸಕಲ ಕಲ್ಮಷಗಳನ್ನು ಹೊರಹಾಕಿ ಭಾವನಿರಸನ ಹೊಂದುವುದೇ 'ನಿರ್ವಾಣ' ಸ್ಥಿತಿ. ತತ್ತ್ವವಿಚಾರಗಳ ಘನಚಿಂತನೆಗೆ ಬುದ್ಧನು ತೊಡಗದೆ, ಸಾಮಾನ್ಯ ಜನರ ಕ್ಷೇಮ ಚಿಂತನೆಯಲ್ಲಿಯೇ ಗಮನವಿರಿಸಿದ್ದು ಸ್ಪಷ್ಟವಿದೆ.

ತನ್ನ ಕಾಲಕ್ಕಾಗಲೇ ವಿಷವೃಕ್ಷವಾಗಿ ಪರಿಣಮಿಸಿದ್ದ ವರ್ಣವ್ಯವಸ್ಥೆಯನ್ನು ನಿವಾರಿಸಲು ಗೌತಮಬುದ್ಧನು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾನೆ. ಸಾಮಾಜಿಕವಾದ ಹಾಗೂ ಧಾರ್ಮಿಕವಾದ ಸಮಾನತೆಯನ್ನು ಆತ ಸಾರಿದ್ದಾನೆ. ಜಾತಿಯನ್ನು ಜನ್ಮದಿಂದ ಪರಿಗಣಿಸುವ ಕ್ರಮವನ್ನು ಆತ ಪ್ರಬಲವಾಗಿ ವಿರೋಧಿಸಿ, ಗುಣಶೀಲ, ಸದಾಚಾರಗಳೇ ಉತ್ತಮಿಕೆಯ ಲಕ್ಷಣ ಎಂದು ಸಾರಿದ್ದಾನೆ. ಅಂತರಿಕ ಶುಚಿತ್ವ ಹಾಗೂ ಆಚಾರ ಶುದ್ಧಿಗಳನ್ನು ಸಾರಿ, ತನ್ನ ಕಾಲದ ಸಾಮಾನ್ಯರಿಗೆ ಸಹ ಅವರ ಬದುಕನ್ನು ಸಹ್ಯವಾಗಿಸಿದ್ದು ಬುದ್ಧನ ಮೇಲ್ಮೆ.

ಬುದ್ಧನ ಕಾಲಾನಂತರ ಬೌದ್ಧಧರ್ಮವೂ ಶಾಖೆ-ಉಪಶಾಖೆಗಳಾಗಿ, ದಾರ್ಶನಿಕ ವರ್ಗಗಳಾಗಿ ಬೆಳೆವಣಿಗೆ ಹೊಂದಿತು. ಅನ್ಯಾನ್ಯ ಕಾರಣಗಳಿಂದಾಗಿ ಅದು ನಮ್ಮ ದೇಶದಲ್ಲಿ ಕೊನೆಕೊನೆಗೆ ಅವನತಿಯನ್ನು ಕಂಡಿತು. ಆದರೂ ಇತರ ಮತಸಂಪ್ರದಾಯಗಳ ಮೇಲೆ ಅದು ತನ್ನ ಗಾಢಪ್ರಭಾವ, ಪರಂಪರೆಯನ್ನು ಬೀರಿದ್ದು ವಿದಿತವಿದೆ.

ಭಾರತೀಯ ಸಮಾಜ- ಸಂಸ್ಕೃತಿಗಳಿಗೆ ಬೌದ್ಧಧರ್ಮದ ಕೊಡುಗೆ ಅಪಾರವಾದುದು. ಪರಂಪರೆಯಿಂದ ಇಲ್ಲಿ ಬೆಳೆದುಬಂದ ಜಾತಿಪದ್ಧತಿಯ ನಿವಾರಣೆಗಾಗಿ ನಡೆದ ಮೊದಲ ಪ್ರಯತ್ನವನ್ನು ಅಲ್ಲಿ ಕಾಣಬಹುದು. ಬೌದ್ಧಧರ್ಮ ಅಳಿಯದೆ ಇರುತ್ತಿದ್ದರೆ ಪ್ರಾಯಶಃ ಮಧ್ಯಕಾಲೀನ ಭಾರತದ ಹಿಂದೂ-ಮುಸ್ಲಿಂ ವಿರಸವೂ ಬೇರೆಯ ರೂಪ ತಗೆದುಕೊಳ್ಳುತ್ತಿತ್ತು ಎನ್ನಬಹುದು. ಆದರೆ ಬೌದ್ಧಧರ್ಮ ಇಲ್ಲಿ ಬೆಳಗಲಿಲ್ಲ. ಅಷ್ಟೇ ಅಲ್ಲ, ಅದರ ಬಗೆಗಿನ ಐತಿಹಾಸಿಕ ದಾಖಲೆಗಳೂ ಖಿಲಗೊಳ್ಳುತ್ತ ಹೋದುವು.

ಭಾರತೀಯ ಸಂಸ್ಕೃತಿಗೆ ಬೌದ್ಧದೇಣಿಗೆಯನ್ನು ವಿವೇಚಿಸುತ್ತ ಅಳ್ತೇಕರರು- ಬೌದ್ಧಸಂಸ್ಕೃತಿಯು ಹಿಂದೂಧರ್ಮ, ತತ್ತ್ವಜ್ಞಾನ, ಸಾಹಿತ್ಯ, ಸಂಸ್ಕೃತಿ ಕಲೆ ಹಾಗೂ ವಾಸ್ತುಶಿಲ್ಪಗಳ ಬೆಳೆವಣಿಗೆಯ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ವಾಸ್ತವವಾಗಿ ಬೌದ್ಧಧರ್ಮವು ತನ್ನ ಬಹುಮುಖ ಪ್ರಭಾವವನ್ನು ಬೀರಿ

ಭಾರತೀಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸದಿರುತ್ತಿದ್ದರೆ ಅದು ಹೇಗಿರ ಬಹುದಿತ್ತೆಂಬುದು ಕಲ್ಪನೆಗೂ ನಿಲುಕುವುದಿಲ್ಲ" 4

—ಎನ್ನುತ್ತಾರೆ.

ಭಾರತೀಯ ಸಮಾಜದ ಈಗಿನ ಸಂಪನ್ನಸ್ಥಿತಿಗೆ ಬೌದ್ಧಧರ್ಮವೂ ಸಾಕಷ್ಟು ಕೊಡುಗೆಯನ್ನಿತ್ತಿದೆ. (ಈ ಮಾತು ಭಾಗಶಃ ಕರ್ನಾಟಕಕ್ಕೂ ಅನ್ವಯವಾಗುತ್ತದೆ.)

ಭಾರತದ ನಿಡುಗಾಲದ ಇತಿಹಾಸದಲ್ಲಿ ಕ್ರಿಸ್ತಪೂರ್ವ ಆರನೆಯ ಶತಮಾನಕ್ಕೆ ವಿಶೇಷವಾದ ಮಹತ್ವವಿದೆ. ಶ್ರಮಣ ಪರಂಪರೆಯ ಎರಡು ಧರ್ಮಗಳ ಉಗಮದ ಪರ್ವಕಾಲವಾಗಿ ಅದು ವಿಶಿಷ್ಟವೆನಿಸುವ ಕಾಲಘಟ್ಟವಾಗಿದೆ. ಬೌದ್ಧಧರ್ಮವು ಗೌತಮಬುದ್ಧನಿಂದ, ಜೈನಧರ್ಮವು ಮಹಾವೀರನಿಂದ ರೂಪುಗೊಂಡುದು ಈ ಶತಮಾನದ ವೈಶಿಷ್ಟ್ಯವಾಗಿದೆ.

ಭಾರತೀಯ ಇತಿಹಾಸ ಕಾಲವೂ ಈ ಶತಮಾನದಿಂದಲೇ ಪ್ರಾರಂಭವಾಗುತ್ತದೆ. ಗೌತಮಬುದ್ಧ ಮತ್ತು ಮಹಾವೀರರು ಐತಿಹಾಸಿಕ ವ್ಯಕ್ತಿಗಳು ಅವರ ಜೀವನ ವಿಚಾರಗಳು ಆ ಬಳಿಕದ ಸಾಹಿತ್ಯದಲ್ಲಿ ಪವಾಡಾಂಶಗಳಿಂದ ಪ್ರಕ್ಷೇಪಿಸಲ್ಪಟ್ಟಿದ್ದರೂ, ಆ ಪ್ರಕ್ಷಿಪ್ತ ಭಾಗಗಳನ್ನು ಹೊರತುಪಡಿಸಿ ಇಂದಿಗೂ ನಾವು ಐತಿಹಾಸಿಕ ಬುದ್ಧ– ಮಹಾವೀರರ ಬಗೆಗಿನ ವಿವರಗಳನ್ನು ಪಡೆಯುವುದು ಸಾಧ್ಯವಾಗುತ್ತದೆ.

ಅಷ್ಟೇ ಅಲ್ಲದೆ, ಕೇವಲ ಮೌಖಿಕ ಸಂಪ್ರದಾಯದಲ್ಲಿದ್ದ ಆ ವರೆಗಣ ಸಾಹಿತ್ಯ ಸಮುದಾಯವೂ ಬರೆಹ ರೂಪಕ್ಕಿಳಿದ ಸಂಕ್ರಮಣಕ್ಕೆ ಬೇಕಾದ ರಂಗಸಿದ್ಧತೆಯೂ ಆ ಶತಮಾನದಲ್ಲೇ ಆಯಿತು ಹೀಗೆ ಮುಂದೆ ಬರೆಹದ ರೂಪಕ್ಕಿಳಿದ ಸಾಹಿತ್ಯ– ಅದು ಧಾರ್ಮಿಕವೇ ಆಗಿದ್ದರೂ ಸಹಾ– ಆ ಹಿಂದಿನ ಇತಿಹಾಸ ರಚನೆಗೂ ಆಕರಗಳಾದುವು.

ಈಚಿನ ಸಂಶೋಧನೆಗಳಿಂದ ಸಿದ್ಧವಾದಂತೆ, ಪ್ರಾಚೀನ ಕಾಲದ ಭಾರತದಲ್ಲಿ ಬ್ರಾಹ್ಮಣಸಂಸ್ಕೃತಿ ಮತ್ತು ಶ್ರಮಣಸಂಸ್ಕೃತಿಗಳೆಂದು ಎರಡು ಸಮಾನಾಂತರ ಪರಂಪರೆಗಳಿದ್ದುವು. ಬ್ರಾಹ್ಮಣಸಂಸ್ಕೃತಿಯನ್ನು ಅನಂತರದ ಪುರಾಣಯುಗದ ವರ್ಣವ್ಯವಸ್ಥೆಯೊಂದಿಗೆ ತಪ್ಪಾಗಿ ಸೇರಿಸಲಾಗುತ್ತಿದೆ. ಅದು ಸರಿಯಲ್ಲ. ವೇದಗಳ ಅಪೌರುಷೇಯತೆಯನ್ನು ಒಪ್ಪಿ, ಅವನ್ನೇ ಧರ್ಮಗ್ರಂಥಗಳಾಗಿ ಸ್ವೀಕರಿಸಿದ

---

4 Altekar A. S; Contribution of Buddhism to Hindu Culture in Mahabodhi vol. 2.

ವರ್ಗ ಬ್ರಾಹ್ಮಣ ಸಂಸ್ಕೃತಿ. ಆ ಕಾಲದ ಬ್ರಾಹ್ಮಣ್ಯವೆಂದರೆ ಜನ್ಮಜಾತವಾಗಿರಲಿಲ್ಲ. ಆಚರಣಾವಿಧಿಯಿಂದ ಯಾರಾದರೂ ಬ್ರಾಹ್ಮಣ್ಯವನ್ನು ಗಳಿಸಲು ಸಾಧ್ಯವಿತ್ತು. ಬ್ರಾಹ್ಮಣ್ಯವು ಸಮಾಜದಲ್ಲಿ ಗೌರವ, ಪ್ರತಿಷ್ಠೆಯ ಸಂಕೇತವಾಗಿತ್ತು. ಬ್ರಹ್ಮಜ್ಞಾನದ ಸೊತ್ತು ತಮ್ಮದು ಎಂದು ಈ ವರ್ಗಭಾವಿಸಿತ್ತು.

ಇನ್ನೊಂದು ಶ್ರಮಣಸಂಸ್ಕೃತಿ, (ಅವರ) ಮೊದಲನೆಯದಕ್ಕಿಂತ ಭಿನ್ನವಾಗಿದ್ದು ವಿರಕ್ತರ ಜೀವನ ಮಾರ್ಗವೆಂದು ಇದನ್ನು ಕರೆಯಬಹುದು. ಇವರು ಸಂಸಾರ ವಿಮುಖರಾಗಿ ಸತ್ಯಾನ್ವೇಷಣೆಯಲ್ಲಿ ತೊಡಗಿದ್ದವರು ಇವರನ್ನು 'ಮುನಿ' 'ಯತಿ' 'ವ್ರಾತ್ಯ' ಇತ್ಯಾದಿಯಾಗಿ ವೈದಿಕ ಸಾಹಿತ್ಯದಲ್ಲಿ ಸಂಬೋಧಿಸಲಾಗಿದೆ. ಬುದ್ಧನ ಉಪದೇಶಗಳಲ್ಲಿ ಅಲ್ಲಲ್ಲಿ ಬ್ರಾಹ್ಮಣರು ಮತ್ತು ಯತಿಗಳು ಕೂಡಿಯೇ ಸಂಬೋಧಿತರಾಗಿರುವುದಕ್ಕೆ ಇದೇ ಹಿನ್ನೆಲೆಯೆಂದು ಕಾಣಿಸುತ್ತದೆ. ಬುದ್ಧನ ಸಮಕಾಲೀನರಾಗಿದ್ದ ಶ್ರಮಣಸಂಸ್ಕೃತಿಯ ಆರು ಮಂದಿ ಆಚಾರ್ಯರ ಹೆಸರುಗಳು ಸಿಗುತ್ತವೆ. ದೀರ್ಘನಿಕಾಯದ 'ಸಾಮಞ್ಞಫಲಸುತ್ತ' ದಲ್ಲಿ ಈ ಆರೂ ಮಂದಿಯ ಉಪದೇಶಗಳ ಸಾರವನ್ನೂ ಕೊಡಲಾಗಿದೆ. 5

ಪಾಲಿ ಸಾಹಿತ್ಯದಲ್ಲಿ ಉದ್ದಕ್ಕೂ ಬುದ್ಧನ ಉಪದೇಶಗಳಿಗೂ ಈ ಆರು ಮಂದಿಯ ಉಪದೇಶಗಳಿಗೂ ತುಂಬ ಅಂತರವನ್ನು ಕಾಣಿಸಲಾಗಿದೆ, "ಬೌದ್ಧ ಸಂಘ" ದ ಮೇಲ್ಮೆಯನ್ನು ಹೇಳಿದೆ ಬುದ್ಧನಂತೆಯೇ ಈ ಆರು ಮಂದಿಯೂ ನಿರ್ವಿವಾದವಾಗಿ ಆ ಕಾಲದಲ್ಲಿ ಗಂಗಾಬಯಲು ಪ್ರದೇಶದಲ್ಲಿ ಪ್ರಭಾವಿಯಾಗಿದ್ದ ಸಾಂಪ್ರದಾಯಿಕ ಬ್ರಾಹ್ಮಣಧರ್ಮದ ಬಗೆಗೆ ಅತೃಪ್ತರಿದ್ದರು.

ಕ್ರಿ.ಪೂ. ಆರನೆಯ ಶತಮಾನದ ಉತ್ತರಭಾರತದಲ್ಲಿ ಅನೇಕ ಬುಡಕಟ್ಟುಗಳು ಸ್ವತಂತ್ರವಾಗಿ ಅಲ್ಲಲ್ಲಿ ಕಾರ್ಯನಿರ್ವಹಿಸುತ್ತಿದ್ದುವು. ಗೌತಮಬುದ್ಧನು ಹುಟ್ಟಿದ್ದು

---

5. ಅವರ ಹೆಸರು ಮತ್ತು ಸಿದ್ಧಾಂತಗಳ ಅನುಕ್ರಮಣಿ ಈ ಕೆಳಗಿನಂತೆ ಬರುತ್ತದೆ:

'ಪುರಾಣಕಸ್ಸಪ'ನದು ಅಕರ್ಮಸಿದ್ಧಾಂತ. ಗೋಸಾಲನದು 'ಸಂಸಾರ ಶುದ್ಧಿ. ಸಿದ್ಧಾಂತ. ಅಜಿತಕೇಶ ಕಂಬಲಿಯದು ಉಚ್ಛೇದವಾದ. 'ಪಕುಧಕಚ್ಚಾಯನನ'ದು 'ಅಜ್ಞೇಯ' ಸಿದ್ಧಾಂತ. 'ನಿಗ್ಗಂಥನಾಥಪುತ್ರ'ನದು 'ಚಾತುರ್ಯಾಮಸಂವರ' ಸಿದ್ಧಾಂತ. ಕೊನೆಯದಾಗಿ 'ಸಂಜಯ ಬೇಲಟ್ಠಿಪುತ್ರ'ನದು 'ವಿಕ್ಷೇಪವಾದ' ಸಿದ್ಧಾಂತ. ಇವರಲ್ಲಿ 'ನಿಗ್ಗಂಥನಾಥ-ಪುತ್ತ'ನೆಂದರೆ ಬುದ್ಧನ ಹಿರಿಯ ಸಮಕಾಲೀನನಾಗಿದ್ದ ಜೈನ ಮಹಾವೀರ ನಿರ್ಗ್ರಂಥನಾಥಪುತ್ರ' ಎಂಬುದು ನಿರ್ಧಾರವಾಗಿದೆ. ಉಳಿದವರಲ್ಲಿ ಗೋಸಾಲನೇ 'ಆಜೀವಿಕ' ಶಾಖೆಯ ಆಚಾರ್ಯ. ಈ ಆಜೀವಿಕರಿಗೆ ಅಶೋಕನು ಸಹಾಯ ಮಾಡಿದ ಬಗೆಗೆ ಇತಿಹಾಸ ಹೇಳುತ್ತದೆ. 'ಅಜಿತಕೇಶ ಕಂಬಲಿ'ಯ ಸಿದ್ಧಾಂತ ಲೋಕಾಯತ ಎಂಬುದಕ್ಕೆ ಮೇಲೆ ಸೂಚಿಸಿದ ಕೃತಿಯಲ್ಲೇ ಆಧಾರವಿದೆ. ಉಳಿದ ನಾಲ್ವರ ಬಗೆಗೆ ಹೆಚ್ಚು ವಿವರಗಳು ಲಭ್ಯವಿಲ್ಲ

ಶಾಕ್ಯಕುಲದಲ್ಲಿ ಶಾಕ್ಯವಂಶದ ಮತ್ತು ಪ್ರದೇಶದ ಬಗೆಗೆ ಸಹಜವಾಗಿಯೇ ಬೌದ್ಧ ಕೃತಿಗಳಲ್ಲಿ ಹೆಚ್ಚು ವಿವರಗಳು ಸಿಗುತ್ತವೆ. ಈ ಶ್ಯಾಕುಲವಲ್ಲದೆ ಭಗ್ಗರು, ಬುಲಿಗಳು, ಕಾಲಾಮರು, ಕೊಲಿಯರು, ಮಲ್ಲರು, ಮೋರಿಯರು, ಲಿಚ್ಛವಿಗಳು-ಇವೆಲ್ಲರವೂ ಆ ಕಾಲದ ಸ್ವತಂತ್ರ ಬುಡಕಟ್ಟು ಮನೆತನಗಳು.

ಏಕಾಧಿಕಾರದ ರಾಜಕೀಯ ಬೆಳೆವಣಿಗೆ ಇನ್ನೂ ಆದೇ ತಾನೇ ಮೊದಲಾಗಿತ್ತು. ಕೋಸಲದ ಪ್ರಸೇನಜಿತ, ಮಗಧದ ಅಜಾತಶತ್ರು–ಇವರಿಬ್ಬರೂ ಬುದ್ಧನ ಸಮಕಾಲೀನ ರಾಜರುಗಳು. ಆದರೆ ಸಾಮ್ರಾಜ್ಯ ವಿಸ್ತರಣೆಯು ಇನ್ನೂ ಆರಂಭವಾಗಿರಲಿಲ್ಲ. ಅಜಾತಶತ್ರುವು ವೈಶಾಲಿಯನ್ನು ಕಬಳಿಸಲು ಸನ್ನದ್ಧನಾದ ವಿಚಾರ ಬೌದ್ಧಮೂಲಗಳಲ್ಲಿ ವರ್ಣಿತವಾಗಿದೆ. ಆಗ ಗೌತಮ ಬುದ್ಧನೇ ವೈಶಾಲಿಯವರ ಒಗ್ಗಟ್ಟಿನ ಬಗೆಗೆ ಹೇಳಿ, ಅವರು ಒಗ್ಗಟ್ಟಿನಿಂದಿದ್ದರೆ ಅವರನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ ಇತ್ಯಾದಿ ಹೇಳಿದ್ದಾನೆ. ಎಂದರೆ ದೊಡ್ಡರಾಜ್ಯಗಳು ಚಿಕ್ಕರಾಜ್ಯಗಳನ್ನು ಆಕ್ರಮಿಸಲು ಇನ್ನೂ ಪ್ರಾರಂಭವಷ್ಟೇ ಆಗಿತ್ತು. ಆ ಬಳಿಕದ ಕಾಲಖಂಡದಲ್ಲಿ (ಎಂದರೆ ಬುದ್ಧನ ಜೀವಿತಾವಧಿಯ ಅನಂತರ) ಉತ್ತರಾಪಥವೆಲ್ಲ ಮಗಧ–ಪಾಂಚಾಲ-ಕೋಸಲ-ಅವಂತಿ–ಈ ಕೆಲವೇ ಪ್ರದೇಶಗಳ ರಾಜರ ಸೊತ್ತಾಗಿ ಆ ತನಕ ಸ್ವತಂತ್ರ ಬದುಕನ್ನು ಸಾಗಿಸುತ್ತಿದ್ದ ಬುಡಕಟ್ಟು ಜನಪದಗಳೆಲ್ಲ ಈ ರಾಜತ್ವಕ್ಕೆ ತಲೆಬಾಗಿ ಕಪ್ಪಕೊಡುವ ಸಾಮಂತವಾದಿಗಳಾದುವು.

ಇದು-ಸ್ಥೂಲವಾದ–ಆ ಕಾಲದ ರಾಜಕೀಯ ಸ್ಥಿತಿಯಾದರೆ, ಧಾರ್ಮಿಕವಾಗಿಯೂ ಆಗ ಗೊಂದಲಮಯ ಪರಿಸ್ಥಿತಿಯೇ ಇತ್ತು. ಮೇಲೆ ಗಮನಿಸಿದ ಆರು ಮಂದಿ ಆಚಾರ್ಯರದಲ್ಲದೆ ಇನ್ನೂ ಅನೇಕ ಮತಸಂಪ್ರದಾಯಗಳಿದ್ದುವು. ಇವೆಲ್ಲ ಆ ಕಾಲದ ಶ್ರಮಣಸಂಸ್ಕೃತಿಯಲ್ಲಾದರೆ ಬ್ರಾಹ್ಮಣಸಂಸ್ಕೃತಿಯಲ್ಲಿ 'ಪುರೋಹಿತ'ರ ಪರಿಕಲ್ಪನೆ ಉದಯವಾಗಿ ರಾಜರ ಮತ್ತು ಪುರೋಹಿತರ ಸಾಹಚರ್ಯವು ಅಧಿಕಾರವನ್ನು ಹಿಡಿದಿತ್ತು. ವೇದ ಮಂತ್ರಗಳು ಪುರೋಹಿತರ ಸೊತ್ತಾಗಿ, ಆಚರಣಾವಿಧಿಗಳೂ ಅವರದೇ ಗುತ್ತಿಗೆಯಾಗಿತ್ತು. ಈ ಎರಡೂ ವರ್ಗಕ್ಕಿಂತ (ಬ್ರಾಹ್ಮಣರು, ಶ್ರಮಣರು) ಹೊರತಾದ ಬಹುಸಂಖ್ಯಾತ ಸಮಾಜ ಎಲ್ಲ ಬಗೆಯ ದಾರಿದ್ರ್ಯದಿಂದ ಬಸವಳಿದಿತ್ತು.

ಬುದ್ಧನಿಗೆ ನಿಕಟಪೂರ್ವದಲ್ಲಿ ಎರಡು ಅತಿಗಳು (extremes) ಆಚರಣೆಯಲ್ಲಿ ಇದ್ದಂತೆ ತಿಳಿಯುತ್ತದೆ. ಒಂದು ಅತಿಯಾದ ದೇಹದಂಡನೆಯ ಮಾರ್ಗ, ಇನ್ನೊಂದು ಅತಿಯಾದ ದೇಹಪೋಷಣೆಯ ದಾರಿ. ಲೋಕಾಯತ ಮತವು ತನ್ನ ವೈಭವದ ದಿನಗಳಲ್ಲಿ ರಾಚಿದ ವೈಚಾರಿಕ ಗಾಳಿ ಆ ಬಳಿಕದ ದಿನಗಳಲ್ಲಿ ಹಿಂದೆ ಸರಿದು, ಬರಿಯ ಅದರ ಹೊರ ಆಚರಣೆಗಳಿಗೆ ಜೋತುಬಿದ್ದು, ಪ್ರಾಚೀನ ಗ್ರೀಕರ

ಸೋಫಿಸ್ಟ (sophist) ರಂತೆ 'ಋಣಂ ಕೃತ್ವಾ ಘೃತಂ ಪಿಬ' (ಸಾಲ ಮಾಡಿಯಾದರೂ ತುಪ್ಪ ತಿನ್ನು) ತತ್ತ್ವವು ಸ್ವೀಕೃತವಾದ ಒಂದು ಜನವರ್ಗವು ದೇಹಪೋಷಣೆಯು, ಸ್ವರತಿಯು ದಾರಿ ಹಿಡಿದಿತ್ತು. ಇನ್ನೊಂದು ವರ್ಗದವರು ತಲೆಕೂದಲನ್ನು ಕಿತ್ತುಕೊಳ್ಳುವ, ನಗ್ನರಾಗಿ ಸಂಚರಿಸುವ, ಶರೀರವನ್ನು ದಂಡಿಸುವ ಆ ಕಾಲದ ತೀರ್ಥಂಕರು.

ಬುದ್ಧನ ಉಪದೇಶ ಅತ್ಯಂತ ಸರಳವಾದುದು ಆತ ತನ್ನ ಉಪದೇಶಗಳಿಗೆ ವೈದ್ಯ ವಿದ್ಯೆಯ ಉಪಮೆಗಳನ್ನು ಆಶ್ರಯಿಸಿ ಹೇಳುತ್ತಾನೆ. ಶಾರೀರಿಕ ಮತ್ತು ಮಾನಸಿಕ ನೋವು ದೇಹದ ಪ್ರಕೃತಿಗೆ ಸಾಮಾನ್ಯವಾದುದು- ಅಂತೆಯೇ ಬದುಕನ್ನೂ ವಿಶ್ಲೇಷಿಸಿ, ಇಲ್ಲಿ ನಿರಂತರವಾಗಿರುವುದು ದುಃಖವೊಂದೇ ಎಂದು ಹೇಳಿದನು. ಮುಂದುವರಿದು, ಈ ದುಃಖಕ್ಕೆ ಕಾರಣವೆಂದರೆ ಜೀವಿಯಲ್ಲಿರುವ ತೃಷ್ಣೆ ಎಂದೂ, ಈ ತೃಷ್ಣೆಯೇ ಸಮುದಯ (ಕಾರಣ) ಎಂದೂ ಸೇರಿಸಿದನು. ಈ ನಿರಂತರವಾದ ದುಃಖವು ನಿವಾರಕವೇ ಅಲ್ಲವೇ ಎಂದು ವಿವೇಚಿಸಿ, ಇದು ನಿವಾರ್ಯ ಎಂದೂ, ಅದನ್ನು ನಿರೋಧವೆಂದೂ, ಅದಕ್ಕಿರುವ ಮಾರ್ಗವೇ ಆರ್ಯ ಅಷ್ಟಾಂಗ ಮಾರ್ಗವೆಂದೂ ನಿಗದಿಸಿದನು.

ಬೌದ್ಧಸಂಘದ ಚೌಕಟ್ಟು ಸರಳವಾದುದು ದರೋಡೆಗಾರರು, ಮತಿ ಭ್ರಾಂತರು,ಸಾಂಕ್ರಾಮಿಕ ರೋಗಿಗಳು, ಜೀತದ ಆಳುಗಳು, ಸೈನಿಕರು- ಇಂಥ ಕೆಲ ವರ್ಗಗಳನ್ನು ಹೊರತುಪಡಿಸಿ ಸಮಾಜದ ಯಾವುದೇ ಸ್ತರದವರೂ ಸಂಘಕ್ಕೆ ಸೇರಬಹುದು. ಸೇರುವ ಹಂತದ ವಿಧಿಯನ್ನು ಪಬ್ಬಜ್ಜಾ (ಸಂ. ಪ್ರವ್ರಜ್ಯಾ) ಎಂದೂ, ಅನಂತರದ ತರಬೇತಿಯ ಬಳಿಕದ ವಿಧಿಯನ್ನು 'ಉಪಸಂಪದಾ' ಎಂದೂ ಹೇಳಿದೆ. ಭಿಕ್ಷುವಾಗುವುದು ಉಪಸಂಪದಾ ವಿಧಿಯ ಬಳಿಕವೇ.

ಪ್ರಾಚೀನ ಬೌದ್ಧಧರ್ಮದ ಆರಾಧನಾಂಶಗಳೆಂದರೆ ತ್ರಿರತ್ನಗಳು ಅಥವಾ ರತ್ನತ್ರಯ– ಬುದ್ಧ, ಧರ್ಮ ಮತ್ತು ಸಂಘಗಳು. ಇವಲ್ಲದೆ ಧಾತುಗಳನ್ನೂ ಪೂಜಿಸುವ ಪದ್ಧತಿಯಿತ್ತು. ಹಿಂದಿನ ಬುದ್ಧರ ಧಾತುಗರ್ಭಗಳನ್ನು– ಅವನ್ನು ಶಾರೀರಿಕ, ಉದ್ದೇಶಿಕ ಮತ್ತು ಪಾರಿ ಭೋಜಿಕಗಳೆಂದು ವಿಭಾಗಿಸಿದೆ– ಬುದ್ಧ ಪಾದವನ್ನು, ಪವಿತ್ರ ವೃಕ್ಷವನ್ನು ಪೂಜಿಸುವ ಕ್ರಮವಿದ್ದ ಬಗೆಗೆ ತಿಳಿಯುತ್ತದೆ.

ಅಶೋಕನ ಪ್ರೋತ್ಸಾಹದಿಂದಾಗಿ ಕ್ರಿ. ಪೂ. ಮೂರನೆಯ ಶತಮಾನದಲ್ಲಿ ಬೌದ್ಧಧರ್ಮವು ವ್ಯಾಪಕವಾಯಿತು. ಕ್ರಿ. ಪೂ. ೨೪೧ ರಲ್ಲಿ ಮೂರನೆಯ ಬೌದ್ಧ ಸಂಗೀತಿಯು ಪಾಟಲೀಪುತ್ರದಲ್ಲಿ ಸೇರಿತು. ಆ ಕಾಲಕ್ಕಾಗಲೇ ಶಾಖೋಪ ಶಾಖೆಗಳಾಗಿದ್ದ ಬೌದ್ಧಧರ್ಮದ ಸಾಂಘಿಕ ರೂಪವನ್ನು ಬಲಪಡಿಸುವನು ಆಗಿನ ತುರ್ತು ಅಗತ್ಯವಾಗಿತ್ತು.

ಬುದ್ಧನ ಬೋಧನೆಯ ಕೇಂದ್ರ ಬದುಕಿನ ಒಂದು ಮುಖವಾದ ಪ್ರವ್ರಜ್ಯಾವೇ ಆಗಿತ್ತು. ಸಂಘದ ದೈನಂದಿನ ವೆಚ್ಚ ಇತ್ಯಾದಿಗಳಿಗೆ ಇತರ ಸಾಮಾನ್ಯರಿಂದ ಸಂಗ್ರಹೀತವಾದ ಸಂಪತ್ತೇ ಮೂಲವಾಗಿತ್ತು. ಭಿಕ್ಷುಗಳಲ್ಲದ, ಆದರೆ ಧರ್ಮದ ಬಗ್ಗೆ ಒಲವು ಉಳ್ಳವರನ್ನು 'ಉಪಾಸಕ' ಎಂದು ಕರೆಯಲಾಗಿದೆ. ಇಂಥ ಉಪಾಸಕರು ಬೌದ್ಧಧರ್ಮಕ್ಕೆ, ಅದರ ಅನುಷ್ಠಾನಕ್ಕೆ ಅನಿವಾರ್ಯವಲ್ಲದಿದ್ದರೂ, ಒಟ್ಟು ಸಂಘದ ಅರ್ಥವ್ಯವಸ್ಥೆಗೆ ಇವರ ಬೆಂಬಲ ಬೇಕಾಗಿತ್ತು.

ಪ್ರಾಚೀನ ಬೌದ್ಧಧರ್ಮದ ಈ ಉಪಾಸಕ ಪರಿಕಲ್ಪನೆ ವಿಶಿಷ್ಟವಾದುದು. ಉಪಾಸಕರು ತಮ್ಮ ವೈಯುಕ್ತಿಕ ವ್ಯವಹಾರಗಳಲ್ಲಿ– ಕೃಷಿ, ವಾಣಿಜ್ಯ, ಆಡಳಿತ ಅಥವಾ ಇತರ ಧಾರ್ಮಿಕ ನಡಾವಳಿಗಳು– ತೊಡಗಿರಲು ಅವಕಾಶವಿತ್ತು. ಅವರಿಗೆ ವಿಧಿಸಲಾಗಿದ್ದ ಒಂದೇ ಒಂದು ಶರ್ತವೆಂದರೆ, ಅವರು ಬುದ್ಧನಲ್ಲಿ ಶ್ರದ್ಧೆ, ನಂಬಿಕೆ ಇಟ್ಟಿರಬೇಕಾಗಿತ್ತು. ಬುದ್ಧನ ಸಮಕಾಲೀನ ಹಾಗೂ ಅನಂತರದ ನಿಕಟ ಭವಿಷ್ಯದಲ್ಲಿ ಅನೇಕ ಬ್ರಾಹ್ಮಣರು ಬುದ್ಧನ ಉಪಾಸಕರಾಗಿದ್ದೂ, ತಮ್ಮ ಸಾಮಾಜಿಕ ನೆಲೆಗಟ್ಟನ್ನು ಕಳಕೊಳ್ಳದೆ ಇರುತ್ತಿದ್ದರು. ಬುದ್ಧನ ಪರಿನಿರ್ವಾಣದ ಒಂದು ಶತಮಾನದ ಅನಂತರ ಉಪಾಸಕರ ಬಗೆಗೂ ಕೆಲವು ನಿಯಮಗಳು ನಿರೂಪಿತ ವಾದುವು. ಅವರು ತ್ರಿರತ್ನಗಳಿಗೆ (ಬುದ್ಧ-ಧರ್ಮ-ಸಂಘ) ಶರಣಾಗಬೇಕು. ಅಹಿಂಸೆ, ಅಸ್ತೇಯ, ಅಪರಿಗ್ರಹ, ಮುಂತಾದ ನೀತಿ_ಸಂಹಿತೆಯನ್ನು ಅನುಸರಿಸ ಬೇಕು– ಇವೇ ಮೊದಲಾದ ನಿಯಮಗಳನ್ನು ವಿಧಿಸಲಾಯಿತು. ಅಶೋಕನು ತನ್ನ ಶಾಸನಗಳಲ್ಲಿ ತಾನು ಬೌದ್ಧ ಉಪಾಸಕನಾಗಿದ್ದ ಬಗೆಗೆ ಹೇಳಿಕೊಂಡಿದ್ದಾನೆ. ಪ್ರಾಚೀನ ಬೌದ್ಧಧರ್ಮವು ಪೂರ್ತಿಯಾಗಿ ನೈತಿಕ ನೆಲೆಗಟ್ಟಿನಲ್ಲೇ ರೂಪಿತವಾದ ಆಚಾರ ಸಂಹಿತೆಯೆನ್ನಬಹುದು. ಬುದ್ಧನು ದೇವರ ಬಗೆಗೆ, ಯಜ್ಞ, ಪೂಜೆ ಇತ್ಯಾದಿ ಆರಾಧನಾಂಶಗಳ ಬಗೆಗೆ ತಲೆಕೆಡಿಸಿಕೊಳ್ಳಲಿಲ್ಲ. ಆದರೆ ಬರಬರುತ್ತ ಮಹಾಯಾನ ಪರಂಪರೆಯು ಕಾಲಕ್ಕಾಗುವಾಗ ಈ ದೃಷ್ಟಿಕೋನ ಬದಲಾಗಿ ಬುದ್ಧನನ್ನು ದೈವತ್ವಕ್ಕೆ ಏರಿಸಲಾಯಿತು. ತೀರಾ ವೈಭವೀಕರಣಗೊಂಡ ರೂಪ ವನ್ನು ಆಗ ಕಾಣುತ್ತೇವೆ. ಎಲ್ಲಕ್ಕೂ ಅತೀತವಾದ ಮಹಾಶಕ್ತಿಯು ಆದಿಬುದ್ಧ ನೆಂದೂ, ಲೋಕದ ದುಃಖ ನಿವಾರಣೆಗಾಗಿ ಕಳುಹಿಸಲ್ಪಟ್ಟ ಬುದ್ಧರಲ್ಲಿ ಶಾಕ್ಯಮುನಿ (ಗೌತಮಬುದ್ಧ)ಯೂ ಒಬ್ಬನೆಂದೂ, ವರ್ಣಿತವಾಯಿತು. ಈ ತಥಾಗತನಲ್ಲದೆ ಇತರ ಅನೇಕ ಬೋಧಿಸತ್ವರ ಎಂದರೆ ಬುದ್ಧತ್ವಕ್ಕೆ ಏರುವ ಹಂತದಲ್ಲಿರುವವರ ಅಥವಾ ಆಗಾಮೀ ಬುದ್ಧ (potential Buddha)ರ ಪರಿಕಲ್ಪನೆಯೂ ಬೆಳೆಯಿತು.

'ಭಾರತೀಯಸಂಸ್ಕೃತಿ, ದರ್ಶನ ಮತ್ತು ನಾಗರಿಕತೆಗಳ ಬೆಳವಣಿಗೆಯ ನಿಟ್ಟಿನಲ್ಲಿ ಶತಮಾನಗಳ ಕಾಲ ಬೌದ್ಧಧರ್ಮದ ಪ್ರಭಾವವನ್ನು ಅವಗಣಿಸುವುದು

ಸಾಧ್ಯವೇ ಇಲ್ಲ. ಎಂಬ ಅಭಿಪ್ರಾಯವನ್ನು ಹೆಚ್ಚಿನ ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಅವುಗಳಲ್ಲಿ ಮುಖ್ಯವೆನಿಸುವ ಕೆಲವನ್ನು ಪರಿಶೀಲಿಸುತ್ತಲೇ, ಅವು ಹೇಗೆ ರಾಷ್ಟ್ರೀಯ ಭಾವೈಕ್ಯಕ್ಕೆ ಕಾರಣವಾಗಿವೆ ಎಂಬುದನ್ನು ನೋಡಬಹುದು.

ನಮ್ಮ ದೇಶದಲ್ಲಿ ತೀರ್ಥಯಾತ್ರೆಯ ಅನುಸರಣೆಯು ರಾಷ್ಟ್ರೀಯ ಅರಿವಿಗೆ ಪರೋಕ್ಷಕಾರಣವೆನಿಸುತ್ತಿದೆಯಷ್ಟೆ. ಪುರಾಣಯುಗದಲ್ಲಿ ಎಂದರೆ ಗುಪ್ತರ ಕಾಲದ ಬಳಿಕವಷ್ಟೇ ಹಿಂದೂಧರ್ಮವು ದೇಗುಲಗಳನ್ನೂ, ಯಾತ್ರೆಗಳನ್ನೂ ರೂಢಿಸಿಕೊಂಡಿದೆ. ಆದರೆ ಬೌದ್ಧಧರ್ಮದಲ್ಲಿ ಆ ಹಿಂದೆಯೇ ಈ ಆಚರಣೆಯಿತ್ತು.

ಮಹಾಪರಿನಿಬ್ಬಾನ ಸುತ್ತದಲ್ಲಿ ಬುದ್ಧನಿಂದ ಪವಿತ್ರಗೊಂಡ ಕ್ಷೇತ್ರಗಳಿಗೆ ಯಾತ್ರೆ ಹೋಗುವುದನ್ನು ಹೇಳಿದೆ. ತೀರ್ಥಯಾತ್ರಾಕ್ರಮವು ಅನಂತರದ ಕಾಲಮಾನದಲ್ಲಿ ದೇಶದ ಉದ್ದಗಲದ ಮುಖ್ಯಸ್ಥಳಗಳನ್ನು ಆವರಿಸಿ ಅವಮೂಲಕ ದೇಶದ ಪರಿಜ್ಞಾನಕ್ಕೂ ನಾವೆಲ್ಲ ಒಂದೇ ಎಂಬ ಭಾವನೆಗೂ ಮೂಲಸ್ರೋತವೊದಗಿಸುತ್ತಿರುವುದು ಗಮನಾರ್ಹ.

ತಪಸ್ವಿಗಳು, ಯೋಗಿಗಳು ಇವರ ಪಾತ್ರತೆಯು ಈಗೀಗ ಎಷ್ಟೇ ಚರ್ಚಾಸ್ಪದವಾಗಿದ್ದರೂ ಪ್ರಾಚೀನ ಭಾರತದ ಭಾವೈಕ್ಯ ಸಾಧನೆಗೆ ಇವರ ಕೊಡುಗೆ ಅತ್ಯಮೂಲ್ಯವೆಂದು ಬಲ್ಲೆವು. ಈ ಬಗೆಯ ಸನ್ಯಾಸ ಪದ್ಧತಿಗೆ ಬೌದ್ಧರ 'ಭಿಕ್ಷು' ಪರಿಕಲ್ಪನೆಯು ಮೂಲ ಎನ್ನಲಾಗಿದೆ. ಬೌದ್ಧಸಂಘಾರಾಮಗಳು, ವಿಹಾರಗಳು ದೇಶದ ಉದ್ದಗಲಕ್ಕೂ ಹರಡಿದ್ದು ಕಾಲಕ್ರಮೇಣ ಅವೇ ಸಂಘಾರಾಮಗಳು ಅನ್ಯಮತೀಯರ ಕೇಂದ್ರಗಳಾದುದು ಇತಿಹಾಸದಲ್ಲಿ ದಾಖಲೆಗೊಂಡಿದೆಯಾದರೂ ಈ ಅಂಶವನ್ನ ಕಡೆಗಣಿಸುವಂತಿಲ್ಲ.

ಶಿಕ್ಷಣಸಂವರ್ಧನೆಗೆ ಬೌದ್ಧಧರ್ಮದ ಕೊಡುಗೆಯಂತೂ ಅಪಾರವಾಗಿದೆ. ವಾರಾಣಾಸಿಯಲ್ಲಿ ಗೌತಮಬುದ್ಧನು ಮೊತ್ತಮೊದಲ ಸಂಘವನ್ನು ಸ್ಥಾಪಿಸಿದಾಗ ಹೇಳಿದ ಈ ಮಾತುಗಳು ಕುತೂಹಲಕಾರಿಯಾಗಿವೆ:

"ಸಾಧುಗಳೇ ಜಗದ ಎಲ್ಲರ ಒಳಿತಿಗಾಗಿ ನೀವು ಸದಾ ಸಂಚರಿಸುತ್ತಿರಿ. ವಿಶ್ವದ ಸಕಲರ ಬಗೆಗೆ ಕರುಣಾಮಯಿಗಳಾಗಿರಿ; ಸಾಧುಗಳಾದ ನೀವು ಧರ್ಮವನ್ನು ಬೋಧಿಸಿರಿ. ಧರ್ಮವು ಪ್ರಾರಂಭದಲ್ಲಿ, ಮಧ್ಯದಲ್ಲಿ ಮತ್ತು ಕೊನೆಯಲ್ಲಿಯೂ ಸಹ ಕೃಪಾಶೀಲವೇ ಆಗಿರುತ್ತದೆ.[6] ಪ್ರಾಚೀನ ಬೌದ್ಧವಿಹಾರಗಳಂತೂ ವಿಖ್ಯಾತ ವಿಶ್ವವಿದ್ಯಾಲಯಗಳಾಗಿದ್ದುವು. ನಾಳಂದ, ವಿಕ್ರಮಶೀಲ, ತಕ್ಷಶಿಲಾ ಅವುಗಳಲ್ಲಿ ಹೆಸರಿಸಬೇಕಾದವುಗಳು. ಇಲ್ಲಿಯ ಇನ್ನೊಂದು ವೈಶಿಷ್ಟ್ಯವೆಂದರೆ ಸಾಂಘಿಕ ವಿದ್ಯಾಲಯಗಳ ಈ ಪರಿಕಲ್ಪನೆಯೇ ಬೌದ್ಧಮೂಲವಾದುದು ಎಂಬುದು.

---

6. ಮಹಾವಗ್ಗ.

ಅಂತೆಯೇ ಭಾರತೀಯ ಭಾಷೆಗಳು ಹಾಗೂ ಅವುಗಳ ಲಿಪಿಗಳ ರೂಪಣೆಗೂ ಬೌದ್ಧಧರ್ಮವು ತನ್ನದೇ ಆದ ಕೊಡುಗೆಯಿತ್ತಿದೆ. ಬೌದ್ಧಸಾಹಿತ್ಯದ ರಚನೆಗಾಗಿ ಪ್ರಾಚೀನ ಕಾಲದಲ್ಲಿ ಪಾಲಿ, ಸಂಸ್ಕೃತದಂತಹ ಔತ್ತರೇಯ ಭಾಷೆಗಳೂ, ತಮಿಳಿನಂತಹ ದ್ರಾವಿಡ ಭಾಷೆಗಳೂ ಬಳಕೆಗೊಂಡಿದ್ದರೆ, ಆಧುನಿಕ ಕಾಲದಲ್ಲಿ ಎಲ್ಲ ಪ್ರಾಂತ ಸಾಹಿತ್ಯದಲ್ಲೂ ಬೌದ್ಧವಸ್ತು ಅವತರಿಸಿದೆ. ಸಂಸ್ಕೃತ ಸಾಹಿತ್ಯೇತಿಹಾಸದಲ್ಲಿ ಉಪಲಬ್ಧ ಮೊದಲ ಕೃತಿಗಳೇ ಬೌದ್ಧಕವಿ ಅಶ್ವಘೋಷನವು. ಅಲ್ಲಿಯೇ ಸಮಗ್ರ ರಾಷ್ಟ್ರದ ಕಲ್ಪನೆ ಕಾಣಿಸುತ್ತದೆ. 'ಜಾತಕ ಸಾಹಿತ್ಯ' ವಂತೂ ಪ್ರತ್ಯೇಕವಾದ ಅಭ್ಯಾಸಕ್ಕೆ ವಸ್ತು. ಅವುಗಳಲ್ಲಿ ವ್ಯಕ್ತಗೊಂಡ ಭಾವೈಕ್ಯದ ಚಿತ್ರಣ ಅತ್ಯಪೂರ್ವವಾದುದು. ಕನ್ನಡದಲ್ಲಾದರೂ ಪ್ರಾಚೀನ ಕೃತಿಕಾರರು ಬೌದ್ಧರಿದ್ದರು ಎಂಬ ಪ್ರಮೇಯವನ್ನು ವಿದ್ವಾಂಸರು ಮಂಡಿಸಿದ್ದಾರೆ.

ಭಾರತೀಯ ಉತ್ಸವಗಳ ಬೆಳವಣಿಗೆಯಲ್ಲಿ ಬೌದ್ಧಧರ್ಮವೂ ಮಹತ್ವದ ಪಾತ್ರ ನಿರ್ವಹಿಸಿದೆ. ಉತ್ಸವಗಳು ಬೇರೆ ಬೇರೆ ಧರ್ಮಗಳಲ್ಲಿ ಬೇರೆ ಬೇರೆಯಾಗಿದ್ದರೂ ಇವೆಲ್ಲಕ್ಕೂ ಜಾನಪದ ಆಶಯವು ಮೂಲದಲ್ಲಿ ಇದ್ದಿರುವ ಸಾಧ್ಯತೆಯಿದೆ. ಈ ಬಗೆಯ ಜಾನಪದ ಆಶಯ ಮೂಲವನ್ನು ಸ್ವೀಕರಿಸಿಯೂ ಅದಕ್ಕೆ ಕಳೆಗೂಡಿಸುವುದರಲ್ಲಿ ವಿವಿಧ ಧರ್ಮಗಳ ಆರಾಧನಾಂಶಗಳು ದುಡಿದಿವೆ. ಈ ನಿಟ್ಟಿನಲ್ಲಿ ಗಮನಿಸಿದರೆ, ಮೂಲತಃ ವಿರಕ್ತವೂ ಸಂಸಾರದೂರವೂ ಆಗಿದ್ದ ಬೌದ್ಧಧರ್ಮವು ಕಾಲಾಂತರದಲ್ಲಿ ರಕ್ತಿಯ ಮಾರ್ಗವನ್ನು ಹಿಡಿದುದು, ಹಾಗೆಯೇ ಜನಪ್ರಿಯ ಅಂಶಗಳನ್ನು ಒಂದೊಂದಾಗಿ ಅಳವಡಿಸಿಕೊಂಡುದು ಕಾಣಿಸುತ್ತದೆ. ಈ ದೃಷ್ಟಿಯಿಂದ ಮಹಾಯಾನ ಪಂಥವು ವಿಶೇಷವಾದ ಕೊಡುಗೆಗಳನ್ನು ಇತ್ತಿದೆ. ಸುಮಾರು ಕ್ರಿಸ್ತಶಕದ ಆದಿಭಾಗದಲ್ಲಾಗಲೇ ಬೌದ್ಧ ಉತ್ಸವಾಚರಣೆಗಳು ಪ್ರಚಲಿತವಿದ್ದಿರಬಹುದು. ಕ್ರಿ.ಶ. ೫ನೆಯ ಶತಮಾನದಲ್ಲಿ ಇಲ್ಲಿಗೆ ಆಗಮಿಸಿದ ಫಾ-ಹಿಯಾನನು ತಾನು ಇಲ್ಲಿ ಕಂಡ ರಥೋತ್ಸವದ ಬಗೆಗೆ ದಾಖಲಿಸಿದ್ದಾನೆ.

ಅತನು ಪಾಟಲೀಪುತ್ರದಲ್ಲಿ ಕಂಡ ಉತ್ಸವದ ಬಗೆಗೆ—

ಮಧ್ಯದೇಶದಲ್ಲೇ (ಭಾರತ) ಇದು ದೊಡ್ಡನಗರ. ಪ್ರತಿವರ್ಷವೂ ಕ್ರಮಾಗತವಾಗಿ ಶುಕ್ಲಪಕ್ಷದ ಅಷ್ಟಮಿಯಂದು ವಿಗ್ರಹಗಳ ಮೆರವಣಿಗೆ ನಡೆಸುತ್ತಾರೆ. ನಾಲ್ಕು ಚಕ್ರಗಳ ರಥಗಳು, ಐದು ಅಂತರಗಳಿಂದ ಕೂಡಿರುತ್ತವೆ. ಅವನ್ನು ಬಿದಿರಿನಿಂದ ಕಟ್ಟಿರುತ್ತಾರೆ. ಸುಮಾರು ಇಪ್ಪತ್ತು ಅಡಿಗಳಷ್ಟು ಎತ್ತರವಿರುತ್ತದೆ; ಪಗೋಡಾಕಾರವಾಗಿರುತ್ತದೆ. ಅವುಗಳಲ್ಲಿ ದೇವತಾ ವಿಗ್ರಹಗಳನ್ನಿಟ್ಟು ಮೆರವಣಿಗೆ ಹೊರಡುತ್ತಾರೆ. ನಾನಾ ಧ್ವಜಗಳೂ ಅನುಸರಿಸುತ್ತವೆ. ಕುಳಿತ ಭಂಗಿಯ ಬುದ್ಧ ಹಾಗೂ ಇತರ ಬೋಧಿಸತ್ವರ ಪ್ರತಿಮೆಗಳನ್ನಿಟ್ಟಿರುತ್ತಾರೆ. ಇಂಥ

7. ವಿವರಗಳಿಗೆ ನೋಡಿ: ತಾಳ್ತಜೆ ವಸಂತಕುಮಾರ. ಸಾರಪ. ಪು. 19.

ಸುಮಾರು ಇಪ್ಪತ್ತಕ್ಕೂ ಹೆಚ್ಚು ರಥಗಳಿರುತ್ತವೆ. ಆ ದಿನಗಳಲ್ಲಿ ಭಿಕ್ಷುಗಳೂ ಉಪಾಸಕರೂ ಸೇರುತ್ತಾರೆ. ನೃತ್ಯ ಸಂಗೀತಾದಿಗಳು ನಡೆಯುತ್ತವೆ" [8]

– ಎನ್ನುತ್ತಾನೆ.

ಹಿಂದೂಗಳಲ್ಲಿ ದೇವಸ್ಥಾನಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಉತ್ಸವಾದಿಗಳ ಆಚರಣೆಗಳೆಲ್ಲವೂ ಕ್ರಿಸ್ತಶಕಾರಂಭದ ಬಳಿಕದ ಬೆಳೆವಣಿಗೆಯಷ್ಟೆ. ಈ ದೃಷ್ಟಿಯಿಂದ ಗಮನಿಸಿದರೆ, ಬೌದ್ಧಮಹಾಯಾನದ ಉತ್ಸವಾಚರಣಾ ವಿಧಿಗಳು, ಹಿಂದೂ ಉತ್ಸವಗಳಿಗೆ ಸ್ಫೂರ್ತಿ ಮೂಲವಿರಬಹುದೇನೋ ಎನಿಸುತ್ತದೆ.

ಉತ್ಸವಾಚರಣೆ ಸನಾತನವಾದುದು. ಅಂಥ ಮೂಲವೇ ಬೌದ್ಧಉತ್ಸವಗಳಿಗೂ ಸ್ಫೂರ್ತಿ ಒದಗಿಸಿದೆ ಎಂಬುದು ನಿಶ್ಚಯ. ಆದರೆ ಉತ್ಸವಗಳ ಜನಪ್ರಿಯತೆಯೂ ಅವರ ಕೊಡುಗೆ ಇದ್ದೀತೇ ಎಂಬುದು ವಿಚಾರಣೀಯ ಅಂಶವಾಗಿದೆ.

ಹ್ಯೂಯೆನ್‌ತ್ಸಾಂಗನೂ ತಾನು ಕಂಡ ಬೌದ್ಧ ಉತ್ಸವವೊಂದರ ಬಗೆಗೆ ವಿವರವಾಗಿ ದಾಖಲಿಸಿದ್ದಾನೆ. ಆತ ಹರ್ಷವರ್ಧನನ ರಾಜಧಾನಿ ಕಾನ್ಯಕುಬ್ಜದಲ್ಲಿದ್ದಾಗ ಅಲ್ಲಿ ಒಂದು ಬೌದ್ಧ ಉತ್ಸವ ನಡೆಯಿತು. ಅದರ ಕೆಲವು ವಿವರಗಳು ಹೀಗಿವೆ:

"ಗಂಗಾನದಿಯ ಪಶ್ಚಿಮ ಭಾಗದಲ್ಲಿ ಈ ಉತ್ಸವಕ್ಕಾಗಿಯೇ ತಾತ್ಕಾಲಿಕವಾದ ಶಿಬಿರಾದಿಗಳನ್ನು ನಿರ್ಮಿಸಿದರು. ಅಲ್ಲದೆ ರಾಜನು ೧೦೦ ಅಡಿಗಳೆತ್ತರದ ಒಂದು ಸಂಘಾರಾಮವನ್ನು ನಿರ್ಮಿಸಿದನು. ಅದರ ಮಧ್ಯದಲ್ಲಿ ಬುದ್ಧನ ಚಿನ್ನದ ಪ್ರತಿಮೆಯನ್ನು ಇಡಲಾಯಿತು. ಅದರ ದಕ್ಷಿಣ ಭಾಗದಲ್ಲಿ ವಿಗ್ರಹವನ್ನು ತೊಳೆಯುವ ವೇದಿಕೆಯೊಂದು ನಿರ್ಮಿತವಾಯಿತು. ಈ ಸಂಘಾರಾಮದಿಂದ ಅನತಿ ದೂರದಲ್ಲೇ ಇನ್ನೊಂದು ವಿಶ್ರಾಂತಿಧಾಮದ ರಚನೆಯೂ ಆಯಿತು.

"ಆಗ ಬೇಸಿಗೆಯ ಎರಡನೆಯ ತಿಂಗಳು. (ಅಂದರೆ ವೈಶಾಖಮಾಸ) ಇಪ್ಪತ್ತೊಂದು ದಿನಗಳವರೆಗೆ ಶ್ರಮಣರಿಗೆ, ಬ್ರಾಹ್ಮಣರಿಗೆ ಅನ್ನದಾನ ನಡೆಯಿತು. ತಾತ್ಕಾಲಿಕ ಶಿಬಿರದಿಂದ ಅನ್ನದಾನದ ಛತ್ರದವರೆಗೂ ಅಲಂಕೃತ ತೋರಣಗಳು ರಚಿತವಾಗಿದ್ದುವು. ನಾನಾ ವಾದ್ಯಗಾರರೂ ಸಂಗೀತಜ್ಞರೂ ನಿತ್ಯವೂ ಕಲಾಕಾರ್ಯ ನಡೆಸುತ್ತಿದ್ದರು.

"ದಿನದಿನವೂ ದೊಡ್ಡ ಆನೆಯೊಂದರ ಬೆನ್ನಲ್ಲಿ ಸುಮಾರು ಮೂರು ಅಡಿಗಳ ಗಾತ್ರದ ಬುದ್ಧನ ಚಿನ್ನದ ಪ್ರತಿಮೆಯನ್ನು ಕೂರಿಸಿ ಮೆರವಣಿಗೆ ಹೊರಡುತ್ತಿದ್ದರು. ರಾಜನು ಆನೆಯ ಎಡಭಾಗದಲ್ಲೂ, ಕಾಮರೂಪದ ದೊರೆ ಬಲಭಾಗದಲ್ಲೂ ನಡೆದೇ ಹೋಗುವರು. ರಾಜಾ ಶಿಲಾದಿತ್ಯನು (ಹರ್ಷವರ್ಧನ) ಆಗ ಇಂದ್ರನ

8. Giles H. A; Travels of Fa- heir page. 47.

ವೇಷವನ್ನೂ, ಕಾಮರೂಪದ ದೊರೆ ಕುಮಾರ ರಾಜನು ಬ್ರಹ್ಮನ ವೇಷವನ್ನೂ ಹಾಕುವರು. ಅವರ ಹಿಂದೆ ೫೦೦ ಯುದ್ಧದ ಆನೆಗಳು, ವಿಗ್ರಹ ಹೊತ್ತ ಆನೆಯ ಹಿಂದೆ ಮುಂದೆ ಸಂಗೀತಗಾರರನ್ನು ಹೊತ್ತ ೧೦೦ ಪ್ರತ್ಯೇಕ ಆನೆಗಳೂ ನಡೆಯುವುವು.

"ರಾಜನು ಮೆರವಣಿಗೆಯಲ್ಲಿ ನಡೆದಂತೆಲ್ಲ ಸುತ್ತ ಮುತ್ತಲೂ ಮುತ್ತು ಹಾಗೂ ಚಿನ್ನದ ಹೂಗಳನ್ನು ಎರಚುತ್ತಿದ್ದನು.

"ಮುಂದೆ ಸಾಗಿ ವಿಗ್ರಹವನ್ನು ಸ್ವತಃ ರಾಜನೇ ತೊಳೆಯುವನು. ಆ ಬಳಿಕ ಆತನೇ ಅದನ್ನು ತನ್ನ ಹೆಗಲಲ್ಲಿ ಹೊತ್ತು ಸಂಘಾರಾಮದ ಪಶ್ಚಿಮ ಗೋಪುರ ದೆಡೆಗೆ ಹೋಗಿ ಅಲ್ಲಿ ಅದಕ್ಕೆ ನಾನಾ ವಸ್ತ್ರ ಆಭೂಷಣಗಳನ್ನು ಅರ್ಪಿಸಿ ಪೂಜಿಸುವನು. ಬಳಿಕ ಭೋಜನವಾಗುವುದು.

"ಆ ಬಳಿಕ ಅಲ್ಲಿ ನೆರೆದ ವಿದ್ವಾಂಸರು ಸಂಜೆಯುವರೆಗೂ ನಾನಾವಿಚಾರಗಳ ಗೋಷ್ಠಿಗಳನ್ನು ನಡೆಸುವರು. ಈ ಪ್ರಕಾರ ೨೧ ದಿನಗಳೂ ನಡೆದವು. ವೈಶಾಖ ಮಾಸದಲ್ಲಿ ನಡೆದ ಈ ಉತ್ಸವವು ಮುಂದೆ ಪ್ರತಿವರ್ಷವೂ ಬೌದ್ಧರಿಂದ ವೈಶಾಖೀ ಹಬ್ಬವಾಗಿ ಆಚರಿತವಾಗತೊಡಗಿತು" ೯

ಹಿಂದೂ ಧಾರ್ಮಿಕ ಉತ್ಸವಗಳ ರಥೋತ್ಸವದಲ್ಲಿ ಇದರ ಸಾಮ್ಯವನ್ನು ಗುರುತಿಸಬಹುದು. ರಥವನ್ನು ಅಲಂಕರಿಸಿದ ಬಳಿಕ ನಗರ ಪ್ರದಕ್ಷಿಣೆ ಇರುವುದಷ್ಟೆ ದೇಗುಲದಿಂದ ಹೊರಟ ತೇರು ಹೊರಗೆಲ್ಲ ಹರಿದು ಬಳಿಕ ದೇಗುಲಕ್ಕೆ ಹಿಂದಿರುತ್ತದೆ. ಮೇಲಿನ ಬೌದ್ಧ ಉತ್ಸವದಲ್ಲಿ ದೇಗುಲದಲ್ಲಿದ್ದ ಸ್ಥಿರಮೂರ್ತಿಯು ಮನುಷ್ಯ ಪ್ರಮಾಣದ್ದೆಂದೂ ಉತ್ಸವದಲ್ಲಿ ಸುಮಾರು ಮೂರು ಅಡಿಗಳ ಬುದ್ಧಮೂರ್ತಿ ಯನ್ನು ಇರಿಸಿದ್ದೆಂದೂ, ಹ್ಯೂಯೆನ್‌ತ್ಸಾಂಗ್ ಹೇಳುತ್ತಾನೆ. ಈಗಿನ ಹಿಂದೂ ದೇವಸ್ಥಾನಗಳಲ್ಲೂ ಸ್ಥಿರ ಮೂರ್ತಿ, ಉತ್ಸವಮೂರ್ತಿಗಳಿರುವುದು ಗಮನಾರ್ಹ.

ಮೆರವಣಿಗೆ ಹೋದಂತೆಲ್ಲ ಹರ್ಷನು ಮುತ್ತು ಹಾಗೂ ಚಿನ್ನದ ಹೂಗಳನ್ನೆರ ಚುತ್ತಿದಂತೆ ವರ್ಣಿತವಾಗಿದೆ. ಇದು ಹೂಗಳನ್ನು ಎರಚುವ ಕ್ರಿಯೆಯ ಅತಿಶ-ಯಿತ ವರ್ಣನೆ ಇದ್ದರೂ ಇದ್ದೀತು. ಹಿಂದೂ ರಥೋತ್ಸವಗಳಲ್ಲೂ ಹೂಗಳನ್ನು ಎರಚಲಾಗುತ್ತದೆ. ಹಿಂದೂ 'ಅವಭೃತಸ್ನಾನ' ದ ಪರಿಕಲ್ಪನೆಗೂ ಹರ್ಷನು ಬುದ್ಧನ ಮೂರ್ತಿಯನ್ನು ತೊಳೆಯುತ್ತಿದ್ದ ಕ್ರಿಯೆಗೂ ಸಾಮ್ಯ ಕಾಣಿಸುತ್ತದೆ. ಹೆಚ್ಚಾಗಿ ದೇವಸ್ಥಾನಗಳ ರಥೋತ್ಸವಗಳು ವೈಶಾಖ ಇಲ್ಲವೇ ಚೈತ್ರಮಾಸದಲ್ಲೇ ನಡೆಯುತ್ತವೆ.

ಹೀಗೆ ಈಗ ಪ್ರಚಲಿತವಿರುವ ರಥೋತ್ಸವದಲ್ಲಿ ಬೌದ್ಧ ಸಾಮ್ಯದ ಎಳೆ ಇರುವುದನ್ನು ಗಮನಿಸಬಹುದು.

9. Beal. S; Buddhist Records of the Western World. p. 219.

ಹ್ಯೂಯೆನ್‌ತ್ಸ್ಯಾಂಗ್ ತನ್ನ ವರದಿಯಲ್ಲಿ ಕೊನೆಗೆ ಅಲ್ಲಿ ನಡೆದ ಒಂದು ಅಗ್ನಿ ಆಕಸ್ಮಿಕದ ಬಗೆಗೆ ಹೇಳುತ್ತಾನೆ." ಉತ್ಸವಪ ಕೊನೆಯ ದಿನ ಮತ್ಸರಿಗಳಾದ ಬ್ರಾಹ್ಮಣರು ಚಪ್ಪರಕ್ಕೆ ಬೆಂಕಿಯಿಟ್ಟಾಗ ಅದರ ಒಂದು ಭಾಗ ಪೂರ್ತಿಯಾಗಿ ಭಸ್ಮವಾಯಿತು" ಎನ್ನುತ್ತಾನೆ.

ಈ ಘಟನೆಯನ್ನು ಸಂಕೇತಿಸಲು ಮುಂದೆ ಉತ್ಸವಾಚರಣೆಯ ಕೊನೆಗೆ ಬೆಂಕಿ ಉರಿಸುವುದು ಆಚರಣೆಗೆ ಬಂದಿರಬಹುದೇ? ಇಂದಿಗೂ ಎಷ್ಟೋ ದೇವಸ್ಥಾನ ಗಳಲ್ಲಿ ಉತ್ಸವದ ಕೊನೆಗೆ ಸಿಡಿಮದ್ದು ಸುಡುವುದು ಒಂದು ಅನಿವಾರ್ಯ ಅಂಶವೇ ಆಗಿದೆ. ಈ ಬಗೆಯ ಬೆಂಕಿ ಹೊತ್ತಿಸುವುದಕ್ಕೂ ಮೂಲ ಆ ಘಟನೆಯೇ ಇರಬಹುದು.

ಬೌದ್ಧ ಉತ್ಸವಗಳ ಕೊನೆಯಲ್ಲಿ ಬೆಂಕಿ ಉರಿಸುವುದಕ್ಕೆ ಇನ್ನೊಂದು ಬಗೆಯ ಸಾಂಕೇತಿಕತೆ ಇದ್ದರೂ ಇದ್ದೀತು. ಅದೆಂದರೆ ಬುದ್ಧನು ಮಾರನ ವಿರುದ್ಧ ಗಳಿಸಿದ ಜಯದ ಸಂಕೇತ. ಬುದ್ಧನ ಈ ಮಾರ ವಿಜಯವೇ ಶೈವರಲ್ಲಿ ಮಾರದಹನ ಪರಿಕಲ್ಪನೆಗೂ ಮೂಲವಿದ್ದೀತು. ಹೀಗೆ ಭಾವಿಸಿದರೆ, ಇಂದಿನ ಕಾಮನಹಬ್ಬ ದಲ್ಲಿ ನಿಚ್ಚಳವಾಗಿ ಶೈವ ಹಿನ್ನೆಲೆ ಕಂಡರೂ, ಹಿಂದೆ ಇದಕ್ಕೂ ಮೂಲ ಬೌದ್ಧ ಆಚರಣೆಗಳೇ ಎನ್ನಬಹುದು.

ಉತ್ಸವಗಳ ಅಂಗವಾಗಿ ಅನ್ನದಾನ ಹೆಚ್ಚುಕಡೆಗಳಲ್ಲಿ ನಡೆಯುತ್ತದೆ; ಸಂಗೀತಗೋಷ್ಠಿಗಳು ನಡೆಯುತ್ತವೆ. ಈ ರೀತಿ ಇಂದು ದೇವಸ್ಥಾನಗಳ ಉತ್ಸವ ಗಳು ಸಾಂಸ್ಕೃತಿಕ ಮೌಲ್ಯವುಳ್ಳವಾಗಿವೆ. ಈ ಸಾಂಸ್ಕೃತಿಕ ಬೆಳವಣಿಗೆಗೆ ಬೌದ್ಧ ಕೊಡುಗೆ ಇದ್ದೇ ಇದ್ದೀತು. ಬೌದ್ಧಕೊಡುಗೆ ಎಂದರೆ ಅದು ಮಹಾಯಾನ ಶಾಖೆಯ ಕೊಡುಗೆ ಎನ್ನುವುದನ್ನು ನೆನಪಿಡಬೇಕು. ಅಲ್ಲಿ ದೇವತಾಸೃಷ್ಟಿ–ಪೂಜೆ, ಉತ್ಸವ, ಪವಾಡಗಳಿಗೆ ಇನ್ನಿಲ್ಲದ ಮಹತ್ವ ಬಂದಾಗ ಹಿಂದೂಧರ್ಮವು ತನ್ನ ಚೌಕಟ್ಟಿಗೆ ತಕ್ಕ ಬದಲಾವಣೆಗಳೊಂದಿಗೆ ಅವನ್ನು ಅಳವಡಿಸಿಕೊಂಡಿತು.

ಶ್ರೀಕಂಠಶಾಸ್ತ್ರಿಯವರು ಲಡಾಕ್ ಪರಿಸರದಲ್ಲಿ ಇಂದಿಗೂ ಪ್ರಚಲಿತವಿರುವ ಬೌದ್ಧ ಮುಖವಾಡ ನೃತ್ಯಗಳ ಬಗೆಗೆ ಬರೆಯುತ್ತ :

"ಇಲ್ಲಿ ಆಚರಿಸಲ್ಪಡುವ ವಾರ್ಷಿಕ ಹಬ್ಬಗಳಲ್ಲಿ ವಿಹಾರದ ಅನುಯಾಯಿಗಳು ಪ್ರಬಲವಾಗಿ ಸೇರಿ ಮೂರುದಿನ ವಿವಿಧ ಕರ್ಮಗಳನ್ನಾಚರಿಸುವರು. ಇವುಗಳ ಲ್ಲೆಲ್ಲ ಮುಖವಾಡ ಧರಿಸಿಕೊಂಡು ಮಾಡುವ ನೃತ್ಯವೇ ಮುಖ್ಯ. ಲಡಾಕಿನ ರಾಜಧಾನಿಯಾದ ಲೇಹ್ ಇದರ ಕೇಂದ್ರಗಳಲ್ಲೊಂದಾಗಿದೆ. ಇಲ್ಲಿನ 'ಹಿಮಿಸ್ ಗೊಂಪ' (ವಿಹಾರ) ಅತ್ಯಂತ ಪ್ರಾಚೀನ ಮತ್ತು ಐಶ್ವರ್ಯಯುಕ್ತವಾದುದಾಗಿದೆ. ಇದು ಲೇಹ್ ಪಟ್ಟಣಕ್ಕೆ ೩೫ ಮೈಲಿ ದೂರದಲ್ಲಿದೆ.

"ಈ ಮುಖವಾಡ ನೃತ್ಯದಲ್ಲಿ ಭಾಗವಹಿಸುವವರು ಸನ್ಯಾಸಿ ಲಾಮಾಗಳು. ವಾದ್ಯಮೇಳದವರೂ ಲಾಮಾಗಳು. ವಾದ್ಯಮೇಳಗಳಲ್ಲಿ ತುತ್ತೂರಿಗಳು, ದೊಡ್ಡ ತಾಳಗಳು, ಮೃದಂಗಗಳು, ಕ್ಲಾರಿಯೊನೆಟ್‌ಗಳು ಇರುತ್ತವೆ. ಮಠದ ಅಂಗಳದಲ್ಲಿಯೇ ನೃತ್ಯಗಳು ನಡೆಯುತ್ತವೆ" 10

ಎನ್ನುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನೆಯಲ್ಲೂ ಅಡಕೆ ಮರದ ಹಾಳೆಯ, ಲೋಹದ ಮೊಗವಾಡ ಧರಿಸಿ ಕುಣಿಯುವ ಸಂಪ್ರದಾಯವಿದೆ. ಇವೆಲ್ಲ ಪ್ರಾಯಶಃ ಇವೆರಡೂ ಸಂಪ್ರದಾಯಗಳಿಗೆ ಹಿಂದಿನ ಪ್ರಾಕ್ ಸಂಸ್ಕೃತಿಯ ಪಳೆಯುಳಿಕೆಗಳೆಂದೇ ಹೇಳಬೇಕು. ಒಂದೆಡೆಯಿಂದ ಬೌದ್ಧರೂ ಇವನ್ನು ಅಷ್ಟೋ ಇಷ್ಟೋ ಸ್ವೀಕರಿಸಿದರು. ಇನ್ನೊಂದೆಡೆಯಿಂದ ಹಿಂದೂಗಳಲ್ಲೂ ಉಳಿಯಿತು– ಹೀಗೆ ಹೇಳಬೇಕಷ್ಟೆ.

'ಕರಗ'ದ ಆಚರಣೆ ಕರ್ನಾಟಕದಲ್ಲೂ ಇದೆಯಷ್ಟೆ. ಬೆಂಗಳೂರಿನ ಕರಗ ತುಂಬ ಪ್ರಸಿದ್ಧವಾದದ್ದು. ಇಂದು ಆಚರಿತವಾಗುತ್ತಿರುವ 'ಕರಗ'ದಲ್ಲಿ ಬೌದ್ಧ ಅಂಶವು ಕಾಣಿಸುವುದಿಲ್ಲವಾದರೂ ಇದರ 'ಧರ್ಮರಾಯನ ಹಬ್ಬ' ಎಂಬ ಹೆಸರು ಕುತೂಹಲ ಹುಟ್ಟಿಸುತ್ತದೆ. ಪಾಂಡವಾಗ್ರಜ ಧರ್ಮರಾಜನಿಗೆ ಈ ಉತ್ಸವದಲ್ಲಿ ಪ್ರಾಧಾನ್ಯ ಕಾಣಿಸುವುದಿಲ್ಲ. ಮೆರವಣಿಗೆ ನಡೆಯುವುದಾದರೂ ದ್ರೌಪದಿ-ಅರ್ಜುನರ ಮೂರ್ತಿಗಳದ್ದು. ಹಾಗಾದರೆ 'ಧರ್ಮರಾಯನ ಹಬ್ಬ' ಹೆಸರಿಗೆ ಬೇರೆಯ ಮೂಲ ಇದ್ದೀತೇ ಎನಿಸುತ್ತದೆ.

ಇದಕ್ಕೆ ಹಿನ್ನೆಲೆಯಾಗಿ ಬಂಗಾಳದಲ್ಲಿ ಇಂದಿಗೂ ಆಚರಿತವಾಗುವ ಧರ್ಮ ಪೂಜೆಯನ್ನು ನೋಡಬೇಕು. ಅಲ್ಲಿಯ ಧರ್ಮ ಅಥವಾ ಧರ್ಮ ನಿರಂಜನ ಎಂದರೆ ಆದಿಬುದ್ಧನ ರೂಪವೇ ಎಂದೂ ಕೆಲವೆಡೆ ಆದಿಬುದ್ಧನ ಮಗನೆಂದೂ ಹೇಳಲಾಗುತ್ತಿದೆ. ಬುದ್ಧನ ಸಂಬಂಧಿತ ಗುಣಗಾನಗಳನ್ನು ಧರ್ಮನ ಬಗೆಗೆ ಹಾಡಲಾಗುತ್ತದೆ. 'ಧರ್ಮಗೀತಾ' 'ಧರ್ಮಪೂಜಾ ಪದ್ಧತಿ' ಮತ್ತು 'ಶೂನ್ಯಪುರಾಣ'ಗಳಂತಹ ಕೃತಿಗಳಲ್ಲಿ ಆ ವಿವರಗಳು ಸಿಗುತ್ತವೆ. ಆ ಪ್ರಕಾರ ಧರ್ಮನ ಆರಾಧನೆಯಲ್ಲಿ ಜೊತೆಗೇ 'ಆದ್ಯಾ' ಕೂಡಾ ಇರುತ್ತಾಳೆ. ಧರ್ಮನ ಶರೀರದಿಂದಲೇ ಈಕೆಯೂ ಹೊರಹೊಮ್ಮಿದಳು ಎಂದು ಹೇಳಲಾಗಿದೆ. ಧರ್ಮನ ರೂಪವನ್ನು 'ಶೂನ್ಯ' ಎಂದು ಕರೆಯಲಾಗಿದೆ. ಬಂಗಾಳದಲ್ಲಿ ಹೆಚ್ಚಿನೆಡೆಗಳಲ್ಲಿ ಧರ್ಮ ಹಾಗೂ ನಿರಂಜನ ಇವರನ್ನು ಏಕತ್ರಗೊಳಿಸಿ ನೋಡಲಾಗಿದೆ. 'ಧರ್ಮ' ಹಾಗೂ 'ಆದ್ಯಾ' ಇವರ ಪೂಜೆಗಳು ಬಂಗಾಳದಲ್ಲಿ ವ್ಯಾಪಕವಾಗಿರುವ ಒಂದು ಜಾನಪದ ಹಬ್ಬ 'ಧರ್ಮ ಮಂಗಲ'ದ ಪ್ರಕಾರ ಅಲ್ಲಿ ಕರ್ಣಸೇನ ಎಂಬಾತನ ಮಗ ಲೌಸೇನನಿಂದಾಗಿ ಧರ್ಮ

---

10. ಶ್ರೀಕಂಠಶಾಸ್ತ್ರೀ ಎಸ್. ಸಂಶೋಧನ ಲೇಖನಗಳು. ಪು. 425.

ಪೂಜೆಯು ಪ್ರಾರಂಭವಾಯಿತು. ವೈಶಾಖಮಾಸದ ಶುಕ್ಲಪಕ್ಷದ ಮೂರನೆಯ ದಿನದಿಂದ ಈ ಹಬ್ಬ ನಡೆಯುತ್ತದೆ. ಆ ದಿನ ಘಟಸ್ಥಾಪನೆ ಮಾಡಿ ಮುಂದಿನ ಹುಣ್ಣಿಮೆಯೆಂದು ಉತ್ಸವ ಕೊನೆಯಾಗುತ್ತದೆ. ಹೀಗೆ ಹನ್ನೆರಡು ದಿನಗಳು ನಡೆಯುತ್ತವೆ. ಧರ್ಮನ ಬಗೆಗಿನ ಸ್ತುತಿಗಳೂ, ಅಷ್ಟಕಗಳೂ, ಬಂಗಾಳಿಯಲ್ಲಿ ಹೇರಳವಾಗಿವೆ ಧರ್ಮವನ್ನು ಆತ ಶೂನ್ಯನಾದುದರಿಂದ ಪಾದಗಳ ರೂಪದಲ್ಲಿ ಕೆಲವೊನ್ಮೆ ಆನೆಯಾಗಿ ಸಾಂಕೇತಿಕವಾಗಿ ಗುರುತಿಸಲಾಗುತ್ತಿದೆ. ಆಧ್ಯಾ ಹಾಗೂ ಧರ್ಮ ಇವರ ನಡುವೆ ಮದುವೆ ನಡೆಯುವ ಉತ್ಸವವೂ ಇವರಲ್ಲಿದೆ. ಕೊನೆಯ ದಿನ ದೊಡ್ಡ ಉತ್ಸವದ ಬಳಿಕ ದೇಹಾರ ಭಂಗ ಮಾಡಲಾಗುತ್ತದೆ. ಧರ್ಮನಿಗೆ ಧರ್ಮರಾಜ ಎಂದೂ ಹೇಳುವುದಿದೆ. ಬಂಗಾಳದಲ್ಲಿ ಪ್ರಚಲಿತವಿರುವ ಈ ಆರಾಧನೆ ಕಳಿಂಗದೇಶದಲ್ಲೂ ಇದೆ ಎನ್ನಲಾಗಿದೆ. ಬಂಗಾಳದಲ್ಲೇ ಕೆಲವೆಡೆ ಮುಸಲ್ಮಾನ್ ಪ್ರಭಾವದಿಂದಾಗಿ ಅದರಲ್ಲಿ ಇಸ್ಲಾಂ ಪರ ಸ್ತುತಿಗಳೂ ಸೇರಿವೆ ಎಂದಾಗ ಪ್ರಾದೇಶಿಕವಾದ ಧಾರ್ಮಿಕ ಸ್ಥಿತಿಗನುಗುಣವಾದ ಬದಲಾವಣೆ ಸಾಧ್ಯ ಎಂದಂತಾಯಿತು.[11]

ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಕರಗವೂ ಇಂದು ತೋರುವಂತೆ ಶಾಕ್ತ ಆರಾಧನೆಯಾದರೂ ಅದಕ್ಕೆ 'ಧರ್ಮರಾಯನ ಕರಗ' ಎಂಬ ಹೆಸರೂ ಇರುವುದು ಇದೊಂದು ಪ್ರಾಚೀನ ಬೌದ್ಧ ಉತ್ಸವವಾಗಿದ್ದು. ಬಳಿಕ ಹಿಂದೂ ಉತ್ಸವವಾಗಿರ ಬಹುದಾದ ಸಂಭವಕ್ಕೆ ಸಾಕ್ಷಿ. ಬೌದ್ಧರ ಅಹಿಂಸೆಯ ಪರಿಕಲ್ಪನೆ ಬಂಗಾಳದ ಧರ್ಮ ಉತ್ಸವದಲ್ಲಿ ಇಂದಿಗೂ ಇದೆ. ಅಂತೆಯೇ ಕರಗದಲ್ಲಾದರೂ ಆಚಾರ-ವಿಚಾರ ಶುದ್ಧಿಗಳು ಮತ್ತು ಅಹಿಂಸಾಚರಣೆಗಳು ಇರುವುದು ಗಮನಾರ್ಹ.

ಈ ವಿಚಾರವಾಗಿ ಎಸ್. ಶ್ರೀಕಂಠಶಾಸ್ತ್ರಿಯವರು, 'ಸುಮಾರು ಕ್ರಿಸ್ತಶಕ ಎರಡನೆಯ ಶತಾಬ್ದದಲ್ಲಿ ಬೌದ್ಧಮಹಾಯಾನ ಪಂಥವು ದಕ್ಷಿಣಾಪಥದಲ್ಲಿ ಪ್ರಚಾರ ವಾದಾಗ ಆ ಪಂಥದ ವಿದ್ಯಾಭಿಮಾನಿಯಾದ ದೇವತೆಯು ತಿರುಪತಿ, ಧರ್ಮಸ್ಥಳ, ಬೆಂಗಳೂರ, ಕೇರಳ, ತಮಿಳುದೇಶಗಳಲ್ಲಿ 'ಮಂಜುನಾಥ' ನೆಂದೂ 'ಧರ್ಮರಾಯ' ನೆಂದೂ ಪ್ರಸಿದ್ಧವಾಗಿರಬಹುದು"[12] ಎಂದು ಹೇಳಿರುವುದು ಇಲ್ಲಿಯ ಪ್ರಮೇಯಕ್ಕೆ ಪೂರಕವಾದ ಊಹೆಯೇ ಆಗಿದೆ.

ಕರ್ನಾಟಕದ ಮಧ್ಯಯುಗೀನ ಸಾಧಕರು ಬೌದ್ಧಸಿದ್ಧರ ಬಗೆಗೆ ತಿಳಿದೇ ಇದ್ದರು. ಅಲ್ಲಮ ಹಾಗೂ ಬಸವಣ್ಣ ಇಬ್ಬರಿಗೂ ನಾಥಪಂಥದ ಮೂಲಕವಾಗಿ ಬೌದ್ಧಧರ್ಮದ ಪರಿಚಯ ಇದ್ದಿರಬೇಕು. ಮಧ್ಯಯುಗದಲ್ಲಿ ಬೌದ್ಧರ ಸಿದ್ಧ ಪರಂಪರೆಯೂ ಆ ಹಿಂದಿನವರ ಹಾಗೆಯೇ ಜಾತಿಪದ್ಧತಿ, ಅಸ್ಪೃಶ್ಯತೆಗಳ

11. Sarkar B. K; The Folk Element in Hindu culture. p. 99.
12. ಶ್ರೀಕಂಠಶಾಸ್ತ್ರಿ ಎಸ್. ಪೂರ್ವೋಕ್ತ. ಪು. 463.

ನಿವಾರಣೆಗಾಗಿ ಹೋರಾಡಿತು. ಇಷ್ಟಲ್ಲದೆ ವೈಷ್ಣವ ಹಾಗೂ ವೀರಶೈವ ಪಂಥಗಳ 'ಶರಣಾಗತಿ' (Submission)ಯ ಪರಿಕಲ್ಪನೆಯ ಮೇಲೂ ಬೌದ್ಧಧರ್ಮದ ಪ್ರಭಾವ ಕಾಣಿಸುತ್ತದೆ.

ಈ ವಿಚಾರವಾದ ಪರಿಶೀಲನೆಯನ್ನು ಮುಗಿಸುವ ಮುನ್ನ ಇನ್ನೆರಡು ಮುಖ್ಯ ಅಂಶಗಳನ್ನು ಹೇಳಬೇಕಾಗಿದೆ. ಅವನ್ನೂ ರಾಷ್ಟ್ರೀಯ ಭಾವೈಕ್ಯಕ್ಕೆ ಬೌದ್ಧಧರ್ಮದ ಕೊಡುಗೆಗಳಾಗಿ ಹೇಳಬಹುದು.

ಮೊದಲನೆಯದು, ಬೌದ್ಧರ ಸಂಘದ ಪರಿಕಲ್ಪನೆ 'ಸಂಘ'ವೆಂದರೆ ಬರೀ ಸಾಧುಗಳ ಕೂಟವಲ್ಲ. 'ಸಂಘ'ವು ಪ್ರಜಾಪ್ರಭುತ್ವದ ಮಾದರಿಯ ಕೂಟವಾಗಿತ್ತು. ಇದೇ ರಾಜ್ಯಪದ್ಧತಿಗೂ ಆದರ್ಶವಾಗಿತ್ತು. ಗುಪ್ತರ ಕಾಲದ ವರೆಗೂ ಇದ್ದ ಈ ರಾಜ್ಯಪದ್ಧತಿಯು ಆ ಬಳಿಕ ಮರೆಯಾದರೂ 'ಪೌರ ಜಾನಪದ' ಕೂಟಗಳಾಗಿ ಅನಂತರವೂ ಮುಂದುವರಿದು ಇಂದಿನ ಗ್ರಾಮಪಂಚಾಯಿತಿಗಳಲ್ಲಿ ಮರುಹುಟ್ಟು ಪಡೆದಿವೆ

ಬೌದ್ಧರ 'ಸಂಘ'ವೆಂದರೆ ವ್ಯಾಪಕ ಅರ್ಥವುಳ್ಳುದು. ಧರ್ಮದಲ್ಲಿ, ಬುದ್ಧನಲ್ಲಿ, ಸಂಘದಲ್ಲಿ ಶ್ರದ್ಧೆಯುಳ್ಳ ಎಲ್ಲರ ಕೂಟವೆಂಬ ಅರ್ಥ ಆ ಪದಕ್ಕಿದೆ. ಭಿಕ್ಷುಗಳು, ಭಿಕ್ಷುಣಿಯರು ಇದ್ದಂತೆಯೇ ಇತರರು–ಅವರನ್ನು ಉಪಾಸಕ, ಉಪಾಸಿಕೆ ಎನ್ನಲಾಗುತ್ತಿದೆ – ಇರುತ್ತಾರೆ. ಅಲ್ಲಿ ಯಾವುದೇ ಜಾತಿ, ವರ್ಗ, ಅಂತಸ್ತು, ವಯೋಮಾನ, ಲಿಂಗಗಳ ಭೇದವಿರುವುದಿಲ್ಲ. ವಿಶ್ವಭ್ರಾತೃತ್ವಕ್ಕೆ ಇದು ದೊಡ್ಡ ಕೊಡುಗೆಯೆಂದೇ ಹೇಳಬೇಕು.

ಎರಡನೆಯದು, ಚಕ್ರವರ್ತಿ ಅಶೋಕನ ಕಾಲದ ಧರ್ಮಾತೀತ(Secular) ಪರಿಕಲ್ಪನೆ. ಧರ್ಮಾತೀತವೆಂದರೆ, ರಾಜ್ಯವ್ಯವಸ್ಥೆಯು ಎಲ್ಲ ಧರ್ಮಗಳನ್ನೂ ಸಮಾನವಾಗಿ ನೋಡುವ, ವರ್ತಿಸುವ ಕ್ರಮವಷ್ಟೆ. ಅಶೋಕನು ತನ್ನ ಶಾಸನಗಳಲ್ಲಿ ಕೂಡಾ ವಿಶ್ವಾತ್ಮಕವಾದ ಮಾನವೀಯ ತತ್ತ್ವಗಳನ್ನೇ ಸಾರಿದ್ದಾನೆ; ಹೊರತಾಗಿ ನೇರವಾಗಿ ಬೌದ್ಧಧರ್ಮದ ಬೋಧನೆಯನ್ನೇನೂ ಮಾಡಿಲ್ಲ.

ಜಾತಿ ಮತ್ತು ವರ್ಣಗಳ ಭೇದವನ್ನು ಬೌದ್ಧಧರ್ಮವು ಪ್ರಾರಂಭದಿಂದಲೂ ಖಂಡಿಸುತ್ತಲೇ ಬಂದಿದೆ. ಸಮಾಜದ ಅತ್ಯಂತ ಕೆಳಸ್ತರದ ವ್ಯಕ್ತಿಗೂ ಅತ್ಯುನ್ನತಿಯನ್ನೈದುವ ಅವಕಾಶವನ್ನು ಅದು ಒದಗಿಸಿತಲ್ಲದೆ, ಸ್ತ್ರೀಯರಿಗೂ ಈ ಬಗೆಯ ಸಾಧನಾರಂಗದ ಬಾಗಿಲನ್ನು ತೆರೆದಿಟ್ಟಿತು.

ರಾಷ್ಟ್ರಮಟ್ಟದಲ್ಲಿ ಸಾಮಾಜಿಕ ಸೌಹಾರ್ದ ಮತ್ತು ಜನಾಂಗಿಕ ಸಾಮರಸ್ಯಗಳನ್ನು ಬೌದ್ಧಧರ್ಮವು ಉಳಿಸಿ ಬೆಳೆಸಿತು. ಈ ಕಾರಣಕ್ಕಾಗಿಯೇ ಪ್ರಾಚೀನ ಭಾರತಕ್ಕೆ ಆಕ್ರಮಕರಾಗಿ ಬಂದ ಗ್ರೀಕರು, ಶಕರು, ಪಹ್ಲವರು, ಕುಶಾನರು

ಮತ್ತು ಹೂಣರು ಕಾಲಾಂತರದಲ್ಲಿ ಇಲ್ಲಿಯ ಸಮಾಜದಲ್ಲಿ ಒಂದಾದರು. ಬೌದ್ಧ ಧರ್ಮವು ವರ್ಣ ಪ್ರತ್ಯೇಕತಾ ವ್ಯವಸ್ಥೆಯ ವಿರುದ್ಧವಾಗಿ ಸಾರಿದ ಸಮರದ ಕಾರಣ ವಾಗಿಯೇ ಇಂಥ ಭಿನ್ನ ಜನಾಂಗಗಳೂ ಇಲ್ಲಿಯ ರಾಷ್ಟ್ರೀಯ ಸಾಂಸ್ಕೃತಿಕ ಪ್ರವಾಹ ದಲ್ಲಿ ಒಂದಾಗುವುದು ಸಾಧ್ಯವಾಯಿತು.

ಆಧುನಿಕ ಭಾರತೀಯರಲ್ಲೂ ಅನೇಕರ ಮೇಲೆ ಬೌದ್ಧಧರ್ಮವು ಗಾಢವಾದ ಪ್ರಭಾವವನ್ನು ಬೀರಿದೆ. ಸ್ವಾಮಿ ವಿವೇಕಾನಂದ, ಮಹಾತ್ಮಾಗಾಂಧಿ, ರವೀಂದ್ರನಾಥ ಠಾಕೂರ್. ಅರವಿಂದ, ರಾಧಾಕೃಷ್ಣನ್, ಜವಾಹರಲಾಲ್ ನೆಹರೂ, ವಿನೋಬಾ, ಅಂಬೇಡ್ಕರ ಇವರೆಲ್ಲರ ವಿಚಾರಗಳಲ್ಲಿ ಬೌದ್ಧಪ್ರಭಾವ ದಟ್ಟವಾಗಿ ಕಾಣಿಸುತ್ತದೆ ಇವರೆಲ್ಲರೂ ರಾಷ್ಟ್ರೀಯ ಭಾವೈಕ್ಯಕ್ಕಾಗಿ ದುಡಿದ ವರೇ ಆದ ಕಾರಣ ಬೌದ್ಧಧರ್ಮದ ಪರೋಕ್ಷ ಪ್ರಭಾವವನ್ನು ಇಲ್ಲಿಯೂ ಕಾಣುತ್ತೇವೆ.

ಭಾರತ ಗಣರಾಜ್ಯದ ರಾಷ್ಟ್ರಲಾಂಛನಗಳಾದ ಧರ್ಮಚಕ್ರ, ಸಿಂಹಮುಖ ಇವನ್ನು ಸಾರಾನಾಥದ ಬೌದ್ಧಶಿಲ್ಪವಿನ್ಯಾಸದಿಂದ ಸ್ವೀಕರಿಸಿದ್ದು, ಇವು ವಿಶ್ವ ಶಾಂತಿ ಹಾಗೂ ಜಾಗೃತಿಗಳ ಸಂಕೇತಗಳಾಗಿವೆ.

ವಿ. ವಿ. ಗೋಖಲೆಯವರು ಹೇಳುವಂತೆ, ಇಂದಿನ ಭಾರತದಲ್ಲಿ ನಾವು ಪ್ರಾಚೀನ ಬೌದ್ಧಧರ್ಮದ ಚೈತನ್ಯವನ್ನು ಕಾಣುತ್ತೇವೆ.[13] ಅದರ ಮುಖ್ಯ ಗತಿಗಳಾಗಿ ವೈಜ್ಞಾನಿಕ ಅನ್ವೇಷಣ ಬುದ್ಧಿ, ಸಾಮಾಜಿಕ ಸಮಾನತೆ ಹಾಗೂ ಲೋಕಜೀವನದ ಸಂರಕ್ಷಣೆಗಳನ್ನು ಅವರು ಕಾಣಿಸುತ್ತಾರೆ.

ಸ್ವಾಮಿ ವಿವೇಕಾನಂದರು ಈ ವಿಚಾರವಾಗಿ ಇನ್ನೂ ಸ್ಪಷ್ಟವಾಗಿ ಹೇಳುತ್ತ, ಪ್ರಾಣಿವಧೆ, ಮದ್ಯಪಾನ–ಇಂಥ ಅಭ್ಯಾಸಗಳ ನಿವಾರಣೆ ಅಥವಾ ಗಮನಾರ್ಹ ನಿಯಂತ್ರಣವು ಬೌದ್ಧಧರ್ಮದಿಂದಾಗಿ ಸಾಧ್ಯವಾಯಿತು ಎನ್ನುತ್ತಾರೆ.

ಐತಿಹಾಸಿಕವಾಗಿ ನೋಡಿದರೆ, ಚಕ್ರವರ್ತಿ ಅಶೋಕನ ಕಾಲದಲ್ಲಿ ಮೊತ್ತ ಮೊದಲಾಗಿ ಭಾರತವು ರಾಜಕೀಯವಾಗಿ ಒಂದು ಆಡಳಿತೆಯ ಕಕ್ಷೆಗೆ ಅಳವಟ್ಟು ದನ್ನು ಕಾಣುತ್ತೇವೆ. ಈ ಬಗೆಯ ರಾಜಕೀಯ ಐಕ್ಯವು ಇನ್ನಿತರ ಸಾಂಸ್ಕೃತಿಕ ಕ್ಷೇತ್ರಗಳಿಗೂ ವ್ಯಾಪಿಸಲು ಕಾರಣವಾಯಿತು. ಹೀಗೆ ಬೌದ್ಧ ಧರ್ಮ–ಸಂಸ್ಕೃತಿ

---

13. Gokhale V. V: Krishna and The Buddhist Literabure in The Cultunal Forum. Vol. 36. New Delhi 1968. p. 72.
14. The Complete works of Swami Vivekananda. VOl. V. p. 229-311, 316, 401.

ಇದು ತನ್ನ ಅಸ್ತಿತ್ವದ ನಿಡುಗಾಲದಲ್ಲಿ ಉದ್ದಕ್ಕೂ ಈ ದೇಶದ ಭಾವೈಕ್ಯಕ್ಕಾಗಿ ಪ್ರೇರಣೆಯನ್ನಿತ್ತಿದೆ, ಪೋಷಣೆ ಮಾಡಿದೆ ಎನ್ನಬಹುದು. ಈ ನೆಲದಲ್ಲಿ ತನ್ನ ಮೂಲಸ್ವರೂಪದಲ್ಲಿ ಅದು ಈಗ ಕಾಣಿಸದಾದರೂ ಅದರ ಪ್ರತ್ಯಕ್ಷ ಇಲ್ಲವೆ ಪರೋಕ್ಷ ಪ್ರಭಾವಗಳನ್ನು ಇಂದಿಗೂ ನಮ್ಮ ರಾಷ್ಟ್ರಜೀವನದಲ್ಲಿ ಗುರುತಿಸಲು ಸಾಧ್ಯವಾಗುತ್ತದೆ.

ರಾಷ್ಟ್ರೀಯ ಭಾವೈಕ್ಯ ಮತ್ತು ಕ್ರೈಸ್ತಧರ್ಮ

● ವಿಲ್ಯಂ ಮಾಡ್ತ

ಕ್ರೈಸ್ತ ಧರ್ಮವನ್ನು ನಾವು ಇಬ್ಬಗೆಯಾಗಿ ಗಮನಿಸಬಹುದು: ಒಂದು, ಆಂದೋಲನ (Movement)ವಾಗಿ; ಇನ್ನೊಂದು, ಸಂಘಟನೆ (Intstitution)ಯಾಗಿ. ಸಂಘಟನೆಯಿಂದ ವಿಶಿಷ್ಟ ಸಮಾಜ ಉಂಟಾಗಬಹುದಾದರೆ ಆಂದೋಲನದಿಂದ ವಿಶಿಷ್ಟ ಜಾಗೃತಿ / ಶಕ್ತಿಯುಂಟಾಗುತ್ತದೆ. ಸಂಘಟನೆ ಮಸಾಹತುಶಾಹಿ ಮನೋಭಾವಕ್ಕೆ ಎಡೆಮಾಡಿಕೊಟ್ಟರೆ, ಆಂದೋಲನ ಜನಸೇವೆ ಯತ್ತ ಧುಮುಕುತ್ತದೆ. ಜಗತ್ತಿನ ಧರ್ಮಗಳನ್ನು ಪರಿವೀಕ್ಷಿಸಿದಾಗ ಕ್ರೈಸ್ತಧರ್ಮ ಇಂದು ಅತ್ಯಂತ ಸಂಘಟಿತ ಧರ್ಮವೆಂಬುದು ಸತ್ಯದ ಮಾತು. ವೈಟಿಕನ್ ನಗರದಲ್ಲಿ ಸಂತ ಪೇತ್ರನ (St. Peter) ಪೀಠವನ್ನು ಅಲಂಕರಿಸುವ ಜಗದ್ಗುರು (Pope) ಅದೃಶ್ಯ ಕ್ರೈಸ್ತ (*Christos*)ನ ಅರ್ಥಾತ್ 'ವಿಶ್ವ ಪುರುಷ'ನ (ಋಗ್ವೇದ X. ೯೦, ಶ್ವೇತಾಶ್ವತರ ಉಪನಿಷತ್ತು ೩೧೪–೧೭) ದೃಶ್ಯ ರೂಪ (D'Sa 71–95)ವೆಂದು ರೋಮನ್ ಕಥೋಲಿಕರ ಅಭಿಮತ. ಜಗದ್ಗುರು, ಕ್ರೈಸ್ತ ಸಂಘಟನೆಯ ಉಚ್ಚ ಅಧಿಕಾರಿ.

ಕ್ರೈಸ್ತ ಆಂದೋಲನ :

ಕ್ರೈಸ್ತಾಂದೋಲನವೆಂಬುದು ವಿಶಿಷ್ಟ ಸಂಘಟನೆಯಲ್ಲದ ಒಂದು ಜೀವನ-ಶೈಲಿ (Life style). ಮೂಲತಹ ಇದು ಯೇಸು (*Yeeshua*(Heb.)ವಿನ ಜೀವನಶೈಲಿ. ಈತ ಹುಟ್ಟಿದ್ದು ರಾಜಧಾನಿಯಲ್ಲಿ ಅಲ್ಲ, ದೂರದ ಬೆತ್ಲೆಹೇಮ ಹಳ್ಳಿಯಲ್ಲಿ. ಆತ ಬೆಳೆದದ್ದು ನಸರೇತ್ ಎಂಬ ಕೆಟ್ಟ ಊರಿನಲ್ಲಿ (ಯೊ ೧.೪೬). ಆತ ಕುಲದಿಂದ ಇಸ್ರೇಲ್ ಜನಾಂಗದ ಅಬ್ರಾಹ್ಮಣ (Non-priestly) ವರ್ಗಕ್ಕೆ ಸೇರಿದವನು (Kung, 177.); ವೃತ್ತಿಯಿಂದ ಬಡಗಿ.

ಈ ಬಡ ಬಡಗಿಯಲ್ಲಿ ದೈವತ್ವವನ್ನು ಕಂಡ ಹಲವರು ಅವರ ಶಿಷ್ಯಂದಿರ ರಾದರು. ಇಸ್ರೇಲ್ ಜನಾಂಗದ ಚೌಕಟ್ಟಿನಲ್ಲಿ ಹನ್ನೆರಡು ಬುಡಕಟ್ಟುಗಳ ಜನ ರಿದ್ದರು. ಇವರೆಲ್ಲರ ಪ್ರತಿನಿಧಿಗಳೆಂಬಂತೆ ಆ ಶಿಷ್ಯಂದಿರರ ಪೈಕಿ ಹನ್ನೆರಡು ಜನ ರನ್ನು ತನ್ನ ಜಂಗಮರನ್ನಾಗಿ (Apostles) ಆತ ಆರಿಸಿಕೊಂಡನು. ಸ್ವತಃ

ನಾಯಕನೇ ಕಿಂಕರರ ಕಿಂಕರನಾಗಿ ಜನಸೇವೆಯಲ್ಲಿ ನಿರತರಾಗಿದ್ದಾಗ (ಮತ್ತಾ ೨೦.೨೮; ಮಾ ೨೨ ೨೭, ಯೊ ೧೩.೧-೧೭) ಈ ಜಂಗಮರೂ ಆತನಿಗೆ ಸಾಕ್ಷಿಯಾಗಿ ಜೀವಿಸಿದರು.

ಯೇಶ್ವಾಂದೋಲನದ ಪ್ರವಾಹವನ್ನು ಕಂಡು ಹೆದರಿಕೊಂಡ ಧರ್ಮಾಧಿಕಾರಿಗಳು ಅದನ್ನು ಧರ್ಮದ್ರೋಹಿ ಶಕ್ತಿಯೆಂದು ಪ್ರಚಾರ ಮಾಡಿದರಲ್ಲದೆ ರಾಜಕೀಯ ತಂತ್ರಗಳ ಮೂಲಕ ಅದನ್ನು ಚಿಗುರಿನಲ್ಲಿಯೇ ಚಿವುಟಿದರು. ಹೀಗೆ ಶೋಷಣೆ-ವಿರೋಧ ಆಂದೋಲನಗಳನ್ನು ನಾಶಪಡಿಸುವಲ್ಲಿ ಧಾರ್ಮಿಕ ಸಂಘಟನೆಗಳು ರಾಜಕೀಯ ಸಂಘಟನೆಗಳೊಡನೆ ಹೇಗೆ ಕೂಡಿಕೊಂಡು ಕೆಲಸ ಮಾಡುತ್ತವೆಂಬುದಕ್ಕೆ ಇದೊಂದು ಉತ್ತಮ ಐತಿಹಾಸಿಕ ನಿದರ್ಶನವಾಯಿತು.

ಯೇಶ್ವಾಂದೋಲನ :

ಯೇಸು ತನ್ನ ಜೀವನದ ಅರ್ಥವನ್ನು ಹುಡುಕಿಕೊಂಡು ಬಾಳಿದ ಜವಾಬ್ದಾರಿಯುತ ಐತಿಹಾಸಿಕ ವ್ಯಕ್ತಿ. ಆತ ತನ್ನ ಸುತ್ತುಮುತ್ತಲಿನ ಸಾಮಾಜಿಕ ಹಾಗೂ ರಾಜಕೀಯ ಜೀವನವನ್ನು ತೀವ್ರವಾಗಿ ಹಾಗೂ ತೀಕ್ಷ್ಣವಾಗಿ ಗಮನಿಸಿದ. ಇಸ್ರೇಲ್ ಜನಾಂಗ ಆರ್ಥಿಕವಾಗಿ, ಸಾಮಾಜಿಕವಾಗಿ ಗುಲಾಮವಾಗಲು ಕಾರಣವೇನೆಂದು ಪರೀಕ್ಷಿಸಿದ. ಮಠಾಧಿಪತ್ಯ ಸಂಸ್ಥಾನ (Temple state)ವೇ ಮುಗ್ಧ ಜನರ, ಬಾಯಿ ಇಲ್ಲದವರ, ಶೋಷಣೆಗೆ, ಅವರ ಗುಲಾಮಗಿರಿಗೆ, ಮೂಲ ಕಾರಣವೆಂದು ಆತನಿಗೆ ಸ್ಪಷ್ಟವಾಯಿತು. ದೇಶದ ದಾಸ್ಯತನಕ್ಕೆ, ಅಭದ್ರತೆಗೆ, ಅಸ್ವಾಸ್ಥ್ಯತೆಗೆ ಮಠಾಧಿಪತ್ಯವೇ ಕಾರಣವೆಂದು ಮನವರಿಕೆಯಾದ ಯೇಸು ಮಠಾಧಿಪತ್ಯದ ಮೌಲ್ಯಗಳನ್ನು ಬೇರುಸಹಿತ ಕಿತ್ತೊಗೆದು ಹೊಸ ಸಮಾಜವನ್ನು ನಿರ್ಮಿಸಲು ಅಹಿಂಸಾತ್ಮಕ ಚಳುವಳಿಯನ್ನು (Movement) ಆರಂಭಿಸಿದ.

ಯೇಸು, ಪೂಜಾವಿಧಿಗಳ ಸ್ಥಾನವನ್ನು ಸಹಪಂಕ್ತಿ ಭೋಜನಕ್ಕೆ ಕೊಟ್ಟ (ಮತ್ತಾ ೧೫.೭+; ಮಾ ೭.೯-೧೩; ಯೊ, ೨೧-೨೪,೧೪. ೨೩; ರೋ ೧.೯+; ೧ ಕೊರಿ ೩.೧೬-೧೭+, ೬. ೧೯; ೨ ಕೊರಿ ೬.೧೬; ಎಫೆ ೨.೨೦-೨೨; ೧ ಪೇ ೨.೫ ಹಾಗೂ Congar, 197-8; ಮತ್ತಾ ೯.೧೦-೧೩; ಲೂ ೫,೨೯-೩೨; ಹೀ ೧೩.೧೦). ಅಂತಿಮ ಭೋಜನ (Last Supper) ಈ ಹೊಸ ಪೂಜೆಗೆ ಸಂಕೇತವಾಯಿತು. ಈ ಭೋಜನ ಸಂಕೇತ (Sacrament)ದ ಮೂಲಕ ತನ್ನನ್ನು ಪರಸೇವೆಗೋಸ್ಕರ ಅರ್ಪಿಸಿ ಹೊಸ ಪೂಜಾವಿಧಾನವೊಂದನ್ನು ಸ್ಥಾಪಿಸಿದನು (Jeremias 298-90.). ಹೀಗೆ ಮಾನವಲೋಕವನ್ನು ಬಿಟ್ಟು 'ಅಲ್ಲಿ'ಗೆ ಹೋಗುತ್ತಿರುವ ಧರ್ಮವನ್ನು 'ಇಲ್ಲಿ'ಗೆ ತಂದಿಟ್ಟು (Robinson, 61)

ಮನುಷ್ಯತ್ವದ ಮತ್ತು ದೈವತ್ವದ ನಡುವಿನ ಕಂದರವನ್ನು ನಾಶಪಡಿಸಿದ (D' Silva,5) ನಲ್ಲದೆ ಮಾನವ ಸಮಾಜವೇ ದೇವ–ಸ್ಥಾನ (*Locus Dei*) ಎಂಬ ಅರಿವನ್ನು ಮೂಡಿಸಿದನು; ಮಾನವನನ್ನು ಪ್ರೀತಿಸುವುದರಲ್ಲಿಯೇ ದೇವಪ್ರೀತಿ ಅಡಗಿದೆಂಬ ಸತ್ಯವನ್ನು ಮಂಡಿಸಿದನು (ಮತ್ತಾ ೧೨.೭, ೨೨.೩೪–೪೦, ೨೫.೩೧–೪೬; ಮಾ. ೧೨.೨೮-೩೪; ಯೊ ೧೩-೩೪, ೧೫.೧೨; ರೊ ೧೩,೮; ಗಲಾ ೫.೧೪; ೧ ಯೊ ೩.೨೩–೨೪; ೪.೭-೧೨, ೨೦-೨೧, ೨ ಯೊ ೫-೬) Gutierrez 1977 : 250). ದೇವಮಾನವಗಳೆಂಬ ವಿಭಿನ್ನ ಸ್ತರಗಳ ಸಾಮರಸ್ಯದಿಂದಾಗಿ ಉಂಟಾಗಬೇಕಾದ ವರ್ಗರಹಿತ ಸಮಾಜದ (*Koinonia*) ಸಂಕೇತವಾಗಿರುವ ಈ ಸಹಪಂಕ್ತಿ ಭೋಜನವನ್ನು ಸ್ಮರಿಸಬೇಕೆಂದು ತನ್ನ ಶಿಷ್ಯಂದಿರರನ್ನು ಯೇಸು ಕೇಳಿಕೊಂಡನು (ಯೊ. ೧೪.೨೦, ೧೭.೨೧-೨೩).

ಸಮಾಜದಲ್ಲಿ ಒಡಕನ್ನುಂಟುಮಾಡಿ ಜನರನ್ನು ವಿಮುಖಗೊಳಿಸುವ (ಮತ್ತಾ ೨೩.೩೪-೩೭) ಕಪಟಮನೋಭಾವದ (ಮತ್ತಾ ೨೩.೨೩-೩೩) ಶೋಷಣೆ ಮಾಡುವ ವರ್ಗದ ಜನರು ಯೇಸುವಿನ ಆಂದೋಲನವನ್ನು ಸಹಿಸಲಾರದಾದರು. ಗುಡಿ ಪೂಜಾದಿಗಳಿಗಿಂತ (ಮತ್ತಾ ೯.೧೦–೧೩; ಮಾ.೧೨.೨೮-೩೪) ನೆರೆಹೊರೆಯವರ ಪ್ರೀತಿಗೆ – ಅಂತ್ಯೋದಯಕ್ಕೆ – ಮಹತ್ವವನ್ನಿತ್ತ ಜನಪ್ರಿಯ ನಾಯಕನಾದ ಯೇಸು ಪುರೋಹಿತ ವರ್ಗಕ್ಕೆ ಮಾರಕನಾದ. ಆದುದರಿಂದ ಈ ವರ್ಗದ ನಾಯಕರು ರೋಮನ್ ಚಕ್ರಾಧಿಪತ್ಯದ ಅಧಿಕಾರಿಗಳೊಡನೆ ಕೂಡಿಕೊಂಡು ಹೊಂಚುಹಾಕಿ ಯೇಸುವನ್ನು ಸಾಮ್ರಾಟ ವಿರೋಧಿಯನ್ನಾಗಿ ತಿಳಿಯುವಂತೆ ಮಾಡಿ ಅತ್ಯಂತ ಹೀನ ರೀತಿಯಲ್ಲಿ ಕ್ರೂಜೆಯ ಮೇಲೆ ಆತನ ಕೊಲೆಯನ್ನು ಮಾಡಿದರು (ಅ. ಕೃ. ೩.೧೫+, ೪.೧೦).

ತನ್ನ ಐಹಿಕ ಜೀವನ ಕ್ರೂಜೆಯ ಮೇಲೆ ಕೊನೆಗೊಂಡ ಬಳಿಕವೂ ಯೇಸು ಕ್ರಿಯಾಶಕ್ತಿರೂಪದಲ್ಲಿ ತಮ್ಮ ಸಮಾಜದಲ್ಲಿ ಉಳಿದುಕೊಂಡಿದ್ದಾನೆಂಬುದು ಆತನ ಭಕ್ತರ ಅನುಭಾವವಾಗಿತ್ತು. ಇದರಿಂದಾಗಿ ಆತ ವಿಮೋಚನಾ ಚಳುವಳಿಯ ಶಕ್ತಿಯಾಗಿ (ಕೊಲೊ ೩.೧೭), ಮೃತ್ಯುಂಜಯನಾಗಿ, ಮುಂದುವರೆದನು. ನಂಬಿಗಸ್ಥ ಜನರು ಆತನನ್ನು ಹೊಸತಾಗಿ ಕಂಡರು (ಮತ್ತಾ ೨೮.೧೦+; ಲೂ ೨೪. ೩೬–೪೩+; ಯೊ ೨೦.೧೯+). ಈ ಅನುಭಾವವೇ ಮುಂದೆ ಕ್ರೈಸ್ತ ಸಮುದಾಯದಲ್ಲಿ 'ಪುನರುತ್ಥಾನ'ವೆಂಬ ಜಾನಪದ–ಆಶಯ (folk–motif) ವಾಗಿ ಪರಿಣಮಿಸಿತು (ಅ. ಕೃ, ೨.೨೩+; ೩. ೧೩–೧೫+; ೫.೩೦-೩೧; ೧೦.೩೯ +; ೧೩. ೩೦-೩೧+).

ಕ್ರೈಸ್ತ ಆಂದೋಲನದ ಅವನತಿ :

ಕ್ರೈಸ್ತ ಅನುಭಾವ (Faith experience) ವನ್ನು ಇತಿಹಾಸ (History) ವೆಂದು ಪರಿಗಣಿಸಿದಾಗ ಅರ್ಥಾತ್ ಕ್ರೈಸ್ತ ಸಮುದಾಯದ ಆಶಯ ವನ್ನು ಐತಿಹಾಸಿಕ ಘಟನೆಯಾಗಿ ಸ್ವೀಕರಿಸಿಕೊಂಡಾಗ (Panikkar, 198; Kappen, 27) ಯೇಶ್ವಾಂದೋಲನ ಮಡುಗಟ್ಟಿದ ಧರ್ಮವಾಗಿ-ಸಂಸ್ಥೆಯಾಗಿ (Institution) – ಪರಿಣಮಿಸಿ ತನ್ನ ಕ್ರಿಯಾಶೀಲ ಸ್ವರೂಪವನ್ನೇ ಕಳೆದು ಕೊಂಡಿತು (Miranda 1977: 39–42; Sobrino, 19 8:275). ಕ್ರೈಸ್ತಧರ್ಮ ಸಂಸ್ಥಾನ ಧರ್ಮ (State religion)ವಾಗಿ ರೋಮನ್ ಚಕ್ರಾಧಿ ಪತ್ಯದ ವಿಸ್ತರಣೆಯಲ್ಲಿ ಒಂದು ಬೃಹತ್ ಸಾಧನವಾಯಿತು. ಅದು "ಅರಸನ ಧರ್ಮವೇ ಪ್ರಜೆಯ ಧರ್ಮ"ವೆಂಬ ಗಾದೆಗೆ ಕಾರಣೀಭೂತವಾಯಿತು (Amalorpavadoss, nos.40–50). ದೇವಸ್ಥಾನ, ಗುಡಿಪೂಜೆ, ಪುರೋಹಿತವರ್ಗ, ಬಾಹ್ಯ ಕಾನೂನು ಇತ್ಯಾದಿ ಸಂಸ್ಥೆಗಳ ವಿರುದ್ಧ ಸಿಡಿದೆದ್ದ ಈ ಧಾರ್ಮಿಕ ಚಳುವಳಿಯಲ್ಲಿ ಈಗ ಅವು ಮರಳಿ ಬಂದು ಭದ್ರಸ್ಥಾನಮಾನಗಳನ್ನು ಪಡೆದುಕೊಂಡವು; ಅಷ್ಟೇ ಅಲ್ಲದೆ ಈ ಎಲ್ಲ ದುಷ್ಟ ಸಂಘಟನೆಗಳು ಕ್ರೈಸ್ತ ಸಭೆ (Church)ಯ ಅವಿಭಾಜ್ಯ ಅಂಗಗಳಾಗಿ ಮೆರೆದವು (Bouyer 58–59; Kappen, 19). ಹೀಗೆ ಕ್ರೈಸ್ತ ಆಂದೋಲನದ ಅವನತಿ ಉಂಟಾಯಿತು !

ಭಾರತದಲ್ಲಿ ಕ್ರೈಸ್ತಧರ್ಮ :

ಕ್ರೈಸ್ತಾಂದೋಲನ ತನ್ನ ಅವನತಿಯನ್ನು ಮುಟ್ಟುವ ಪೂರ್ವದಲ್ಲಿಯೇ ಋಷಿಮುನಿಗಳ ಬೀಡಾದ ಭಾರತವನ್ನು ತಲುಪಿತು. ಐತಿಹ್ಯದ ಪ್ರಕಾರ ಯೇಸು ಕ್ರಿಸ್ತನ ಹನ್ನೆರಡು ಶಿಷ್ಯಂದಿರರಲ್ಲಿ ಒಬ್ಬರಾದ ಸಂತ ತೊಮಸನು ಯೇಸುಕ್ರಿಸ್ತನ ಕಾಲದಲ್ಲಿಯೇ ಭಾರತದ ಮಲಬಾರ್ (ಇಂದಿನ ಕೇರಳ) ಕರಾವಳಿಗೆ ಬಂದು ಯೇಸುಸಂದೇಶವನ್ನು ಸಾರಿದನು. ಸುಮಾರು ೨೦೦೦ ವರ್ಷಗಳ ಕ್ರೈಸ್ತ ಧರ್ಮದ ಈ ಅಸ್ತಿತ್ವ ಭಾರತೀಯ ಸಂಸ್ಕೃತಿ ಹಾಗೂ ನಡಾವಳಿಯ ಮೇಲೆ ತನ್ನ ಪ್ರಭಾವ ಬೀರದೆ ಇರುತ್ತದೆಯೆ? ಜ್ಞಾನಾರ್ಜನೆ ಮತ್ತು ಶಿಕ್ಷಣದಲ್ಲಿ ಒಂದು ವರ್ಗದ ಪೂರ್ಣಾಧಿಕಾರ, ಶಿಶುವಿವಾಹ, ಸತಿಪದ್ಧತಿ, ಹೆಂಗಸರ ಬಗೆಗೆ ಕೀಳರಿಮೆ, ಸಾಮಾಜಿಕ ಅನಾಸಕ್ತಿ, ದೈಹಿಕ ದುಡಿಮೆಯ ಬಗೆಗೆ ತಾತ್ಸಾರ, ಆಹಾರದ ಬಗೆಗೆ ಕಠಿಣ ನಿಯಮಗಳು ಹಾಗೂ ಮಡಿ ಮೈಲಿಗೆ, ಒಳಜಾತಿ ವಿವಾಹ ಇವೇ ಮೊದ ಲಾದ ಹಲವಾರು ಸಾಮಾಜಿಕ ದೋಷಗಳನ್ನು ತೊಡೆದು ಹಾಕುವಲ್ಲಿ ಕ್ರೈಸ್ತ ಜೀವನ ಶೈಲಿಯ ಹಾಗೂ ಕ್ರೈಸ್ತಾವಲೋಕನದ ತಳಹದಿಯ ಮೇಲೆ ನಿರೂಪಿತಗೊಂಡ ಪಾಶ್ಚಾತ್ಯ ಶಿಕ್ಷಣದ ಪಾತ್ರವನ್ನು ನಿರಾಕರಿಸುವುದು ಅಸಾಧ್ಯ.

ಶಿಕ್ಷಣದ ಮೂಲಕ ಕ್ರೈಸ್ತ ಧರ್ಮದ ಪ್ರಭಾವ ಆಧುನಿಕ ಭಾರತದ ಮೇಲೆ ಸಾಕಷ್ಟು ಆದರೂ ಕೂಡಾ ನಮ್ಮವರು–ಹೆರವರೆಂಬ ಸಂಕುಚಿತ ಮನೋಧರ್ಮ (Clique mentality), ಕುಲಧರ್ಮ (Clanishness) ಜಾತೀಯತೆ (Kappen 1977:37), ಭಾಷಾಂಧತೆ ಸುಶಿಕ್ಷಿತರೆನಿಸಿಕೊಂಡವರಲ್ಲಿಯೂ ಕೂಡಾ ಬೇರೂರಿರುವುದು ರಾಷ್ಟ್ರೀಯ ಐಕ್ಯತೆಗೆ ಹಾಗೂ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕಟ್ಟಬೇಕಾದ ನವಭಾರತದ ನಿರ್ಮಾಣಕ್ಕೆ ಮಾರಕ. ಮಣ್ಣಿನ ಮಕ್ಕಳು ಮೊದಲಾದ ಸಂಕುಚಿತ ಭಾವನೆಗಳಿಂದಾಗಿ ಭಾರತೀಯನಾಗಿಯೇ ಭಾರತದಲ್ಲಿ ಕೆಲಸ ಮಾಡುವ ಹಕ್ಕು ಕೂಡಾ ಕಳೆದುಕೊಳ್ಳುವ ಪರಿಸ್ಥಿತಿ ಬಂದೊದಗಿದೆ; ಭಾಷಿಕತೆ ಪ್ರಾದೇಶಿಕತೆಗಳಿಂದಾಗಿ ರಾಷ್ಟ್ರೀಯತೆಯನ್ನು ಕಳೆದುಕೊಳ್ಳುವ ಭಯಭೀತಿ ಸನ್ನಿಹಿತಗೊಂಡಿದೆ. ಇಂತಹ ಪರಿಸ್ಥಿತಿಯ ಸ್ಪಷ್ಟ ಲಕ್ಷಣಗಳು ಭಾರತೀಯ ಕ್ರೈಸ್ತಸಮುದಾಯದಲ್ಲಿ ಕೂಡಾ ತಲೆಯೆತ್ತಿ ಕಾಣುವುದು ವಿಪರ್ಯಾಸಕರ! ಬ್ರಾಹ್ಮಣ ಕ್ರೈಸ್ತರು, ಅಬ್ರಾಹ್ಮಣಕ್ರೈಸ್ತರು, ತಮಿಳುಕ್ರೈಸ್ತರು ಕನ್ನಡ ಕ್ರೈಸ್ತರು ಎಂಬ ಸಂಕುಚಿತ ಪರಿಮಿತಿಗಳನ್ನು ನಿರ್ಮಿಸಿ ಪರಸ್ಪರ ಹೊಡೆದಾಡುವುದು ಕ್ರೈಸ್ತ ಜೀವನ ದೃಷ್ಟಿಯಲ್ಲಿ ಆಭಾಸವೇ ಸರಿ!! ಒಟ್ಟಿನಲ್ಲಿ, ಕ್ರೈಸ್ತಧರ್ಮ ಭಾರತದಲ್ಲಿ ಇನ್ನೊಂದು ಜಾತಿಯಾಗಿ/ಹಲವು ಒಳಜಾತಿಗಳ ಒಕ್ಕೂಟವಾಗಿ ಬದಲಾಯಿತು. ಈ ದೃಷ್ಟಿಯಲ್ಲಿ ಹಿಂದೂಧರ್ಮ ಅದನ್ನು ನುಂಗಿಬಿಟ್ಟಿತೆಂದರೆ ಬಹಳಷ್ಟು ತಪ್ಪಾಗಲಾರದು.

ಕ್ರೈಸ್ತಾನುಭವ: ಸಾಮಾಜಿಕ ಅನ್ಯೆಕತೆಗೆ ಕಾರಣಗಳು

ಭಾರತದಲ್ಲಿ ರಾಷ್ಟ್ರೀಯ ಭಾವೈಕ್ಯತೆಗೆ ಅಂತೆಯೇ ವಿಶ್ವಭ್ರಾತೃತ್ವಕ್ಕೆ ಭಂಗತರುವಂತಹ ಅಂಶ/ ಕಾರಣಗಳನ್ನು ಕುರಿತು ಕ್ರೈಸ್ತ ಸಾಮಾಜಿಕ ಹಾಗೂ ಧಾರ್ಮಿಕ ಚಿಂತನೆ ಈಗಾಗಲೆ ಸಾಕಷ್ಟು ನಡೆದಿದೆ (John XXIII 1961 & 1963) ಹೆಚ್ಚಾಗಿ ಅಧಿಕಾರಿಶಾಹಿಗಳು ಹಾಗೂ ಮೇಲ್ವರ್ಗದವರು ಇತರರನ್ನು 'ವ್ಯಕ್ತಿ'ಗಳೆಂದು ಪರಿಗಣಿಸದೆ 'ವಸ್ತು'ಗಳನ್ನಾಗಿ ಬಳಸುತ್ತಾರೆ. ವಿವಿಧ ಧರ್ಮಗಳಿಗೆ, ರಾಜಕೀಯ ಗುಂಪುಗಳಿಗೆ, ಸಾಮಾಜಿಕ, ಜಾತಿಗಳಿಗೆ, ಆರ್ಥಿಕ ವರ್ಗಗಳಿಗೆ ಹಾಗೂ ಆರ್ಥಿಕವಾಗಿ ಪ್ರಬಲವಾಗಿರುವ ಗುಂಪುಗಳಿಗೆ ಸೇರಿದ ಜನರು ಇಲ್ಲದವರನ್ನು, ಅಸಹಾಯಕರನ್ನು, ತುಳಿಯಲ್ಪಟ್ಟವರನ್ನು, ದಲಿತರನ್ನು ತಮ್ಮ ಸ್ವಾರ್ಥಭದ್ರತೆಗೋಸ್ಕರ, ಅಹಂಭಾವದ ಜೀವನಕ್ಕೋಸ್ಕರ ಬಳಸಿಕೊಳ್ಳುತ್ತಾರೆ; ಅದುಮಿಹಿಡಿದುಕೊಳ್ಳುತ್ತಾರೆ; ಮೂಕರನ್ನಾಗಿ ಮಾಡುತ್ತಾರೆ; ಹೆಳವರನ್ನಾಗಿ ಮಾಡುತ್ತಾರೆ.

ಇಂತಹ ದುಃಸ್ಥಿತಿಯಿಂದ ಕಾಲಕ್ರಮೇಣ ಅನಿವಾರ್ಯವಾಗಿ ಸಾಮಾಜಿಕ ಕ್ರಾಂತಿಯುಂಟಾಗುತ್ತದೆ. ಜನನಾಯಕರು ಈ ಕ್ರಾಂತಿಯ ಮುಂದಾಳುತನವನ್ನು ಸ್ವಾಭಾವಿಕವಾಗಿ, ಸಹಜವಾಗಿ ಪಡೆದುಕೊಳ್ಳುತ್ತಾರೆ. ಇವರಿಂದಾಗಿ ಸಾಮಾನ್ಯರಲ್ಲಿಯೂ ಜಾಗೃತಿ (Conscientization: Madtha 1977

:309-15) ಉಂಟಾಗುತ್ತದೆ. ಇಂಥ ವಸ್ತುಸ್ಥಿತಿಯಲ್ಲಿ ಜನಸಮುದಾಯಗಳು ಎಚ್ಚೆತ್ತು ನೊಂದ ಸಿಂಹಗಳಂತೆ ಗರ್ಜಿಸುತ್ತ ಓಡಾಡುತ್ತಿರುವಾಗ ಸಾಮಾಜಿಕಶಾಂತಿ ಕದಡುತ್ತವೆ. ಈ ಸಂದರ್ಭದಲ್ಲಿ ಕುಯುಕ್ತಿಗಳಿಂದ ಕೂಡಿದ ಧಾರ್ಮಿಕ ಮುಖಂಡರು, ಮೌಲ್ಯಗಳನ್ನು ಕಳೆದುಕೊಂಡ ರಾಜಕೀಯ ಪುಡಾರಿಗಳು, ಸಾಮಾಜಿಕ ದ್ರೋಹಿಗಳು ಸಾಮಾಜಿಕ, ರಾಷ್ಟ್ರೀಯ ಭಾವೈಕ್ಯತೆಗೆ ವಿರೋಧವಾಗಿ ಕೆಲಸ ಮಾಡುತ್ತಿರುತ್ತಾರೆ.

ಭಾರತದ ಮಟ್ಟಿಗೆ ಹೇಳುವುದಾದರೆ ಭಾರತದ ಭಾವೈಕ್ಯತೆಯನ್ನೂ ಸಮಗ್ರತೆಯನ್ನೂ ಪ್ರಶ್ನಿಸುವಂತಹ, ಅದರ ಐಕ್ಯತೆಗೆ ಕುಂದನ್ನು ತರುವಂತಹ ಅನೇಕ ಪ್ರಯತ್ನಗಳು ಆಗಾಗ ನಡೆಯುವುದು ದಿನಪತ್ರಿಕೆಗಳಲ್ಲಿ, ಹಾಗೂ ಇತರ ಸಮೂಹ ಮಾಧ್ಯಮಗಳಲ್ಲಿ ವರದಿಯಾಗುತ್ತಲಿವೆ. ಇವೆಲ್ಲವುಗಳನ್ನು ಗಮನಿಸಿದಾಗ "ಮಾನವ, ಮಾನವನಿಗೆ ತೋಳನಾಗಿದ್ದಾನೆ" ಎಂಬ ಶೋಪನ್‌ಹೋರನ (Schopenhaur) ಮಾತು ಸತ್ಯವೆನಿಸುತ್ತದೆ.

ಭಾರತೀಯ ಕ್ರೈಸ್ತ ಧರ್ಮ:

ಇಂದಿನ ಭಾರತದಲ್ಲಿ ಕ್ರೈಸ್ತಧರ್ಮ ಕ್ರಿಯಾತ್ಮಕವಾಗಿ ಅದರ ಸರ್ವಾಭ್ಯುದಯಕ್ಕೆ ಕೆಲಸ ಮಾಡಬೇಕಾದರೆ ಅದರ ಭಾರತೀಕರಣ (Indianization) ಅತ್ಯಗತ್ಯ. ಕ್ರೈಸ್ತಧರ್ಮ ಭಾರತೀಯ ಸಂಸ್ಕೃತಿಯ ಮೂಲಕ ಅಭಿವ್ಯಕ್ತಗೊಳ್ಳಬೇಕು. ಆಗ ಮಾತ್ರ ಭಾರತದಲ್ಲಿ ರಾಷ್ಟ್ರೀಯ ಭಾವೈಕ್ಯವನ್ನುಂಟು ಮಾಡುವಲ್ಲಿ ಅದೊಂದು ಉತ್ತಮ ಸಾಧನವಾಗಬಲ್ಲದು.

ಕ್ರೈಸ್ತಧರ್ಮ ತನ್ನ ಪಾಶ್ಚಾತ್ಯ ಹೊದಿಕೆಯನ್ನು ಕಳಚಿ ಭಾರತೀಯವಾಗಿ ಅವತರಿಸಿಕೊಂಡಾಗ ಅದನ್ನು ಕುರಿತು ಪರಕೀಯಭಾವ (Foreign feelings) ಜನಮನದಿಂದ ಅಳಿದುಹೋಗುವುದು ಸಾಧ್ಯ. ಆಗ ಇತರ ಧರ್ಮಗಳೊಂದಿಗೆ ಕ್ರೈಸ್ತಧರ್ಮವೂ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ಕ್ರಿಯಾಶೀಲವಾಗುವುದು ಅದಕ್ಕೆ ಸಾಧ್ಯವಾಗಬಲ್ಲದು.

ಧರ್ಮಗಳ ಇತಿಹಾಸ (History of religion) ಬಲ್ಲವರಿಗೆ ಧರ್ಮದಿಂದ ಭಾವೈಕ್ಯ ಮೂಡಿಸುವುದು ಸಾಧ್ಯವೇ" ಎಂಬ ಮೂಲಭೂತ ಪ್ರಶ್ನೆ ಏಳುವುದು ಸಹಜ. ಧರ್ಮಗಳ ಹೆಸರಿನಲ್ಲಿ ಅನ್ಯಾಯಗಳು, ಭ್ರಷ್ಟತನ, ಯುದ್ಧಗಳು, ಮೋಸ ವಂಚನೆಗಳು ಶೋಷಣೆ ಇತ್ಯಾದಿಗಳು ಸಾಕಷ್ಟು ನಡೆದಿರುವ ಹಿನ್ನೆಲೆಯಲ್ಲಿ ಮೇಲಿನ ಪ್ರಶ್ನೆ ಅರ್ಥಪೂರ್ಣವಾದುದು ಹಾಗೂ ಸರಿಯಾದುದು. ಆದರೆ ಆ ಧರ್ಮದಲ್ಲಿಯೇ ಕ್ರಾಂತಿಯನ್ನೆಬ್ಬಿಸಿದ ವಿಮೋಚನಕಾರರು, ಪ್ರವಾದಿಗಳು ನುಡಿದಂತೆ ನಡೆದು ಹೊಸದಾರಿಯನ್ನು ತುಳಿದು ಹೊಸ ಅರ್ಥಗಳ ಸಾಧ್ಯತೆಗಳನ್ನು

ತೋರಿಸಿಕೊಟ್ಟದ್ದೂ ಅಷ್ಟೇ ಸತ್ಯ. (ನೋಡಿ, Gomez de Souza 16; Perez-Escalarin 160-616).

ಪ್ರಸ್ತುತದಲ್ಲಿ, ಕ್ರೈಸ್ತಧರ್ಮವೆನ್ನುವಾಗ ಮಡುಗಟ್ಟಿ ಭವ್ಯಾಕಾರದಲ್ಲಿ ನಿಂತ ಕ್ರೈಸ್ತಸಂಘಟನೆಯಲ್ಲ: ಯೇಸು ನಡೆದು ತೋರಿದ, ಈಗಲೂ ಅಲ್ಲಲ್ಲಿ ಕ್ರಿಯಾಶೀಲವಾಗಿರುವ ಕ್ರಿಸ್ತ ಪ್ರೇರಿತ ಸರ್ವಜನ ವಿಮೋಚನಾ ಚಳವಳಿಯೆಂದು ತಿಳಿದುಕೊಳ್ಳಬೇಕು.

ಯೇಸುವಿನ ಜೀವನಶೈಲಿಗೆ ನಾಲ್ಕು ಪ್ರಮುಖ ಮುಖಗಳಿವೆ. ಅವುಗಳ ಸಾಮರಸ್ಯತೆಯನ್ನು ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ಅಳವಡಿಸಿಕೊಂಡಾಗ ರಾಷ್ಟ್ರೀಯ ಹಾಗೂ ವಿಶ್ವದ ಭಾವೈಕ್ಯತೆ ಸಾಧ್ಯ. ಸತ್ಯ, ನ್ಯಾಯ, ಪ್ರೇಮ ಮತ್ತು ಸ್ವಾತಂತ್ರ್ಯಗಳೇ ಆ ಚತುರ್ಮುಖಗಳು.

ಸತ್ಯ (Truth) :

ಸತ್ಯವೆಂದರೆ ಪ್ರಸ್ತುತದಲ್ಲಿ ಕೇವಲ ಅಮೂರ್ತ ಸ್ವರೂಪದ ಒಂದು ಮೌಲ್ಯವಲ್ಲ. ಅದೊಂದು ಕ್ರಿಯಾಶೀಲರೂಪದ ಮನೋಧರ್ಮ. ಮೂಲತಹ ಯಾವುದೇ ವ್ಯಕ್ತಿಯನ್ನು (Person) ವ್ಯಕ್ತಿಯನ್ನಾಗಿ ನೋಡುವ ಮನೋದೃಷ್ಟಿ (ಯೊ ೨.೧-೬). ತಾನು ವ್ಯಕ್ತಿಯಾಗಿರುವುದೇ ಸ್ವಧರ್ಮ; ತನ್ನಂತೆ ಪರರನ್ನು ಬಗೆಯುವುದೇ ಪರಧರ್ಮ. ಸ್ವಪರ ಸ್ತರಗಳಿಂದ ಕೂಡಿದ ಈ ಧರ್ಮದಿಂದಾಗಿ ಅನೈಕ್ಯತೆಯು ಬೇರಿಗೆಯೇ ಕೊಡಲಿಪೆಟ್ಟು ಕೊಟ್ಟಂತಾಗುತ್ತದೆ. ಈ ಧರ್ಮದ ಆಚರಣೆಯಿಂದಾಗಿ ಲಿಂಗ, ಜಾತಿ, ಮತ, ಭಾಷೆ ಮೊದಲಾದವುಗಳ ಆಧಾರದ ಮೇಲೆ ನಿಲ್ಲುವ ವಿಭಜನೆಗಳು ತಮ್ಮ ಕ್ರಿಯಾಶೀಲತೆಯನ್ನು ಕಳೆದುಕೊಂಡು ಐಕ್ಯಭಾವ ಹುಟ್ಟುತ್ತದೆ (ಗಲಾ ೩. ೨೬–೨೮).

ಸ್ವಧರ್ಮದಿಂದ ತಾನು ಬ್ರಹ್ಮದ/ಕ್ರಿಸ್ತನ ಅಭಿವ್ಯಕ್ತಿ; ಅದರಂತೆಯೇ ಉಳಿದವರು—ಎಂಬ ಪ್ರಜ್ಞೆ ಮೂಡಿದಾಗ ಕ್ರೈಸ್ತ ಪ್ರಜ್ಞೆಯ ಪಾತಳಿಯಲ್ಲಿ "ನಾವೆಲ್ಲರೂ ಒಂದೇ" ಎಂಬ ಸ್ಥಾಯಿಭಾವ ಮೂಡುತ್ತದೆ. ಈ ಐಕ್ಯಭಾವದಿಂದ ಲಿಂಗಭೇದ, ಜಾತಿಭೇದ ಮೊದಲಾದವುಗಳು ಇಲ್ಲದಂತಾಗಿ "ಮಾನವ ಕುಲಂ ಒಂದೇ ವಲಂ" ಎಂಬ ಪ್ರಜ್ಞೆ ಸ್ಥಿರವಾಗಿ ನಿಲ್ಲುತ್ತದೆ. ಈ ಭಾವ ರಾಷ್ಟ್ರೀಯ ಐಕ್ಯತೆಗೆ ಬುನಾದಿ.

ರಾಷ್ಟ್ರೀಯ ಭಾವೈಕ್ಯವನ್ನು ಬೆಳೆಯಿಸಬೇಕಾದರೆ ಈ ಮೂಲಭೂತ ಸತ್ಯದ ಅರಿವನ್ನುಂಟು ಮಾಡಬೇಕು. ಅದಕ್ಕೆ ತಕ್ಕುದಾದ ಪರಿಸರ ಸಂದರ್ಭಗಳನ್ನು ನಿರ್ಮಿಸಬೇಕು. ಅಂತರ್ಧರ್ಮೀಯ ಭಜನೆಗಳು ಭಾರತದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಇದಕ್ಕೊಂದು ಉತ್ತಮ ಸಾಧನ. ಮಹಾತ್ಮ ಗಾಂಧಿಯವರು ಇಂತಹ ಭಜನೆಗಳನ್ನು

ಏರ್ಪಡಿಸಿ ಅವುಗಳ ಸಾಧ್ಯತೆ ಸಾಫಲ್ಯತೆಗಳನ್ನು ತೋರಿಸಿಕೊಟ್ಟಿದ್ದಾರೆ. ಯೇಸು ಕ್ರಿಸ್ತ ಕಲಿಸಿದ "ನಮ್ಮ ತಂದೆಯೇ (Our Father)" ಎಂಬ ಪ್ರಾರ್ಥನೆಯೂ ಇದೇ ಸ್ವರೂಪದ್ದು. ಇಂತಹ ಭಜನೆ ಪ್ರಾರ್ಥನೆಗಳನ್ನು ಸಾಮೂಹಿಕವಾಗಿ ಹೇಳುವಂತಹ ಸಂದರ್ಭಗಳನ್ನು ಕಲ್ಪಿಸಿದರೆ ನಮ್ಮ ಇಂದಿನ ಯುವಕರಲ್ಲಿ ಸತ್ಯದ ಅರಿವು ಜಾಗೃತಗೊಂಡು ರಾಷ್ಟ್ರೀಯ ಭಾವೈಕ್ಯಸಾಧನೆಯಲ್ಲಿ ಅವರು ಪಾಲುದಾರರಾಗುವುದು ಅಸಂಭವನೀಯವಾಗಲಾರದು.

ನ್ಯಾಯ (Justice) :

ದಿನನಿತ್ಯದ ಜೀವನದಲ್ಲಿ ಸತ್ಯವನ್ನು ಅಳವಡಿಸಿಕೊಳ್ಳುವುದೇ ನ್ಯಾಯ. ಜೀವನದಲ್ಲಿ ವ್ಯಕ್ತಿಗಳು ಪರಸ್ಪರ ವ್ಯಕ್ತಿಗಳನ್ನಾಗಿ ಸ್ವೀಕರಿಸಿ ನಡೆದುಕೊಳ್ಳುವ ಜೀವನ ಪರಿಯೇ ನ್ಯಾಯ. ಈ ಜೀವನಶೈಲಿಯಲ್ಲಿ ಉಳ್ಳವರು ಇಲ್ಲದವರೆಂಬ ಭೇದವಿಲ್ಲ. ಸಮಾಜದಲ್ಲಿ ಎಲ್ಲರೂ ಸಮಾನರೆಂಬ ಭಾವನೆ ಬೇರೂರಿ ಸಹಕಾರ ಮನೋಭಾವದಿಂದ ಜೀವಿಸುತ್ತಾರೆ. ದಾಸೋಹಂಭಾವವೇ ನ್ಯಾಯದ ಲಕ್ಷಣ.

ಸತ್ಯವನ್ನು ಸಾಮಾಜಿಕ ನ್ಯಾಯವನ್ನಾಗಿ ಪರಿವರ್ತಿಸುವಲ್ಲಿ ಸಮುದಾಯಗಳಲ್ಲಿ ಜಾಗೃತಿ (Conscientization ನೋಡಿ: Freire, 1972, 1973, 1974; Madtha 1977) ಯನ್ನುಂಟು ಮಾಡುವುದು ಅತ್ಯಾವಶ್ಯಕ. ಈ ದೆಸೆಯಲ್ಲಿ ಮೌಖಿಕ ಕಲೆ ಹಾಗೂ ಇತರ ಜಾನಪದ ಮಾಧ್ಯಮಗಳು ಅತ್ಯಂತ ನೆರವನ್ನೀಡಬಲ್ಲವು. ದಲಿತ ಸಾಹಿತ್ಯದ ವಾಚನಗಳನ್ನು ಏರ್ಪಡಿಸಿ ಅವುಗಳನ್ನು ಕುರಿತು ಚರ್ಚಾಕೂಟಗಳನ್ನು ಸಂಯೋಜಿಸಿದರೆ (ನೋಡಿ: Gokhale-Turner, 1980 : 29-42) ಸಾಮಾಜಿಕ ನ್ಯಾಯವನ್ನು ಕುರಿತು ಸಾಮುದಾಯಿಕ ಜಾಗೃತಿಯನ್ನುಂಟುಮಾಡುವುದು ಸುಲಭವಾಗಬಹುದು (Chakladar, 174·)

ಪ್ರೇಮ (Altruistic Love) :

ಪ್ರೇಮವೆಂಬುದು ಮಾನವೀಯ ಮೌಲ್ಯಗಳಲ್ಲಿ ಅತ್ಯಂತ ಶ್ರೇಷ್ಠವಾದುದು (ಮಾ ೧೯:೧೯; ೨೨.೩೪-೪೦+ ಮತ್ತಾ ೧೨.೨೮-೩೧+; ಲೂ ೧೦.೨೫-೨೮; ಯೊ ೧೩.೩೪, ೧೫.೧೨; ಅಕೃ ೪.೩೨; ರೊ ೧೩.೮-೧೦; ಗಲಾ ೫.೧೪; ಕೊಲೊ ೩.೧೪+ ಯಾ ೨.೮). ಈ ಮೌಲ್ಯವನ್ನು ಆಚರಣೆಯಲ್ಲಿ ತರುವುದರಿಂದ ಮಾನವ (Hominoid) ಹೆಚ್ಚೆಚ್ಚು ಮಾನವೀಯನಾಗುತ್ತಾನೆ (Hominized); ಅಹಮಿನಿಂದ (ಲೂ ೧೭.೩೩) ಪರಮುಖಿಯಾಗಿ ಜೀವನ ಸಾಗಿಸುವುದರಿಂದ (ಲೂ ೧೭.೩೩; ಯೊ ೧೫.೧೩) ಕೇವಲ ಜೀವಿ/ಪ್ರಾಣಿಯಾಗಿ ಉಳಿಯದೆ ವ್ಯಕ್ತಿ (Person)ಯಾಗಿ ಆತ/ಆಕೆ ಬೆಳೆಯುತ್ತಾನೆ/ಳೆ. ಈ ನೆಲೆಯಲ್ಲಿ

ಪರಹಿತವೇ ಸ್ವಹಿತ; ದಾಸೋಹ *(Diakonia)*ವೇ ಪೂಜೆ *(Leiturgia)*. ಮಾನವ ಈ ದಾಸೋಹಂಭಾವ (ಯೊ ೩.೧೭-೧೮) ಹಾಗೂ ಪರಸ್ಪರ ಕಳಕಳಿ (೨.೧೫-೧೬; ೧೫.೧೩) (Mutual Concern) ಯಿಂದಾಗಿ ತನ್ನ ಬಹಿಃಸ್ತರ ಹಾಗೂಅಂತಃಸ್ತರಗಳಲ್ಲಿ—ಸಮಾಜ ಹಾಗೂ ಸ್ಥಲಗಳೆರಡರಲ್ಲಿಯೂ—ಸಾಮರಸ್ಯ (Cosmotheandric harmony), ಹೊಂದಬಲ್ಲವನಾಗುತ್ತಾನೆ (ಯೊ ೧೧.೧-೯+; ೬೫.೧೭-೨೫+ ಪ್ರ ೨೧.೧-೪೭.+).

ಅಹಮಿಲ್ಲದ ಪ್ರೇಮದ ವಾತಾವರಣದಲ್ಲಿ ವೈಯಕ್ತಿಕ ಲಾಭ (ಲೂ ೬.೩೨-೩೬), ಭೋಗ, ಪೈಪೋಟಿಗಳಿಗೆ ಸ್ಥಾನ ಸಿಗದೆ (ಲೂ ೭.೧೫-೧೬; ಅ.ಕೃ ೨.೪೫; ರೋ ೧೨.೧೩) ಶೋಷಿತ ಸಮಾಜದಲ್ಲಿ ಅಮೂಲಾಗ್ರ ರಾಜನಿಕ ಬದಲಾವಣೆಗಳುಂಟಾಗಿ (ಇಸಾ ೫೮: ೬-೭) ಪರಸ್ಪರ ಸಹಕಾರ ಮನೋಭಾವ (೧ ಕೊ ೧೦.೧೬) ಬೆಳೆಯುವ ಸಾಧ್ಯತೆಯುಂಟಾಗುತ್ತದೆ. ಇಂಥ ಸಾಮಾಜಿಕ ಪರಿಸರದಲ್ಲಿ ಭಿನ್ನ ಭಿನ್ನ ಸಮಾಜೋಧಾರ್ಮಿಕ ವಲಯಗಳಲ್ಲಿರುವ ಜನರಲ್ಲಿ ಭೇದಭಾವ ಅಳಿದು ಅನನ್ಯತೆಯುಂಟಾಗಿ ಸಕಲರ ಲೇಸನ್ನು ಬಯಸಿ ಸರ್ವೋದಯಕ್ಕಾಗಿ ದುಡಿಯುವ ಸಾಧ್ಯತೆಗಳು ಹೆಚ್ಚಾಗುತ್ತವೆ.

ಪ್ರಜಾಪ್ರಭುತ್ವದ ತಳಹದಿಯ ಮೇಲೆ, ಪರಸ್ಪರ ವಿಚಾರವಿನಿಮಯ ಮಾಡಿಕೊಂಡು ಜವಾಬ್ದಾರಿಗಳನ್ನು ರೂಪಿಸಿಕೊಂಡರೆ ರಾಷ್ಟ್ರೀಯ ಭಾವೈಕ್ಯತೆ ಸಾಧಿಸಲು ಅನುಕೂಲವಾಗುತ್ತದೆ. ಆದರೆ ಈ ಜೀವನ ಶೈಲಿಗೆ ಪ್ರೇಮಮಯ ವಾತಾವರಣ ಅತ್ಯಗತ್ಯ. ರಾಷ್ಟ್ರೀಯ ಭಾವೈಕ್ಯತೆ ಸಾಧಿಸಲು ಎಲ್ಲರೂ ಒಂದೇ ಭಾಷೆಯನ್ನಾಡಬೇಕಾಗಿಲ್ಲ, ಎಲ್ಲರೂ ಒಂದೇ ಮತವನ್ನು ಆಚರಿಸಬೇಕಿಲ್ಲ, ಎಲ್ಲರೂ ಒಂದೇ ರೀತಿಯ ಉಡುಪನ್ನು ಧರಿಸಿ ಒಂದೇ ರೀತಿಯ ಊಟ ಮಾಡಬೇಕಾಗಿಲ್ಲ. ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸುವುದೇ ರಾಷ್ಟ್ರೀಯ ಭಾವೈಕ್ಯತೆಯ ಗುಟ್ಟು. ಮೇಲೆ ವಿವರಿಸಿದ 'ಸತ್ಯವನ್ನು' ನ್ಯಾಯಯುತವಾಗಿ, ಪ್ರೇಮದ ವಾತಾವರಣದಲ್ಲಿ ಕಾರ್ಯ ರೂಪಕ್ಕೆ ತಂದರೆ ಈ ಭಾವೈಕ್ಯತೆ ಸಾಧ್ಯಗೊಳ್ಳುತ್ತದೆ.

ಅನೇಕತೆಯಲ್ಲಿ ಏಕತೆಯನ್ನು ಸಾಧಿಸಬೇಕಾದ ವಿಭಿನ್ನ ಗುಂಪುಗಳು ಪರಸ್ಪರ ಸೇರಿಕೊಂಡು ತಮ್ಮ ಸಮಸ್ಯೆಗಳನ್ನು ಚರ್ಚಿಸಿ ಭಾವೈಕ್ಯದ ಮಾರ್ಗವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಬಹುಸಂಖ್ಯಾಕರ ಸರ್ವಾಧಿಕಾರಿ ಮನೋಭಾವ ಅಥವಾ ಏಕಮುಖೀಯ ವಾದ (Monologue) ಸಲ್ಲದು. ಸಂವಾದ (Dialogue)ವೇ ಇದಕ್ಕೆ ಯೋಗ್ಯ ಮದ್ದು. ನಮ್ಮ ಶಿಕ್ಷಣ ಪದ್ಧತಿಯಲ್ಲಿಯೂ ಕೇವಲ ಪ್ರವಚನಗಳಿಗಿಂತ ಚರ್ಚಾರೂಪದ ಸಂವಾದಗಳಿಗೆ ಹೆಚ್ಚೆಚ್ಚು ಆಸ್ಪದ ಕೊಡಬೇಕು (Freire 1974,1983;Madtha, 1977) ಅತಿಯಾದ

ಶಿಸ್ತು ಕ್ರಮ ಕಾನೂನುಗಳಿಂದಾಗಿ ನಮ್ಮ ಯುವಜನರಲ್ಲಿ ಜವಾಬ್ದಾರಿತನ, ಹೊಸತನ, ಕ್ರಿಯಾಶೀಲತೆ ಮೊದಲಾದವುಗಳು ಬೆಳೆಯದೆ ಅವರು ಮಾನಸಿಕವಾಗಿ ಶೈಶಾವಸ್ಥೆಯಲ್ಲಿಯೇ ಉಳಿಯಬೇಕಾತ್ತದೆ. ಇದರ ಬದಲಾಗಿ ಪರಸ್ಪರ ಪ್ರೀತಿ ಸೌಹಾರ್ದತೆಗಳಿಗೆ ಹೆಚ್ಚು ಒತ್ತುಕೊಟ್ಟು ಆ ಪರಿಸರವನ್ನು ಯುವಜನರಿಗೆ ಕಲ್ಪಿಸಿ ಕೊಟ್ಟರೆ ಅವರು ಸಾಮಾಜಿಕ ಹಾಗೂ ರಾಷ್ಟ್ರೀಯ ಭಾವೈಕ್ಯ ಸಾಧಿಸುವಲ್ಲಿ ಉಪಯುಕ್ತರಾಗುತ್ತಾರೆ.

ಸ್ವಾತಂತ್ರ್ಯ (Freedom):

ವ್ಯಕ್ತಿಮಾಡಬೇಕಾದುದನ್ನು ಆತ/ಆಕೆ ಮಾಡಲಿಕ್ಕೆ ಸಾಧ್ಯವಾಗುವಂತಹ ವಾತಾವರಣವೇ (೨ಕೊ ೩+ಗ ೫.೧೮) ಆ ವ್ಯಕ್ತಿಯ ಸ್ವಾತಂತ್ರ್ಯ. ಪ್ರೌಢನಾದ ವನೂ ಜವಾಬ್ದಾರಿಯುತನಾಗಿ ನಿರ್ಣಯಗಳನ್ನು ತೆಗೆದುಕೊಳ್ಳಲು ಇರುವ ಸಾಧ್ಯತೆ (ಗ ೫.೧೩+)ಯೇ ವ್ಯಕ್ತಿ ಸ್ವಾತಂತ್ರ್ಯ. ತನ್ನ ಬೇಕುಬೇಡಗಳನ್ನು ಹೊರ ಗಿನ ಶಕ್ತಿವ್ಯಕ್ತಿಗಳು ನಿರ್ಣಯಿಸುವುದಕ್ಕಿಂತ ತನ್ನ ಅಂತಃಶಕ್ತಿಯಿಂದಲೇ (ರೋ ೮.೧೪-೧೭) ನಿರ್ಣಯಿಸುವುದು ಸ್ವಾತಂತ್ರ್ಯದ ಪ್ರಮುಖ ಲಕ್ಷಣ (೨ಕೊ ೩.೧೭). ವ್ಯಕ್ತಿಮಟ್ಟದಲ್ಲಿ ಇನ್ನೊಬ್ಬನ ಆಚಾರ ವಿಚಾರಗಳಲ್ಲಿ ಕೈಹಾಕದಿರುವುದೂ ಸ್ವಾತಂತ್ರ್ಯದ ಲಕ್ಷಣವೇ. ಇಂತಹ ಮುಕ್ತ ವಾತಾವರಣದಲ್ಲಿ ಪ್ರತಿಯೊಂದು ವ್ಯಕ್ತಿಯ ವ್ಯಕ್ತಿತ್ವ ಅರಳುತ್ತದೆ, ವಿಕಸಿತಗೊಳ್ಳುತ್ತದೆ.

ಸ್ವಾತಂತ್ರ್ಯವೆಂದರೆ ಸ್ವೇಚ್ಛಾಪ್ರವೃತ್ತಿಯಲ್ಲ; ಆದು ಆತ್ಮಸಾಕ್ಷಿಗೆ ಅನುಗುಣ ವಾಗಿ ಹೊಣೆಗಾರಿಕೆಯಿಂದ ಜವಾಬ್ದಾರಿಗಳನ್ನು ನೆರವೇರಿಸುವುದು. ಇಂಥ ಜವಾಬ್ದಾರಿಯುತ ಸ್ವಾತಂತ್ರ್ಯದ ಪರಿಸರದಲ್ಲಿ ಸಾಮಾಜಿಕ ಸಾಮರಸ್ಯತೆ ರಾಷ್ಟ್ರ ಮಟ್ಟದಲ್ಲಿ ಸಾಧ್ಯವಾಗುತ್ತದೆ.

ದೇಶದಲ್ಲಿ ನಿಜ ಸ್ವಾತಂತ್ರ್ಯದ ವಾತಾವರಣ ನಿರ್ಮಿಸಬೇಕಾದರೆ ನಮ್ಮ ಯುವಕರು, ವಿದ್ಯಾರ್ಥಿಗಳು ತಮಗೆ ಸರಿಯಾದುದನ್ನು, ತಮ್ಮ ಮನೋಧರ್ಮಕ್ಕೆ ಅನುಕೂಲವಾಗಿರುವುದನ್ನು ಆರಿಸುವಂತೆ ಸೂಕ್ತ ಸಂದರ್ಭ ಸೌಲಭ್ಯಗಳನ್ನು ಅವರಿಗೆ ಕಲ್ಪಿಸಿಕೊಡಬೇಕು. "ನಾನು ಹೇಳಿದಂತೆ ಕೇಳಬೇಕು; ನಾನು ಸೂಚಿಸಿದ ವಿಷಯವೇ ಅಧ್ಯಯನಕ್ಕೆ, ಚಿಂತನೆಗೆ, ನಂಬಿಕೆಗೆ, ಆಚರಣೆಗೆ ಯೋಗ್ಯ....." ಈ ಮೊದಲಾದ ಸರ್ವಾಧಿಕಾರಿ ಮನೋಭಾವದ ಅಪ್ಪಣೆಗಳು ಸ್ವತಂತ್ರ ಮನೋ ಭಾವದ ಬೆಳವಣಿಗೆಗೆ ಮಾರಕ. ವಿದ್ಯಾರ್ಥಿದೆಸೆಯಲ್ಲಿ ಸರ್ವಾಧಿಕಾರಿ ಮನೋ ಭಾವದ ಹೆತ್ತವರು, ಶಿಕ್ಷಕರು, ರಕ್ಷಕರು ನಮ್ಮ ವಿದ್ಯಾರ್ಥಿಗಳಿಗೆ ಸಿಕ್ಕರೆ ಅದು ನಮ್ಮ ಹೊಸ ಪೀಳಿಗೆಯ ಹಾಗೂ ನವರಾಷ್ಟ್ರದ ದುರಂತವೇ ಸರಿ.

ಯುವಕರ ಅಧ್ಯಯನ, ಆಟಪಾಠಗಳ ಹಾಗೂ ಇತರ ಚಟುವಟಿಕೆಗಳ ಸಂದರ್ಭದಲ್ಲಿ ಮುಕ್ತ ವಾತಾವರಣದ ಅವಕಾಶ ತಂತಮ್ಮ ಮನೋಧರ್ಮಕ್ಕನುಗುಣವಾಗಿ ವಿಷಯಗಳನ್ನು ಕಾರ್ಯಕ್ರಮಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಒದಗಿಸಬೇಕು. ಅವರ ಅಧ್ಯಯನ ಅಧ್ಯಾಪನಗಳು ಭಾಷಣರೂಪಗಳಲ್ಲಿ (Lectures) ನಡೆಯುವುದಕ್ಕಿಂತ ಸಂವಾದ ರೂಪದಲ್ಲಿ ನಡೆದರೆ ಸ್ವಾಂತಂತ್ರ್ಯಾಭಿವ್ಯಕ್ತಿಗೆ ಹೆಚ್ಚು ಸಹಾಯಕಾರಿ; ಇದು ವ್ಯಕ್ತಿತ್ವವಿಕಾಸಕ್ಕೂ ಬಹಳ ಅನುಕೂಲಕರ. ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿಕೊಂಡ ಯುವಜನಾಂಗ ಬೆಳೆದಾಗ ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸುವುದು ಸುಲಭಸಾಧ್ಯ.

ಒಟ್ಟಿನಲ್ಲಿ ಹೇಳಬೇಕಾದರೆ, ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸಲು ಕ್ರೈಸ್ತ ಧರ್ಮ ನಾಲ್ಕು ಮೂಲ ಸೂತ್ರಗಳನ್ನು ನಮ್ಮ ಮುಂದಿಡುತ್ತದೆ: ೧. ಪರರನ್ನು ತಮ್ಮಂತೆ ವ್ಯಕ್ತಿಯೆಂದು ಭಾವಿಸುವುದೇ ಸತ್ಯ. ೨. ಈ ಸತ್ಯವನ್ನು ಕ್ರಿಯಾ ರೂಪಕ್ಕೆ ಸಮಾಜದಲ್ಲಿ ಇಳಿಸಿಕೊಳ್ಳುವುದೇ ನ್ಯಾಯ (ಮ. ೨೫-೩೧-೪೬; ಲೂ ೬.೩೫; ಯೂ ೧೪.೧೭: ೧ಯೊ ೩ ೧೭-೧೮) ೩ ಪ್ರೇಮವೇ ನ್ಯಾಯದ ಚಾಲನ -ಶಕ್ತಿ (Motivating force) ೪. ಸ್ವಾತಂತ್ರ್ಯ ಈ ಚಾಲನಶಕ್ತಿಗೆ ಬೇಕಾದ ವಾತಾವರಣ (Environment). ಸಾಮರಸ್ಯದ ಈ ನಾಲ್ಕು ತತ್ತ್ವಗಳನ್ನು ಅಳವಡಿಸಿಕೊಂಡಲ್ಲಿ ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಭಾವೈಕ್ಯ ಸಾಧ್ಯತೆಗೊಳ್ಳುವುದೆಂಬುದು ಕ್ರೈಸ್ತಧರ್ಮದ ಅವಲೋಕನ (world-view).

ಉದ್ಧರಿತ ಬೈಬಲ್ ಗ್ರಂಥಗಳ ಅಕಾರದಿ ಸೂಚಿ

ಅಕೃ	ಅಪೋಸ್ತಲರ ಕೃತ್ಯಗಳು
ಇ	ಇಬ್ರಿಯರಿಗೆ ಬರೆದ ಪತ್ರಿಕೆ
ಎಫೆ	ಎಫೆಸದವರಿಗೆ
೧ ಕೊರಿ	೧ ಕೊರಿಂಥದವರಿಗೆ
೨ ಕೊರಿ	೨ ಕೊರಿಂಥದವರಿಗೆ
ಕೊಲೊ	ಕೊಲೊಸ್ಸೆಯವರಿಗೆ
ಗಲಾ	ಗಲಾತ್ಯದವರಿಗೆ
೧ ಪೇ	೧ ಪೇತ್ರನು
ಪ್ರ	ಪ್ರಕಟನೆ
ಮತ್ತಾ	ಮತ್ತಾಯನು
ಮಾ	ಮಾರ್ಕನು
ಯಾ	ಯಾಕೋಬನು
ಯೆಶಾ	ಯೆಶಾಯನು
ಯೋ	ಯೋಹಾನನು
೧ ಯೋ	೧ ಯೋಹಾನನು
೨ ಯೋ	೨ ಯೋಹಾನನು
ರೋ	ರೋಮಾಪುರದವರಿಗೆ
ಲೂ	ಲೂಕನು

ಸಾಹಿತ್ಯ ಋಣ

ABHISHIKTANANDA-*Towards the Renewal of the Indian Church*, Bangalore : Dharmaram College, 1970.

AMALORPAVADASS, D. S. (Ed) – *Indian Church in the Struggle for a New Society*, Bangalore: National Biblical, Catechetical and Liturgical centre, 1981.

ARRUPE (S. J.), 'The Mystery of Christ Hungering in the world' (Address at Eucharistic Congress Philadelphia 1976) *The Month*, Second New Series Vol 10. No. 1 pp 15-18, 1977.

FELO, Fernando- *A Materialist Reading of the Gospel of Mark*, Translated from the French by Matthew J. O CONNEL, Maryknoll. New York : Orbis Books, 1981.

BOUYER, Louis- *Rite and Man*, London: Burns & Oates, 1963.

CHAKLADAR, Haranachandra- "Social life in Ancient India" in *The Cultural Heritage of India*, Vol. III Calcutta : Belur Math,

CONGAR (O.P), Yves M.-J-*The Mystery of the Temple*, Westminister Md. : The Newmen Press, 1962.

DESBRUSAIS (S. J.) Cyril –"Towards a Philosophy of Liberation" in *Human Liberation in the Indian Context*. Pune : students' Council Jnana Deep Vidyapeeth, 1983 (Jan).

DESROCHERS, John– *Christ the Liberator*, Bangalore: The Centre for Social Action, 1977.

D'SA (S. J.) Francis X.- "Moksha Dharma: Religion as Liberation (Towards a Hindu Theology of Liberation) *Id*, 1983 (Jan).

D'SILVA (S.J.) Brian-*Theological Prespectives for Liberation Movement and Basic Community* (Cyclostyled and for private circulation), Byculla, Bombay : Seva Niketan.

FREIRE, Paulo– *Cultural Action for Freedom*, Penguin Education, 1972.

FREIRE, Paulo– Pedagogy of the Oppressed Penguin Education, 1973.

FREIRE, Paulo–*Education for Critical Consciousness*, London: Sheed and ward, 1974

FREIRE, Paulo – *Education for Liberation*, Bangalore: Ecumenical Christian Centre, 1983.

GOMEZ DE SOUZA, Louis A– "Structures and Mechanisms of Domination in Capitalism" in The Challenge of Communities, Sergio TORRES and John EAGLESON (Eds.) N.Y: orbis Books, 1981.

GUTIERREZ, GUSTAVO– "Liberation Theology and Proclamation" in *The Mystical and Political*

Dimension of the Christian Faith, Claude GEFFRE and Gustavo GUTIERREZ (Ed) No. 7: Herder and Herder. *A Theology of Liberation*, Sister Caridad INDA and John EAGLE, 1974.

HOUTART, F. – *The Eleventh Hour: Explosion of a Church*, London: Burns & Oates, 1968.

JEREMIAS, Joachim – *New Testament Theology*, New York : Scribner, 1971.

JOHN XXIII (Pope) – *Mater et Magistra (The Mother and Teacher)* Bombay : St. Paul's Publications, 1963 *Pacem in Terris* (Peace on Earth) Bombay : St Paul's Publications.

JONES, Alexander – *The Jerusalem Bible*, London: Darton Longman and Todd, 1965.

KAPPEN (S. J.) Sebastian – *Jesus and Freedom*, Maryknoll N. Y : Orbis Books, 1977.

KUNG, Hans – *On Being a Christian*, E. QUINN (Trans) Collins, 1977.

MADTHA, Willam – "Pope John XXIII and Socialization," *Social* Action, Vol. 14, No. 4 New Delhi : Indian Social Institute, 1964.

MADTHA, William – "Conscientization : The aim of University Education", *Journal of Higher Education*, Vol 2 No. 3 New Delhi : University Grants Commission, 1977.

MADTHA, William – "Development and Education", *New Dimensions in the Study of Tamil Culture*, Palayam Kottai : Araaichi, 1978.

MARTINI (S.J.) Carlo– *The Ignatian Exercises in the Light of St. John*, Joseph GILL, S. J. (Trans.)

Foreword by Karl RAHNER, S. J., Anand, India: Gujarat Sahitya Prakash, 1981.

MIRANDA, Jose – *Marx and the Bible : A Critique of the Philosophy of Oppression* John EAGLESON (Tr.) Maryknol N. Y. : Orbis Book, 1974.

MIRANDA, Jose– *Being and the Messiah : The Message of St.* John New York : Orbis Books, 1977.

PANIKKAR, Raimundo – *Myth, Faith and Hermeneutics*, Bangalore : Asian Trading Corporation, 1983.

PEREZ-ESCALARIN A – *Athesism and Liberation*, N. Y.: Orbis Books, 1978.

ROBINSON, John A. T– *Honest to God*, Philadelphia : The Westernminister Press , 1963.

ROBINSON, John A. T–"Social Ethics and the Church" *The Month*, Second New Series Vol.10 London, pp. 6–9, 1977 (Jan).

SOBRINO, (S.J.) Jon– *Christology at the Crossroads* N. Y. : Orbis Books. "The Risen Lord in the Crucified Jesus : The Resurrection of Jesus of Nazarene in a Crucified World" *Basic Community*

Library Service (For Private circulation) Vol.12, Bombay: Seva Niketan.

SOARES-PRABHU (S.J.) George M–"Jesus and social Justice" *Basic Community Library Service* Byculla, Bombay: Seva Niketan.

WOLFF, Hans Walter – *Anthropology of the Old Testament*. London : SCM Press, 1974.

ರಾಷ್ಟ್ರೀಯ ಭಾವೈಕ್ಯ ಮತ್ತು ಇಸ್ಲಾಂ ಧರ್ಮ

● ಸೈಯದ ಜಮೀರುಲ್ಲಾ ಷರೀಫ್

ಮಾನವ ಬಹುಮುಖ ಪ್ರತಿಭೆ ಪಡೆದ ವಿಶೇಷ ಜೀವಿ. ಆತನ ಜ್ಞಾನ, ವರ್ತನೆ, ಕಾರ್ಯಗಳು ಆತನ ವ್ಯಕ್ತಿತ್ವವನ್ನು ನಿರ್ಮಾಣಗೊಳಿಸುವುದರ ಜೊತೆಗೆ ಸಮಾಜವನ್ನು, ದೇಶವನ್ನು ನಿರ್ಮಿಸುತ್ತವೆ. ಆದ್ದರಿಂದ ರಾಷ್ಟ್ರದ ಹಿತ-ಕೀರ್ತಿಗಳು ಅಲ್ಲಿನ ಪ್ರಜೆಗಳ ಜ್ಞಾನ ಮತ್ತು ಗುಣಗಳನ್ನು ಅವಲಂಬಿಸಿರುತ್ತವೆ. ಪ್ರಜೆಗಳು ಒಳ್ಳೆಯವರಾಗಿದ್ದರೆ ದೇಶ ಒಳ್ಳೆಯದಾಗಿರುತ್ತದೆ. ಪ್ರಜೆಗಳು ಕೆಟ್ಟವರಿದ್ದರೆ ಆ ದೇಶ ಯಾವಾಗಲೂ ಅಶಾಂತಿಯ ಹೊಗೆಯಿಂದ ಉಸಿರಾಡುತ್ತಿರುತ್ತದೆ. ಸಾಮಾನ್ಯವಾಗಿ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣ ಮಾಡುವುದು ಧರ್ಮ. ಯಾರು ಧಾರ್ಮಿಕ ಪರಿಸರದಲ್ಲಿರುತ್ತಾರೋ ಅವರ ಗುಣಗಳು ಹಾನಿರಹಿತವಾಗಿರುತ್ತವೆ. ಆದ್ದರಿಂದ ಯಾವುದೇ ದೇಶವಾಗಲಿ ತನ್ನ ಪ್ರಜೆಗಳಿಗೆ ಮೊದಲು ಧಾರ್ಮಿಕ ಜ್ಞಾನವನ್ನು ನೀಡಲು ಮುಂದಾಗಬೇಕು ಪರಿಪೂರ್ಣವಾಗಿ ಧಾರ್ಮಿಕ ಜ್ಞಾನಪಡೆದ ಪ್ರಜೆಗಳಿಂದ ಎಂದೂ ದೇಶದಲ್ಲಿ ಅಶಾಂತಿಯ ವಾತಾವರಣ ಏಳಲು ಸಾಧ್ಯವಿಲ್ಲ.

ಮಾನವೀಯತೆಯನ್ನು ಬೆಳೆಸುವ ಧರ್ಮ ದೇಶಕ್ಕೆ ಅಗತ್ಯವೆಂದ ಮೇಲೆ ಧರ್ಮ ಎಂದರೇನೆಂಬುದನ್ನು ತಿಳಿಯುವ ಕುತೂಹಲ ಮೂಡುತ್ತದೆ. 'ಧರ್ಮ' ಶಬ್ದಕ್ಕೆ ವಿವಿಧ ಅರ್ಥಗಳಿವೆ, ಅವುಗಳಲ್ಲಿ ಕರ್ತವ್ಯವೆಂಬುದು ಸಹ ಒಂದು. ಅಂದರೆ ಮಾನವ ಹುಟ್ಟಿದ ನಂತರ ಇಹಲೋಕದಲ್ಲಿ ಸೃಷ್ಟಿಕರ್ತನ ಧ್ಯಾನಮಾಡುವುದರ ಮೂಲಕ, ತನ್ನ ಧರ್ಮದಲ್ಲಿನ ಆಚರಣೆಗಳನ್ನು ಮಾಡುವುದರ ಮೂಲಕ ಋಣಮುಕ್ತನಾಗಬೇಕೆಂದು, ಕರ್ತವ್ಯದ ಆಂತರಿಕ ಅರ್ಥ ತಿಳಿಸುತ್ತದೆ. ಧರ್ಮದಲ್ಲಿನ ಕರ್ತವ್ಯಗಳನ್ನು ಪೂರ್ಣಗೊಳಿಸಿದ ನಂತರವೇ ಆತನಿಗೆ ಒಳಿತು ಲಭಿಸುವುದು ಎಂದು ಧಾರ್ಮಿಕ ತತ್ವಗಳು ತಿಳಿಸಿದಾಗ ಅದಕ್ಕನುಗುಣವಾಗಿ ವ್ಯಕ್ತಿ ನಡೆಯುತ್ತಾನೆ. ಅಂತಹ ಒಳಿತುಗಳ ಲಭ್ಯವೇ ದೇಶದ ಹಿತಕ್ಕೆ ಬೇಕಾಗಿರುವುದು. ಆದ್ದರಿಂದ ಪ್ರತಿಯೊಂದು ಧರ್ಮವನ್ನು ಸಹ ಸಮಾನ ದೃಷ್ಟಿಯಲ್ಲಿ ಪ್ರೋತ್ಸಾಹಿಸುವುದು ದೇಶದ ಮುಖ್ಯ ಕರ್ತವ್ಯವಾಗಿದೆ.

ಇಂದು ಪ್ರತ್ಯಕ್ಷ ಪ್ರತಿಫಲ ನೀಡದ ಧರ್ಮದ ಬಗ್ಗೆ ಹಲವಾರು ವೈಜ್ಞಾನಿಕ ಅಭಿಪ್ರಾಯಗಳು, ನಂಬಿಕೆಗಳನ್ನು ಕಳಚುತ್ತಿವೆ. ಆದರೆ ಅದರಿಂದ ದೇಶಕ್ಕೆ ಹಾನಿ

ಯುಂಟಾಗುವುದೆಂದು ಹೇಳಬಹುದು. ಮಾನವನ ಸ್ವಾರ್ಥತೆಯನ್ನು ನಾಶಗೊಳಿಸಿ ಆತನಲ್ಲಿ ಪರಾರ್ಥತೆಯನ್ನು ಬೆಳೆಸುವ ಧರ್ಮದ ಅವಶ್ಯಕತೆ ಈ ವೈಜ್ಞಾನಿಕ ಯುಗದಲ್ಲಿ ಬೇಕಾಗಿದೆ. ಮಾನವರಲ್ಲಿ ಪರಸ್ಪರ ಪ್ರೀತಿ-ವಿಶ್ವಾಸ ಬೆಳೆಯಲು ಧಾರ್ಮಿಕ ಮೂಲ ತತ್ವಗಳು ಕಾರಣಗಳಾಗುತ್ತವೆ. ಆದ್ದರಿಂದ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯು ಸಹ ಸೌಹಾರ್ದತೆ ಬೆಳೆಸುವ ಮೂಲ ತತ್ವಗಳನ್ನು ಅರಿತು ಅದರಂತೆ ನಡೆಯಬೇಕೆ ವಿನಃ ಅದರ ಅಡಿಯಲ್ಲಿ ಅಣಬೆಗಳಂತೆ ತಲೆಯೆತ್ತುವ ಮೂಢ ನಂಬಿಕೆಗಳ ಕಡೆಗೆ ಗಮನ ಹರಿಸಬಾರದು. ಏಕೆಂದರೆ ಅವು ವರ್ಗ ವರ್ಗಗಳ ನಡುವೆ ವೈಷಮ್ಯತೆಯನ್ನು ಬಿತ್ತುವ ಬೀಜಗಳಾಗುತ್ತವೆ. ಸಾಮಾನ್ಯವಾಗಿ ಸರ್ವಧರ್ಮಗಳ ಮೂಲ ತತ್ವಗಳೆಲ್ಲಾ ಒಂದೇ ಗುರಿಯನ್ನು ನಿರ್ದೇಶಿಸುವುದರಿಂದ ಮಾನವರೆಲ್ಲಾ ಒಗ್ಗಟ್ಟಿನಿಂದ ಬಾಳಲು ಸಾಧ್ಯವಾಗುತ್ತದೆ. ದೇಶದ ಹಿತಕ್ಕೆ ಈ ಏಕ ಗುರಿಯ ತತ್ವಗಳು ಅಗತ್ಯವಾಗಿ ಬೇಕಾಗುತ್ತವೆ. ನಾವಿಂದು ಹುಡುಕಾಡುತ್ತಿರುವ ಭಾವೈಕ್ಯತೆಯು ನಮಗೆ ಸಿಗಬೇಕಾದರೆ ಅದು ಕೇವಲ ಏಕ ಉದ್ದೇಶದ ಮೂಲ ತತ್ವಗಳನ್ನು ಅನುಸರಿಸುವ ಮಾನವರಲ್ಲಿ ಮಾತ್ರ. ಆದ್ದರಿಂದ ಸರ್ವ ಧರ್ಮಾವಲಂಬಿಗಳೆಲ್ಲಾ ಅವರವರ ಧರ್ಮದ ಮೂಲ ತತ್ವಗಳನ್ನು ಚೆನ್ನಾಗಿ ಅರಿತು ನಡೆದರೆ ಸರ್ವರ ಭಾವನೆಗಳು ಐಕ್ಯಗೊಳ್ಳಬಲ್ಲವು.

ಭಾವನೆಗಳನ್ನು ಐಕ್ಯಗೊಳಿಸಲು ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಅವುಗಳೆಂದರೆ, ಮಾನವರೆಲ್ಲಾ ಸಮಾನರೆಂದು ತಿಳಿಯುವುದು; ಮಾನವರಲ್ಲಿ ಪರಸ್ಪರ ಪ್ರೀತಿ ಬೆಳೆಸುವ, ಸಹನೆ, ಪರೋಪಕಾರ ಪ್ರಾಮಾಣಿಕತೆ ಮೊದಲಾದ ಗುಣಗಳನ್ನು ಗಳಿಸುವುದು ಇತ್ಯಾದಿ. ಹೀಗೆ ಕೆಲವು ನಿಯಮಗಳಿಗೆ ಕಟ್ಟುಬಿದ್ದಾಗ ಮಾತ್ರ ಭಾವೈಕ್ಯತೆ ಬೆಳೆಯಲು ಸಾಧ್ಯವಾಗುತ್ತದೆ. ಮೊದಲು ಮಾನವರ ನಡುವೆ ಬೆಸೆಯಲ್ಪಟ್ಟ ಭಾವನೆಗಳು ಅನಂತರ ರಾಷ್ಟ್ರದ ಕಡೆಗೆ ತಿರುಗಿ ರಾಷ್ಟ್ರೀಯ ಭಾವೈಕ್ಯತೆಯ ರೂಪತಾಳುತ್ತವೆ. ಆದಪ್ರಯುಕ್ತ ರಾಷ್ಟ್ರ ಮೊದಲು ಪ್ರಥಮ ಹಂತದಲ್ಲಿ ಐಕ್ಯಗೊಳ್ಳುವ ಭಾವನೆಗಳಿಗೆ ಹೆಚ್ಚಿನ ಪ್ರೋತ್ಸಾಹಕೊಡಬೇಕಾಗುತ್ತದೆ. ವಿವಿಧ ಧರ್ಮಾವಲಂಬಿಗಳ ಭಾವನೆಗಳ ಐಕ್ಯತೆಯ ಅಡಿಪಾಯ ಭದ್ರವಾಗಿದ್ದರೆ ಮಾತ್ರ ರಾಷ್ಟ್ರೀಯ ಭಾವೈಕ್ಯತೆ ಸ್ಥಿರವಾಗಿ ನಿಲ್ಲಲು ಸಾಧ್ಯ.

ರಾಷ್ಟ್ರೀಯ ಭಾವೈಕ್ಯತೆಯ ನಿರ್ಮಾಣಕ್ಕೆ ಧರ್ಮಗಳು ಎಷ್ಟರಮಟ್ಟಿಗೆ ದುಡಿಯುತ್ತಿವೆ ಎಂಬುದನ್ನು ನೋಡಲು ಪ್ರತಿಯೊಂದು ಧರ್ಮದ ಮೂಲ ತತ್ವಗಳನ್ನು ವಿವರಿಸಿ ನೋಡಬೇಕಾಗುತ್ತದೆ. ನಿದರ್ಶನಕ್ಕೆ ಇಸ್ಲಾಂ ಧರ್ಮ ರಾಷ್ಟ್ರೀಯ ಭಾವೈಕ್ಯತೆಯನ್ನು ಜನರಲ್ಲಿ ಹೇಗೆ ಉಂಟು ಮಾಡುತ್ತದೆ ಎಂಬುದನ್ನು ನೋಡಬಹುದು.

ಜಗತ್ತಿನಲ್ಲಿರುವ ಧರ್ಮಗಳಲ್ಲಿ ಬಹುಮಟ್ಟಿಗೆ ಧರ್ಮಗಳು ಆಯಾ ಧರ್ಮ ಸ್ಥಾಪಕನ ಹೆಸರಿನಿಂದಲೋ ಇಲ್ಲವೆ ಧರ್ಮ ದೀಕ್ಷೆ ಪಡೆದ ಜನಾಂಗದ ಹೆಸರಿನಿಂದಲೋ ಕರೆಯಲ್ಪಡುತ್ತವೆ. ಕ್ರಿಸ್ತನು ಬೋಧಿಸಿದ ಧರ್ಮಕ್ಕೆ ಕ್ರೈಸ್ತ ಧರ್ಮವೆಂದೂ, ಬುದ್ಧನು ಸ್ಥಾಪಿಸಿದ ಧರ್ಮಕ್ಕೆ ಬೌದ್ಧ ಧರ್ಮವೆಂದೂ, ಝೋರಾಷ್ಟರನು ಸ್ಥಾಪಿಸಿದ ಧರ್ಮಕ್ಕೆ ಝೋರಾಷ್ಟರ್ ಪಂಥವೆಂದೂ, ಯಹೂದಿ ಜನಾಂಗದ ಧರ್ಮಕ್ಕೆ ಯಹೂದಿ ಧರ್ಮವೆಂದು ಕರೆಯಲಾಗುತ್ತದೆ. ಆದರೆ ಇಸ್ಲಾಂ ಧರ್ಮವು ಯಾವದೇ ಒಬ್ಬ ವ್ಯಕ್ತಿಯ ಇಲ್ಲವೆ ಒಂದು ಜನಾಂಗದ ಹೆಸರಿನಿಂದ ಕರೆಯಲ್ಪಡುವ ಧರ್ಮವಲ್ಲ. 'ಇಸ್ಲಾಂ' ಎಂಬ ಪದವು ಅರೆಬ್ಬಿ ಭಾಷೆಯ 'ಸಿಲ್ಮ್' ಎಂಬ ಮೂಲ ಪದದಿಂದ ಬಂದಿದೆ. ಅದರ ಅರ್ಥ ಸರ್ವಾರ್ಪಣ, ಶರಣು, ಆಜ್ಞಾಪಾಲನೆ ಎಂದಿದೆ. ಆದ್ದರಿಂದಲೇ ಇಸ್ಲಾಂ ಧರ್ಮವು ಸೃಷ್ಟಿಗೆ ಕಾರಣನಾದ, ವಿಶ್ವ ಪ್ರಭುವಾದ 'ಅಲ್ಲಾ' ನಿಗೆ ಸಂಪೂರ್ಣ ಶರಣಾಗುವ ಮತ್ತು ಆತನ ಆಜ್ಞಾಪಾಲನೆ ಮಾಡುವ ಆದೇಶವನ್ನು ನೀಡುತ್ತದೆ. ಅದರಂತೆ ನಡೆಯುವವನು ಸರ್ವತೋಮುಖ ಶಾಂತಿ ನೆಮ್ಮದಿಗಳನ್ನು ಮನದಲ್ಲಿ ಮತ್ತು ಸಮಾಜದಲ್ಲಿ ನೆಲೆಗೊಳಿಸಬಲ್ಲನೆಂದು ಇಸ್ಲಾಂ ತಿಳಿಸುತ್ತದೆ. ಇಸ್ಲಾಮಿನ ಮೂಲ ತತ್ವಗಳೆಂದರೆ. ಏಕದೇವನಾದ ಅಲ್ಲಾನಲ್ಲಿ ವಿಶ್ವಾಸವಿಡುವುದು; ಪ್ರವಾದಿ ಮುಹಮ್ಮದ್ (ಸ) ರಲ್ಲಿ ಮತ್ತು ಅವರು ನೀಡಿದ ಮಾರ್ಗದರ್ಶನಗಳಲ್ಲಿ ವಿಶ್ವಾಸವಿಟ್ಟು ನಡೆಯುವುದು; ಮರಣೋತ್ತರ ಜೀವನದಲ್ಲಿ ಮತ್ತು ನಿರ್ಣಾಯಕ ದಿನವಂದು ಮಾನವನು ತಾನು ಇಹಜೀವನದಲ್ಲಿ ಮಾಡಿದ ಕೆಲಸ ಕಾರ್ಯಗಳಿಗಾಗಿ ಫಲಾಫಲಗಳನ್ನು ಪಡೆಯಲಿರುವನೆಂಬ ಸಂಗತಿಯಲ್ಲಿ ವಿಶ್ವಾಸವಿಡುವುದು. ಈ ಮೂರು ಮುಖ್ಯ ಮೂಲ ತತ್ವಗಳು ಇಸ್ಲಾಮಿನ ಜೀವಾಳಗಳಾಗಿವೆ. ಅವುಗಳನ್ನು ಅನುಸರಿಸುವವನೇ ಮುಸ್ಲಿಮ್ಮನು ಎನ್ನಲಾಗುತ್ತದೆ.

ಇಸ್ಲಾಂನಲ್ಲಿರುವ ಏಕದೇವನಿಷ್ಠೆ, ಏಕಪ್ರವಾದಿವರ್ಯರ ಮಾರ್ಗದರ್ಶಗಳು ಆ ಧರ್ಮದ ಅನುಯಾಯಿಗಳನ್ನೆಲ್ಲಾ ಒಂದೇ ದಾರಿಯಲ್ಲಿ ಸಾಗುವಂತೆ ಮಾಡುತ್ತವೆ. ಅದರಿಂದ ಮನುಷ್ಯರಲ್ಲಿ ಪರಸ್ಪರ ಸ್ನೇಹತ್ವ ಬೆಳೆಯಲು ಪ್ರಾರಂಭವಾಗುತ್ತದೆ. ಹುಟ್ಟನೊಡನೆಯೇ ಭಾವನೆಗಳನ್ನು ಬೆಸೆದುಕೊಂಡು ಹುಟ್ಟುವಂತೆ ಇಸ್ಲಾಂನಲ್ಲಿನ ಏಕದೇವ ನಿಷ್ಠೆ ಮಾಡುತ್ತದೆ. ಒಂದು ವೇಳೆ ಭಾವನೆಗಳನ್ನು ಐಕ್ಯಗೊಳಿಸಿಕೊಳ್ಳಲು ಇಷ್ಟಪಡದವರನ್ನು ಇಸ್ಲಾಮ್ ಧರ್ಮವು ಧರ್ಮ ಬಾಹಿರಗೊಳಿಸುತ್ತದೆ. ಇಸ್ಲಾಮಿನ ವೈಶಿಷ್ಟ್ಯಗಳು ಮನುಷ್ಯನ ಭಾವನೆಗಳನ್ನು ಬೆಸೆಯುವುದನ್ನು ನೋಡಬಹುದಾಗಿದೆ.

ಸಮಾನತೆ :- ಇಸ್ಲಾಮಿನ ವೈಶಿಷ್ಟ್ಯಗಳಲ್ಲಿ ಸಮಾನತೆ ಮೊದಲನೆಯದಾಗಿದೆ. "ಜನನ ಮರಣಗಳಲ್ಲೆಲ್ಲ ಸರ್ವವಿಧದಿಂದಲೂ ಸರಿಸಮಾನರಾದ

ಮಾನವರು, ಮೈ ಬಣ್ಣ ಹೇಗೇ ಇರಲಿ ಅವರೆಲ್ಲ ಪರಸ್ಪರ ಸಮಾನರು" ಎಂಬು ದನ್ನು ಇಸ್ಲಾಂ ಒತ್ತಿ ಹೇಳುತ್ತದೆ. ಕುರಾನಿನಲ್ಲಿ "ಅಖಂಡ ಮನುಕುಲವೆಲ್ಲ ಒಂದೇ ದಂಪತಿಗಳಾದ ಆದಮ್ (ಅಲೈಹಸ್ಸಲಾಮ್) ಹಾಗೂ ಹವ್ವಾ ದಂಪತಿಗಳ ಮಕ್ಕಳೆಂದು" ತಿಳಿಸುತ್ತದೆ. ಇಲ್ಲಿ ಇಡೀ ಮನುಕುಲವೆಲ್ಲ ಒಂದೇ ಕುಟುಂಬದ ಸದಸ್ಯರೆಂದು ತಿಳಿಸುತ್ತಿರುವದರಿಂದ ಮಾನವರಲ್ಲಿ ಪರಸ್ಪರ ಬಾಂಧವ್ಯದ ಅರಿವು ಮೂಡುತ್ತದೆ. ತಾವೆಲ್ಲಾ ಸೋದರರೆಂಬ ಸಂಬಂಧ ಭಾವನೆಗಳನೆಲ್ಲಾ ಕೇಂದ್ರೀ ಕರಣಗೊಳಿಸುತ್ತದೆ. ಪವಿತ್ರ ಕುರಾನ್ "ಮಾನವನ ಮೂಲ ಒಂದೇ ಎಂಬ ಸಂಗತಿಯನ್ನು ಪುನರುಚ್ಚರಿಸುತ್ತದೆ. ಅಲ್ಲದೆ ಮಾನವ ಸಂತಾನವನ್ನು ಕಾಲಾನು ಕ್ರಮದಲ್ಲಿ ವಿವಿಧ ಜನಾಂಗಗಳಲ್ಲಿಯೂ, ಜನವರ್ಗಗಳಲ್ಲಿಯೂ ವಿಭಜಿಸಲಾಗಿದೆ ಎಂಬುದನ್ನು ಆ ವಿಭಜನೆಗೆ ಭೌಗೋಳಿಕ ಕಾರಣಗಳನ್ನು ತಿಳಿಸುತ್ತಾ ಈ ರೀತಿ ಯಾಗಿ ವಿಭಜನೆಗೊಂಡಾಗಲೂ ಮಾನವರೆಲ್ಲಾ ಏಕತೆಗಾಗಿ ಶ್ರಮಿಸಬೇಕೆಂದು ಬೋಧಿಸುತ್ತದೆ."

ಮಾನವರೆಲ್ಲಾ ಸಮಾನರೆಂದು ಪವಿತ್ರ ಕುರಾನ್ ಸೂಚಿಸಿದರೂ ಅವರಲ್ಲಿ ಉಚ್ಚತೆ ಮತ್ತು ನೀಚತೆಯನ್ನು ಕಂಡು ಹಿಡಿಯುವ ಬಗ್ಗೆ ಅದು "ನಿಮ್ಮಲ್ಲಿ ಯಾರು ಸದಾಚಾರ ಸಂಪನ್ನತೆಯಲ್ಲಿ ಶ್ರೇಷ್ಠರೋ ಅವರೇ ಅಲ್ಲಾಹನ ದೃಷ್ಟಿಯಲ್ಲಿ ಶ್ರೇಷ್ಠರು" ಎಂದು ತಿಳಿಸುತ್ತದೆ. ಮಾನವನ ಗುಣಗಳ ಆಧಾರಕ್ಕನುಗುಣವಾಗಿ ಆತ ವ್ಯತ್ಯಾಸವನ್ನು ಪಡೆಯುತ್ತಾನೆ ವಿನಃ ಆತನು ಪಡೆದ ಸ್ಥಾನ, ಗಳಿಸಿದ ಹಣ, ತೊಟ್ಟ ಉಡುಪು ಮೊದಲಾದವುಗಳಿಂದ ಅಲ್ಲವೆಂದು ಮೇಲಿನ ವಾಕ್ಯ ಧ್ವನಿಸುತ್ತದೆ.

ಸಮಾನತೆಯ ಬಗ್ಗೆ ಹಿಂದೆ ನಡೆದ ಘಟನೆಯೊಂದು ಪರಿಪೂರ್ಣ ವಿವರಣೆ ನೀಡುವುದನ್ನು ನೋಡಬಹುದು. ಪ್ರವಾದಿ ಮುಹಮ್ಮದ್(ಸ)ರ ಮರಣಾ ನಂತರ ದ್ವಿತೀಯ ಖಲೀಫರಾಗಿ ನಿಯುಕ್ತರಾದ ಹಜರತ್ ಉಮರ್ (ರಜಿಯಲ್ಲಾ ಹುತಾಲ ಅನ್ಹು)ರವರ ಆಡಳಿತದ ಕಾಲದಲ್ಲಿ ಗಸ್ಸಾನಿದ್ ದೊರೆಯಾಗಿದ್ದ ಜಬ್ಬಾಲನು ಒಮ್ಮೆ ಮಕ್ಕಾ ಯಾತ್ರೆಗೆ ಹೊರಟನು; ಹಜ್ ಯಾತ್ರೆಯ ನಿಯಮದ ಪ್ರಕಾರ ಆ ದೊರೆ ಪವಿತ್ರ ಕಾಬಾದ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದಾಗ, ಅದೇ ರೀತಿ ಮತ್ತೊಬ್ಬ ಬಡವನೊಬ್ಬನು ಸಹ ಕಾಬಾದ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದ. ಆಗ ಅನಿರೀಕ್ಷಿತವಾಗಿ ಆತನು ಹೊದ್ದುಕೊಂಡಿದ್ದ ಬಟ್ಟೆಯ ಒಂದು ಭಾಗ ಗಾಳಿಗೆ ಹಾರಾಡಿ ದೊರೆಯ ಭುಜಕ್ಕೆ ತಾಗಿತು. ಅದನ್ನು ಕಂಡ ದೊರೆಗೆ ಕೋಪ ಉಮ್ಮಳಿಸಿತು. ತಕ್ಷಣ ಆತ ಬಡಯಾತ್ರಿಕನ ಕಪಾಳಕ್ಕೆ ಬಲವಾಗಿ ಹೊಡೆದನು. ಪವಿತ್ರ ಸ್ಥಳದಲ್ಲಿ ತನಗಾದ ಅವಮಾನವನ್ನು ಬಡ ಯಾತ್ರಿಕ ಸಹಿಸಲಾಗದೆ ಖಲೀಫರಾದ ಉಮರ್ (ರಜಿಯಲ್ಲಾಹುತಾಲ ಅನ್ಹು)

ರವರಿಗೆ ನಡೆದ ಘಟನೆಯನ್ನು ತಿಳಿಸಿದನು. ಖಲೀಫರು ಆ ದೊರೆಯನ್ನು ಕರೆಸಿ "ಬಡಯಾತ್ರಿಕನಿಗೆ ಪೆಟ್ಟುಕೊಟ್ಟದ್ದು ನಿಜವೆ"? ಎಂದು ಪ್ರಶ್ನಿಸಿದರು. ದೊರೆಯು ಅದನ್ನು ಹೌದೆಂದು ಒಪ್ಪಿಕೊಂಡು, "ಆತನ ತಪ್ಪಿಗೆ ನಾನು ಕೊಟ್ಟ ಶಿಕ್ಷೆ ಬಹಳ ಕಡಿಮೆಯಾಯಿತು, ಪವಿತ್ರ ಕಾಬಾದ ಸ್ಥಳವನ್ನು ಬಿಟ್ಟು ಬೇರೆ ಕಡೆ ಆತ ಅಂತಹ ತಪ್ಪು ಮಾಡುತ್ತಿದ್ದರೆ ಆತನನ್ನು ಕೊಲ್ಲಿಸುತ್ತಿದ್ದೆ" ಎಂದು ಉತ್ತರಿಸಿದನು- ಉಮರ್ (ರಜಿಯುಲ್ಲಾಹುತಾಲ ಅನ್ಹು)ರವರು "ದೊರೆಗಳೇ ನಿಮ್ಮ ಉತ್ತರ ದಿಂದ ನಿಮ್ಮ ತಪ್ಪುಗಳ ಸಂಖ್ಯೆ ಏರುತ್ತಿದೆ. ಅದಕ್ಕೆ ತಕ್ಕ ಶಿಕ್ಷೆ ಎಂದರೆ ಆ ಬಡಯಾತ್ರಿಕನಿಗೆ ಕ್ಷಮೆ ಕೇಳುವುದು," ಎಂದರು. ಖಲೀಫರ ಮಾತನ್ನು ಕೇಳಿದ ದೊರೆ ಆಶ್ಚರ್ಯಗೊಂಡು "ದೊರೆಯಾದ ನಾನು ಸಾಮಾನ್ಯ ಬಡಮನುಷ್ಯನಿಗೆ ಕ್ಷಮೆ ಕೇಳಬೇಕೆ"? ಎಂದು ಕೇಳಿದ. ಅದಕ್ಕೆ ಖಲೀಫರು "ಯಾರೇ ತಪ್ಪು ಮಾಡಲಿ ಇಸ್ಲಾಮಿನ ಪ್ರಕಾರ ಅವರಿಗೆ ಶಿಕ್ಷೆಯಾಗಲೇ ಬೇಕು. ಆದ್ದರಿಂದ ನೀವು ಆ ಬಡಯಾತ್ರಿಕನಲ್ಲಿ ಕ್ಷಮೆಕೇಳುವುದು ಅನಿವಾರ್ಯ ಪವಿತ್ರ ಸ್ಥಳವಾದ ಕಾಬಾದ ಪ್ರದಕ್ಷಿಣೆಯ ಗುರಿಯು ಪ್ರತಿಯೊಬ್ಬ ಮನುಷ್ಯನು ಪುಣ್ಯಗಳಿಸುವುದೇ ಆಗಿರುತ್ತದೆ. ಅಲ್ಲದೆ ಇಸ್ಲಾಮಿನಲ್ಲಿ ಪ್ರತಿಯೊಬ್ಬನಿಗೂ ಸಮಾನ ಹಕ್ಕಿದೆ, ಅವನು ದೊರೆಯಾಗಲಿ ಇಲ್ಲವೆ ಸೇವಕನಾಗಲಿ," ಎಂದು ದೊರೆಗೆ ಸಮಾಧಾನ ಮಾಡಿದರು. ಆಗ ದೊರೆಯು ಯಾತ್ರಿಕನಿಗೆ ಕ್ಷಮಿಸುವಂತೆ ಕೇಳಿಕೊಂಡನು. ಅಂದಿನಿಂದ ಅವರಿಬ್ಬರಲ್ಲಿ ಪರಸ್ಪರ ಮಾನವೀಯ ಮೌಲ್ಯಗಳನ್ನು ಗೌರವಿಸುವ ದೃಷ್ಟಿಮೂಡಿ ಸ್ನೇಹ ಬೆಳೆಯಲು ಅವಕಾಶವಾಯಿತು. ಈ ಘಟನೆಯು ಇಸ್ಲಾಮಿನಲ್ಲಿ ಅಧಿಕಾರ ಇರುವವನಿಗೂ ಮತ್ತು ಅಧಿಕಾರ ರಹಿತ ವ್ಯಕ್ತಿಗೂ ಸಮಾನವಾದ ಹಕ್ಕು ಬಾಧ್ಯತೆಗಳಿವೆ ಎಂಬುದನ್ನು ಸಮರ್ಥಿಸುತ್ತದೆ. ಅದು ಕೇವಲ ಮುಸ್ಲಿಮರಿಗೆ ಮಾತ್ರ ಸೀಮಿತವಾಗದೆ ಎಲ್ಲಾ ಧರ್ಮಾನುಯಾಯಿ ಗಳೊಡನೆಯೂ ಸರಿಸಮಾನವಾದ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಈ ಧರ್ಮ ತಿಳಿಸುತ್ತದೆ.

ಇಸ್ಲಾಂ ನಲ್ಲಿರುವ ಸಮಾನತೆಯನ್ನು ಕಂಡ ಹಲವು ಮೇಧಾವಿಗಳು ತಮ್ಮ ಅಭಿಪ್ರಾಯಗಳನ್ನು ಹೊರಗೆಡಹಿದ್ದಾರೆ. ಮಹಾತ್ಮಗಾಂಧಿಯವರು "ಭಾರತದ ರಾಷ್ಟ್ರೀಯ ಸಂಸ್ಕೃತಿಗೆ ಇಸ್ಲಾಂ ಮತವು ಅರ್ಪಿಸಿರುವ ಸ್ಪಷ್ಟವಾದ ಕಾಣಿಕೆಗಳು- ಭಗವಂತನ ಏಕತೆಯಲ್ಲಿ ಸರ್ವಶುದ್ಧವಾದ ನಂಬಿಕೆ, ತನ್ನ ಪರಿಧಿಯೊಳಗೆ ಸೇರಿರುವ ವರ ಬಗೆಗೆ ಮಾನವ ಸಹೋದರತೆಯ ಸತ್ಯದ ಪ್ರಾಯೋಗಿಕ ಅನ್ವಯ. ನಾನು ಇವೆರಡನ್ನೂ ವಿಶಿಷ್ಟ ಕಾಣಿಕೆಗಳೆನ್ನುತ್ತೇನೆ". ಮತ್ತೊಂದು ಸಂದರ್ಭದಲ್ಲಿ "ಇಸ್ಲಾಂ

ಮೋ. ಕ. ಗಾಂಧಿ: ನನ್ನ ಕನಸಿನ ಭಾರತ, ಪ್ರಕಾಶನ ಕಾರ್ಯಾಲಯ ಮೈಸೂರು. ಪುಟ 276. 1261

ಧರ್ಮ ಸಾರುವ ಸಹೋದರತೆ ಕೇವಲ ಮುಸಲ್ಮಾನರಾಗಿರುವವರಲ್ಲಿ ಮಾತ್ರವಲ್ಲ; ಇಡೀ ಮನುಷ್ಯಕುಲಕ್ಕೆ ವ್ಯಾಪಿಸಬೇಕು" ಎಂದಿದ್ದಾರೆ.

ಇಸ್ಲಾಮಿನಲ್ಲಿರುವ ಸಮಾನತೆ ಮತ್ತು ಪ್ರಜಾಸತ್ತೆಯನ್ನು ಕುರಿತು ಶ್ರೀಮತಿ ಸರೋಜಿನಿ ನಾಯ್ಡುರವರು "ಪ್ರಜಾಸತ್ತೆಯನ್ನು ಪ್ರತಿಪಾದಿಸಿ ಅದನ್ನು ಜಾರಿಗೊಳಿಸಿದ ಪ್ರಥಮ ಧರ್ಮವೇ ಇಸ್ಲಾಂ. ಮಸೀದಿಯ ಮಿನಾರಗಳಿಂದ ಶಬ್ದ ಕಹಳೆ ಮೊಳಗಿ ಭಕ್ತ ಜನರು ಮಸೀದಿಯನ್ನು ಸೇರಿ, ರಾಜನು ಪ್ರಜೆಯೂ ಭುಜಕ್ಕೆ ಭುಜ ತಾಗಿಸಿ ದೇವನು 'ಮಹಾಮಹಿಮನು' ಎಂದು ಘೋಷಿಸುತ್ತಾ ಸಾಷ್ಟಾಂಗವೆರಗುವಾಗ ಇಸ್ಲಾಮಿನ ಪ್ರಜಾಸತ್ತೆಯು ಸಾಕ್ಷಾತ್ಕಾರಗೊಳ್ಳುತ್ತದೆ. ಮಾನವರನ್ನು ಹುಟ್ಟಿನಿಂದಲೇ ಪರಸ್ಪರ ಸಹೋದರರೆಂದು ವೀಕ್ಷಿಸುವ ಈ ಅವಿಭಾಜ್ಯ ಏಕತೆಯು ನನ್ನನ್ನು ಅನೇಕ ಬಾರಿ ಆಶ್ಚರ್ಯ ಚಕಿತಗೊಳಿಸಿದೆ." ಎಂದಿದ್ದಾರೆ.

ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್ (ಈಸ್ಟರ್ನ ಟೈಮ್ಸ್) "ಇಸ್ಲಾಮ್ ಧರ್ಮವು ಲೋಕದಲ್ಲಿ ವಾಸ್ತವವಾಗಿ ಕಾರ್ಯವೆಸಗುತ್ತಿರುವ ಏಕ ಮತ್ತು ಐಕ್ಯಕ ಪ್ರಜಾಸತ್ತಾತ್ಮಕ ಸಿದ್ಧಾಂತವೆಂದು ಎಲ್ಲಾ ವಿಚಾರವಾದಿಗಳು ತಿಳಿದುಕೊಂಡಿದ್ದಾರೆ. ನಾನು ಅಂತೆಯೇ ಭಾವಿಸಿದ್ದೇನೆ. ನಾನು ಹಿಂದೂ ವಿಶ್ವಾಸಗಳಿಗೆ ಭದ್ರವಾಗಿ ಅಂಟಿಕೊಂಡಿರುವ ಅಪ್ಪಟ ಹಿಂದುವಾಗಿರುತ್ತಾ, ಮಾನವ ಏಕತೆಯ ಮೂಲಭೂತ ಸಿದ್ಧಾಂತವಾಗಿರುವ ನನ್ನ ಮಾತೃಧರ್ಮವೂ ಅದನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ವಿಯಾಗಿಲ್ಲ. ಇತರ ತತ್ವಗಳು ಏನೇ ಆಗಿದ್ದರೂ ಅಲ್ಲಾನ ಮುಂದೆ ಮಾನವರೆಲ್ಲರೂ ಸಮಾನರೆಂಬ ಪ್ರಾಮುಖ್ಯ ತತ್ವವನ್ನು ಇಸ್ಲಾಂ ಮಾಡಿದಂತೆ ಯಾವ ಧರ್ಮವೂ ಕಾರ್ಯಗತಗೊಳಿಸಿಲ್ಲವೆಂದು ಧೈರ್ಯವಾಗಿ ಹೇಳಬಲ್ಲೆ," ಎಂದಿದ್ದಾರೆ.

ಹೀಗೆಯೇ ಇನ್ನೂ ಹಲವಾರು ಅಂತರ್‌ರಾಷ್ಟ್ರೀಯ ವಿಚಾರವಾದಿಗಳ ಹೇಳಿಕೆಗಳು ಇಸ್ಲಾಮಿನಲ್ಲಿ ಸಮಾನತೆಯನ್ನು ಎತ್ತಿಹಿಡಿದಿವೆ.

ಮೌಲಾನ ಮೌದೂದಿಯವರು "ಇಸ್ಲಾಮಿನಲ್ಲಿ ಮನುಷ್ಯ ಎಂಬುದು ಒಂದು ವ್ಯಕ್ತಿ, ಒಂದು ಕುಟುಂಬ ಅಥವಾ ಒಂದು ಜನಾಂಗದ ಹೆಸರಲ್ಲ. ಅದು ಅಖಿಲ ಜಗತ್ತಿನ ಮಾನವರನ್ನೆಲ್ಲಾ ಗುರುತಿಸಲು ಇಟ್ಟಿರುವ ಹೆಸರು. ಆ ಹೆಸರನ್ನು ತಿಳಿಯಲು ಸಾಮಾನ್ಯ ಬುದ್ಧಿಸಾಕು. ಆದ್ದರಿಂದ ಎಲ್ಲಾ ಮನುಷ್ಯರಿಗೂ ಜೀವಿಸುವ ಹಕ್ಕಿದೆ. ಅವರಿಗೆ ಶಾಂತಿ, ಸಮಾಧಾನ, ನ್ಯಾಯ, ನೀತಿಗಳಿಂದ ತಮ್ಮ ಎಲ್ಲಾ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವ ಹಕ್ಕಿದೆ. ಮಾನವ ಕಲ್ಯಾಣದ ವಿಶಾಲಾರ್ಥವನ್ನು ಯಾರು ತಿಳಿಯುವನೋ ಅವನು ಸತ್ಯಶೀಲ ಧಾರ್ಮಿಕ ವ್ಯಕ್ತಿಯಾಗಲು ಸಾಧ್ಯವೆಂದು" ತಿಳಿಸಿದ್ದಾರೆ. ಒಟ್ಟಿನಲ್ಲಿ ಇಸ್ಲಾಮಿನ ಮೂಲ ಉದ್ದೇಶ ಸಮಾನತೆಯ ಮೂಲಕ ಸರ್ವ ವಿಧದ ಮಾನವರಲ್ಲಿ ಸೌಹಾರ್ದತೆ

ಯನ್ನುಂಟುಮಾಡುವುದು. ಇದರಿಂದ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಬದುಕಲು ದಾರಿಯಾಗುತ್ತದೆ. ಆ ದಾರಿಯಲ್ಲಿ ಸಾಗುವಾಗ ಮನೋಭಾವನೆಗಳ ಸಂಗಮವಾಗಿರುತ್ತದೆ. ಈ ಭಾವನೆಗಳ ಸಂಗಮದಿಂದ ರಾಷ್ಟ್ರೀಯತೆಯ ಪ್ರಜ್ಞೆ ಮೂಡುತ್ತದೆ.

ಪರೋಪಕಾರ ದೃಷ್ಟಿ :– ಮನುಷ್ಯನು ಕಾಡುವ ಸಮಸ್ಯೆಗಳಿಂದ ಆತ ಪರೋಪಕಾರಕ್ಕೆ ಕೈ ಚಾಚುತ್ತಾನೆ. ಅಂತಹ ಸಂದರ್ಭದಲ್ಲಿ ಉಪಕಾರ ಮಾಡಿದ ವ್ಯಕ್ತಿಯ ಬಗ್ಗೆ ಆತನಿಗೆ ವಿಶೇಷ ಗೌರವ, ಪ್ರೀತಿ ಉಂಟಾಗುತ್ತವೆ. ಆಗ ವ್ಯಕ್ತಿ–ವ್ಯಕ್ತಿಯ ನಡುವೆ ಪರಸ್ಪರ ಬಾಂಧವ್ಯ ಬೆಳೆಯುತ್ತದೆ. ಹೀಗೆ ಮಾನವನನ್ನು ಕಾಡುವ ಸಮಸ್ಯೆಗಳನ್ನು ಪರಿಹಾರ ಮಾಡುವ ಮೂಲಕ ಮಾನವರನ್ನೆಲ್ಲಾ ಒಂದೇ ಭಾವನೆಯೆಡೆಗೆ ಸೆಳೆಯಬಹುದು. ಇಸ್ಲಾಂ ಧರ್ಮವು ಅಂತಹ ಪರೋಪಕಾರಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದೆ. ಅದು ದೀನದಲಿತರಿಗೂ, ಅನಾಥರಿಗೂ, ಅಬಲೆಯರಿಗೂ, ವಿಧವೆಯರಿಗೂ, ಯಥಾಶಕ್ತಿ ನೆರವು ನೀಡುವವರು ಅಹೋರಾತ್ರಿ ನಮಾಜು ಮಾಡಿದವರಂತೆ, ಅನುದಿನವೂ ಉಪವಾಸವ್ರತ ಕೈಗೊಂಡವರಂತೆ, ದೇವರ ಆದೇಶದಂತೆ ಸಕಲ ಸಂಪತ್ತನ್ನೂ ಸತ್ಕಾರ್ಯದಲ್ಲಿ ತೊಡಗಿಸಿದವರಂತೆ, ಸತ್ಫಲಕ್ಕೆ ಅರ್ಹರಾಗುತ್ತಾರೆ" ಎಂದು ಸೂಚಿಸಿ ಪರೋಪಕಾರದ ಪ್ರತಿಫಲವನ್ನು ತಿಳಿಸುತ್ತದೆ.

ಇಸ್ಲಾಂ ಧರ್ಮವು ಪರೋಪಕಾರದ ಮಾಪೆಯಾಗಿ ರಂಜಾನ ಮಾಹೆಯನ್ನು ನಿಗದಿಗೊಳಿಸಿದೆ. ಕಡ್ಡಾಯ ದಾನವನ್ನು ಈ ಮಾಹೆಯಲ್ಲಿ ನೀಡಬೇಕಾದದ್ದು ಪ್ರತಿಯೊಬ್ಬ ಸ್ಥಿತಿವಂತ ಮುಸ್ಲಿಮನ ಕರ್ತವ್ಯವಾಗಿದೆ. ಈ ತಿಂಗಳಲ್ಲಿ ೩೦ ದಿನಗಳೂ ಉಪವಾಸ ವ್ರತ ಆಚರಿಸಬೇಕಾಗಿದೆ. ಇದರಲ್ಲಿ ವ್ಯಕ್ತಿ ತನ್ನ ಆಸೆ ಆಕಾಂಕ್ಷೆಗಳನ್ನು ಎಷ್ಟರ ಮಟ್ಟಿಗೆ ನಿಯಂತ್ರಣದಲ್ಲಿಟ್ಟುಕೊಳ್ಳುವಷ್ಟು ತಾಳ್ಮೆ ಹೊಂದಿದ್ದಾನೆಂಬುದನ್ನು ಪರೀಕ್ಷಿಸಲಾಗುತ್ತದೆ. ಅಲ್ಲದೆ ವರ್ಷದಲ್ಲಿ ಹಲವಾರು ದಿನಗಳು ಉಪವಾಸವಿದ್ದು ಬದುಕನ್ನು ಸವೆಸುವ ಬಡಬಗ್ಗರ ಸ್ಥಿತಿಗತಿಯ ಅರಿವು ಸ್ಥಿತಿವಂತರಿಗಾಗುತ್ತದೆ. ಆಗ ಬಡವರ ಮೇಲೆ ದಯೆ ಮೂಡುತ್ತದೆ ಎಂಬ ಕಾರಣದಿಂದಲೇ ತಿಂಗಳು ಪೂರ್ಣ ಹಗಲಿನ ವೇಳೆಯಲ್ಲಿ ನೀರನ್ನೂ ಸಹ ಕುಡಿಯದಂತೆ ಕಠಿಣ ವ್ರತಾಚರಣೆಯನ್ನು ಇಸ್ಲಾಂ ವಿಧಿಸಿದೆ. ಆದೇ ತಿಂಗಳಲ್ಲಿ ಪ್ರತಿಯೊಬ್ಬ ಸ್ಥಿತಿವಂತ ಮುಸ್ಲಿಮ್ಮನು ತನ್ನ ಸ್ಥಿರ ಹಾಗೂ ಚರ ಆಸ್ತಿಯ ಬೆಲೆಯನ್ನು ನಿರ್ಧರಿಸಿ ಅದರಲ್ಲಿ ಶೇಕಡಾ $2\frac{1}{2}$ ಭಾಗದಷ್ಟು ಹೊರತೆಗೆದು ಆ ಹಣವನ್ನು ದಾನ ಮಾಡಬೇಕಾಗಿದೆ. ಅಲ್ಲದೆ ಜೀವದ ತೆಂಗೆಯಾಗಿ $2\frac{1}{2}$ ಸೇರಿನಷ್ಟು ಗೋಧಿ ಇಲ್ಲವೆ ಅದರ ಬೆಲೆಯನ್ನು ಬಡವರಿಗೆ ನೀಡಬೇಕಾಗಿದೆ. ಈ ಸಾಲದಿಂದ ಮುಕ್ತಗೊಂಡರೆ

ಮಾತ್ರ ಆ ಮಾಹೆಯ ಪುಣ್ಯ ಆತನಿಗೆ ಲಭಿಸುತ್ತದೆ. ಇಸ್ಲಾಂನಲ್ಲಿ ಆಸ್ತಿಯ ತೆರಿಗೆಗೆ 'ಝಕಾತ್' ಎಂದು, ಜೀವದ ತೆರಿಗೆಗೆ 'ಫಿತ್ರ' ಎಂದು ಕರೆಯಲಾಗುತ್ತದೆ.

"ಧನವಂತನ ಸುಖ – ಸೌಕರ್ಯಗಳಿಗಾಗಿಯೂ, ವಿಲಾಸ–ವೈಭವಗಳಿಗಾಗಿಯೂ ವ್ಯಯಮಾಡುವುದಕ್ಕಾಗಿ ಮಾತ್ರ ಆತನ ಸಂಪತ್ತು ಮೀಸಲಾಗಿಲ್ಲ. ಅನಾಥರೂ, ವಿಧವೆಯರೂ, ಅಂಗವಿಕಲರೂ, ಬಡವರೂ, ಶಕ್ತಿ ಸಾಮರ್ಥ್ಯಗಳಿದ್ದೂ ದುಡಿಯಲು ಅನುಕೂಲತೆಗಳಿಲ್ಲದವರೂ ಆ ಸಂಪತ್ತಿನ ಮೇಲೆ ಸಹಜ ಹಕ್ಕು ಬಾಧ್ಯತೆಗಳನ್ನು ಪಡೆಯುತ್ತಾರೆ. ತನ್ನ ಸಂಪತ್ತಿನ ಮೇಲೆ ಇವರೆಲ್ಲರ ಹಕ್ಕಿದೆ ಎಂಬುದನ್ನು ಮುಸಲ್ಮಾನನಾದವನು ಗುರುತಿಸಲೇಬೇಕು. ಸಾವಿರಾರು ಜನ ಹಸಿವೆಯಿಂದ ಸಾಯುತ್ತಿರುವಾಗ ಅಥವಾ ನಿರುದ್ಯೋಗದಿಂದ ಬಳಲುತ್ತಿರುವಾಗ ತಾನು ಮಾತ್ರ ಜೊಳ್ಳಸವನ್ನು ತುಂಬುವಂಥ, ಸಾಮಾಜಿಕ ಪ್ರಜ್ಞೆ ಇಲ್ಲದವನಿಗಿಂತ ಹೆಚ್ಚಿನ ಕ್ರೂರಿಯಾದವನು ಬೇರೆ ಯಾರೂ ಇರಲಾರರೆಂದು" ಇಸ್ಲಾಂ ಸೂಚಿಸುತ್ತದೆ.

ದಾನ ಮಾಡುವ ಬಗ್ಗೆ ಇಸ್ಲಾಂನ ಕೆಲವು ನುಡಿರತ್ನಗಳನ್ನು ಗಮನಿಸಿದರೆ ಪರೋಪಕಾರಕ್ಕೆ ಅದು ನೀಡಿರುವ ಮಹತ್ವದ ಅರಿವಾಗುತ್ತದೆ.

ಬಡವನು ಬೇಡುವ ಮೊದಲೇ ದಾನ ನೀಡಿ. ಆತನು ಬೇಡಿದಾಗ ನೀಡಿದರಾಯಿತೆಂದು ಉದಾಸೀನತೆ ತೋರಿ ಆತನು ಕೈಚಾಚುವಂತೆ ಮಾಡುವುದರಿಂದ ನೀವು ಆತನಿಂದ ಕಸಿದುಕೊಳ್ಳುವ ಆತ್ಮಗೌರವದ ಬೆಲೆ ನೀವು ನೀಡುವ ದಾನ ಮೌಲ್ಯಕ್ಕಿಂತ ಮಿಗಿಲಾದುದು." ಈ ನುಡಿಯಲ್ಲಿ ದಾನ ಮಾಡಬೇಕೆಂಬ ಅರ್ಥದೊಡನೆ ಕೆಲವು ಸಂದರ್ಭದಲ್ಲಿ ಕೇಳುವವ ಸಂಕೋಚ ಪ್ರವೃತ್ತಿಯಿಂದ ದಾನ ಕೇಳದಂತೆ ಇರಬಹುದೆಂಬ ಅರ್ಥವಿದೆ.

ದಾನವೆಂದರೆ ಹಣ ನೀಡುವುದು ಎಂದು ತಿಳಿದುಕೊಂಡಿರುವವರಿಗೆ ಇಸ್ಲಾಂ "ದಾನಕೊಡಲು ಧನವೇ ಬೇಕೆಂದೇನೂ ಇಲ್ಲ. ಸತ್ಕಾರ್ಯ ಮಾಡುವುದೂ ದುಷ್ಕಾರ್ಯಗಳಿಂದ ದೂರವಿರುವುದೂ, ದಾನದಲ್ಲಿಯೇ ಸಮಾವೇಶವಾಗುತ್ತದೆ" ಎಂದು ಪರಿಚಯಿಸುತ್ತದೆ.

ದಾನ ನೀಡುವುದು ಮನಃಪೂರ್ವಕವಾಗಿರುವುದು ಮಾತ್ರವಲ್ಲದೆ ಗೌಪ್ಯವಾಗಿರಬೇಕೆಂಬುದನ್ನು ಇಸ್ಲಾಂ ಧರ್ಮ, "ದಾನ ನೀಡುವಲ್ಲಿ ಮಾತ್ರ ಔದಾರ್ಯವಿದ್ದರೆ ಸಾಲದು. ಮಾತಿನಲ್ಲಿಯೂ ಔದಾರ್ಯವಿರಬೇಕಾದುದು ಅವಶ್ಯಕ," "ಎಡಗೈಗೂ ತಿಳಿಯದಂತೆ ಬಲಗೈ ನೀಡುವ ದಾನವೇ ಮಿಗಿಲಾದ ದಾನ" ಎಂದು ತಿಳಿಸುತ್ತದೆ.

ಹೀಗೆ ದಾನ ನೀಡುವುದನ್ನು ಕುರಿತು ಹಲವು ಹಿತನುಡಿಗಳನ್ನು ಈ ಧರ್ಮವು ಸೂಚಿಸುವುದರ ಮೂಲಕ ದಾನ ಪಡೆಯುವವನ ಕರ್ತವ್ಯಕ್ಕಿಂತ, ನೀಡುವವನು ಕರ್ತವ್ಯಬದ್ಧನಾಗಿರಬೇಕೆಂದು ಎಚ್ಚರಿಸುತ್ತದೆ.

ಹಣ ಸಹಾಯದಲ್ಲಿ ದಾನ ನೀಡುವುದು ಒಂದು ಸಹಾಯವೆಂದು ಇಸ್ಲಾಂ ತಿಳಿಸಿ, ಮತ್ತೊಂದು ರೀತಿಯ ಧನ ಸಹಾಯವೆಂದರೆ ಬಡ್ಡಿರಹಿತ ಸಾಲನೀಡುವುದು ಎಂದು ತಿಳಿಸುತ್ತದೆ. ಇಸ್ಲಾಮಿನಲ್ಲಿ ಹಣಸಹಾಯ ಮಾಡಿ ಅದಕ್ಕೇ ಪ್ರತಿಫಲವಾಗಿ ಬಡ್ಡಿಯನ್ನು ನಿರೀಕ್ಷಿಸುವುದನ್ನು ನಿಷೇಧಿಸಿದೆ. ಸಾಮಾನ್ಯವಾಗಿ ವ್ಯಕ್ತಿ ಬೇರೊಬ್ಬನಿಗೆ ಯಾವುದೇ ಬಗೆಯ ಉಪಕಾರ ಮಾಡಿದರೂ ಅದರ ಪ್ರತ್ಯುಪಕಾರವನ್ನು ನಿರೀಕ್ಷಿಸುವುದು ಸರಿಯಿಲ್ಲವೆಂದು ಆ ಧರ್ಮವು ಬೋಧಿಸುತ್ತದೆ. ಸಹಾಯದಿಂದ ಮಾನವ ಸಮಸ್ಯೆಯನ್ನು ದೂರಮಾಡಿಕೊಳ್ಳುತ್ತಾನೆ. ಅನಂತರ ಆತ ಸಹಾಯವನ್ನು ಹಿಂದಿರುಗಿಸಿದರೆ ಮಾನವೀಯ ಮೌಲ್ಯ ಉಳಿಯುವುದಿಲ್ಲವೆಂಬ ಕಾರಣ ಪ್ರತ್ಯುಪಕಾರದ ನಿರೀಕ್ಷೆಯನ್ನು ಮಾಡಬಾರದೆಂದು ಕೆಲವು ನುಡಿರತ್ನಗಳು ತಿಳಿಸುತ್ತವೆ. ಅದರಲ್ಲೂ ಕಷ್ಟಪರಿಹಾರಕ್ಕೆ ಸಾಲಪಡೆದವನಿಂದ ಬಡ್ಡಿ ಪಡೆಯುವುದು ಆತನಿಗೆ ಮತ್ತಷ್ಟು ಕಷ್ಟಕ್ಕೆ ಎಡೆಮಾಡಿದಂತೆ. ಆದ್ದರಿಂದ ಇಸ್ಲಾಮಿನಲ್ಲಿ ಬಡ್ಡಿಸ್ವೀಕಾರವನ್ನು ನಿಷೇಧಿಸಲಾಗಿದೆ. ಬಡ್ಡಿರಹಿತ ಸಾಲ ನೀಡುವುದು ದೇಶದಲ್ಲಿನ ಆರ್ಥಿಕ ಅಂತರದ ಬದುಕನ್ನು ಮತ್ತಷ್ಟು ಹದಗೆಡಿಸುತ್ತದೆ. ಹೇಗೆಂದರೆ ಹಣವಂತ ಕುಳಿತಿರುವ ಸ್ಥಳದಿಂದಲೇ ಬಡ್ಡಿಗಾಗಿ ಹಣಕೊಟ್ಟು ದಿನೇ ದಿನೇ ಮತ್ತಷ್ಟು ಶ್ರೀಮಂತನಾಗುತ್ತಾ ಹೋಗುತ್ತಾನೆ. ಕಷ್ಟಪರಿಹಾರಕ್ಕಾಗಿ ಹಣಪಡೆದ ಬಡವ ಬಡ್ಡಿಯನ್ನು ಕಟ್ಟುವುದಲ್ಲೆ ಮತ್ತಷ್ಟು ಬಡವನಾಗುತ್ತಾ ಹೋಗುತ್ತಾನೆ. ಈ ಬಗೆಯ ಶೋಷಣಾ ಪ್ರವೃತ್ತಿಯನ್ನು ಗಮನಿಸಿದ ಇಸ್ಲಾಂ ಧರ್ಮವು ಬಡ್ಡಿರಹಿತ ಸಾಲನೀಡಲು ಅವಕಾಶಮಾಡಿಕೊಟ್ಟು ಬಡವರ ಆರ್ಥಿಕ ಸ್ಥಿತಿಯನ್ನು ಉತ್ತಮ ಮಾಡಿಕೊಳ್ಳಲು ಮತ್ತು ಮಾನವೀಯ ಸಂಬಂಧಗಳು ಬೆಳೆಯಲು ದಾರಿಮಾಡಿಕೊಟ್ಟಿದೆ. ಇದೇ ನೀತಿಯನ್ನು ರಾಷ್ಟ್ರದ ಬ್ಯಾಂಕುಗಳು ಅನುಸರಿಸಿದರೆ ಬಡವರ ಆರ್ಥಿಕ ಸ್ಥಿತಿ ಉತ್ತಮಗೊಂಡು ಶೋಷಣಾ ಪ್ರವೃತ್ತಿಯು ನಿಲ್ಲಬಹುದು. ಆರ್ಥಿಕ ಸಹಾಯದ ಬಗ್ಗೆ ಇಸ್ಲಾಂ ಧರ್ಮವು "ಸ್ವತಃ ಆರ್ಥಿಕ ಮುಗ್ಗಟ್ಟಿನಲ್ಲಿದ್ದಾಗಲೂ ಇತರ ಅಸಹಾಯಕರಿಗೆ ನೆರವಾಗುವುದು ಮುಸ್ಲಿಮರ ಮುಖ್ಯ ಕರ್ತವ್ಯ" ಎಂದು ತಿಳಿಸಿದೆ. ಇದರಲ್ಲಿ ತನಗೊದಗಿದ ಕಷ್ಟಕ್ಕಿಂತ ಪರರ ಕಷ್ಟ ಹೆಚ್ಚೆಂದು ತಿಳಿಯುವ ಮನೋಭಾವ ಹೊಂದಿರಬೇಕೆಂಬ ಪರಾರ್ಥ ಮನೋದೃಷ್ಟಿ ಇದೆ.

ಆರ್ಥಿಕ ಸಹಾಯದ ರೀತಿಯಲ್ಲೇ ಮುಸ್ಲಿಮ್ಮನು ಬೇರೆ ಬಗೆಯ ಸಹಾಯಗಳನ್ನು ಕಡ್ಡಾಯವೆಂದು ತಿಳಿಯಬೇಕಾಗಿದೆ ಅದರ ಬಗ್ಗೆ ಯಾವ ಮುಸಲ್ಮಾನನು

ಅಕ್ಕ ಪಕ್ಕದಲ್ಲಿರುವ ನೆರೆಹೊರೆಯವರು ಹಸಿವಿನಿಂದ ಇರುವಾಗ ತಾನು ಹೊಟ್ಟೆ ತುಂಬ ಊಟವಮಾಡಿದರೆ ಅವನು ಅಲ್ಲಾನ ಪ್ರಮಾಣವಾಗಿ ನಿಜವಾದ ಮುಸಲ್ಮಾನನಲ್ಲ" ಎಂದು ಹೇಳಿ ಮುಂದುವರಿಸುತ್ತಾ "ಊಟಕ್ಕೆ ಕೂಡುವ ಮೊದಲು ನೆರೆಹೊರೆಯಲ್ಲಿ ಹಸಿದವರು ಯಾರೂ ಇಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಿ" ಎಂದು ಎಚ್ಚರಿಸಲಾಗಿದೆ. ಒಬ್ಬ ಮುಸಲ್ಮಾನನಿಗೆ ನೆರೆಹೊರೆಯವರ ಯೋಗ ಕ್ಷೇಮವನ್ನು ಕಾಪಾಡುವುದು ಅನಿವಾರ್ಯವಾಗಿದೆ. ಅವರೊಡನೆ ಪ್ರೀತಿ ವಿಶ್ವಾಸದಿಂದಿರಬೇಕೆಂದು ಧರ್ಮ ತಿಳಿಸುತ್ತದೆ. ಅದಕ್ಕೆ ವಿರುದ್ಧವಾಗಿರುವವರನ್ನು ಕುರಿತು "ಯಾವನು ಜಗಳ-ಹಟಮಾರಿತನಗಳಿಂದ ತನ್ನ ನೆರೆಹೊರೆಯವರೊಡನೆ ಬೆರೆತು, ಇರುವುದಿಲ್ಲವೊ ಅವನು ನಿಜವಾದ ಮುಸಲ್ಮಾನನಲ್ಲ" ಎಂದು ತಿರಸ್ಕರಿಸಿಬಿಡುತ್ತದೆ.

ನೆರೆಹೊರೆಯವರೊಡನೆ ಒಂದಾಗಿರುವ ವ್ಯಕ್ತಿ ಎಂತಹನಾಗಿರುತ್ತಾನೆ ಎನ್ನುವುದನ್ನು, "ನೆರೆಹೊರೆಯವರ ಮೆಚ್ಚುಗೆಗೆ ಪಾತ್ರನಾದ ಮತ್ತು ಸುಸ್ವಭಾವಿಯೂ ಸದಾಚಾರಿಯೂ ಆದ ವ್ಯಕ್ತಿ ಮಾತ್ರ ದೇವರಿಗೆ ಮೆಚ್ಚುಗೆಯಾಗುತ್ತಾನೆ" ಎಂದು ತಿಳಿಸಲಾಗಿದೆ.

ಈ ಮೇಲಿನ ವಾಕ್ಯಗಳಲ್ಲಿ ಸರ್ವರೊಡನೆಯೂ ಸೌಹಾರ್ದತಾ ಮನೋಭಾವನೆಯಿಂದ ಬೆರೆತು ಸಹಜೀವನ ನಡೆಸುವ ವ್ಯಕ್ತಿ ದೇವರಿಗೆ ಇಷ್ಟವಾಗುವನೆಂಬ ಅರ್ಥವಿದೆ; ಅದರಲ್ಲಿ ಮನುಷ್ಯನ ಭಾವನೆಗಳನ್ನೆಲ್ಲಾ ಒಂದುಗೂಡಿಸುವ ಪ್ರಯತ್ನವಿದೆ; ಸಹಬಾಳ್ವೆಯ ಮೂಲಕ ಮಾನವೀಯ ಮೌಲ್ಯಗಳ ರಕ್ಷಣೆಯ ಗುರಿಯಿದೆ. ಮತ್ತು ರಾಷ್ಟ್ರದ ಹಿತ ಚಿಂತನೆಯಿದೆ.

ಪರಮತ ಸಹಿಷ್ಣುತೆ :– ಜಗತ್ತಿನಲ್ಲಿ ಹಲವಾರು ಧರ್ಮಗಳಿವೆ. ಒಂದು ಧರ್ಮದ ಆಚರಣೆ ಮತ್ತು ನಂಬಿಕೆಗಳು ಮತ್ತೊಂದಕ್ಕಿಂತ ಭಿನ್ನವಾಗಿರುತ್ತವೆ. ಆದ್ದರಿಂದ ಅವರನ್ನೆಲ್ಲಾ ಒಂದುಗೂಡಿಸಬೇಕಾದರೆ ಪರಧರ್ಮ ಸಹಿಷ್ಣುತೆಯ ಮನೋಧರ್ಮ ಧರ್ಮಾಚರಣೆಯ ವ್ಯಕ್ತಿಗಳಲ್ಲಿ ಮುಖ್ಯವಾಗಿ ಬೇಕಾಗುತ್ತದೆ. ಸಾಮಾನ್ಯವಾಗಿ ಧರ್ಮದ ಬಗ್ಗೆ ಸಿಡಿಯುವ ಟೀಕೆಯ ಕಿಡಿಗಳು ಕಲಹ ಜ್ವಾಲೆಗೆ ಕಾರಣಗಳಾಗುತ್ತವೆ. ಅದರಿಂದ ಮಾನವೀಯತೆಯು ನಾಶವಾಗುವುದಲ್ಲದೆ ಇಡೀ ರಾಷ್ಟ್ರದಲ್ಲೇ ಅಶಾಂತಿಯು ಹೊಗೆಯಾಡುತ್ತದೆ, ಅದನ್ನು ನಂದಿಸುವ ಕಾರಣದಿಂದ ಇಸ್ಲಾಂ ಧರ್ಮವು "ತನ್ನ ಧರ್ಮವನ್ನು ರಕ್ಷಿಸುವುದರ ಜೊತೆಗೆ ಪರಧರ್ಮವನ್ನು ಬೆಳೆಯಲು ಬಿಡುವುದು ಮುಸ್ಲಿಮನ ಕರ್ತವ್ಯ"ವೆಂದು ತಿಳಿಸುತ್ತದೆ. ಕುರಾನ್‌ನಲ್ಲಿ ಅದನ್ನು "ಲಕುಂ ದೀನುಕುಂ ವಲಿಯದೀನ್" ಎಂದು ವಿವರಿಸಲಾಗಿದೆ. ಅದರ ಅರ್ಥವೆಂದರೆ "ನಿಮಗೆ ನಿಮ್ಮ ಧರ್ಮ ನನಗೆ ನನ್ನ ಧರ್ಮ" ಎಂಬುದು ಪ್ರತಿಯೊಬ್ಬರಿಗೂ ತನ್ನ ಧರ್ಮವನ್ನು ರಕ್ಷಿಸುವ ಹಕ್ಕಿದೆ ಹೊರತು ಪರಧರ್ಮ

ವನ್ನು ಟೀಕಿಸುವುದಾಗಲಿ, ಕೆಡಿಸುವುದಾಗಲಿ ಹಕ್ಕಿಲ್ಲವೆಂಬ ಧ್ವನಿ ಕುರಾನ್ ವಾಕ್ಯದಲ್ಲಿ ಹೊರಹೊಮ್ಮುತ್ತದೆ. ಅದನ್ನೇ ಪೈಗಂಬರರ ನುಡಿಗಳ ಸಂಗ್ರಹವಾದ ಹದೀಸ್ ಗ್ರಂಥದಲ್ಲಿ "ಸಹಕಾರದೊಂದಿಗೆ ಬಾಳಿ. ಪರಸ್ಪರರನ್ನು ದ್ವೇಷಿಸದಿರಿ. ಇತರರಿಗೆ ವಿಘ್ನಗಳುಂಟಾಗದಂತೆ ನೀವು ನೋಡಿಕೊಳ್ಳಬೇಕೇ ಹೊರತು ಅವರ ಮಾರ್ಗದಲ್ಲಿ ಅಡಚಣೆಗಳನ್ನುಂಟುಮಾಡುವುದು ನಿಮ್ಮ ಕೆಲಸವಲ್ಲ" ಎಂದು ಹೇಳಲಾಗಿದೆ. ಈ ವಾಕ್ಯಗಳು ಇಂದು ತಲೆದೋರುತ್ತಿರುವ ಕೋಮು ಕಲಹ ಗಳನ್ನು ಅಂತ್ಯಗೊಳಿಸಲಿರುವ ಅಸ್ತ್ರಗಳಾಗಿವೆ. ಇಸ್ಲಾಂ ಧರ್ಮದಲ್ಲಿನ ಅಂತಹ ನುಡಿರತ್ನಗಳನ್ನು ಅರ್ಥಮಾಡಿಕೊಂಡು ಅದರಂತೆ ನಡೆಯುವ ಸಹಜ ಮುಸ್ಲಿಮ್ಮರು ಯಾರೂ ಸಹ ಪರಧರ್ಮದವರನ್ನು ದ್ವೇಷಿಸುವುದಿಲ್ಲ. ಅದರ ಬದಲು ಪ್ರೀತಿಸುತ್ತಾರೆ. ಅವರೊಡನೆ ಒಂದಾಗಿ ಬದುಕಲು ಮುಂದಾಗುತ್ತಾರೆ.

ಸಮಾಜದಲ್ಲಿ ವ್ಯಕ್ತಿಯನ್ನು ಪ್ರೀತಿಸುವವರು ಮತ್ತು ದ್ವೇಷಿಸುವವರು ಇರುವುದು ಸಹಜ. ಅಂತಹ ಸಂದರ್ಭದಲ್ಲಿ ವ್ಯಕ್ತಿ ದ್ವೇಷಿಸುವವನನ್ನು ದೂರ ಮಾಡದೆ ತನ್ನ ಗುಣಸಂಪನ್ನತೆಯಿಂದ ಆತನನ್ನು ಪ್ರೀತಿಸುವಂತೆ ಪರಿವರ್ತಿಸ ಬೇಕೆಂದು ಇಸ್ಲಾಂ ಧರ್ಮವು ತಿಳಿಸುತ್ತದೆ. ಅದನ್ನು ಸಮರ್ಥಿಸಲು ಹದೀಸ್ ನಲ್ಲಿನ ಒಂದು ಘಟನೆಯನ್ನು ನೋಡಬಹುದಾಗಿದೆ "ಒಮ್ಮೆ ಯಹೂದಿ ಸ್ತ್ರೀಯೊಬ್ಬಳು ಮಾಂಸದ ಅಡುಗೆಯಲ್ಲಿ ವಿಷ ಬೆರೆಸಿ ಮುಹಮ್ಮದ್ ಪೈಗಂಬರ್ ರವರಿಗೆ ಕಳುಹಿಸಿ ಕೊಟ್ಟಳು. ಅದು ಪೈಗಂಬರ್‌ರವರಿಗೆ ತಿಳಿಯಿತು. ಆಗ ಅವಳನ್ನು ಪೈಗಂಬರ್‌ರವರು ಕರೆಸಿ ವಿಷಬೆರೆಸಿರುವುದು ನಿಜವೇ ? ಎಂದು ಪ್ರಶ್ನಿಸಿ ದರು. ಆಕೆ ಹೌದೆಂದು ಅದನ್ನು ಒಪ್ಪಿಕೊಂಡಳು. ಅಲ್ಲಿದ್ದ ಜನರೆಲ್ಲಾ ಆಕೆಯನ್ನು ಕೊಂದುಬಿಡಲು ಮುಂದಾದರು. ಅದನ್ನು ಪೈಗಂಬರ್‌ರವರು ತಡೆದು ಆಕೆ ಪ್ರಾಮಾಣಿಕವಾಗಿ ತಪ್ಪು ಒಪ್ಪಿಕೊಂಡಿದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಹೋಗು ಪರಮಾತ್ಮನು ನಿನ್ನ ಬಯಕೆಯನ್ನು ಈಡೇರಿಸಲಿಲ್ಲ. ಇನ್ನು ಮುಂದೆ ಅವನು ನಿನಗೆ ಒಳ್ಳೆಯ ಬುದ್ಧಿ ಕೊಡಲಿ" ಎಂದು ಆಕೆಯನ್ನು ಕಳುಹಿಸಿದರು. ಅಂದು ಜನರಿಂದ ಆಗಬೇಕಾದ ತನ್ನ ಹತ್ಯವನ್ನು ತಡೆದ ಪೈಗಂಬರರನ್ನೇ ಹತ್ಯೆ ಮಾಡಲು ಪ್ರಯತ್ನಿಸಿದ ಪಾಪಿ ತಾನಾದೆನಲ್ಲಾ ಎಂದು ಆಕೆ ಪಶ್ಚಾತ್ತಾಪ ಪಟ್ಟು ಕೊನೆಗೆ ಆಕೆ ಪೈಗಂಬರರ ಭಕ್ತಳಾದಳು. ಇಂತಹ ಹಲವು ಘಟನೆಗಳು ನಮ್ಮನ್ನು ಮಾನವರ ಮನಸ್ಸನ್ನು ನೋಯಿಸಬಾರದೆಂದು ಸಾರುತ್ತಿವೆ. ಆದರೂ ನಾವಿಂದು ಬೆಳಕು ಹರಿದಾಗ, ಕತ್ತಲುಕವಿದಾಗ ಸರಪಳಿಗಳ ಕೊಂಡಿಗಳಂತೆ ಕೊಕ್ಕೆ ಹಾಕಿ ಮನನೋಯಿಸುವ ಸರದಿಯುಳ್ಳ ನಿಂತು ಹೆಜ್ಜೆ ಹಾಕಲು ಮುಂದಾಗುತ್ತಿದ್ದೇವೆ. ಆದರಿಂದ ನಾವೇನನ್ನೂ ಸಾಧಿಸಲು ಸಾಧ್ಯವಿಲ್ಲ. ನಿಜಕ್ಕೂ ನಾವು, ನಮ್ಮ ಧರ್ಮ, ನಮ್ಮ ರಾಷ್ಟ್ರ ಶಾಂತಿಯಿಂದ ಇರಬೇಕಾದರೆ, ನಮ್ಮಲ್ಲಿ ಪರರತಪ್ಪನ್ನು

ಕ್ಷಮಿಸುವ ಗುಣಬೆಳೆಯಬೇಕಾಗುತ್ತದೆ. ಹದೀಸ್ ಗ್ರಂಥದಲ್ಲಿ ಅದನ್ನೇ "ನೀವು ಅಲ್ಲಾಹನ ಸೇವಕರ ಮೇಲೆ ದಯೆ ತೋರಿಸಿ; ನಿಮ್ಮ ಮೇಲೆ ಆತ ದಯೆ ತೋರಿಸುತ್ತಾನೆ. ನೀವು ಜನರ ತಪ್ಪುಗಳನ್ನು ಕ್ಷಮಿಸಿ; ನಿಮ್ಮ ತಪ್ಪುಗಳನ್ನು ಆತನು ಕ್ಷಮಿಸುತ್ತಾನೆ" ಎಂದು ತಿಳಿಸಲಾಗಿದೆ. ಈ ಅಮೂಲ್ಯವಾದ ವಾಕ್ಯಗಳು ಮನುಷ್ಯ ಮನುಷ್ಯನ ನಡುವೆ ಏರ್ಪಡಬಹುದಾದ ಕಂದಕಗಳನ್ನು ತುಂಬುತ್ತವೆ. ತಪ್ಪುಮಾಡುವವನ ಮತ್ತು ಕ್ಷಮಿಸುವವನ ಬಾಂಧವ್ಯವನ್ನು ಬೆಸೆಯಲು ಪ್ರಯತ್ನಿಸುತ್ತವೆ. ಅಂತಹ ವಾಕ್ಯಗಳ ಅರ್ಥವನ್ನು ಮನನ ಮಾಡಿಕೊಂಡು ನಡೆಯುವ ಜನರ ಭಾವನೆಗಳು ಒಂದಾಗಿ ತಮ್ಮ ಹಾಗೂ ರಾಷ್ಟ್ರದ ಏಳಿಗೆಗೆ ಕಾರಣಗಳಾಗುತ್ತವೆ.

ಇಸ್ಲಾಂ ಧರ್ಮದಲ್ಲಿ ನಯ ವಿನಯದ ನಡತೆಗಳಿಗೆ, ಮಾಧುರ್ಯದ ಮಾತಿಗೆ ಹೆಚ್ಚಿನ ಬೆಲೆಯಿದೆ. ಇದರಲ್ಲಿ ಮಾನವರೆಲ್ಲಾ ಒಂದುಗೂಡಿಸುವ ಅಯಸ್ಕಾಂತವನ್ನು ಅಡಗಿಸಿಡಲಾಗಿದೆ. ಕುರಾನ ಗ್ರಂಥದಲ್ಲಿ "ಯಾರು ನೆಲದ ಮೇಲೆ ನಮ್ರತೆಯಿಂದ ನಡೆಯುವರೊ ಅಂಥವರೇ ಪರಮ ದಯಾಳುವಿನ (ಅಲ್ಲಾಹನ) ವಿಶಿಷ್ಟ ಸೇವಕರು" ಎಂದು ತಿಳಿಸಲಾಗಿದೆ. ಅಲ್ಲದೆ "ಯಾರು ಈ ಪ್ರಪಂಚದಲ್ಲಿ ದೊಡ್ಡಸ್ತಿಕೆಯನ್ನು ಗಳಿಸುವುದನ್ನು, ದಂಗೆ, ಕ್ರಾಂತಿಯನ್ನೇಳಿಸುವುದನ್ನು ಇಚ್ಛಿಸುವುದಿಲ್ಲವೋ, ಅಂಥವರನ್ನು ನಾವು ಶಾಶ್ವತ ಲೋಕದ ಆ ಮನೆಯ (ಸ್ವರ್ಗದ) ವಾರಸುದಾರರನ್ನಾಗಿ ಮಾಡುವೆವು" ಎಂದು ಮುಂದುವರಿಸಿ ಹೇಳಲಾಗಿದೆ. ಈ ವಿಶೇಷ ವಾಣಿಯಲ್ಲಿ ಯಾವ ಮನುಷ್ಯ ವಿನಯದಿಂದ ಬದುಕುತ್ತಾನೋ ಅವನಿಗೆ ಸ್ವರ್ಗದಲ್ಲಿ ಶಾಶ್ವತ ಸ್ಥಾನವನ್ನು ಒದಗಿಸಿ ಕೊಡಲಾಗುವುದೆಂಬ ಭವಿಷ್ಯಾನುಕೂಲತೆಯೊಂದಿಗೆ ಇಲ್ಲಿಯೂ ಸಹ ಜನರ ಪ್ರೀತಿಯಗಳಿಕೆಯೊಡನೆ, ಶಾಂತಿಯ ಸ್ಥಾಪನೆಯೊಡನೆ ಸ್ಥಿರ ಕೀರ್ತಿಯನ್ನು ಪಡೆಯುವನೆಂಬ ಧ್ವನಿ ಇದೆ.

ಮಾನವರು ಪರಸ್ಪರ ಪ್ರೀತಿಸುವುದರಿಂದ ಗೌರವಿಸುವುದರಿಂದ ಅವರ ಭಾವನೆಗಳು ಹೆಣೆಯಲ್ಪಡುತ್ತವೆ. ಅದನ್ನೆ ಇಸ್ಲಾಂ ಧರ್ಮ ಒತ್ತಿ ಹೇಳುತ್ತದೆ. ಅದಕ್ಕೆ ನಿದರ್ಶನವಾಗಿ ಪೈಗಂಬರ್‌ರವರ ಜೀವನದಲ್ಲಿನ ಒಂದು ಘಟನೆ ಮಾದರಿಯಾಗಿ ನಿಲ್ಲುತ್ತದೆ. "ಒಮ್ಮೆ ಒಬ್ಬ ಮುಸ್ಲಿಮೇತರನು ಪೈಗಂಬರರ ಮನೆಗೆ ಬಂದನು. ಆತನನ್ನು ಪ್ರೀತ್ಯಾದರಗಳಿಂದ ಬರಮಾಡಿಕೊಂಡ ಪೈಗಂಬರರು ಆತನಿಗೆ ಕುಡಿಯಲು ಒಂದು ಮೇಕೆಯಿಂದ ತೆಗೆದ ಪೂರ್ಣಹಾಲನ್ನು ನೀಡಿದರು. ಆತನು ಅದನ್ನು ಪೂರ್ಣವಾಗಿ ಕುಡಿದನು. ಪೈಗಂಬರರಿಗೆ ಅದರಿಂದ ಆತ ಬಹಳ ಹಸಿದಿದ್ದಾನೆಂದು ತಿಳಿಯಿತು; ಆಗ ಅವರು ಮತ್ತೊಂದು ಮೇಕೆ ಹಾಲನ್ನು ತಂದು ಕೊಟ್ಟರು. ಅದನ್ನೂ ಸಹ ಅವನು ಪೂರ್ಣವಾಗಿ ಕುಡಿದು ಮುಗಿಸಿದನು.

ಕೊನೆಗೆ ಪೈಗಂಬರರು ಆತ ತೃಪ್ತಿಪಡೆಯುವಷ್ಟು ಹಾಲನ್ನು ಕರೆದುಕೊಟ್ಟರು. ಅತಿಥಿ ತೃಪ್ತಿಗೊಂಡನಂತರ ಅವರಿಗೆ ಬಹಳ ಸಂತೋಷವಾಯಿತು. ಮನೆಗೆ ಬಂದವರನ್ನು ಗೌರವಿಸಿ ಕಳುಹಿಸುವ ಶಕ್ತಿಯನ್ನು ಅಲ್ಲಾಹ ನೀಡಿದ್ದಕ್ಕಾಗಿ ಆತನಿಗೆ ಕೃತಜ್ಞತೆಯನ್ನು ಸಲ್ಲಿಸಿದರು" ಈ ಘಟನೆಯು ಮನುಷ್ಯ ತನ್ನ ಮನೆಗೆ ಬಂದಾಗ ಆತನನ್ನು ಗೌರವಿಸುವ ಉಪದೇಶದೊಡನೆ ಮುಸ್ಲಿಮ್ಮರು ಅನ್ಯಮತಸ್ಥರೊಡನೆ ಹೇಗೆ ಬದುಕಬೇಕೆಂದು ಮಾರ್ಗದರ್ಶನ ನೀಡುತ್ತವೆ. ವ್ಯಕ್ತಿ ಯಾವ ಧರ್ಮದವನು ಎಂದು ಲೆಕ್ಕಹಾಕುವುದರ ಹೊರತು ಆತ 'ಮಾನವ'ನೆಂದು ಪರಿಗಣಿಸಬೇಕು. ಆತನಿಗೂ ತನ್ನಂತೆಯೇ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವ ಕಾತುರತೆಗಳಿವೆ ಎಂದು ಅರ್ಥಮಾಡಿಕೊಂಡು ಆತನೊಡನೆ ವಿನಯಪೂರ್ವಕವಾಗಿ ವರ್ತಿಸಬೇಕು. ಎಂಬುದು ಮೇಲಿನ ನಿದರ್ಶನದಲ್ಲಿ ತಿಳಿಯುತ್ತದೆ.

ಮನುಷ್ಯ ಪರಸ್ಪರ ಬಂಧುವಾಗಿ ಬದುಕಬೇಕೆಂದು ಇಸ್ಲಾಂ ಸೂಚಿಸುತ್ತದೆ. ಅದಕ್ಕೆ ವಿಶಮ್ರತೆಯೇ ಮುಖ್ಯ. ಅದನ್ನೆ "ಅಲ್ಲಾಹನ ದೃಷ್ಟಿಯಲ್ಲಿ ಯಾವನ ಕಟು ಮಾತುಗಳು ಪರರಸಂಬಂಧವನ್ನು ಕಡಿದು ಹಾಕುವವೋ ಅಂಥವನೇ ದುಷ್ಟನು" ಎಂದು ಹದೀಸ್‌ನಲ್ಲಿ ಹೇಳಲಾಗಿದೆ. ಹೀಗೆಯೇ ಮನುಷ್ಯ ಸಂಬಂಧಗಳನ್ನು ಒಂದುಗೂಡಿಸಲು ಉಪದೇಶಿಸುವ ಉಪದೇಶಗಳಲ್ಲಿ ನಮಾಜ ಮಾಡುವ ವಿಧಾನವು ಒಂದಾಗಿದೆ. ದಿನಂಪ್ರತಿ ಐದು ಹೊತ್ತು ಮುಸ್ಲಿಂ ಬಾಂಧವರೆಲ್ಲಾ ಒಂದು ಭಾವಣಿಯ ಅಡಿಯಲ್ಲಿ ಸೇರಿ ಒಬ್ಬನೇ ದೇವನನ್ನು ಧ್ಯಾನಿಸುವುದರಿಂದ ಪರಸ್ಪರ ಬೆರೆತು ನಡೆಯುವ ಗುಣಬೆಳೆಯುತ್ತದೆ. ಹಾಗೆಯೇ ಶುಕ್ರವಾರದ ಹಾಗೂ ರಂಜಾನ ಮತ್ತು ಬಕ್ರೀದ್ ಹಬ್ಬಗಳಲ್ಲಿ ಒಟ್ಟಾಗಿ ಸೇರಿ ಒಂದೇ ವಿಧಾನದಲ್ಲಿ ವಿಶ್ವಪರ್ಯಂತ ನಮಾಜು ಮಾಡುವ ವಿಧಾನವು ಮಾನವರ ಸಂಬಂಧವನ್ನು ಬಲಗೊಳಿಸುವ ಆಚರಣೆಯಾಗಿದೆ.

ಇಸ್ಲಾಂ ಧರ್ಮದ ಮೂಲ ತತ್ವಗಳಲ್ಲಿ ಒಂದಾದ ಹಜ್ ಮಾಡುವ (ಮಕ್ಕಾ ಯಾತ್ರೆ) ಆಚರಣೆಯು ಉನ್ನತ ಇಸ್ಲಾಮಿ ಮಾನವೀಯ ಮೌಲ್ಯಗಳನ್ನು ಕುರಿತು ಮುಸ್ಲಿಮ್ಮರಿಗೆ ನೀಡಲಾಗುವ ಪ್ರತ್ಯಕ್ಷ ಶಿಕ್ಷಣವೇ ಆಗಿದೆ. ಇದು ಸಾಮಾಜಿಕ ತತ್ವಗಳನ್ನು ಮತ್ತು ಮೌಲ್ಯಗಳನ್ನು ಕೇವಲ ಒಂಟಿ ಆಚಾರ ಮತ್ತು ಸಂಪ್ರದಾಯಗಳನ್ನಾಗಿಸಬಾರದೆಂದು ಬಯಸುತ್ತದೆ. ಸಾಮೂಹಿಕ ನಮಾಜ್‌ನಲ್ಲಿ ಬಹಿರಂಗವಾಗುವ ಸಹೋದರತೆ, ಸಮಾನತೆ ಮತ್ತು ಸ್ವಾತಂತ್ರ್ಯದ ಭಾವನೆಗಳು ಹಜ್‌ನಲ್ಲಿ ವಿರಾಟ್ ರೂಪದಲ್ಲಿ ಪ್ರದರ್ಶಿತವಾಗುತ್ತದೆ. ಅಲ್ಲಿ ವರ್ಗ-ವರ್ಣಗಳ ವ್ಯತ್ಯಾಸವಿಲ್ಲದೆ ಪ್ರತಿಯೊಬ್ಬರು ಶವಕ್ಕೆ ಹೊದಿಸುವ ವಸ್ತ್ರಕ್ಕೆ ಸಮಾನವಾದ ಸರಳ ವಸ್ತ್ರವನ್ನು ತೊಟ್ಟು ಲಕ್ಷೋಪಲಕ್ಷ ಜನ ಭುಜಕ್ಕೆ ಭುಜ ತಾಗಿಸಿ ಸಮಾನ ಘೋಷಣೆಗಳೊಂದಿಗೆ ಮುಂದೆ ಸಾಗುತ್ತಾರೆ.

ಹಜ್ ಮಾನವೀಯ ಐಕ್ಯತೆಯ ಪ್ರದರ್ಶನ ರಂಗವಾಗಿದೆ. ಅದು ಆಚಾರ, ಧ್ಯೇಯ, ಮೊದಲಾದವುಗಳನ್ನು ಬಹಿರಂಗಗೊಳಿಸಿ, ವರ್ಗ-ವರ್ಣ-ಭಾಷೆ-ದೇಶ

ಇತ್ಯಾದಿ ಭಿನ್ನತೆಗಳನ್ನೆಲ್ಲಾ ಬಹಿರಗೊಳಿಸಿ ವಿಶ್ವ ಭ್ರಾತೃತ್ವವನ್ನು ಪ್ರತಿಬಿಂಬಿಸುತ್ತದೆ. ಈ ವಿಶ್ವಸಮ್ಮೇಳನದಲ್ಲಿ ಪಂಡಿತರು, ಪಾಮರರು, ರಾಷ್ಟ್ರೀಯ ನಾಯಕರು ಮೊದಲಾದವರೆಲ್ಲಾ ಒಟ್ಟೊಟ್ಟಿಗೆ ಸೇರಿ ಪರಸ್ಪರ ಪರಿಚಿತರಾಗಿ ಅನ್ಯೋನ್ಯ ಸಂಬಂಧವನ್ನು ಬೆಳೆಸಿಕೊಂಡು ಯಾತ್ರೆಯ ನಂತರ ಹಿಂದಿರುಗುವಾಗ ಪ್ರತಿಯೊಬ್ಬರೂ ನೂರಾರು ಪರಿಚಯಗೊಂಡ ಸ್ನೇಹಿತರ ವಿಳಾಸಗಳೊಡನೆ ಮರಳುತ್ತಾರೆ. ಊರುಗಳನ್ನು ಸೇರಿದ ನಂತರ ಯೋಗಕ್ಷೇಮಗಳನ್ನು ಹೊತ್ತ ಪತ್ರಗಳು ವಿನಿಮಯಗೊಳ್ಳುತ್ತಿರುತ್ತವೆ. ಹೀಗೆ ಇಸ್ಲಾಂ ಧರ್ಮದಲ್ಲಿ ಕಡ್ಡಾಯಗೊಳಿಸಿದ ಹಜ್ ವಿಶ್ವಭ್ರಾತೃತ್ವವನ್ನು ಶಾಂತಿಯನ್ನು, ಮನುಕುಲದ ಒಗ್ಗಟ್ಟನ್ನು ಕಾಪಾಡುತ್ತಿದೆ. ಇಂತಹ ಸಮ್ಮೇಳನಗಳನ್ನು ಪ್ರತಿರಾಷ್ಟ್ರದಲ್ಲೂ ವರ್ಷಕ್ಕೊಮ್ಮೆಯಾದರೂ ನಡೆಸಿ ಮೂಲೆ ಮೂಲೆಗಳಲ್ಲಿ ವಾಸಿಸುವ ಜನರನ್ನೆಲ್ಲಾ ಒಟ್ಟುಗೂಡಿಸಿ ಪರಸ್ಪರ ಪರಿಚಿತಗೊಂಡು ಒಂದಾಗಲು ಅವಕಾಶ ಮಾಡಿಕೊಡಬೇಕು. ಅದರಿಂದ ಭಿನ್ನಗೊಂಡಿರುವ ಭಾವನೆಗಳು ಒಂದುಗೂಡುತ್ತವೆ.

ಹೀಗೆ ಇಸ್ಲಾಂ ಧರ್ಮದಲ್ಲಿರುವ ಏಕದೇವ ನಿಷ್ಠೆ, ಸಮಾನತೆ, ದೀನದಲಿತರ ಬಗ್ಗೆ ಪರೋಪಕಾರ ದೃಷ್ಟಿ ಮೊದಲಾದವು ಬೇರೆ ಬೇರೆ ಸ್ಥಳಗಳಲ್ಲಿ ಬೆಳೆಯುವ ಮಾನವರನ್ನೆಲ್ಲಾ ಒಂದುಗೂಡಿಸುತ್ತವೆ. ಅದರಲ್ಲಿರುವ ವಿಶೇಷ ಗುಣಗಳನ್ನು ಹಲವಾರು ಮಹಾನ್ ವ್ಯಕ್ತಿಗಳು ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ. ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು "ಇಸ್ಲಾಮ್ ಧರ್ಮದ ಪ್ರಜಾತಾಂತ್ರಿಕ ನೀತಿ–ಸಮಾನತೆ–ಭ್ರಾತೃತ್ವ–ಸ್ವಾವಲಂಬನೆ ಮತ್ತು ಶಾಂತಿಯ ಸಂದೇಶಗಳು ಇಂದಿಗೂ ಪ್ರಭಾವಕಾರಿಯಾಗಿದೆ," ಎಂದಿದ್ದಾರೆ. ರಾಷ್ಟ್ರದ ಭಾವೈಕ್ಯತೆಯ ನಿರ್ಮಾಣಕ್ಕಾಗಿ ಅವುಗಳೆಲ್ಲ ಅತಿ ಅವಶ್ಯಕಗಳಾಗಿವೆ. ಆ ಲಕ್ಷಣಗಳನ್ನು ಅರ್ಥಮಾಡಿಕೊಂಡು ನಡೆದಾಗ ಮಾತ್ರ ಬೇರ್ಪಟ್ಟ ಭಾವನೆಗಳು ಬೆಸೆಯಲು ಸಾಧ್ಯ.

ಪ್ರಸಿದ್ಧ ಮುತ್ಸದ್ದಿಯಾಗಿದ್ದ ನೆಪೋಲಿಯನ್ ಬೋನಾಪಾರ್ಟ್ "ಎಲ್ಲಾ ದೇಶಗಳ ಆಡಳಿತಗಾರರು ಒಟ್ಟಾಗಿ ಕುರಾನಿನ ತತ್ವಗಳಂತೆ ಒಂದು ರೀತಿಯ ಆಡಳಿತ ವ್ಯವಸ್ಥೆಯನ್ನು ಅನುಸರಿಸುವ ದಿನ ದೂರವಿಲ್ಲ, ಕುರಾನಿನ ತತ್ವಗಳು ಮತ್ತು ಶಿಕ್ಷಣಗಳು ಸತ್ಯದ ಮೇಲೆ ಆಧರಿಸಿದೆ ಮತ್ತು ಅವು ಮನುಕುಲವನ್ನು ಸಂತೋಷ ಸಂಪನ್ನತೆಗಳಿಂದ ತುಂಬುವಂಥದ್ದಾಗಿದೆ" ಎಂದು ಹೇಳಿ, ಇಸ್ಲಾಂ ಧರ್ಮದ ತತ್ವಗಳು ರಾಷ್ಟ್ರದ ಹಿತಕ್ಕೆ ಎಷ್ಟರಮಟ್ಟಿಗೆ ಮಾರ್ಗದರ್ಶನಗಳಾಗಬಲ್ಲವೆಂಬುದನ್ನು ತಿಳಿಸಿದ್ದಾನೆ.

ಗೊಡ್ ಫ್ರೆ ಹಜ್ನಿಸ್ ಎಂಬ ಮೇಧಾವಿ "ಕುರಾನ್ ಬಡವರ ಬಂಧುವಾಗಿದೆ. ಅದು ಭಂಡವಾಳಶಾಹಿಗಳ ಉದ್ಧಾಮ ತನವನ್ನು ಖಂಡಿಸುತ್ತದೆ" ಎಂದು ಅಭಿಪ್ರಾಯಪಟ್ಟು ಮಾನವೀಯತೆಯ ರಕ್ಷಣೆಗೆ ಅದು ಹೇಗೆ ನೆರವಾಗಬಲ್ಲದೆಂಬುದನ್ನು ತಿಳಿಸಿದ್ದಾರೆ.

ಹೀಗೆಯೇ ವಿಶ್ವದ ವಿವಿಧ ವಿದ್ವಾಂಸರು ಇಸ್ಲಾಂ ಧರ್ಮದ ತತ್ವಗಳನ್ನು ಕೊಂಡಾಡಿದ್ದಾರೆ. ಅದರಿಂದ ಮಾನವೀಯ ಮೌಲ್ಯಗಳ ರಕ್ಷಣೆಯಾಗುತ್ತದೆಂದು ತಿಳಿಸಿದ್ದಾರೆ. ವ್ಯಕ್ತಿ ಪ್ರೇಮವನ್ನು ಬೆಳೆಸುವ ತತ್ವಗಳು ಇಂದು ಅವಶ್ಯಕ ವಾಗಿವೆ ಏಕೆಂದರೆ ಮೊದಲು ವ್ಯಕ್ತಿ–ಪ್ರೇಮ ಬೆಳೆದರೆ ಅನಂತರ ದೇಶಪ್ರೇಮ ಬೆಳೆಯುತ್ತದೆ ಆದ್ದರಿಂದ ನಾವಿಂದು ವ್ಯಕ್ತಿಗಳನ್ನು ಪ್ರೀತಿಯಿಂದ ಗಳಿಸಿ ಕೊಳ್ಳಲು ತೊಡಗಬೇಕಾಗಿದೆ.

ಇಂದು ಧರ್ಮದ ಬಗ್ಗೆ ಸರಿಯಾದ ತಿಳುವಳಿಕೆಯಿಲ್ಲದಿದ್ದರೂ ಧರ್ಮದ ಮುಖವಾಡಗಳನ್ನು ಧರಿಸಿದ ಜನರು ಸ್ವಾರ್ಥತೆಯ ಸೌಧನಿರ್ಮಾಣಕ್ಕಾಗಿ ಸೌಹಾರ್ದತೆ, ರಾಷ್ಟ್ರಪ್ರೇಮ ಮೊದಲಾದವುಗಳನ್ನು ಹತ್ಯಗೊಳಿಸುತ್ತಿರುವ ಗಲಭೆ ಗಳನ್ನು ಏಳಿಸುವುದರ ಮೂಲಕ ರಾಷ್ಟ್ರದಲ್ಲಿ ಅಶಾಂತಿಯನ್ನು ಭಿನ್ನತೆಯನ್ನು ಬಿತ್ತುವುದಲ್ಲದೆ ಅವರವರ ಧರ್ಮಕ್ಕೆ ಕಳಂಕವನ್ನು ಹಚ್ಚಿಕೊಳ್ಳುತ್ತಿದ್ದಾರೆ. ಯಾವ ಧರ್ಮವೂ ಹಿಂಸೆಗೆ ಅವಕಾಶಕೊಟ್ಟಿಲ್ಲ ಹಿಂಸಿಸುವ ವ್ಯಕ್ತಿ ಧರ್ಮದ ರಕ್ಷಕನಾಗಲು ಸಾಧ್ಯವಿಲ್ಲ ಹೀಗಿರುವಾಗ ಹಲವರು ಧರ್ಮದ ರಕ್ಷಣೆಗ ಚಾಕು, ಚೂರಿ, ಬಂದೂಕು ಗಳನ್ನು ಬಳಸಿ ರಾಷ್ಟ್ರೀಯ ಭಾವೈಕ್ಯತೆಯನ್ನು ಗೌಣಗೊಳಿಸಿಕೊಂಡು ಕೂಪ ಮಂಡೂಕಗಳಾಗಿ ಬದುಕುವುದು ಸರಿಯೆನಿಸುವುದಿಲ್ಲ ಧರ್ಮದ ರಕ್ಷಣೆ ಹೋರಾಟ ದಿಂದಲ್ಲಾ ಪ್ರೀತಿಯಿಂದೆಂಬುದು ಪ್ರತಿಯೊಂದು ಧರ್ಮದ ವ್ಯಕ್ತಿಯೂ ಅರಿಯ ಬೇಕಾಗಿದೆ. ಇಲ್ಲದೆ ಧರ್ಮ ಉಳಿವಿಗೆಂದು ಕಲಹಗಳನ್ನೆಬ್ಬಿಸುವುದರಿಂದ ನಾವೂ ಉಳಿಯುವುದಿಲ್ಲ ನಮ್ಮ ಧರ್ಮವೂ ಉಳಿಯುವುದಿಲ್ಲ.

ಜಾತಿ–ಧರ್ಮಗಳು ಅವರವರ ಜೀವನದಲ್ಲಿ ಶಿಸ್ತುಬದ್ಧ ನಿಯಮಗಳನ್ನು ಪಾಲಿಸಿ ಮಾನವೀಯತೆಯಿಂದ ಬದುಕಲು ಅವಕಾಶ ಮಾಡುವ ಮಾರ್ಗಗಳೇ ಹೊರತು ಕುಕೃತ್ಯಗಳ ಸಂಘಟನೆಗಳಲ್ಲಿ ಧರ್ಮದ ಬಗ್ಗೆ ಬಡಿದಾಡುವುದು ಅವರಿಗಿ ರುವ ಧಾರ್ಮಿಕ ಅಜ್ಞಾನವನ್ನು ಸೂಚಿಸುತ್ತದೆ. ಧರ್ಮಗಳು ಪಾಶವೀಯತೆ ಯಿಂದ – ಮಾನವೀಯತೆಯ ಕಡೆಗೆ; ಅನ್ಯಾಯದಿಂದ – ನ್ಯಾಯದ ಕಡೆಗೆ; ದುರ್ಮಾರ್ಗದಿಂದ ಸನ್ಮಾರ್ಗದ ಕಡೆಗೆ; ಭಿನ್ನಭಾವನೆಗಳಿಂದ–ಭಾವೈಕ್ಯದ ಕಡೆಗೆ ಬದುಕನ್ನು ಒಯ್ಯುವ ದೋಣಿಗಳು. ಆದ್ದರಿಂದ ಭಾರತದ ಪ್ರಜೆಗಳಾದ ನಾವು ವಿವಿಧ ದೋಣಿಗಳಲ್ಲಿ ಸಂಚರಿಸುತ್ತಿರಬಹುದು ಆದರೆ ನಮ್ಮೆಲ್ಲರ ಗುರಿ ಒಂದೇ ಆಗಿದೆ. ಆದಪ್ರಯುಕ್ತ ನಾವೆಲ್ಲ ಭಿನ್ನ ಭಾವನೆಗಳನ್ನು ತೊರೆದು ಸಹ ಜೀವನದ ಮೂಲಕ, ಒಂದೇ ರಾಷ್ಟ್ರದ ಪ್ರಜೆಗಳೆಂದು, ಒಂದೇ ನೆಲದವಾಸಿಗಳೆಂದು ತಿಳಿದು ಹೃದಯಗಳಲ್ಲಿ ವ್ಯಕ್ತಿ ಪ್ರೇಮವನ್ನಿಟ್ಟುಕೊಂಡು ರಕ್ತದಲ್ಲಿ ರಾಷ್ಟ್ರಪ್ರೇಮವನ್ನು ಬೆರೆಸಿಕೊಂಡು ಬದುಕೋಣ ಬನ್ನಿ. ಬದುಕು ಬಿಟ್ಟು ಹೋಗುವ ಮುನ್ನ ನಮ್ಮದ ನ್ನಾಗಿ ಏನಾದರು ರಾಷ್ಟ್ರಕ್ಕಾಗಿ ನೀಡೋಣ ಬನ್ನಿ ಪ್ರಸಿದ್ಧ ಘಾಲಿಬ್ ಕವಿಯು ಮನುಷ್ಯನು ಏನನ್ನು ಬಿಟ್ಟುಹೋಗಬೇಕೆನ್ನುವುದರ ಬಗ್ಗೆ ಸುಂದರವಾದ ಸಾಲು

ಗಳನ್ನು ನೀಡಿದ್ದಾನೆ. ಅವುಗಳೆಂದರೆ, "ಫೂಲ್ ಮರೆ ಬಾಸ್ ರಹೆ; ಇನ್ಸಾನ್ ಮರೆ ಅವ್ಸಾಫ್‌ರಹೆ" ಎಂಬುದು. ಇದರ ಅರ್ಥವು ಹೂ ಸಾಯುವಾಗ ಸುವಾಸನೆ ಬಿಟ್ಟು ಹೋಗುತ್ತದೆ: ಮಾನವ ಸಾಯುವಾಗ ಆತನ ಒಳಿತುಗಳನ್ನು ಬಿಟ್ಟು ಹೋಗಬೇಕೆಂದು ಈ ಕವಿವಾಣಿಯ ಪ್ರಕಾರ ನಾವು ಯಾವಧರ್ಮಿಗಳೇ ಆಗಿರಲಿ ನಮ್ಮ ಭಾವನೆಗಳನ್ನು ಬೆಸೆದುಕೊಂಡು ಬದುಕೋಣ ಬನ್ನಿ. "ದೇಶಕ್ಕೆ ಉಳಿವಿದೆ ವ್ಯಕ್ತಿಗೆ ಅಳಿವಿದೆ". ಆದ್ದರಿಂದ ನಮ್ಮ ಒಳಿತುಗಳನ್ನು ದೇಶದಲ್ಲಿ ಬಿತ್ತಿ ಹೋಗೋಣ ಬನ್ನಿ ಎಂದು ರಾಷ್ಟ್ರಾಭಿಮಾನಿಗಳಿಗೆಲ್ಲಾ ಹೃತ್ಪೂರ್ವಕವಾಗಿ ಕರೆ ನೀಡಲೆ?

ಸಹಾಯಕ ಗ್ರಂಥಗಳು ಮತ್ತು ಪತ್ರಿಕೆಗಳು:

೧) ದಿವ್ಯ ಕುರಾನ್; ಅನುವಾದಕ ಮಂಡಳಿ; ಇಸ್ಲಾಮಿ ಸಾಹಿತ್ಯ ಪ್ರಕಾಶನ ಬೆಂಗಳೂರ; ೧೯೭೮

೨) ಇಸ್ಲಾಂ ಸಮೀಕ್ಷೆ: ಅನುವಾದ; ಡಾ. ಮುಹ್ಯ-ದ್ದೀನ್ ಆರ್. ಗಜೇಂದ್ರಗಡ ,, ೧೯೮೧

೩) ಇಸ್ಲಾಂ ಎಂದರೇನು? ಅನುವಾದ; ಮಹಮ್ಮದ್ ಷೌಕತ್ ಅಲಿ — ಶಾಂತಿ ಸಾಹಿತ್ಯ ಪ್ರಕಾಶನ ಬೆಂಗಳೂರು — ೧೯೭೫

೪) ಇಸ್ಲಾಮ್ ಮೂಲ ತತ್ವ ಮತ್ತು ವೈಶಿಷ್ಟ್ಯ; ಅನುವಾದ; ಡಾ. ಮುಹ್ಯದ್ದೀನ್ ಆರ್. ಗಜೇಂದ್ರಗಡ — ಇಸ್ಲಾಮಿಕ್ ಸೆಂಟರ್ ಮಂಗಳೂರು ೧೯೮೩

೫) ಹಿಜರಿ ೧೫ ನೇ ಶತಮಾನೋತ್ಸವದ; ವಿವಿಧ ಲೇಖಕರು — ಅಲ್‌ಹಸನ್ ಎಜ್ಯುಕೇಶನ್ ಸ್ಮರಣ ಸಂಚಿಕೆ ಟ್ರಸ್ಟ್, ಮಂಗಳೂರು-೩ ೧೯೮೨

೬) ಪಯಣಿಗ ೧೫ನೆಯ ವಾರ್ಷಿಕೋತ್ಸವ — ,, — ಅಂಜುಮನ್ ಖುವ್ವತ್‌ಉಲ್ ಸ್ಮರಣ ಸಂಚಿಕೆ ಇಸ್ಲಾ ಜೊಕಟ್ಟೆ- ೧೯೮೩

೭) ಸನ್ಮಾರ್ಗ (ವಾರಪತ್ರಿಕೆ) ಸಂ. ಇಬ್ರಾಹಿಂ ಸಾಯೀದ್; ಬಿ.ಬಿ. ಅಲಾಬಿ ರಸ್ತೆ ಮಂಗಳೂರು.

8) India Express Editor Bangalore (8 December 1986)

ರಾಷ್ಟ್ರೀಯ ಭಾವೈಕ್ಯ ಮತ್ತು ವೀರಶೈವ ಧರ್ಮ

● ಬಿ. ಸಿ. ಜವಳಿ

ವೀರಶೈವಧರ್ಮವು ಭಾರತದ ಧರ್ಮಗಳಲ್ಲೊಂದು ಅದು ಅನಾದಿಯೆಂದು ಕೆಲವರು ವಾದಿಸಿದರೆ,[1] ಶ್ರೀ ಬಸವೇಶ್ವರರ ಕಾಲದಿಂದ ಈಚಿನದೆಂದು ಇನ್ನು ಕೆಲವರು ವಾದಿಸುತ್ತಾರೆ.[2] ಅದು ಬಸವಣ್ಣನವರಿಗಿಂತಲೂ ಪೂರ್ವದ್ದೆಂದು ಹೇಳಲು ಸಾಕಷ್ಟು ಬಲವಾದ ಆಧಾರಗಳಿಲ್ಲ. ಯಾವುದೇ ಧರ್ಮವು ಬಹು ಪುರಾತನದ್ದೆಂದರೆ ಅದು ಮಾನ್ಯವಾದುದೆಂದು ಸಾಮಾನ್ಯವಾದ ಗ್ರಹಿಕೆ. ವೀರಶೈವವು ಪುರಾತನ ಧರ್ಮಗಳಿಂದ ಅನೇಕ ಒಳ್ಳೆಯ ಅಭಿಪ್ರಾಯಗಳನ್ನು ಸ್ವೀಕರಿಸಿ, ಬಸವೇಶ್ವರಾದಿ ಶಿವಶರಣರ ಕಾಲಕ್ಕೆ, ಕರ್ನಾಟಕದಲ್ಲಿ ರೂಪುಗೊಂಡಿತೆಂದು ತೋರುತ್ತದೆ. ಆದುದರಿಂದ ಅದು ಕರ್ನಾಟಕದಲ್ಲಿಯೇ ಅಧಿಕಪ್ರಮಾಣದಲ್ಲಿ ಪ್ರಚಲಿತವಿದೆ; ಪ್ರಚಾರಗೊಂಡಿದೆ; ಅಪಾರ ಸಾಹಿತ್ಯವನ್ನು ಹೊಂದಿದೆ. ೧೨ನೆಯ ಶತಮಾನದಲ್ಲಿ ಬಸವಣ್ಣನವರ ಕಾಲದಲ್ಲಿ ಕಲ್ಯಾಣಕ್ಕೆ ಬಂದು ತಮ್ಮ ತಮ್ಮ ದೇಶಗಳಿಗೆ ಹೋದ ಶರಣರಿಂದ ಪ್ರಸಾರಗೊಂಡು ಇತರ ಪ್ರದೇಶಗಳಾದ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ಪ್ರಚಲಿತವಿದೆ. ಇತರ ಕಡೆಗಳಲ್ಲೂ ಅಲ್ಪ

---

೧ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು "ವಚನಗಳಲ್ಲಿ ವೀರಶೈವಧರ್ಮ" ಗ್ರಂಥದ ಪುಟ ೬೫-೬೬ ರಲ್ಲಿ ಹೀಗೆ ಬರೆದಿದ್ದಾರೆ: "ಶೈವಧರ್ಮದ ಬೆಳವಣಿಗೆಯಲ್ಲಿ ಬಹುಶಃ ಪರಿಪೂರ್ಣತೆಯನ್ನು ಸಾಧಿಸಿದ ಶಾಖೆಯೆಂದರೆ ವೀರಶೈವವೆನ್ನಬಹುದು. ಎಲ್ಲ ಶೈವ ಸಿದ್ಧಾಂತಗಳ ಒಳ್ಳೆಯ ಅಂಶಗಳನ್ನು ತನ್ನಲ್ಲಿ ಸಮಾವೇಶಗೊಳಿಸಿಕೊಂಡು, ವ್ಯಾಪಕವಾದ ಒಂದು ತತ್ತ್ವಸಿದ್ಧಾಂತವನ್ನೂ, ಆಚರಣೆಯ ಮಾರ್ಗವನ್ನೂ ಇದು ರೂಪಿಸಿಕೊಂಡಿತು. ಇದರ ಪ್ರಾಚೀನತೆಯ ವಿಚಾರದಲ್ಲಿ ಸಧ್ಯಕ್ಕೆ ದೊರಕುವ ಆಧಾರಗಳಿಂದ ಏನನ್ನೂ ಹೇಳಲು ಸಾಧ್ಯವಿಲ್ಲವಾಗಿದೆ. ೧೨ನೆಯ ಶತಮಾನದಲ್ಲಿ-ಬಸವಣ್ಣನ ಕಾಲದಲ್ಲಿ 'ಇದು ನಿರ್ದಿಷ್ಟವಾದ ಒಂದು ಸ್ವರೂಪವನ್ನು' ಪಡೆದು ಸರ್ವಸಮಾನತೆಯ ತನ್ನ ಆಶಯವನ್ನು ಬಹು ದೊಡ್ಡ ಪ್ರಮಾಣದಲ್ಲಿ ಈಡೇರಿಸುವ ಶಕ್ತಿಯುತ ಧರ್ಮವಾಗಿ ಪರಿಣಮಿಸಿತೆಂಬ ವಿಚಾರದಲ್ಲಿ ಸಂದೇಹವಿಲ್ಲವಾದರೂ ಬಸವಣ್ಣನವರಿಂದಲೇ ಈ ಧರ್ಮ ಸ್ಥಾಪಿತವಾಯಿತೆಂದು ಹೇಳುವಂತಿಲ್ಲ"

೨ ಈ ಲೇಖಕರು "ಲಿಂಗಾಯತಧರ್ಮ ಸಂಸ್ಥಾಪಕರು?" - ಎಂಬ ಪುಸ್ತಕದ ೧೨೧-೧೫೮ ಪುಟಗಳಲ್ಲಿ ಈ ವಿಷಯವನ್ನು ಸುಧೀರ್ಘವಾಗಿ ಚರ್ಚಿಸಿದ್ದಾರೆ. ವಿವರಗಳಿಗಾಗಿ ಆ ಕೃತಿ ನೋಡಬೇಕು.

ಪ್ರಮಾಣದಲ್ಲಿ ಇಂದಿಗೂ ಪ್ರಚಲಿತವಿದೆ. ವೀರಶೈವವನ್ನು ಕೆಲವರು 'ಅಹಿಂದು' ಎಂದು ಭಾವಿಸಿದಂತಿದೆ. ಕ್ರೈಸ್ತಧರ್ಮದ ಒಂದು ಶಾಖೆಯಾದ ಪ್ರೊಟೆಸ್ಟಂಟ್ ಪಂಥದಂತೆ. ಹಿಂದುಗಳ ಅನೇಕ ಆಚರಣೆಗಳನ್ನು (ಅದು) ವೀರಶೈವವು ಖಂಡಿಸಿದುದರಿಂದ, ವಿದ್ವಾಂಸರಿಗೆ, ಸಹಜವಾಗಿಯೇ ಈ ಭಾವನೆ ಬರುವಂತಿದೆ. ಹಿಂದೂ ಧರ್ಮವು, ನಾನಾಜಾತಿ, ಪಂಗಡ, ಆಚಾರ – ವಿಚಾರ, ದೇವತೆಗಳ ಆರಾಧನೆ ಹೊಂದಿರುವುದರಿಂದ, ವೀರಶೈವ ಧರ್ಮವನ್ನು ಹಿಂದೂ ಧರ್ಮದ ಅಂಗವೆಂದು ಪರಿಗಣಿಸಿದರೆ, ಇನ್ನು ಕೆಲವರು, ಇದನ್ನು ಒಂದು ಪ್ರತ್ಯೇಕಧರ್ಮವೆಂದು ತಿಳಿಯುತ್ತಾರೆ. ಬಸವಣ್ಣ ಮತ್ತು ಅವರ ಅನುಯಾಯಿಗಳು, ಮಹಾವೀರ ಮತ್ತು ಬುದ್ಧದೇವನಂತೆ, ಹಿಂದುಗಳ ಅನೇಕ ಆಚಾರ–ವಿಚಾರಗಳನ್ನು ಖಂಡಿಸಿರುವುದರಿಂದ, ವೀರಶೈವವನ್ನೂ ಒಂದು ಪ್ರತ್ಯೇಕ ಧರ್ಮವೆಂದು ಪರಿಗಣಿಸಬಹುದು. ಯಾಕೆಂದರೆ ಈ ಧರ್ಮಕ್ಕೆ ತನ್ನದೆ ಆದ ನೈತಿಕ ಸಿದ್ಧಾಂತ, ಸಾಹಿತ್ಯ, ಸಮಾಜ, ತಾತ್ವಿಕ ಹಿನ್ನೆಲೆ, ಆಚರಣಾವಿಧಾನಗಳಿದ್ದು, ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನೂ ಹೊಂದಿದೆ.[3]

ವೀರಶೈವವು, ಲಿಂಗಾಯತ, ಲಿಂಗವಂತ ಎಂದೂ ಕರೆಸಿಕೊಳ್ಳಲ್ಪಡುತ್ತದೆ. ಇದು ವೇದಗಳಲ್ಲಿಯ ಭಕ್ತಿಕಾಂಡ ಮತ್ತು ಜ್ಞಾನಕಾಂಡಗಳನ್ನು ಸ್ವೀಕರಿಸಿ, ಕರ್ಮಕಾಂಡವನ್ನು ತ್ಯಜಿಸಿರುವುದರಿಂದ, ಅದು ಯಜ್ಞಯಾಗಗಳನ್ನು ಆಚರಿಸುವುದಿಲ್ಲ. ಯಜ್ಞೋಪವೀತ ಧರಿಸಲು ತಿಳಿಸುವುದಿಲ್ಲ. ಇದು ಅಲ್ಲದೆ "ಭಕ್ತಿ"— ಮತ್ತು "ಕರ್ಮ"ಗಳು ಎಂದೂ ಕೂಡಿ ನಡೆಯುವುದಿಲ್ಲ ಎಂದು ಬಸವಣ್ಣನವರು, ಕರ್ಮಮಾರ್ಗ ತ್ಯಜಿಸಿದರೆಂದು ಹರಿಹರ ಕವಿಯು ಹೇಳಿಕೆ[4]. 'ಭೀಮಕವಿಯೂ' 'ಬಸವಪುರಾಣ'ದಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ: "ತೋರೆಸಪಟ್ಟ ಬ್ರಾಹ್ಮ್ಯವೆಂಬುದು ಬೇರೆ ದರ್ಶನ, ಈಶ ಭಕ್ತಿಯು ಬೇರೆ; ಇವನೆರಡುವಂ ಕೂಡಿ ನುಡಿಯದಿರು; ಬೇರೆದೈವವು, ಬೇರೆಮಂತ್ರವು; ಬೇರೆಗುರುವು; ಬೇರೆವೇಷವು; ಬೇರೆಬೇರೆ ಧ್ಯಾನ, ಬಾಹ್ಯಕ್ರಿಯೆಗಳಾಚಾರ".[5] ಇದು ಬಸವಣ್ಣನು ಯಜ್ಞೋಪವೀತ ಧಾರಣಸಮಾರಂಭದ ಕಾಲದಲ್ಲಿ, ತನ್ನ ತಂದೆಗೆ ಹೇಳಿದ ವಿಚಾರ. ಬಸವಣ್ಣ

---

3 ಇದರ ವಿವರಗಳನ್ನು ಅರಿಯಬಯಸುವವರು ಇವೇ ಲೇಖನ 'ಧರ್ಮಭಂಡಾರಿ ಬಸವಣ್ಣ' – ಪುಸ್ತಕದ ಪ್ರಸ್ತಾವನೆ - ಪುಟ XXiX-XXXI - ನೋಡಿರಿ (೧೯೬೩)

4 ಬಸವರಾಜದೇವರ ರಗಳೆ, ಎರಡನೆಯ ಸ್ಥಲ; ಪುಟ ೧೦; ಸಂಪಾದಕರು: ಟಿ ಎಸ್. ವೆಂಕಣಯ್ಯ, (೧೯೩೮)

5 ಬಸವಪುರಾಣ, ಕಾಂಡ ೮, ಸಂಧಿ ೩, ಪದ್ಯ ೬೨; ಸಂಪಾದಕರು: ಇಷ್ಟಲಿಂಗಪ್ಪ ಪಾವಟೆ, ಕೊಟ್ಟೂರೇಶ ಬಂದಮ್ನವರ, ಮಲ್ಲಾಬಾದಿ ವೀರಭದ್ರಪ್ಪ (೧೯೬೯)

ನವರೇ "ವೇದಘನವೆಂಬೆನೇ? ಪ್ರಾಣಿವಧೆಯ ಭಜಿಸುತ್ತದೆ"[6] ಎಂದಿರುವುದೂ ಯಜ್ಞದ ನಿರಾಕರಣೆಗೆ ಸಾಕ್ಷಿ. ವೇದಗಳಲ್ಲಿರುವ ಪ್ರಾಣಿವಧೆಯನ್ನು ನಿರಾಕರಿಸಿ, ಆಗಮಗಳಲ್ಲಿ ಶಿವಭಕ್ತಿಯ ಆಧಿಕ್ಯವನ್ನು ಸ್ವೀಕರಿಸಿದುದಲ್ಲದೆ, ಆಗಮಗಳಲ್ಲಿದ್ದ ತಾಮಸ ಭಕ್ತಿಯನ್ನೂ ವೀರಶೈವವು ತಿರಸ್ಕರಿಸಿತು. ಪೂರ್ವದ ಶೈವಸಂಪ್ರದಾಯಗಳಲ್ಲಿದ್ದ ಅನೇಕ ಉತ್ತಮ ಅಂಶಗಳನ್ನು ಸ್ವೀಕರಿಸಿದ್ದರೂ, ಅಲ್ಲಿಯೂ ಕಂಡುಬರುತ್ತಿದ್ದ ವಾಮಾಚಾರಗಳನ್ನೂ, ಕ್ರೂರ ಆಚರಣೆಗಳನ್ನೂ ತಿರಸ್ಕರಿಸಿತು. ವೀರಶೈವವು ಪುರಾತನ ಶೈವ ಶಾಖೆಗಳಿಂದ, ವೇದೋಪನಿಷತ್ತು, ಪುರಾಣ, ಆಗಮಗಳಿಂದ ಬೇರೆ ಬೇರೆ ಒಳ್ಳೆಯ ಅಂಶಗಳನ್ನು ಸ್ವೀಕರಿಸಿರುವುದರಿಂದ, ಸಾಂಸ್ಕೃತಿಕ ಪರಂಪರೆಯ ದೃಷ್ಟಿಯಿಂದ, ವೀರಶೈವವು ಭಾರತದ ಅನೇಕ ಧರ್ಮಪಂಥಗಳಿಗೆ ಋಣಿಯಾಗಿದೆ.

ವೇದಕಾಲದಿಂದ ಪುರಾಣಗಳು ಮುಕ್ತಾಯವಾಗುವವರೆಗೆ ಬೆಳೆದುಬಂದ ಅನೇಕ ದೇವತಾರಾಧನೆಯನ್ನು ಖಂಡಿಸಿ, ಬಸವಣ್ಣನವರು ಏಕದೇವೋಪಾಸನೆಯನ್ನೇ ಪುರಸ್ಕರಿಸಿದರು. "ದೇವನೊಬ್ಬ ನಾಮ ಹಲವು; ಪರಮ ಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದರೆ ಕಿವಿ ಮೂಗ ಕೊಯ್ವನು. ಹಲವು ದೈವದ ಎಂಜಲ ತಿಂಬವನೇನೆಂಬೆ, ಕೂಡಲಸಂಗಮದೇವಾ?" ಎಂಬ ಬಸವಣ್ಣನವರ ಈ ಉಕ್ತಿಯು[7] ಹಲವರಿಗೆ ಸಮಾಧಾನ ತರುವಂತಹದು. ಹೀಗಾಗಿ ಅಲ್ಲಿ ಹಲವು ದೈವಗಳ ಅಸ್ತಿತ್ವಕ್ಕೆ ಸ್ಥಾನವಿಲ್ಲ. ಕಾಶ್ಮೀರಶೈವ, ತಮಿಳುನಾಡಿನ ಶುದ್ಧಶೈವ, ಗೌಡಶೈವ, ಇವೆಲ್ಲವುಗಳಿಂದ ಸಾಕಷ್ಟು ಪೋಷಣೆ ಪಡೆದುದರಿಂದ, ಅವೆಲ್ಲವುಗಳಿಗೆ ಅದು ಋಣಿಯಾಗಿದೆ. ಆದಕಾರಣ, ಭಾರತದ ನಾನಾಭಾಗಗಳಲ್ಲಿ ಆಗಿಹೋದ ಶಿವಶರಣರನ್ನು ಬಹು ಭಕ್ತಿಯಿಂದ ಸ್ಮರಿಸುತ್ತನೆ; ಅವರನ್ನು 'ಆದ್ಯ'ರೆಂದೂ, ತಮ್ಮವರೆಂದೂ ಗೌರವಯುತವಾಗಿ ಕಾಣುತ್ತದೆ. ಬಾಣ, ಮಯೂರ, ಕಾಳಿದಾಸ, ಭೋಜ, ಉದ್ಭಟ, ಮಲ್ಹಣ ಮೊದಲಾದ ಸಂಸ್ಕೃತದ ಶಿವಕವಿಗಳನ್ನೂ, ತಮಿಳುನಾಡಿನ ಅರುವತ್ತುಮೂವರು ನಾಯನಾರು (ಪುರಾತನರು) ಗಳನ್ನೂ, ಆಂಧ್ರದೇಶ, ಮಲಯಾಳದೇಶದ ಅನೇಕ ಶಿವಭಕ್ತರನ್ನೂ ಕುರಿತು, ಬಸವಣ್ಣನವರು ತಮ್ಮ ವಚನಗಳಲ್ಲಿ ಗೌರವಿಸಿದುದನ್ನೂ,[8] ಹರಿಹರ ಕವಿಯು ಶಿವಗಣದ ಕಥೆ ಬರೆದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ವೀರಶೈವರೂ ಲಿಂಗೋಪಾಸಕರು. ಆದುದರಿಂದಲೇ ಅವರು ಇತರ ಶಿವಭಕ್ತರೊಡನೆ ಸಾಂಸ್ಕೃತಿಕ ಸಂಬಂಧವನ್ನು ಬಾಂಧವ್ಯವನ್ನು ಹೊಂದಿದ್ದಾರೆ. "ಆವನಾದರೇನು, ಶ್ರೀಮಹಾ

6 ಬಸವಣ್ಣನವರ ವಚನ ೩೦ ; ಸಂಪಾದಕರು: ಶಿ. ಶಿ. ಬಸವನಾಳ, ಎಂ. ಎ., ೧೯೫೧.

7 ಬಸವಣ್ಣನವರ ವಚನ, ೬೧೫.

8 ಬಸವಣ್ಣನವರ ವಚನ, ೨೯, ೩೭೧, ೫೧೯

ದೇವನ ನೆನೆವವನ ಬಾಯ ತಂಬುಲ ಮೆಲುವೆ; ಬೀಳುಡಿಗೆ ಹೊದೆವೆ; ಪಾದರಕ್ಷೆಯ ಕಾಯ್ದು ಬದುಕುವೆ, ಕೂಡಲಸಂಗಮದೇವಾ" [9] ಎಂಬ ಬಸವಣ್ಣನವರ ಈ ವಚನವು, ದೈವಭಕ್ತನಾರಾದಡಾಗಲಿ ಅವರ ಸೇವೆ ಮಾಡುವೆ ಎಂಬ ಭಾವವುಳ್ಳ ದಾಗಿದೆ. ಮಹಾಕವಿಯೂ, ಪರಮಭಕ್ತನೂ, 'ಶಿವಯೋಗಿಚಕ್ರೇಶ್ವರ'ನೂ ಆದ ಹರಿಹರ ಕವಿಯು, "ಭರದಿಂ ಲಿಂಗಾರ್ಚನಂ ಮಾಡುವ ಶಿವಕುಲವೊಂದೇ" ಕುಲ [10] ಎಂದು ಘೋಷಿಸಿದ್ದಾನೆ. ಹಣೆಯಲ್ಲಿ ಭಸ್ಮ, ಕೊರಳೊಳು ರುದ್ರಾಕ್ಷಿ, ಎದೆಯಮೇಲೆ ಲಿಂಗವುಳ್ಳವರನ್ನು ಶಿವನೆಂದೇ ಭಾವಿಸಬೇಕೆಂದು ವೀರಶೈವವು ತಿಳಿಸುತ್ತದೆ.

ವೀರಶೈವವು ಶಿವಾರಾಧನೆಯನ್ನೇ ಬೋಧಿಸುತ್ತಿದ್ದರೂ ಅದು ಶಿವನನ್ನು ಮೂರ್ತಿರೂಪದಲ್ಲಿ ಪೂಜಿಸದೆ ಇಷ್ಟಲಿಂಗರೂಪದಲ್ಲಿ ಆರಾಧಿಸಬೇಕೆಂದು ಹೇಳುತ್ತದೆ. ಲಿಂಗವನ್ನು ಸದಾ ಶರೀರದಮೇಲೆ ಧರಿಸುವುದರಿಂದ, ಶರೀರಕ್ಕೆ ಮಲಿನತೆ ಒದಗುವುದಿಲ್ಲವಾಗಿ, ಲಿಂಗಧಾರಿಗಳಿಗೆ ಯಾವಸೂತಕವೂ ಇಲ್ಲವೆಂದು ವೀರಶೈವವು ತಿಳಿಸುತ್ತದೆ. ಶರೀರವನ್ನು ಪವಿತ್ರವೆಂದು ಭಾವಿಸುವುದರಿಂದ [11] ಯಾವುದೆ ವ್ಯಕ್ತಿ ಸತ್ತಾಗ, ಶವವನ್ನು ಸುಡುವುದರ ಬದಲು ಹೂಳುತ್ತಾರೆ. ಈ ಅಂಶದಲ್ಲಿ ವೀರಶೈವವು, ಇಸ್ಲಾಂ ಹಾಗೂ ಕ್ರಿಶ್ಚಿಯನ್ ಧರ್ಮಗಳನ್ನು ಹೋಲುತ್ತದೆ. ವೀರಶೈವರು, ಇಷ್ಟಲಿಂಗವನ್ನು ವಿಶ್ವದ ಪ್ರತೀಕವೆಂದು, ವಿಶ್ವರೂಪದಲ್ಲಿ ಪೂಜಿಸುತ್ತಾರೆ. [12] ಮಹಮ್ಮದೀಯರೂ ದೇವರನ್ನು ಯಾವುದೇ ಆಕಾರದಲ್ಲಿ ಪೂಜಿಸುವುದಿಲ್ಲ

---

9 ಬಸವಣ್ಣನವರ ವಚನ, ೪೬೨

10 ಪಂಪಾಶತಕ, ಪದ್ಯ ೫೪, ಸಂಪಾದಕರು: ಡಾ. ಸಿ. ಬಿ. ಜವಳಿ, ಪುಟ ೫೬ (೧೯೮೨)

11 ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ ?
ಕುಲ ಉಂಟೇ ಜಂಗಮವಿದ್ದೆಡೆಯಲ್ಲಿ? – ಬಸವಣ್ಣನವರ ವಚನ ೭೬೯.

12 "ಜಗದಗಲ ಮುಗಿಲಗಲ, ಮಿಗೆಯಗಲ ನಿಮ್ಮಗಲ,
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ; ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ;
ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯಾ,
ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ"! – ಬ. ವ. ೭೪೩.
"ಎತ್ತೆತ್ತ ನೋಡಿದತ್ತತ್ತ ನೀನೇ ದೇವಾ; ಸಕಲವಿಸ್ತಾರದ ರೂಹು ನೀನೇ ದೇವಾ;
ವಿಶ್ವತೋ ಚಕ್ಷು ನೀನೇ ದೇವಾ; ವಿಶ್ವತೋಮುಖ ನೀನೇ ದೇವಾ;
ವಿಶ್ವತೋ ಬಾಹು ನೀನೇ ದೇವಾ: ವಿಶ್ವತೋಪಾದ ನೀನೇ ದೇವಾ, ಕೂಡಲಸಂಗಮ ದೇವಾ." ಬ. ವ. ೫೩೪

ವೀರಶೈವವು ಮೂಲತಃ ಭಕ್ತಿಯ ಆಧಾರದ ಮೇಲೆ ನಿಂತಿದೆ. ಈ "ಭಕ್ತಿಗೆ ಅನುಭಾವವೇ ಬೀಜ"–ವಾದುದರಿಂದ ಇದು ಅನುಭಾವಮಾರ್ಗದ್ದಾಗಿದೆ. ಶರಣರು ಮೂಲತಃ ಅನುಭಾವಿಗಳು. ಇತರ ದೇಶದ ಅನುಭಾವಿಗಳಂತೆ ಈಶ್ವರನನ್ನು ಅತ್ಯಂತ ಮಧುರ ಭಕ್ತಿಯಿಂದ (ಪ್ರೀತಿಯಿಂದ), ನಿಷ್ಠೆಯಿಂದ ನೆನೆಯುತ್ತಾರೆ; ಆರಾಧಿಸುತ್ತಾರೆ. ವ್ಯಕ್ತಿಯು ತನ್ನನ್ನು 'ಸತಿ' ಯೆಂದೂ, ಈಶ್ವರನನ್ನು 'ಪತಿ'ಯೆಂದೂ ಭಾವಿಸಿ, ಆ ಪತಿದೇವನ ಸಮರಸಕ್ಕೆ ಹಂಬಲಿಸುತ್ತಾನೆ. ಈ ಸಾಧನೆಯನ್ನು ಕ್ರಮಶಃ ಸಾಧಿಸಬೇಕೆಂಬುದನ್ನು ಹೇಳುವುದಕ್ಕೆ ವೀರಶೈವವು "ಷಟ್‌ಸ್ಥಲಶಾಸ್ತ್ರ" ಎಂದು ಕರೆಯುತ್ತದೆ. ಇದು ವೀರಶೈವರ ಆಧ್ಯಾತ್ಮಿಕ ಸಾಧನೆಯನ್ನು ನಿರೂಪಿಸುತ್ತದೆ. ಇವರ ತತ್ವಜ್ಞಾನಕ್ಕೆ "ಶಕ್ತಿವಿಶಿಷ್ಟಾದ್ವೈತ" "ವಿಶೇಷಾದ್ವೈತ", "ಶಿವಾದ್ವೈತ" — ಎಂದೂ ಕರೆಯಲಾಗುತ್ತದೆ.

[೨]

ವೀರಶೈವ ಧರ್ಮವು, ಪ್ರಜಾಪ್ರಭುತ್ವದ ತತ್ವದ ತಳಹದಿಯಮೇಲೆ ನಿರ್ಮಾಣವಾಗಿದೆ. ಇದೇ ಅದರ ಮುಖ್ಯವೈಶಿಷ್ಟ್ಯವಾಗಿದೆ. (ನೋಡಿರಿ: Gezetteer of Bombay State – Dharwar District, Page 818; 1959) ಅಲ್ಲದೆ ಇದು ಮೂಲತಃ ಜಾತಿವ್ಯವಸ್ಥೆಯನ್ನು ಅಳಿಸಿ ಹಾಕಲು, ವ್ಯಕ್ತಿಗಳಿಗೆ ಸ್ವತಂತ್ರಮನೋಭಾವ ಬೆಳೆಸಿಕೊಂಡು ವಿಕಾಸಹೊಂದಲು ಅವಕಾಶಮಾಡಿಕೊಡುವಂತಹುದು (ನೋಡಿರಿ : "Castes and Tribes of Bombay" Page 350; R. E. Enthoven (1922))

ವೀರಶೈವಧರ್ಮದ ಮುಖ್ಯನಾಯಕರಾದ ಶ್ರೀ ಬಸವೇಶ್ವರರು, "ವಿಪ್ರ ಮೊದಲು, ಅಂತ್ಯಜ ಕಡೆಯಾಗಿ, ಶಿವಭಕ್ತರಾದವರನೊಂದೇ ಎಂಬೆ; ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೊಂದೇ ಎಂಬೆ"[13] ಎಂದು ಘೋಷಿಸಿರುವುದೇ ಸಮಾನತೆಯ ತತ್ವಕ್ಕೆ ಸಾಕ್ಷಿ. ಸರ್ವಸಮಾನತೆ, ವ್ಯಕ್ತಿಗೌರವ, ನ್ಯಾಯ, ದೀನದಲಿತೋದ್ಧಾರ, ಮಾನವಸೇವೆ, ಕಿಂಕರತ್ವ, ಸ್ತ್ರೀ ಸಮಾನತೆ– ಇವೇ ಮೊದಲಾದ ಮಾನವೀಯ ಮೌಲ್ಯಗಳು ಶರಣರು ಬೋಧಿಸಿದ ತತ್ವಗಳು. ಆದುದರಿಂದ ಭಾರತದ ಯಾವುದೇ ಪ್ರಜೆಯು, ಈ ಧರ್ಮಕ್ಕೆ ಮತಾಂತರ ಹೊಂದಿ, ಗೌರವದಿಂದ ಬಾಳಲು, ಹಾಗೂ ಗೌರವ ಪಡೆಯಲು ಸಾಧ್ಯವಿದೆ.

13 ಬಸವಣ್ಣನವರ ವಚನ ೭೧೦.

ಎಂತಹ ಪಾಪವನ್ನು ಮಾಡಿದವನೂ ಇಲ್ಲಿ ಉದ್ಧಾರಹೊಂದಲು ಅವಕಾಶವಿದೆ.[14] ಹಿಂದೆ ಹೀಗೆ ಮತಾಂತರಗೊಂಡು ವೀರಶೈವರಾದ ಬಡವರು ಇಂದಿಗೂ ಬಡವರಾಗಿಯೇ ಇದ್ದಾರೆ. ಸರಕಾರವು ಅವರನ್ನು ಜಾತಿಯ ಆಧಾರದ ಮೇಲೆ ಮುಂದುವರಿದವ ರೆಂದು ಪರಿಗಣಿಸಿದ್ದಾರೆ. ವೀರಶೈವಧರ್ಮದ, ಮೇಲೆ ವಿವರಿಸಿದ ಈ ಗುಣಗಳೆಲ್ಲ, ನಮ್ಮ, ರಾಷ್ಟ್ರೀಯ ಭಾವೈಕ್ಯಕ್ಕೆ ಸಾಧನೆಗಳೇ ಆಗಿವೆ. ಬದುಕಿನ ಎಲ್ಲ ರಂಗ ಗಳಲ್ಲಿ, ವ್ಯಕ್ತಿಯ ವಿಕಾಸಕ್ಕೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂಬುದೇ ಬಸವಣ್ಣ ನವರ ಧೋರಣೆಯಾಗಿತ್ತು. ಈ ಕಾರಣಕ್ಕಾಗಿ, ಪುರೋಹಿತರಿಂದ, ಪೂಜಾರಿ ಗಳಿಂದ ಶೋಷಣೆ ತಪ್ಪಿಸಲೆಂದೇ ಇಷ್ಟ ಲಿಂಗಧಾರಣವನ್ನು, ಪ್ರತಿಯೊಬ್ಬ ಸ್ತ್ರೀ ಪುರುಷರಿಗೂ ಕಡ್ಡಾಯಗೊಳಿಸಿದರು. ಅವರಿಗಿಂತ ಹಿಂದೆ ಪ್ರಚಲಿತವಿದ್ದ ಹಿಂದೂ ಸಮಾಜದಲ್ಲಿ ಪ್ರಚಲಿತವಿಲ್ಲದ, ವ್ಯಕ್ತಿವಿಕಾಸಕ್ಕೆ, ಅಭಿಪ್ರಾಯ ವ್ಯಕ್ತಪಡಿಸುವು ದಕ್ಕೆ, ಬಸವಣ್ಣನವರು ಅವಕಾಶವನ್ನುಂಟು ಮಾಡಿಕೊಟ್ಟರು. ಇದರಿಂದಲೇ, ಶರಣೆ ಅಕ್ಕಮಹಾದೇವಿ, ನೀಲಾಂಬಿಕೆ, ಮುಕ್ತಾಯಕ್ಕನಂತಹ ಅನುಭಾವಿ ಸ್ತ್ರೀ ಯರೂ, ಮಡಿವಾಳ ಮಾಚಯ್ಯ, ನುಲಿಯಚಂದಯ್ಯ, ಅಂಬಿಗರ ಚೌಡಯ್ಯ- ಇಂತಹ ಹಿಂದುಳಿದ ಜಾತಿಯವರೂ ಮೇಲ್ಮಟ್ಟದ ಅನುಭಾವಿಗಳಾಗಿ ಮೆರೆದಿದ್ದಾರೆ. ಇಂದಿಗೂ ಅವರನ್ನು ವೀರಶೈವರು 'ಶರಣರು' ಎಂದು ಗೌರವಿಸುತ್ತಾರೆ. ಭಕ್ತ ರಾಗಿ, ಆಚಾರ, ಶೀಲ, ನಡತೆಗಳನ್ನು ಶುಚಿಯಾಗಿರಿಸಿಕೊಂಡವರೊಡನೆ, ಸಹ ಜೀವನ, ಸಹಪಂಕ್ತಿ ಭೋಜನ, ಶರೀರಸಂಬಂಧಗಳನ್ನೂ ಬೆಳೆಸುವುದನ್ನು ವೀರ ಶೈವವು ಒಪ್ಪಿಕೊಂಡು, ಹಿಂದುಸ್ಥಾನದಲ್ಲಿ ಅತ್ಯಂತ ಪ್ರಗತಿಪರ ದೃಷ್ಟಿಯನ್ನೂ, ಸುಧಾರಣಾಮನೋಭಾವವನ್ನು ತೋರಿಸಿದೆ. ಉತ್ತಮ, ಕನಿಷ್ಠ ಎಂಬ ಮಾನವ ನಿರ್ಮಿತ ಭಾವನೆಗಳನ್ನೂ ಅದು ಅಲ್ಲಗಳೆದಿದೆ. ಸ್ತ್ರೀ ಪುರುಷರಲ್ಲಿ, ಆತ್ಮದ ಹಿನ್ನೆಲೆಯಲ್ಲಿ ನೋಡಿದಾಗ, ಯಾವ ಭೇದಗಳೂ ಇಲ್ಲವೆಂಬುದನ್ನೂ ಅದು ಎತ್ತಿ

---

14 ಬಸವಣ್ಣನವರ ವಚನ ೬೨೧: "ಎಲವೋ ಎಲವೋ, ಪಾಪಕರ್ಮವ
ಮಾಡಿದವನೇ, ಎಲವೋ ಎಲವೋ, ಬ್ರಹ್ಮಹತ್ಯವ ಮಾಡಿದವನೇ,
ಒಮ್ಮೆ 'ಶರಣು' ಎನ್ನು ಎಲವೋ; ಒಮ್ಮೆ ಶರಣೆಂಪರೆ ಪಾಪಕರ್ಮ ಓಡುವುವು;
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನಪರ್ವತಂಗಳೈದವು:
ಒರ್ವಂಗೆ ಶರಣೆನ್ನು, ನಮ್ಮ ಕೂಡಲಸಂಗಮದೇವಂಗೆ"

ಹೇಳಿದೆ.[15] ಈಶ್ವರ ಪ್ರಪಂಚದಲ್ಲಿ, ಆತ್ಮರುಗಳಿಗೆ ಲಿಂಗ, ಜಾತಿ, ಬಣ್ಣ-ಇವಾವವೂ ಇಲ್ಲವೆಂಬುದನ್ನು ಶರಣರು ತಿಳಿಸಿದ್ದಾರೆ ಸರ್ವಸಮಾನತೆಯನ್ನು ವೀರಶೈವವು ಒಪ್ಪಿಕೊಳ್ಳುವುದಕ್ಕೆ, ಸ್ತ್ರೀಪುರುಷರೆಲ್ಲರೂ ಆತ್ಮಸ್ವರೂಪದಲ್ಲಿ ಸಮಾನರು, ಶಿವನ ಅಂಶವುಳ್ಳವರು; ಆದುದರಿಂದ ಅವರೆಲ್ಲ ಬಂಧುಗಳು ಎಂಬ ಉದಾತ್ತ ನಿಲವನ್ನು ವೀರಶೈವವು ತಳೆದಿದೆ. ಈಶ್ವರನು ಈ ಪ್ರಪಂಚದಲ್ಲೆಲ್ಲ ಇರುವುದರಿಂದ ಪ್ರಪಂಚವೇ ಈಶ್ವರನ ರೂಪು ("ವಿಶ್ವತೋರೂಹು") ಆಗಿರುವುದರಿಂದ, ಪ್ರಪಂಚವನ್ನೇ ಪ್ರೀತಿಸಬೇಕೆಂದಿದ್ದಾರೆ ವೀರಶೈವ ಶರಣರು. ಕನ್ನಡದ ಪ್ರಸಿದ್ಧ ಕವಿ ರಾಘವಾಂಕನ ಸಿದ್ಧರಾಮ ಚಾರಿತ್ರದಲ್ಲಿ ಹೇಳಿದ: "ಸಾಕಾರನಿಷ್ಠೆ, ಭೂತಂಗಳೊಳಗನುಕಂಪೆ"-ಎಂಬ ಮಾತು ಬಹಳ ಮುಖ್ಯವಾದುದು. ಅನುಕಂಪೆ, ದಯೆ ಇವೇ ಧರ್ಮಕ್ಕೆ ಮೂಲಮಾತುಗಳು.

ಇಷ್ಟಲಿಂಗರೂಪದಲ್ಲಿ ದೇವರನ್ನು ಪೂಜಿಸುವ, ಧ್ಯಾನಿಸುವ ಹಕ್ಕು ಸರ್ವರಿಗೂ ಇದೆಯೆಂದು ವೀರಶೈವವು ಸಾರಿಹೇಳಿದೆ. ಇಷ್ಟೇ ಅಲ್ಲದೆ ಮಧ್ಯವರ್ತಿಗಳಾದ ಪೂಜಾರಿಗಳ ಆವಶ್ಯಕತೆಯೂ ಇಲ್ಲವೆಂಬುದನ್ನು ಬಸವಣ್ಣನವರೇ ಹೇಳಿದ್ದಾರೆ:

೧ "ಹಸಿವಾದೊಡುಂಬುದನು, ಸತಿಯ ಸಂಭೋಗವನು
ಅನಾಗಿ ನೀವಾಡೆಂಬವರುಂಟೇ ?"

೨ "ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ?"

(ಬಸವಣ್ಣನವರ ವಚನ, ೧೮೨, ೧೮೩)

ಈ ಧರ್ಮವನ್ನಪ್ಪಿದ ಸರ್ವರೂ ಸಾಮಾಜಿಕವಾಗಿ ಸಮಾನರು ಎಂಬ ತತ್ತ್ವವನ್ನು ಶಿವಶರಣರು ಘೋಷಿಸಿದರು ಮಾತ್ರವಲ್ಲ, ಅದನ್ನು ಆಚರಿಸಿತೋರಿಸಿದರು. ಇದಕ್ಕೆ ಬ್ರಾಹ್ಮಣರಾಗಿದ್ದ ಬಸವೇಶ್ವರರೇ ತಾವು ಮಂತ್ರಿಸ್ಥಾನದಲ್ಲಿದ್ದು, ಇತರ ಕೆಳಗಿನಜಾತಿಯ ಶಿವಭಕ್ತರೊಡನೆ ಸರಿಸಮವಾಗಿ ವರ್ತಿಸಿದುದೇ ಸಾಕ್ಷಿ.

---

15 "ಮೊಲೆಮುಡಿ ಬಂದರೆ ಹೆಣ್ಣೆಂಬರು; ಗಡ್ಡ ಮೀಸೆ ಬಂದರೆ ಗಂಡೆಂಬರು;
ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ, ಕಾಣಾ, ರಾಮನಾಥ"
"ಮಡದಿಯ ಪ್ರಾಣಕ್ಕೆ ಮೊಲೆ, ಮುಡಿ, ಇದ್ದಿತೇ ?
ಒಡೆಯನ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ" ?
ಕಡೆಯಲಿದ್ದ ಅಂತ್ಯಜನು ಹಿಡಿದಿದ್ದನೇ ಹಿಡಿಗೋಲ ?
ನೀ ತೊಡಕಿಕ್ಕಿದ ತೊಡಕನು ಈ ಲೋಕದ ಜಡರೆತ್ತಬಲ್ಲರೈ ರಾಮನಾಥ ?"
ಜೇಡರ ದಾಸಿಮಯ್ಯನ ವಚನ, ಪರಿಶಿಷ್ಟದ ವಚನ ೧೫ ಮತ್ತು ವಚನ ೩.
ಸಂಪಾದಕರು: ಎಚ್. ದೇವೀರಪ್ಪ ಮತ್ತು ಆರ್. ರಾಜಪ್ಪ (೧೯೭೪)

ಕೆಳಗಿನವರ ಮನೆಯಲ್ಲಿ ಊಟವನ್ನೂ ಮಾಡಿದರು! ಅವರನ್ನೂ ತಂತಮ್ಮ ಮನೆಗಳಿಗೆ ಆಮಂತ್ರಿಸಿ ಊಟ ಮಾಡಿಸಿದರು. ಶೂದ್ರರ ಉದ್ಧಾರದ ಕಾರ್ಯದ ಪ್ರತ್ಯಕ್ಷಕ್ಕೆಂದೇ ಅವರು ಮಧುವಯ್ಯನೆಂಬ ಬ್ರಾಹ್ಮಣನ ಮಗಳನ್ನು ಹರಳಯ್ಯನೆಂಬ ಅಂತ್ಯಜನ ಮಗನಿಗೆ ಕೊಟ್ಟು ಮದುವೆ ಮಾಡಿದರು; ಅವರಿಗೆ ಮದುವೆಗಿಂತ ಮೊದಲೇ ಶಿವದೀಕ್ಷೆ ಕೊಡಿಸಿ ಸಾಂಸ್ಕೃತಿಕವಾಗಿ ಅವರು ಸಮಾನವೆಂದು ಘೋಷಿಸಿದರು. ಈ ಘಟನೆಯೇ ಅಂದಿನ 'ಕಲ್ಯಾಣಕ್ರಾಂತಿ' ಗೆ ಕಾರಣವೆನಿಸಿತು.

ರಾಜಕೀಯವಾಗಿ, ರಾಜ್ಯದ ಹಣವನ್ನು 'ದಲಿತೋದ್ಧಾರ'ಕ್ಕೆ ವಿನಿಯೋಗಿಸಿದ್ದುದರಿಂದ, ಅಂದು ಅಧಿಕಾರದಲ್ಲಿದ್ದವರೂ, ರಾಜನೂ, ಬಸವಣ್ಣನವರ ಮೇಲೆ ಕೋಪಗೊಂಡರು. ಶಿವದೀಕ್ಷೆ ಎಂಬುದು, ಬಸವಣ್ಣನವರಿಗೆ, ಹಿಂದುಳಿದವರನ್ನು ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಮೇಲಕ್ಕೆತ್ತುವ ಸಾಧನ-ವಾಗಿದ್ದಿತು. ಅದೇ, ಇಂದು 'ಧರ್ಮ'ವಾಗಿದೆಯೆಂದು ಹೇಳುತ್ತಾರೆ. ಈ ಶಿವ ಭಕ್ತಿಯೇ ಭಾರತದ ಹಲವಾರು ಜಾತಿಯ ಪ್ರಜೆಗಳನ್ನು ಒಂದೆಡೆಗೆ ಕಲೆ ಹಾಕುವ ಸಾಧನವಾಯಿತು. ಭಕ್ತಿ ಇಹಕ್ಕೂ ಪರಕ್ಕೂ ಸಲ್ಲುವಂತೆ ಮಾಡುವ ಸುವರ್ಣ ಮಾಧ್ಯಮವಾಯಿತು. ಭಕ್ತಿಯೆಂದರೆ ದೇವರನ್ನು ಮಾತ್ರ ಪ್ರೀತಿಸುವುದಲ್ಲ, ದೀಕ್ಷೆಕೊಟ್ಟ ಗುರುವನ್ನೂ, ಶಿವಾಚಾರಿಗಳಾದ ಶಿವಭಕ್ತರನ್ನೂ, ಸಮಾಜವನ್ನೂ, ತನ್ನ ವೃತ್ತಿಯನ್ನೂ ಗೌರವದಿಂದ ಕಾಣುವುದೇ ಆಗಿದೆ. ಪ್ರಪಂಚದಲ್ಲಿ ಈಶ್ವರನು ನಮಗೆ ಕೊಟ್ಟಿರುವ ವಸ್ತುಗಳನ್ನು ಎಲ್ಲರೂ ಹಂಚಿಕೊಂಡು ತಿನ್ನಬೇಕು; ಸಹಕಾರ, ಪ್ರೀತಿ ವಿಶ್ವಾಸಗಳಿಂದ ಬದುಕಬೇಕು ಎಂಬುದಕ್ಕೆ ಬಸವಣ್ಣನವರು ಹೇಳಿದ, "ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು? ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ? ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ ಕಾಗೆ ಕೋಳಿಯಿಂದ ಕರಕಷ್ಟ, ಕೂಡಲಸಂಗಮದೇವಾ"— ಎಂಬ ಮತ್ತು 'ಇವನಾರವ ಎಂದೆನಿಸದಿರಯ್ಯಾ; ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ" ಎಂಬ ವಚನಗಳೇ ಸಾಕ್ಷಿ[15] ದೇವರನ್ನು, ದೇವರ ಪ್ರಪಂಚವನ್ನು ಮೆಚ್ಚುವವನೂ, ಪ್ರತಿಯೊಂದೂ ಜೀವವನ್ನೂ ಪ್ರೀತಿಸಬೇಕು. ಪ್ರೀತಿಯೇ ಶರಣರಿಗೆ ಪ್ರಪಂಚದ ಅಡಿಗಲ್ಲು. ಶರಣರ ಅನೇಕ ಕಥೆಗಳಲ್ಲಿ "ಪ್ರೀತಿಯೇ ದೇವರು" ಎಂಬ ತತ್ವವೂ ಅಡಕವಾಗಿದೆ.[16]

---

15 ಅ. ಬಸವಣ್ಣನವರ ವಚನ ೪೩೭, ಮತ್ತು ೬೨.

16 ಹರಿಹರ ಕವಿಯ ಮಲುಹಣನ ಕಥೆ – ಪ್ರಭುದೇವರ ಕಥೆಗಳನ್ನು ಇದಕ್ಕೆ ಉದಾಹರಣೆಯಾಗಿ ನೋಡಬೇಕು.

ಕಲ್ಲು, ಮಣ್ಣು, ಕಾಷ್ಠ, ಲೋಹ; ಗಿಡ, ಮರ, ಜಲದಲ್ಲಿ ದೇವರನ್ನು, ದೇವತ್ವವನ್ನು ಕಾಣುವ ಜನರಿಗೆ, ಜೀವಿಗಳಲ್ಲಿ ಈಶ್ವರನನ್ನು ಕಾಣುವುದು ದುಸ್ತರವೇ ? ಅಲ್ಲಿ ಅದಕ್ಕಾಗಿಯೇ ಬಸವಣ್ಣನವರು ಒಂದು ವಚನದಲ್ಲಿ : ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು; ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ ! ಉಂಬ ಜಂಗಮ ಬಂದರೆ ನಡೆಯೆಂಬರು; ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ! ನಮ್ಮ ಕೂಡಲ ಸಂಗನ ಶರಣರ ಕಂಡು ಉದಾಶೀನವ ಮಾಡಿದರೆ ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ"–[17]. ಎಂದು ಹೇಳಿ, ಜನರ ಅಜ್ಞಾನವನ್ನು ಬಯಲಿಗೆಳೆದಿದ್ದಾರೆ. ಜಡವಸ್ತುಗಳಲ್ಲಿ ದೇವರನ್ನು ಕಾಣುವುದಕ್ಕಿಂದ ಜೀವವುಳ್ಳ–ಈಶ್ವರನುಳ್ಳ ವ್ಯಕ್ತಿಗಳಲ್ಲಿ ದೇವರನ್ನು ಕಾಣಬೇಕೆಂಬುದನ್ನು ಹೇಳುವ ಉದ್ದೇಶಕ್ಕಾಗಿಯೇ ಮೂರ್ತಿ ಪೂಜೆಯ ಸ್ಥಳದಲ್ಲಿ ವೀರಶೈವರು ಗುರು–ಜಂಗಮರನ್ನು ಪೂಜಿಸಲು ಹೇಳಿದ್ದಾರೆ. ಈ ಕಾರಣಕ್ಕಾಗಿ, ಸ್ಥಾವರಪೂಜೆಗೆ ಇದ್ದ ಬೆಲೆ ಶಿವಾನುಭಾವಿಗಳಿಗೆ ಸಂದಿತು. ಹಸಿದವರಿಗೆ ಅನ್ನನೀಡುವುದು ದೇವರಿಗೆ ಎಡೆಹಿಡಿಯುವುದಕ್ಕಿಂತಲೂ ಅಧಿಕ ಶ್ರೇಷ್ಠವೆಂದಿದ್ದಾರೆ. ಬಡ ಭಾರತಕ್ಕೆ ಇದಕ್ಕಿಂತ ಉತ್ತಮ ಬೋಧೆ ಇನ್ನಾವುದು ಬೇಕು ? ಈಶ್ವರನನ್ನು ಅಲ್ಲಿ ಇಲ್ಲಿ ಹುಡುಕುವುದಕ್ಕಿಂತ, ಜೀವಿಗಳಲ್ಲಿ ಈಶ್ವರನನ್ನು ಕಾಣುವುದೇ ಶ್ರೇಯಸ್ಕರ. ಹಸಿದ ಜೀವಿಗಳಿಗೆ ಅನ್ನವನ್ನು ನೀಡುವ ಧರ್ಮಕ್ಕಿಂತ ಬೇರೆ ಉತ್ತಮ ಧರ್ಮವುಂಟೇ ? ಬಸವಣ್ಣನವರ ಈ ವಚನ ಮೇಲುಕು ಹಾಕುವಂತಹದು; "ದಯವಿಲ್ಲದ ಧರ್ಮವದೇವುದಯ್ಯಾ ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ: ದಯವೇ ಧರ್ಮದ ಮೂಲವಯ್ಯಾ"[18] ಕರ್ನಾಟಕದ ಶ್ರೇಷ್ಠ ಪ್ರತಿನಿಧಿಯಂತಿರುವ ಸರ್ವಜ್ಞ ಕವಿಯ ಮಾತುಗಳು ಈ ದಿಶೆಯಲ್ಲಿ ಮನನೀಯವಾಗಿವೆ. "ಅನ್ನವನು ನೀಡುವುದು, ನನ್ನಿಯನು ನುಡಿಯುವುದು ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ"[19] ಈ ಮಾತುಗಳು ಎಲ್ಲ ಧರ್ಮಗಳಿಗೂ ಮಾರ್ಗದರ್ಶಿಗಳಾಗಿವೆ. ಹಸಿದ ಹೊಟ್ಟೆಗೆ ಅನ್ನವನ್ನಿಕ್ಕುವ ಧರ್ಮವೇ ಮಿಗಿಲು, ಅನ್ನವೇ ದೇವರು, 'ಪ್ರಸಾದವೇ ದೇವರು' ಎಂದು ಶಿವಶರಣರು ಈ ಕಾರಣಕ್ಕಾಗಿಯೇ ಹೇಳಿದ್ದಾರೆ; ಅಲ್ಲದೆ ಪ್ರಸಾದ ವಿತರಣ ವ್ಯವಸ್ಥೆಗೆಂದೇ 'ದಾಸೋಹ' ತತ್ವವು ವೀರಶೈವ ಧರ್ಮದಲ್ಲಿ ಕಡ್ಡಾಯವಾಗಿದೆ. ಸ್ವಪ್ರತಿಷ್ಠೆಗೆ, ಕೀರ್ತಿವಾರ್ತೆಗೆ ಕಟ್ಟಿಸಿದ ಎಷ್ಟೋ ಈಶ್ವರ ದೇವಾಲಯಗಳು ನಾಶವಾಗಿವೆ: ಜನರ ಹಣ ನಾಶವಾಗಿದೆ. ಇದಕ್ಕಿಂತ ಮಿಗಿಲಾಗಿ ಶರೀರವನ್ನೇ ಶಿವಾಲಯವನ್ನಾಗಿ ಪರಿವರ್ತಿಸಿದರೆ, ಶರೀರದಲ್ಲಿರುವ ಈಶ್ವರವನ್ನೇ ಪೂಜಿಸಿದರೆ ಮೇಲಲ್ಲವೇ?

---

17 ಬಸವಣ್ಣನವರ ವಚನ ೯೪

18 ಬಸವಣ್ಣನವರ ವಚನ ೨೪೭

19 ಸರ್ವಜ್ಞ ವಚನ ಸಂಗ್ರಹ, ವಚನ ೭೭೧. ಸಂಪಾದಕರು: ಎಂ. ಮರಿಯಪ್ಪ ಭಟ್ಟ (೧೯೭೧)

ಶರೀರವೇ ಈಶ್ವರನ ವಾಸಸ್ಥಾನ, ಎಂಬ ಭಾವನೆ ತಾಳುವುದರಿಂದ ಶರೀರದ ಬಗೆಗೆ ಗೌರವವೂ ಪಾವಿತ್ರ್ಯವೂ ಉಂಟಾಗುತ್ತವೆ. ಶರೀರವು ಶಿವನನೆಲೆಯುವಾಗಿರುವುದರಿಂದ ಅದನ್ನು ನಿರ್ಲಕ್ಷಿಸಬಾರದೆಂಬ ಭಾವನೆಯೂ ಬರುತ್ತದೆ. ಶಿವನ ಮಣಿಹವನ್ನು ಪೂರೈಸಲು ಬಂದ ಈ ಶರೀರವನ್ನು, ಈ ಕಾರಣದಿಂದ ಧಿಕ್ಕರಿಸುವುದು ಸರಿಯಲ್ಲ. ಈ ಕಾರಣದಿಂದಲೇ ಬಸವಣ್ಣನವರು : "ಎನ್ನ ದೇಹವೇ ದೇಗುಲ, ಎನ್ನ ಕಾಲೇ ಕಂಭ, ಎನ್ನಶಿರವೇ ಹೊನ್ನ ಕಳಶವಯ್ಯಾ"[20] ಎಂದಿರುವುದಲ್ಲದೆ, 'ಕಾಯವೇ ಕೈಲಾಸ;' 'ಇಲ್ಲಿಸಲ್ಲುವರು ಅಲ್ಲಿಯೂ ಸಲ್ಲುವರು;' 'ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ'; ಮರ್ತ್ಯಲೋಕ ವೆಂಬುದು ಕರ್ತಾರನ ಕಮ್ಮಟವಯ್ಯಾ '– ಎಂಬಂತಹ ಅನೇಕ ಮೌಲ್ಯಾತ್ಮಕ ನುಡಿಮುತ್ತುಗಳನ್ನು ಆಡಿದ್ದಾರೆ–ಬಸವಣ್ಣನವರು. ನಮ್ಮ ಶರೀರವು ನಮಗೆಷ್ಟು ಪವಿತ್ರವೋ ಇತರರ ಶರೀರಗಳೂ ಅಷ್ಟೇ ಪವಿತ್ರ ಎಂಬ ಭಾವನೆ ಇದರಿಂದ ಪ್ರಸಾರವಾಯಿತು. ಕಾಣಲಾರದ ಈಶ್ವರನ ಆರಾಧನೆಗಿಂತ, ಕಾಣುವ ಜೀವಿಗಳಲ್ಲಿ ಗೌರವ ತಾಳಬೇಕೆಂಬ ಭಾವನೆ ಉದಾತ್ತವಾದುದಲ್ಲವೆ ? "ಈಶ್ವರನನ್ನೊಲಿಸಲು ಬಂದ ಈ ಪ್ರಸಾದ ಕಾಯವ ಕೆಡಿಸಲಾಗದು" ಎಂದು ಈ ಕಾರಣಕ್ಕಾಗಿಯೇ ಹೇಳಿದ್ದಾರೆ.[21] ಶರೀರ ರಕ್ಷಣೆಗೆ ಕಾಯಕವೂ ಕಡ್ಡಾಯ; ಕಾಯಕದಂತೆ ದಾಸೋಹವೂ ಕಡ್ಡಾಯ; ಈ ಎರಡೂ ಮೌಲ್ಯಗಳಿಂದ ವ್ಯಕ್ತಿಗಳಲ್ಲಿ ದುಡಿಮೆಯ ಮಹತ್ವ, ಸಮಾಜದ ಸೇವಾಭಾವ (ಕಿಂಕರತ್ವ) ಮೂಡಿ, ವ್ಯಕ್ತಿ, ಸಮಾಜ ಹಾಗೂ ರಾಷ್ಟ್ರದ ಏಳಿಗೆಗೆ ಸಹಾಯವಾಗುತ್ತದ. ತಾನುಣ್ಣುವ ಅನ್ನವನ್ನು, ತಾನುಣ್ಣುವ ಪೂರ್ವದಲ್ಲಿ ಇತರರಿಗೂ ನೀಡಬೇಕೆಂಬ ಔದಾರ್ಯಭಾವ ಹೊರ ಹೊಮ್ಮುತ್ತದೆ. ಸತ್ಯಶುದ್ಧ ಕಾಯಕದಿಂದ ಬಂದ ಫಲದ ಒಂದು ಭಾಗ ಸಮಾಜಕ್ಕೆ, ದುರ್ಬಲರಿಗೆ ಸಲ್ಲುತ್ತದೆ. ತ್ಯಾಗ ಭಾವನೆ ಬೆಳೆಯುತ್ತದೆ. ನಮ್ಮ ದುಡಿಮೆಯ ಫಲ ಸಮಾಜಕ್ಕೆ ದೊರೆತಾಗ, ಇಲ್ಲದವರು ಮೇಲೆ ಬರಲು ಅವಕಾಶವಾಗುತ್ತದೆ. ಇದರಿಂದ ದೀನರ, ಬಡವರ ಉದ್ಧಾರಕ್ಕೆ ದಾರಿಯಾಗುತ್ತದೆ. ನಮ್ಮ ಭಾರತಕ್ಕೆ ಇಂದು ಈ ತತ್ವ ಅವಶ್ಯ. ಕಲ್ಲು, ಮಣ್ಣುಗಳಿಂದ, ಎಷ್ಟೋ ಹಣ ವೆಚ್ಚಮಾಡಿ ದೇವಾಲಯ ಕಟ್ಟಿಸುವುದಕ್ಕಿಂತ, ಅದೇ ಹಣವನ್ನು ಬಡವರ ಉದ್ಧಾರಕ್ಕೆ ವಿನಿಯೋಗಿಸಿ, ಜೀವಂತ ದೇವಾಲಯಗಳನ್ನು ನಿರ್ಮಿಸುವುದೇ ಮೇಲಾದುದೆಂಬುದನ್ನು ತಿಳಿಸುವುದಕ್ಕಾಗಿಯೇ 'ಬಸವಣ್ಣನವರು "ಉಳ್ಳವರು ಶಿವಾಲಯ ಶಿವಾಲಯ ಮಾಡುವರು, ನಾನೇನ ಮಾಡಲಿ ಬಡವನಯ್ಯಾ" ಎಂದು ಹಾಡಿದ್ದಾರೆ. ಕಾಯದೆಗಳ ಮೂಲಕ ಸಮಾನತೆ ತರುವುದರ ಬದಲು ಅಂದು ಬಸವಣ್ಣನವರು ಧಾರ್ಮಿಕ ಭಾವನೆಯ

---

20 ಬಸವಣ್ಣನವರ ವಚನ ೯೨೦.

21 ಬಸವಣ್ಣನವರ ವಚನ ೭೭೪

ಮೂಲಕ ಇದನ್ನು ತರಲು ಹೆಣಗಿದರು. ಜೈನ ಧರ್ಮವು ಪಾಲಿಸುವ, ಅಹಿಂಸೆ, ಶಾಖಾಹಾರ, ಪರನಾರೀಸಂಗತ್ಯಾಗ, ಅಪರಿಗ್ರಹ–ಇವೆಲ್ಲವೂ ವೀರಶೈವರಿಗೆ ಮಾನ್ಯವಾಗಿದ್ದು, ಅವರಲ್ಲಿಲ್ಲದ ದೈವಭಕ್ತಿ ಈ ಧರ್ಮದಲ್ಲಿದೆ. ವೀರಶೈವ ಧರ್ಮದ 'ಜಂಗಮ' ದ ಪರಿಕಲ್ಪನೆ, ಜೈನ ಯತಿಗಳು, ಬೌದ್ಧ ಭಿಕ್ಷುಗಳು ಮಾಡುತ್ತಿದ್ದ ಧಾರ್ಮಿಕ–ಸಾಮಾಜಿಕ ಸೇವೆಯಿಂದ ಪರಿಪುಷ್ಟಗೊಂಡುದು ಎನಿಸುತ್ತದೆ. ಆದುದರಿಂದ ವೀರಶೈವದಲ್ಲಿ ಜಂಗಮ ತತ್ವಕ್ಕೆ ವಿಶೇಷ ಪುರಸ್ಕಾರವಿದೆ.

ಸಾಹಿತ್ಯಿಕವಾಗಿ, ಶರಣರು ಮಾತೃಭಾಷಾಪ್ರೇಮಿಗಳು. ಜೈನರು ಪ್ರಾಕೃತ, ಬೌದ್ಧರು ಪಾಲೀ ಭಾಷೆಯಲ್ಲಿ ಧರ್ಮೋಪದೇಶ ಮಾಡಿದಂತೆ, ವೀರಶೈವರು ಆಯಾಯ ದೇಶಗಳಲ್ಲಿ ಮಾತೃಭಾಷೆಯಲ್ಲಿಯೇ ಧರ್ಮಗ್ರಂಥ ರಚಿಸಿದರು. ಕರ್ನಾಟಕದಲ್ಲಿ ಶರಣರು ಕನ್ನಡದಲ್ಲಿಯೇ ಅಧಿಕವಾಗಿ ಬರೆದರು; ಆದರೆ ಅವರು ದೇವವಾಣಿಯ ದ್ವೇಷಿಗಳಾಗಿರಲಿಲ್ಲ. "ಜನ ಬದುಕಬೇಕು" ಎಂಬುದೇ ವೀರಶೈವರ ಕಾವ್ಯಧೋರಣೆಯಾಗಿದೆ.[22] ಅಧಿಕಾರ, ಐಶ್ವರ್ಯ, ಪದವಿ, ಬಿರುದಗಳಿಗಾಗಿ, ರಾಜರನ್ನು ಆಶ್ರಯಿಸದೇ, ವೀರಶೈವ ಕವಿಗಳು, ಜನಹಿತಕ್ಕಾಗಿ ದುಡಿದು ಸತ್ತವರ, ಶಿವಾನುಭಾವಿಗಳ, ಕಥೆ, ಪುರಾಣ ಬರೆಯಬೇಕೆಂದೇ ಘೋಷಿಸಿದ್ದಾರೆ. ಸಿರಿವಂತನಾಗಿರಲಿ, ಬಡವನಾಗಿರಲಿ, ವ್ಯಕ್ತಿಯಲ್ಲಿ ಬದುಕಿನ ಲೇಸನ್ನು ಅರಸಬೇಕು ಎಂದು ಬೋಧಿಸಿದರು. ಲೇಸಾದ ಬದುಕು ಮಾಡುವವರು, ದೈವಭಕ್ತರ ಸೇವೆ ಮಾಡುವುದು, ಕನಿಷ್ಠರ, ಅಯೋಗ್ಯರ ಸೇವೆಗೈಯುವುದಕ್ಕಿಂತ ಶ್ರೇಯಸ್ಕರ ಎಂಬ ಧೋರಣೆ ಈ ಕವಿಗಳದು. ವೀರಶೈವ ಕವಿಗಳ ನಾಯಕನಂತಿದ್ದ ಹರೀಶ್ವರ ಕವಿಯ ಉಕ್ತಿಯಿದು:

"ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರಮೇಲೆಯುಕ್ತಾಟಾ
ತನತನಗಿಂದ್ರ–ಚಂದ್ರ–ರವಿ–ಕರ್ಣ–ದಧೀಚಿ–ಬಲೀಂದ್ರನೆಂದು ಮೇಣ್
ಅನವರತಂ ಪೊಗಳ್ದು ಕೆಡಬೇಡೆಲೆ ಮಾನವ, ನೀನಹರ್ನಿಶಂ
ನೆನೆ ಪೊಗಳ್ ಅರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯೊಳ್ದನಂ"[23]

"ದೂಷಕನವನೊಬ್ಬ ದೇಶವ ಕೊಟ್ಟರೆ, ಆಸೆಯ ಮಾಡಿ ಅವನ ಹೊರೆಯಲಿರಬೇಡ. ಮಾದರ ಶಿವಭಕ್ತನಾದರೆ, ಆತನ ಹೊರೆಯಲಿ ಭೃತ್ಯನಾಗಿರ್ಪುದು ಕರಲೇಸಯ್ಯಾ" ಎಂದು ಬಸವಣ್ಣನವರು,[24] "ಹಂಗಿನರಮನೆಯಿಂದ ವಿಂಗಡದ ಗುಡಿ ಲೇಸು"[25] ಎಂದು ಸರ್ವಜ್ಞ ಕವಿ ಆಡಿದಮಾತುಗಳು 'ವೀರಶೈವ ಧರ್ಮವು ಸ್ವಾತಂತ್ರ್ಯಪ್ರಿಯ ಎಂಬುದನ್ನು ಸೂಚಿಸುತ್ತವೆ.

22 ಹರಿಶ್ಚಂದ್ರ ಕಾವ್ಯಸಂಗ್ರಹ, ಪುಟ ೭೧೨: ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿ (೧೯೫೦).
23 ಪಂಪಾಶತಕ, ಪದ್ಯ ೮೭. ಸಂಪಾದಕರು : ಡಾ. ಬಿ. ಸಿ. ಜವಳಿ
24 ಬಸವಣ್ಣನವರ ವಚನ ೧೩೬,
25 ಸರ್ವಜ್ಞವಚನ ಸಂಗ್ರಹ, ವಚನ ೭೬೦.

ವೀರಶೈವಕವಿಗಳು, ಶಿವಭಕ್ತಿ, ಶಿವಧರ್ಮದ ಮಹಿಮೆಗಳ ಪ್ರಸಾರಕ್ಕೆ ಸಂಸ್ಕೃತದ ವೇದ, ಆಗಮ, ಪುರಾಣಗಳಿಂದಲೂ, ತಮಿಳು ನಾಡಿನ ಶಿವಭಕ್ತರ 'ತೇವಾರಂ'ಗಳಿಂದಲೂ ಪ್ರಭಾವಿತರಾಗುವುದಲ್ಲದೆ, ಜೈನ, ಬೌದ್ಧ ಧರ್ಮಗಳಿಗೂ ಋಣಿಯಾಗಿದ್ದಾರೆ. ಇದು, ವೀರಶೈವ ಧರ್ಮದ ಸಮನ್ವಯ ಮನೋಧರ್ಮವನ್ನು ಸೂಚಿಸುತ್ತದೆ. ಈ ಮನೋಧರ್ಮ, ಭಾರತದ ಭಾವೈಕ್ಯಕ್ಕೆ ಸಾಧನವಲ್ಲವೇ ? ವೀರಶೈವ ಕವಿಗಳು ತಮಿಳಿನಿಂದ, ತೆಲುಗಿನಿಂದ, ಸಂಸ್ಕೃತದಿಂದ ಅನೇಕ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಹರಿಹರಕವಿಯ ಶಿವಗಣದ ಚರಿತ್ರೆ, ಭೀಮಕವಿಯ ಬಸವಪುರಾಣ, ನಿಜಗುಣ ಶಿವಯೋಗಿಯ ವಿವೇಕ ಚಿಂತಾಮಣಿ– ಇವೆಲ್ಲ ಇದಕ್ಕೆ ಉದಾಹರಣೆಗಳು. ಹರಿಹರ ಕವಿಯಂತೂ ಭಾರತದ ಮೂಲೆ ಮೂಲೆಯಲ್ಲಿದ್ದ ಶಿವಭಕ್ತರ ಕಥೆಗಳನ್ನು ಕನ್ನಡದಲ್ಲಿ ಬರೆವುದರ ಮೂಲಕ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಶರಣರೆಲ್ಲ ವೀರಶೈವರಿಗೆ ಹಿರಿಯರು ಪೂಜ್ಯರು ಎಂಬ ಭಾವೈಕ್ಯದ ಭಾವನೆಯನ್ನೇ ಬೆಳಗಿದ್ದಾನೆ.

ತಮಿಳುನಾಡಿನ ಶಿವಭಕ್ತರ ಕಥೆ ಬರೆಯುವಾಗ, ವೀರಶೈವಕವಿಗಳು, ತಮಿಳ ನಾಡನ್ನು ಪುಣ್ಯಭೂಮಿಯೆಂದೂ, ಭಕ್ತಿಯ ಬೀಡೆಂದೂ, ಅಲ್ಲಿಯ ನದಿಗಳನ್ನು 'ಭಕ್ತಿರಸ ಪ್ರವಾಹ'ಗಳೆಂದೂ, ಅಲ್ಲಿಯ ಶಿವದೇವಾಲಯಗಳನ್ನು 'ಶಿವನ ವಾಸಸ್ಥಾನ'ಗಳೆಂದೂ ವರ್ಣಿಸಿದ್ದಾರೆ.[26] ಕಾಶ್ಮೀರ ದೇಶವನ್ನು ಅಲ್ಲಿಯ ನಿಸರ್ಗ ಸೌಂದರ್ಯಕ್ಕಲ್ಲದೆ ಆ ನಾಡನ್ನು "ಶಾರದಾದೇವಿ ಪ್ರಸನ್ನೆಯಾಗಿರುತಿರ್ಪ" ನಾಡೆಂದೂ,[27] ತೆಲುಗು ನಾಡನ್ನು, ಶ್ರೀಶೈಲಪರ್ವತವನ್ನು 'ಭಕ್ತಿಯ ಸದನ'ವೆಂದೂ, ಭೂಮಿಯ ಮೇಲಿನ ಅದ್ಭುತವೆಂದೂ ಬಣ್ಣಿಸಿ, ಓದುಗರ ಮನಸ್ಸಿನಲ್ಲಿ ಭಾರತ ಭೂಮಿಯ ಬಗೆಗೆ ಗೌರವ, ಆದರ ಹೆಚ್ಚುವಂತೆ ಮಾಡಿದ್ದಾರೆ.[28] ಭಾರತೀಯರು ಒಂದು ಎಂಬ ಭಾವನೆಯನ್ನು ತಂದಿದ್ದಾರೆ. 'ದಕ್ಷಿಣಕಾಶೀ'ಯೆಂದು ಹಂಪೆಯನ್ನು, ದಕ್ಷಿಣದ 'ಗಂಗೆ'ಯೆಂದು ತುಂಗಭದ್ರಾನದಿಯನ್ನು, ಬಣ್ಣಿಸುವುದರ ಮೂಲಕ, ಉತ್ತರ ಭಾರತದ ಗಂಗಾನದಿ, ವಿಶ್ವೇಶ್ವರ ದೇವಾಲಯಗಳ ಬಗೆಗೆ ನಮ್ಮ ಕವಿಗಳು ಭಕ್ತಿಭಾವವನ್ನೂ ಸೂಚಿಸಿದ್ದಾರೆ. ನಾವು ಅಲ್ಲಿಗೆ ಹೋಗಿ ಗಂಗಾನದಿಯಲ್ಲಿ ಸ್ನಾನಮಾಡದಿದ್ದರೂ, ವಿಶ್ವೇಶ್ವರ ದೇವರ ಸಾಕ್ಷಾತ್ಕಾರ ಮಾಡಿ

---

26 "ಲೋಕಪಾವನವೆನಿಪ ಪರಿವ ಕಾವೇರಿಯಿಂ" ತಿರುನೀಲಕಂಠರ ರಗಳೆ "ಕಾಪಾಲಿ ಸಂಶತಂ ನೆಲಸಿರ್ಪನದರೊಳಗೆ" (ಪೊನ್ನಾಂಬಡಲ್ಲಿ) ತಿರುನೀಲಕಂಠರ ರಗಳೆ; "ಐದು ರಗಳೆಗಳು" –ಸಂಪಾದಕರು. ಡಾ. ಬಿ. ವಿ. ಮಲ್ಲಾಪುರ, ಡಾ. ಜಿ. ಎಸ್. ಕಾಪಸೆ (೧೯೮೧)

27 ಹರಿಹರ ಕವಿಯ ಮಲುಹಣನ ರಗಳೆ.

28 ಬಸವಪುರಾಣ, ಸಂಧಿ ೧೯

ಕೊಳ್ಳದಿದ್ದರೂ, ನಮ್ಮ ಮನಸ್ಸು, ಅರಿಯದಯೇ, ಮೌನದಿಂದ ಅದಕ್ಕೆ ಮಣಿಯುತ್ತದೆ. ರಾಘವಾಂಕನ ಹರಿಶ್ಚಂದ್ರ, ತನ್ನ ಭಕ್ತಿಯ ಜೀವನದಿಂದ, ಶಿವನ ಸಾಕ್ಷಾತ್ಕಾರ ಪಡೆದುದು ಈ ಕಾಶಿಯಲ್ಲಿಯೇ. ಹರೀಶ್ವರ ಕವಿಯ ಗಿರಿಜಾದೇವಿ ತಪಸ್ಸು ಮಾಡಿದ್ದು, ಪಂಪಾಕ್ಷೇತ್ರದಲ್ಲಿಯೇ.

ನೈತಿಕವಾಗಿ, ವೀರಶೈವಧರ್ಮವು ಅತ್ಯುನ್ನತ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಆ ಮೌಲ್ಯಗಳೆಲ್ಲವೂ ರಾಷ್ಟ್ರೀಯ ಭಾವೈಕ್ಯಕ್ಕೆ ಮುಖ್ಯಸಾಧನಗಳಾಗಿವೆ. "ಪರಸ್ತ್ರೀ, ಪರಧನಗಳನ್ನು ಜೂಜು" (–ಅತಿ ಅಪಾಯಕಾರಿ) ಎಂದು ಅವುಗಳನ್ನು ನಿರಾಕರಿಸುವುದು, ಕಳವು, ಕೊಲೆ–ಇವು ಜನ್ಮ ಜನ್ಮಾಂತರಗಳಲ್ಲೂ ನರಕಕ್ಕೆ ಒಯ್ಯುತ್ತವೆ ಎಂದು ಆ ನೀಚಕೃತ್ಯಗಳಗೆಳಸದಿರುವುದು, ಪ್ರಾಣಿವಧೆ ಹಿಂಸೆಯಾಗುತ್ತದೆಯೆಂದು ಮಾಂಸಭಕ್ಷಣೆ ಮಾಡದಿರುವುದು, ಹುಸಿ ನುಡಿಯುವುದು, ನಿಂದೆಯೂ, ದೈವವಿರೋಧಿಯೆಂದು ತಿಳಿಯುವುದು, ತನ್ನ ಎದುರಾಳಿಯನ್ನು ಹಳಿಯದೆ, ಯಾರಾದರೂ ತನ್ನನ್ನು ಕಾಣದ ತಾವಿನಲ್ಲಿ ಜರಿದರೆಂದರೆ ಕೇಳಿ ಸಂತೋಷಪಡುವುದು, (ಇನ್ನೊಬ್ಬರನ್ನು ಹಳಿಯುವುದರಿಂದ ಹಳಿದವರ ಮನಸ್ಸಿಗೆ ಸಂತೋಷವಾಗುತ್ತದೆಯೆಂಬ ಭಾವ), ಆತ್ಮಪ್ರಶಂಸೆ–ಹೊಗಳಿಕೆಗಳು, ವ್ಯಕ್ತಿತ್ವ ವಿಕಸನಕ್ಕೆ ಆತಂಕಕಾರಿಗಳೆಂದು ಅವನ್ನು ಅಪೇಕ್ಷಿಸದಿರುವುದು, ವಂಚನೆ, ಮೋಸ, ಡಂಭಾಚಾರಗಳು ಆತ್ಮವಂಚನೆ ಎಂದು ಅವುಗಳತ್ತ ಮನಸ್ಸು ಹಾಕದಿರುವುದು– ಇವೇ ಮೊದಲಾದ ಮೌಲ್ಯಗಳನ್ನು ಸಾಧಿಸಿದರೆ, ವ್ಯಕ್ತಿಯ ಅಂತರಂಗಶುದ್ಧಿ ಬಹಿರಂಗಶುದ್ಧಿ ಸಾಧಿತವಾಗಿ, ಈಶ್ವರನ ಅನುಗ್ರಹವು ಪ್ರಾಪ್ತವಾಗಿ, ಸಾಮಾಜಿಕ ನೆಮ್ಮದಿಯೂ ಉಳಿಯುತ್ತದೆಯೆಂಬುದನ್ನು ಶರಣರು ಪ್ರತಿಪಾದಿಸಿದ್ದಾರೆ.

ವೀರಶೈವಧರ್ಮವು ಲೌಕಿಕಸಿದ್ಧಿಯ ಮೂಲಕ ಪಾರಲೌಕಿಕಸಿದ್ಧಿಯನ್ನು ಸಾಧಿಸಬೇಕೆಂದು ಪ್ರತಿಪಾದಿಸುತ್ತದೆ. ಇಹಲೋಕದ ಬದುಕಿನ ಮೌಲ್ಯಗಳಿಗೂ ಆಧ್ಯಾತ್ಮಿಕ ಮೌಲ್ಯಗಳೇ ತಳಹದಿಯಾಗಿವೆ. ಆದುದರಿಂದ ಶಿವಶರಣರು ಬದುಕಿನ ಆಳಕ್ಕೆ ಇಳಿದುನೋಡಿ, ಬದುಕಿನಲ್ಲಿ ನಮ್ಮೊಂದಿಗೆ ಬರುವುದು ನಮ್ಮ ಆಸ್ತಿಯಲ್ಲ, ತನುವಲ್ಲ, ವನಿತಾದಿಗಳಲ್ಲ, ನಾವು ಮಾಡಿದ ಪಾಪಪುಣ್ಯಗಳ ಪರಿಣಾಮ ಮಾತ್ರ.[26] ಇದು ಜನ್ಮ ಜನ್ಮಾಂತರಕ್ಕೂ ಬೆನ್ನಟ್ಟಿ ಬರುತ್ತದೆ; ಆದುದರಿಂದ, ಆಸೆ, ಆಮಿಷ, ಹೊನ್ನು, ಹೆಣ್ಣು, ಮಣ್ಣುಗಳಿಗೆ ಸಾಯದೆ, ಈಶ್ವರನ ಪ್ರಪಂಚವನ್ನು ಭೂಲೋಕದಲ್ಲಿ ಸ್ಥಾಪಿಸಲು ಪ್ರಯತ್ನಿಸಬೇಕೆಂದು ಶರಣರು ಸಾರಿದ್ದಾರೆ. ಭಕ್ತಿಯೇ ಇದಕ್ಕೆ ಸಾಧನೆ. ಅದುವೇ ಜೀವನದ ಪರಮಧ್ಯೇಯ; ಚಿಂತಾಮಣಿ,

---

26 "ಹೆಂಡತಿ ಬಾರಳು: ಅರ್ಥವದು ಬಾರದು: ಪುತ್ರರೆ ಬಾರರು: ಇಷ್ಟರುಂ, ಕಂಡ ಸಬೀಜನಂ, ಜನನಿಯುಂ. ಪಿತನುಂ ನೆರೆ ಬಾರರು: ಅಕ್ಕಟಾ ತಂಡದ ಪಾಪ ಪುಣ್ಯವಿವೆ ಬರ್ಪುವು" – ಪಂಪಾಶತಕ, ಪದ್ಯ ೭೩

ಕಾಮಧೇನು, ಪರುಷ, ಭಕ್ತಿಯ ಫಲ ಪಡೆಯಬೇಕಾದರೆ, ಗುರುಲಿಂಗಜಂಗಮದ ಸೇವೆಮಾಡಿ, ದೇವರ ಚಿಂತನ, ಆರಾಧನ, ನೆನಹುಗಳಿಂದ ಆಸೆಗಳನ್ನು ಗೆಲಿದು, ತನುವನ್ನು ಈಶ್ವರನ ಸೇವೆಗೆ ಸಲ್ಲಿಸಿ, ಈಶ್ವರನಲ್ಲಿ ಬೆರೆತು ಒಂದಾಗಬೇಕೆಂದು ವೀರಶೈವಧರ್ಮವು ಬೋಧಿಸುತ್ತವೆ. ಬಸವಣ್ಣನವರು ಬೋಧಿಸಿದ, ಶಾಂತಿ, ಕರುಣೆ, ಜೀವಿಗಳಲ್ಲಿ ದಯೆ, ಅರಿಷಡ್ವರ್ಗ ನಿರ್ಮೂಲನೆ–ಇವೇ ಮೊದಲಾದ ಆಧ್ಯಾತ್ಮಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಈ ಮೌಲ್ಯಗಳೇ ಭಾರತೀಯರ ಭಾವೈಕ್ಯಕ್ಕೆ ಮಾರ್ಗದರ್ಶಿ. ಬಸವಣ್ಣನವರ ಈ ಕೆಳಗಿನ ವಚನಗಳು ಭಾರತೀಯರ ಭಾವೈಕ್ಯಕ್ಕೆ ಯೋಗ್ಯವೆಂದು ಅವನ್ನಿಲ್ಲಿ ಉದಾಹರಿಸಲಾಗಿದೆ.

೧ ದಯವಿಲ್ಲದ ಧರ್ಮವದೇವುದಯ್ಯಾ ?
ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿಯೂ;
ದಯವೇ ಧರ್ಮದ ಮೂಲವಯ್ಯಾ;
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ.

೨ ಕೊಲ್ಲುವನೇ ಮಾದಿಗ; ಹೊಲಸ ತಿಂಬವನೇ ಹೊಲೆಯ !
ಕುಲವೇನೋ ಅವಂದಿರ ಕುಲವೇನೋ ?
ಸಕಲಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು.

ಇಂದು ಭಾರತಕ್ಕೆ ಬೇಕಾಗಿರುವುದು ಶಾಂತಿ ಮತ್ತು ಸಹಜೀವನ. ಭಾರತಕ್ಕೆ ಮಾತ್ರವಲ್ಲ, ವಿಶ್ವಕ್ಕೇ ಬೇಕಾಗಿರುವ ಮೌಲ್ಯಗಳಿವು. ಕನ್ನಡದ–ವೀರಶೈವರ ಪ್ರಸಿದ್ಧ ಕವಿ ಚಾಮರಸನು ತನ್ನ ಪ್ರಭುಲಿಂಗಲೀಲೆಯಲ್ಲಿ, ಪ್ರಭುದೇವನ ಬದುಕು ಶಾಂತಿ,ಪ್ರೇಮ, ಸತ್ಯಗಳನ್ನು ಪ್ರತಿಪಾದಿಸಿದ ಬದುಕೆಂದು ಹೇಳಿದ್ದಾನೆ. ಆ ಕಾವ್ಯದ ಆರಂಭದಲ್ಲಿ,

"ಕಾಳಗದ ಕಥೆಯಲ್ಲ, ವಿಷಯಗಳೇಳಿಗೆಯ ವಿಧಿಯಲ್ಲ,
ಸತ್ತವರ ಕಥೆಯಲ್ಲ; ಹೊತ್ತು ಹೋಗದೆ ಪುಂಡರಾಲಿಪ
ಮತ್ತಮಾತಿಗಳ ಗೋಷ್ಠಿಯಲ್ಲ; ಸತ್ಯಶರಣರು ತಿಳಿವುದು
ಈ ಪ್ರಭುಲಿಂಗಲೀಲೆಯಲಿ"–ಎಂದು ಸಾರಿದ್ದಾನೆ.

ವೀರಶೈವರ ಇನ್ನೊಂದು ಪ್ರಸಿದ್ಧಕೃತಿ, 'ಶೂನ್ಯಸಂಪಾದನೆ', ಶರಣರ ಸತ್ಯದ ಬಾಳು, ಶಾಂತಿಸಮಾಧಾನಗಳ ಬಾಳಿನ ಚಿತ್ರಗಳನ್ನೇ ಚಿತ್ರಿಸುತ್ತದೆ. ಈ ಶಾಂತಿ–ಸಮಾಧಾನಗಳೇ ಇಂದಿನ ಜಗತ್ತಿಗೆ ದಾರಿದೀಪವಾಗಬಲ್ಲುವು. ಇದೇ ವೀರಶೈವ ಸಾಹಿತ್ಯ ಹಾಗೂ ಧರ್ಮಗಳ ಹೃದಯವಾಗಿದೆ, ಇವೇ ಇಂದಿನ ಭಾರತಕ್ಕೆ ಬೇಕಾದ ಆದರ್ಶವಾಗಿದೆ.

ರಾಷ್ಟ್ರೀಯ ಭಾವೈಕ್ಯತೆ ಮತ್ತು ಸಿಖ್‌ಧರ್ಮ

— ಒಂದು ಟಿಪ್ಪಣಿ

● ಎಚ್. ಆರ್. ರಘುನಾಥ ಭಟ್

'ಸಿಖ್ ಧರ್ಮ' ಮೂಲತಃ ಇಸ್ಲಾಂ ಮತ್ತು ಹಿಂದೂ ಮತಗಳ ಪರಸ್ಪರ ಸಂಪರ್ಕದಿಂದ ಉದಯಿಸಿದ್ದು. ಭಾರತೀಯ ಮತಗಳಲ್ಲಿಲ್ಲ ವೈಶಿಷ್ಟ್ಯ ಪೂರ್ಣವಾಗಿದೆ. ಇದರ ಸ್ಥಾಪಕರು ಗುರುನಾನಕ (೧೪೬೯–೧೫೩೯). ಇವರು ಜೀವನದರ್ಶನ ಹಾಗೂ ಜ್ಞಾನದಿಂದ ವಿಶೇಷವಾಗಿ ಪ್ರಭಾವಿತರಾದವರು. ಪ್ರಾಮಾಣಿಕವಾದ ಅನುಭವ ಹಾಗೂ ಹೃದಯಾಂತರಾಳದ ಸದ್ಭಾವನೆಯಿಂದ ಮೂಡಿಬಂದ ಈ ಮತ ಜನಜೀವನದ ಅವಿಭಾಜ್ಯ ಅಂಗವಾಗಿ ಬೆಳೆದು ಬಂತು. ಇವರ ಉದಯ ಕಾಲದಲ್ಲಿ (೧೫ ನೆಯ ಶತಮಾನ) ಭಾರತದ ಪರಿಸರದಲ್ಲಿ ಹಲವು ಸಮಾಜೋ–ಧಾರ್ಮಿಕ ಏರುಪೇರುಗಳಿದ್ದುವು. ಪರಸ್ಪರ ಭಾಂದವ್ಯದಿಂದ ಬಾಳುವೆ ಸಾಗಿಸಬೇಕೆಂಬ ಜನ ಸಮುದಾಯದ ಹಂಬಲ ಒಂದೆಡೆ, ಹೆಜ್ಜೆ ಹೆಜ್ಜೆಗೂ ಅಡ್ಡಿ ಆತಂಕಗಳು ಇನ್ನೊಂದೆಡೆ ಎದ್ದು ಕಾಣುತ್ತಿದ್ದುವು. ಇಷ್ಟಾಗಿಯೂ ಹಿಂದೂ–ಮುಸ್ಲಿಂಮರು ನೂರಾರು ವರ್ಷಗಳಿಂದಲೂ ಕೂಡಿ ಬಾಳಿದ್ದುಂಟು. ಇವರಲ್ಲಿ ಭಾವೈಕ್ಯ ಸಾಧಿಸುವ ಉದ್ದೇಶ ಸಿಖ್ ಮತದಲ್ಲಿ ಅಂತರ್ಗತವಾಗಿ ಬಂದಿರುವುದು. ಅಷ್ಟೇ ಅಲ್ಲ ಧರ್ಮಸಮನ್ವಯದ ಆವಿಷ್ಕಾರ ಇಲ್ಲಿ ಸ್ಪಷ್ಟವಾಗಿದೆಯೆಂದು ಹೇಳಲು ಸಿಖ್‌ಮತಗ್ರಂಥವಾದ 'ಗ್ರಂಥ ಸಾಹೇಬ್' ಸಾಕ್ಷಿ. ಇದರಲ್ಲಿ ಹಿಂದೂ ಮುಸ್ಲಿಂ ಮತೀಯ ವಿಚಾರಗಳು ಹಾಸು ಹೊಕ್ಕಾಗಿರುವುದರಿಂದ ದೇಶದಲ್ಲಿ ಭಾವೈಕ್ಯತೆಯನ್ನು ಬಿಂಬಿಸುವ ಶಕ್ತಿ ಇದಕ್ಕಿದೆ.

ಗುರುನಾನಕರ ದೃಷ್ಟಿಯಲ್ಲಿ ಏಕಜಗತ್ತು, ಏಕಕುಲಗಳಿಗೆ ಹೆಚ್ಚಿನ ಮಹತ್ವವಿದೆ. ಅವರು ಯಾವುದೇ ರೀತಿಯ ತಾರ ತಮ್ಯಗಳನ್ನೂ, ಧರ್ಮಭೇದಗಳನ್ನೂ ಒಪ್ಪುವುದಿಲ್ಲ. ಮನುಕುಲವು ಒಂದೇ ಎಂದು ನಂಬಿದವರು. ನಾನಕರ ನಂತರ ಬಂದ ಸಿಖ್ ಗುರುಪರಂಪರೆಯಲ್ಲಿ ಕೂಡ ಇದನ್ನೇ ಎತ್ತಿ ಹಿಡಿಯಲಾಗಿದೆ.

ಸಿಖ್ಖರ ಆದಿಗ್ರಂಥವಾದ "ಗ್ರಂಥಸಾಹೆಬ್" (ಇದನ್ನು ಗುರುಮುಖಿಯಲ್ಲಿ ಬರೆದಿದ್ದು, ಇದರಲ್ಲಿ ೫, ೫೭೫ ಶ್ಲೋಕಗಳೂ, ೩೩೮೪ ಮಂತ್ರಗಳೂ ಇವೆ), ಹಲವು ಗ್ರಂಥಗಳಿಂದ, ಹಲವು ಸ್ತರಗಳಿಂದ ಬಂದ ಸಂತರವಾಣಿಗಳಿಂದ ಪ್ರಭಾವಗೊಂಡಿದೆ. ಈ ಗ್ರಂಥದ ಪ್ರಕಾರ ಮನುಷ್ಯನನ್ನು ಅವನ ಕುಲದಿಂದಲ್ಲ, ಅವನ ಚಾರಿತ್ರ್ಯದಿಂದ ಗೌರವಿಸಬೇಕು.

ಸಿಖ್‌ನಂಬಿಕೆಯಂತೆ 'ಧರ್ಮವು ಗುಡಿ-ಗೋರಿಗಳಲ್ಲಿಲ್ಲ; ಮಾನವ ಸಮಾನತೆಯಲ್ಲಿದೆ; ಅಸತ್ಯದ ನಾಶದಲ್ಲಿದೆ, ಪ್ರೇಮದಲ್ಲಿದೆ'

'ದೇವರು ನಮ್ಮೆಲ್ಲರ ತಂದೆ, ನಾವೆಲ್ಲ ಆತನ ಮಕ್ಕಳು. ಪರಸ್ಪರ ಸಹೋದರರು'. ಹೀಗೆ ಸಕಲ ಮನುಕುಲ ಹುಟ್ಟಿಸಿದ ದೇವನೊಬ್ಬನೇ ಇರುವಾಗ ಆತ ಮನುಷ್ಯ-ಮನುಷ್ಯರಲ್ಲಿ ತಾರತಮ್ಯಗಳನ್ನು, ಭೇದಗಳನ್ನು ಎಂದಿಗೂ ನಿರ್ಮಿಸಿಲ್ಲ. ಈ ಬಗೆಯ ವಿಶಾಲ ತತ್ವದ ಆಧಾರದ ಮೇಲೆ ನಿರ್ಮಿತವಾದ ಸಿಖ್‌ಧರ್ಮ ಭಾರತೀಯರ ಭಾವೈಕ್ಯದ ಬಾಳಿಗೆ ಬೆಳಕಾಗಿದೆ; ಇನ್ನೂ ಪ್ರಕಾಶಮಾನವಾದ ಬೆಳಕಾಗಬೇಕಾಗಿದೆ. ಹಿಂದೂ ಧರ್ಮದ ಸೋದರನಂತೆ ಬಾಳಿದ ಈ ಧರ್ಮವು ಆ ಮತದ ಕೆಲ ಅನಪೇಕ್ಷಣೀಯ ದೋಷಗಳನ್ನು ನಿವಾರಿಸಿಕೊಂಡು, ಒಳ್ಳೆಯ ವಿಚಾರಗಳನ್ನೆಲ್ಲ ಮುಕ್ತ ಮನಸ್ಸಿನಿಂದ ಸ್ವೀಕರಿಸಿದೆ. ಸಮಾಜದ ವಿವಿಧ ಸ್ತರಗಳಲ್ಲಿ ಭಾವೈಕ್ಯತೆಯನ್ನು ಸಾಧಿಸಿಕೊಳ್ಳುವುದು ಸಿಖ್ ಮತದ ಮುಖ್ಯ ಆಶಯ. ಇದನ್ನು ಆಗುಮಾಡಿಕೊಳ್ಳುವಲ್ಲಿ ಗುರುನಾನಕರನ್ನು ಮೊದಲುಗೊಂಡು ಹಲವರು ಯಶಸ್ವೀ ಕಾರ್ಯಮಾಡಿದ್ದುಂಟು. ಅವುಗಳಲ್ಲಿ ಕೆಲವನ್ನು ಇಲ್ಲಿ ಉದಹರಿಸಬಹುದು.

ಜಾತಿ, ಮತ, ವರ್ಣ, ದೇಶ, ಲಿಂಗ, ಅಂತಸ್ತು ಭೇದಗಳಿಗೆ ಇಂಬು ಕೊಡದೆ ಸಾರ್ವಜನಿಕವಾಗಿ, ಸಾರ್ವತ್ರಿಕವಾಗಿ ಊಟ, ವಸತಿ, ಸೌಲಭ್ಯಗಳನ್ನು ಸಿಖ್‌ಧಾರ್ಮಿಕಕೇಂದ್ರಗಳಲ್ಲಿ ವ್ಯವಸ್ಥೆಗೊಳಿಸಿದ್ದುಂಟು.

ಸಿಖ್‌ಧರ್ಮದ ಪವಿತ್ರತಾಣವಾದ ಅಮೃತಸರ ಮಂದಿರಕ್ಕೆ ನಾಲ್ಕು ದ್ವಾರಗಳಿದ್ದು ಸಾಂಕೇತಿಕವಾಗಿ ಇದು ಎಲ್ಲರಿಗಾಗಿ ತೆರೆದ ಮುಕ್ತ ದ್ವಾರದ ಸೂಚಿಯೆಂಬುದನ್ನು ಪ್ರತ್ಯೇಕವಾಗಿ ಎತ್ತಿ ಹೇಳಬೇಕಿಲ್ಲ.

ಸಿಖ್ ಪವಿತ್ರಗ್ರಂಥಗಳಲ್ಲಿ ಸೂಚಿತವಾಗಿರುವಂತೆ (ಬಹುಶಃ ಕರ್ನಾಟಕದ ವೀರಶೈವ ಮತದಲ್ಲಿ ಕಾಣುವಂತೆ) ನೇಕಾರ ಕಬೀರ, ಚಮಗಾರ ರವಿದಾಸರೇ ಮುಂತಾದ ಇತರ ಸಂತರ ವಾಣಿಗಳೂ ಅಂತರ್ಗತವಾಗಿರುವುದು ಭಾವೈಕ್ಯವನ್ನು ಸಾಧಿಸುವ ಪ್ರಯತ್ನಕ್ಕೊಂದು ಉತ್ತಮ ನಿದರ್ಶನವೆನ್ನಬಹುದು.

ಅಂತರಮತೀಯ ಅರಿವು ಮತ್ತು ಸಹನೆ, ಭಾವೈಕ್ಯತೆಯನ್ನು ಸಾಧಿಸುವಲ್ಲಿ ಒಂದು ಪ್ರಮುಖವಾದ ಹೆಜ್ಜೆಯೆಂದು ಸಿಖ್‌ಮತೀಯರು ನಂಬುತ್ತಾರೆ. ಜಾತ್ಯಾಧಾರಿತ ಬಹುಜಾತೀಯ ವ್ಯವಸ್ಥೆ ಮನುಕುಲದ ಐಕ್ಯತೆಗೇ ಚ್ಯುತಿತರುವಂಥದ್ದು; ಆದ್ದರಿಂದ ಈ ಬಗೆಯ ಜಾತಿ ಮತ್ತು ಜನ್ಮಾಧಾರಿತ ಸೂತ್ರಗಳನ್ನು ಕಿತ್ತೊಗೆದು ಸಮುದಾಯದಲ್ಲಿ ಸಾಮಾಜಿಕ ಐಕ್ಯತೆ ಸಾಧಿಸಲು ಪ್ರಯತ್ನಿಸಬೇಕು. ಈ ದಿಶೆಯಲ್ಲಿ ಗುರುನಾನಕರೇ ಸ್ವತಃ ವಿವಿಧ ಮತಾಚಾರ್ಯರನ್ನು ಸಂಧಿಸಿ, ಸಮಾ

ಲೋಚಿಸಿ ಪರಸ್ಪರ ಅರಿವು ಮೂಡುವಂತೆ ಪ್ರಯತ್ನಿಸಿದರು. ಬಹುಮತೀಯ ಭಾರತೀಯ ಸಮಾಜದಲ್ಲಿ ಈ ರೀತಿಯಾಗಿ ಆಗಾಗ ನಡೆಸುವ ಸಮಾಲೋಚನೆ ಹಾಗೂ ಮುಕ್ತ ಚರ್ಚೆಗಳು "ಸೇಫ್ಟಿವಾಲ್ವ್" ಇದ್ದಂತೆ!

ಸಿಖ್‌ಧರ್ಮ ಪ್ರವರ್ತಕರು ನಂಬಿದಂತೆ (ವಿವಿಧ ಮತಗಳ ಶ್ರೇಷ್ಠತೆಯನ್ನು ಕುರಿತಂತೆ) ತರತಮ ಭಾವ ಪ್ರಚೋದನೆಗಿಂತ ಸಹಬಾಳ್ವೆಮಾಡುತ್ತಿರುವ ಇತರ ಧಾರ್ಮಿಕರ ಧೋರಣೆಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಐಕ್ಯತೆಯದೃಷ್ಟಿಯಿಂದ ಹೆಚ್ಚು ಹಿತಕಾರಿ. 'ರಾಗ ಸುಹಿ'ಯಲ್ಲಿ ಗುರುನಾನಕರು ಸ್ಪಷ್ಟಪಡಿಸಿದಂತೆ ಇತರ ಮತಗಳಲ್ಲಿರುವ ದೋಷಗಳನ್ನು ಗೌಣವಾಗಿಸಿ, ಉತ್ತಮಾಂಶಗಳನ್ನಷ್ಟೇ ಹಂಚಿಕೊಂಡು ಬಾಳಲು ಕಲಿಯಬೇಕು. ಹೀಗೆ ಪರಮತಗಳ ಬಗೆಗೆ ಗೌರವಯುತ ಭಾವನೆ ಬೆಳೆಸಿಕೊಳ್ಳುವ ಪ್ರವೃತ್ತಿ ಭಾವೈಕ್ಯ ತತ್ವಕ್ಕೆ ಸಹಾಯಕಾರಿಯಾಗಿದೆ.

ರಾಷ್ಟ್ರೀಯ ಭಾವೈಕ್ಯತೆಯೆಂದರೆ 'ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿ' ಎಂದು ಹಲವರ ನಂಬಿಕೆಯಾಗಿದೆ. ಆದರೆ ಸಿಖ್ಖರು ನಂಬಿರುವುದು ವಿವಿಧತೆಯಲ್ಲಿ 'ಏಕತೆಯ ತತ್ವ' ವನ್ನು. ಅವರು ಮಾತೃಭೂಮಿಯನ್ನು ತುಂಬ ಪ್ರೀತಿಸುತ್ತಾರೆ; ಪಂಜಾಬ್ ಎಂದರೆ ಅವರಿಗೆ ಪಂಚಪ್ರಾಣ! ಪಂಜಾಬಿ ಬಗೆಗೆ ಅವರ ಭಾವನಾತ್ಮಕ ಸಂಬಧ ಗಾಢವಾದದ್ದು. ತಮ್ಮ ಮತಕ್ಕಾಗಿ, ಮಾತೃಭೂಮಿಗಾಗಿ; ಮಾತೃಭಾಷೆಗಾಗಿ ಎಂಥ ತ್ಯಾಗಕ್ಕೂ ಸಿದ್ಧ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ಮಾಡಿದ್ದ ತ್ಯಾಗ ಜಗತ್ತಿಗೆ ಗೊತ್ತಿದೆ. ಇಷ್ಟಾಗಿಯೂ ವಿಶಾಲಾರ್ಥದ ಭಾವೈಕ್ಯತೆಗೆ 'ರಾಷ್ಟ್ರೀಯ' ಎಂಬ ಸೀಮಿತ ವಿಶೇಷಣವನ್ನು ಜೋಡಿಸುವಲ್ಲಿ ಅಷ್ಟೊಂದು ಉತ್ಸಾಹವನ್ನು ಅವರು ತೋರಿಸಲಾರರು. ಮೇಲಾಗಿ ಜಾಗತಿಕ ಮಟ್ಟದಲ್ಲಿ, ರಾಜಕೀಯವಾಗಿ ರಾಷ್ಟ್ರೀಯತೆಯ ಒಂದು ಪರಿಕಲ್ಪನೆ ಬೆಳೆದು ಬಂದದ್ದೆ ಈಚಿನ ದಶಕಗಳಲ್ಲಿ ಎಂಬುದನ್ನು ಇಲ್ಲಿ ಮರೆಯಬಾರದು. ಅದೇನಿದ್ದರೂ ನಮ್ಮ ರಾಷ್ಟ್ರೀಯ ಜೀವನದಲ್ಲಿ ಮನುಷ್ಯನನ್ನು ಪೀಡಿಸುವ ಅಸುರೀ ಶಕ್ತಿಗಳು, ಕೃತ್ಯಗಳು ಅಂದಿನಷ್ಟೇ ಇಂದಿಗೂ ಜೀವಂತವಿರುವಾಗ ಚಿಂತನಶೀಲನಾದವ ಈ ನಗ್ನಸತ್ಯದ ಮರ್ಮ–ಸಂಭೇದನಕ್ಕೆ, ಆ ಮೂಲಕ ಸರ್ವಸಮ್ಮತ ಪರಿಹಾರ ಹುಡುಕುವಲ್ಲಿ ಬದ್ಧನಾಗಬೇಕಾಗುವುದು. ಇಲ್ಲವಾದರೆ ರಾಷ್ಟ್ರೀಯ ಭಾವೈಕ್ಯತೆ ಎಂಬುದೊಂದು ಕನಸಾಗಿ ಉಳಿದೀತು!

ಮಾನವ ಕಲ್ಯಾಣದ ಕಮನೀಯ ಕಾಮನೆಗಳಿಂದ ಹುಟ್ಟಿದ್ದೇ 'ಧರ್ಮತತ್ವ'. ಇದು ನಮ್ಮ ನಾಗರೀಕತೆ ಬೆಳೆದ ಹಾಗೆಲ್ಲ, ಸಂಸ್ಕೃತಿ ವಿಕಸನಗೊಂಡಂತೆಲ್ಲ, ಹೊಸ ರೂಪ–ಸತ್ವವನ್ನು ಪಡೆಯಬೇಕಾಗುವುದು. ಪ್ರತಿಯೊಂದು ಧರ್ಮವೂ ತನ್ನ

ಹಿಂದಿನ ಮತೀಯ ದೋಷಗಳನ್ನು ನಿವಾರಿಸಿಕೊಂಡು, ಸಮಕಾಲೀನ ಸಮಾಜದ ಅಂತರ್ಭಾವನೆಗಳಿಗೆ ಸ್ಪಂದಿಸಬಲ್ಲ ಹಾಗೂ ಹೊಸಹೊಸ ವಿಚಾರಗಳನ್ನು ಪಡೆಯುತ್ತ ಜನಜೀವನಕ್ಕೊಂದು ಮಾರ್ಗದರ್ಶನ ಮಾಡುವ ಮನೀಷೆಯಿಂದ ಮುನ್ನಡೆಯಬೇಕಾಗುವುದು. ಸಿಖ್‌ಧರ್ಮವಾದರೂ ಇದಕ್ಕೆ ಅಪವಾದವಾಗದೆ, ಎಲ್ಲ ಧರ್ಮತತ್ವಗಳಲ್ಲಿ ಅಡಗಿರುವ ಮಾನವಪ್ರೇಮ, ಅನುಕಂಪೆ, ದಯೆ, ಮುಂತಾದ ಮೌಲ್ಯಗಳನ್ನು ಎತ್ತಿ ಹಿಡಿದಾಗ ಧರ್ಮದಲ್ಲಿ ಅಂತರ್ಗತವಾಗಿರುವ ಮಾನವ–ಜೀವನ ಸಮುದ್ಧರಣ ಶಕ್ತಿ ಮತ್ತೆ ಉದ್ದೀಪನಗೊಳ್ಳುವುದಷ್ಟೇ ಅಲ್ಲ ಭಾವೈಕ್ಯತೆಗೂ ಇದು ಭದ್ರ ಬುನಾದಿಯಾಗಿ ಉಳಿಯಬಲ್ಲುದು.

ಹೀಗೆ ವಿಶಾಲ ತತ್ವದ ಆಧಾರದ ಮೇಲೆ ಹುಟ್ಟಿಸಿಂತ ಸಿಖ್‌ಧರ್ಮ ಭಾರತೀಯ ಭಾವೈಕ್ಯದ ಬಾಳಿಗೆ ತನ್ನದೇ ಆದ ರೀತಿಯಲ್ಲಿ ಬೆಳಕನ್ನೀಡಿದೆ. ವಿಶಿಷ್ಟ ಉಡುಗೆ–ತೊಡುಗೆಗಳಿಂದ 'ಸಿಂಗ್' (ಸಿಂಹ) ಎಂಬ ನಾಮ ಪ್ರತ್ಯಯದಿಂದ, ಕೇಶ, ಕಚ್ಛಾ, ಕರೆ (ಉಕ್ಕಿನಬಳೆ), ಕಿರಪಾಣ್ ಹಾಗೂ ಕಂಘಾ (ಹಣಿಗೆ) ಎಂಬ ವಿಶಿಷ್ಟ ಪಂಚಭೂಷಣಗಳಿಂದ ಎದ್ದು ಕಾಣುವ ಸಿಖ್‌ರೇ ಸಮರದಲ್ಲಿ ಸಮರ್ಥರೂ, ಕ್ರೀಡಾಪ್ರಿಯರೂ, ಕೃಷಿ, ವ್ಯಾಪಾರ, ಕುಶಲ ಕಲೆಗಳಲ್ಲಿ ಪರಿಣತರೂ, ಶ್ರಮಜೀವಿಗಳೂ ಆಗಿರುವಂತೆ, ರಾಷ್ಟ್ರೀಯ ಭಾವೈಕ್ಯತೆ ಸಾಧಿಸುವಲ್ಲಿ ಅಷ್ಟೇ ಪ್ರಮುಖರಾಗಬೇಕಾಗಿದೆ. ಗುರುನಾನಕರು ಜನರ ವಿಭಜನೆಯಲ್ಲಿ (ಸಂಕುಚಿತ ಅರ್ಥದಲ್ಲಿ) ದೇಶ, ತಳಿ, ಬಣ್ಣ, ಜಾತಿಭೇದಗಳನ್ನು ಪೂರ್ಣವಾಗಿ ಅಲ್ಲಗಳೆದಿದ್ದಾರೆ. "ಸಭೀ ಮಾನವಸಮಾನಂ ಹೈಂ" ಎಂದ ನಾನಕವಾಣಿ ನಮ್ಮನ್ನು ಪುನಃ ಎಚ್ಚರಿಸಬೇಕಾಗಿದೆ.

ಸಭುಕೋ ಊಚಾ ಆ ಖೀಡಿ ನೀಚುನ ದೀಸೈ ಕೋಇ ||
ಇಕನೈ ಭಾಂಡೆ ಸಾಜನಿ ಇಕು ಚಾನಣು ತಿಹು ಲೋ ಇ ||
ಕರಮಿ ಮಿಲೈ ಸಚು ಪಾಈಐ ಧುರಿ ಬಖಸ ನ ಮೇಟೆ ಕೋ ಇ ||

(ಸಿರೀ ರಾಗು, ಅಸಟ ಪದೀಆ)

(ಎಲ್ಲರೂ ಉಚ್ಚರೆಂದು ಹೇಳಿರಿ, ನೀಚನು ಎಲ್ಲಿಯೂ ಕಾಣಿಸುವುದಿಲ್ಲ. ಆ ಒಬ್ಬನೇ ಸರ್ವಪಾತ್ರಗಳನ್ನೂ ಉಂಟು ಮಾಡಿದನು, ಮೂರು ಲೋಕಗಳಲ್ಲಿ ಒಂದೇ ಪ್ರಕಾಶವು ಪಸರಿಸಿರುವುದು. ಅವನ ಕೃಪೆಯಿಂದ ಸತ್ಯವು ದೊರೆಯುವುದು; ಈ ಮೂಲ ಕೃಪೆಯನ್ನು ಯಾರೂ ಅಳಿಸಲಾರರು).

ಎಲ್ಲರೂ ತನ್ನ ಹಾಗೆಯೇ; ಎಲ್ಲರೂ ಆತ್ಮ ಸ್ವರೂಪರು. ಬೇರೆ ಬೇರೆ ಆಗಿ ಕಂಡರೂ, ಬೇರೆ ಬೇರೆ ರೀತಿಯಲ್ಲಿ ನಡೆದುಕೊಂಡರೂ ಎಲ್ಲರೂ ಒಂದೇ. ಧರ್ಮ ಒಂದು 'ವಿಶ್ವವೃಕ್ಷ'. ಮಾನವೀಯತೆಯೇ ಮನುಷ್ಯನ ಧರ್ಮ. ಭಿನ್ನತೆಯಿರುವುದು ಭಾಷೆಯಲ್ಲಿ, ಕಾಲದಲ್ಲಿ, ದೇಶದಲ್ಲಿ, ರೀತಿ ರಿವಾಜಿನಲ್ಲಿ; ಆದರೆ ಧರ್ಮದಲ್ಲಿಲ್ಲ.

ಎಲ್ಲ ಧರ್ಮಗಳ ಗುರಿ ಒಂದೇ— 'ಲೋಕನೆಮ್ಮದಿ'. ಮತಗಳ ಹೊರಗಣ ಆಚಾರ, ಭಾಷೆ, ವೇಷಗಳನ್ನೇ ದೊಡ್ಡದು ಮಾಡದೆ ಮತಗಳ ತಿರುಳು (ಸತ್ವ) ಮುಖ್ಯವೆಂದು ಅರಿಯಬೇಕು. ಈ ಅರಿವೇ ನಮ್ಮ ಗುರು. ಈ ದೇಶದ ಭಾವೈಕ್ಯತೆಗಾಗಿ ಧರ್ಮಚಕ್ರ ಪ್ರವರ್ತನೆ ಆಗಬೇಕು." ಧಾರ್ಮಿಕ ಜೀವನ ವೈಯಕ್ತಿಕವೂ ಹೌದು, ಸಾಮಾಜಿಕವೂ ಹೌದು. ಎಲ್ಲಿ ಹಿಂಸೆ ಬಂತೊ ಅಲ್ಲಿ ಅಧರ್ಮ ಬಂದೇ ಬರುತ್ತದೆ. ಹಿಂಸೆಗೂ ಅಧರ್ಮಕ್ಕೂ ನಂಟು; ಅಹಿಂಸೆಗೂ ಪ್ರೇಮ-ಧರ್ಮಕ್ಕೂ ಗಂಟು ಅಹಿಂಸೆ ಎಂದರೆ ಪ್ರೇಮ; ಪ್ರೇಮ ಎಂದರೆ ತನ್ನಂತೆ ಪರರ ಬಗೆವ ಆಧ್ಯಾತ್ಮ

ದೊಂಬಿ ಆದಾಗ ಅಡಗಿಸಬಹುದು, ಜನರು ಮೇರೆಮೀರಿವರ್ತಿಸಿ ಸಾರ್ವಜನಿಕ ನೆಮ್ಮದಿಗೆ, ಐಕ್ಯತೆಗೆ ಭಂಗತಂದಾಗ ಜನರನ್ನು ದಮನಮಾಡಿ ತಾತ್ಕಾಲಿಕವಾಗಿ ನೆಮ್ಮದಿಯನ್ನು ತರಬಹುದು ಈ ಕ್ರಮಗಳು ಜನರ ಮನಸ್ಸಿನ ಅಶಾಂತಿ ಹೊರಗಡೆ ಸಿಡಿದು ಒಡೆಯದಂತೆ ಮಾಡೀತೇ ವಿನಃ ಒಳಗಡೆಯ ಕುದಿತವನ್ನು ಖಂಡಿತ ತಪ್ಪಿಸಲಾರದು; ಅದಕ್ಕೆ ಮನಸ್ಸು ಹದ ಆಗಬೇಕು; ಪಳಗಬೇಕು. ಧರ್ಮನಿಷ್ಠೆಯೇ ಇದಕ್ಕೆ ಸಾಧನ. ಲೋಕದಲ್ಲಿ ನೆಮ್ಮದಿಯನ್ನು ಸ್ಥಿರಗೊಳಿಸುವಂಥ ಧರ್ಮಮಾತ್ರ ಭಾವೈಕ್ಯತೆಗೆ ಬುನಾದಿಯಾಗಬಲ್ಲುದು.

ಪ್ರತ್ಯೇಕತಾ ಪ್ರವೃತ್ತಿ ಪ್ರಾಯಶಃ ಭಾರತೀಯರ ಹುಟ್ಟು ಪ್ರವೃತ್ತಿಯಾಗಿರುವಂತಿದೆ—ಎಂಬುದನ್ನು ಗುರುನಾನಕರು ತಮ್ಮ ಜೀವಿತ ಕಾಲದಲ್ಲೇ ಕಂಡಿದ್ದರೂ, ಸಹಮತಗಳ ಬಗೆಗೆ ಆದಷ್ಟೂ ಉದಾತ್ತ ಧೋರಣೆಗಳನ್ನೂ ನಿರೂಪಿಸಿ ರಾಷ್ಟ್ರೀಯ ಭಾವೈಕ್ಯತೆಯನ್ನುಂಟು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ಮರೆಯುವಂತಿಲ್ಲ. ಹದಿನೈದನೆಯ ಶತಮಾನದ ಸಮಾಜೋ-ಧಾರ್ಮಿಕ ಪರಿವರ್ತನೆ ಯುಗದಲ್ಲಿದ್ದ ರಾಜಕೀಯ ಅಭದ್ರತೆ, ಮತೀಯ ಅವನತಿಯ ಸೂಚನೆ, ಕಂದಾಚಾರ, ಬ್ರಷ್ಟಾಚಾರ, ಪುರೋಹಿತ ಶಾಹಿ ಸ್ವಾರ್ಥ, ಜಾತಿಪದ್ಧತಿಯ ಅತಿರೇಕವೇ ಮೊದಲಾದ ವಿಚ್ಛಿದ್ರಕಾರಕ ಸಂಗತಿಗಳ ಮಧ್ಯೆ, ಹಿಂದೂ-ಮುಸ್ಲಿಂ ಭಾವೈಕ್ಯ ಸಾಧನವಾಗಿ ಮೂಡಿಬಂದ 'ಸಿಖ್‌ಧರ್ಮ' ನಾನಕರ ನೇತೃತ್ವದಲ್ಲಿ ಸಮಕಾಲೀನ ಸಮಾಜದಲಿದ್ದ ಕಹಿಭಾವನೆಯನ್ನು ಕಡಿಮೆ ಮಾಡತೊಡಗಿತು. ಈ ಧರ್ಮದ ಆರಂಭದ ದೆಶೆಯಲ್ಲಿ ಈ ಸದುದ್ದೇಶದ ಈಡೇರಿಕೆಯ ಬಯಕೆ ತುಂಬ ದಟ್ಟವಾಗಿತ್ತು ಎಂಬುದಕ್ಕೆ ನಾನಕರ ಈ ಕೆಳಗಿನ ವಾಣಿ ಸಾಕ್ಷಿ:

ಐಸೇಜನ ಬಿರತಿ ಜಗ ಅಂದದಿ ಹರಖಿ ಖಜಾನ್ಯೆ ಸಾ ಈ ಅ॥
ಜಾತಿ ವರನ ತೇ ಭವ ಅತೀತಾ ಮಮತಾ ಲೋಭು ಚುಕಾಇಆ ॥
ನಾಮಿ ರತೆ ತೀರಥ ಸೇ ನಿರಿಮಲ ದುಖು ಹ ಉಮ್ಯೆ ಮ್ಯೆಲು
ಚುಕಾಇಆ ॥

ನಾನಕು ತಿನ ಕೇ ಚರನ ಪಖಾಲ್ಯೈ ಬಿನ ಗುರುಮುಖಿ ಸಾಚಾ ಇಅ॥
(ಪ್ರಭಾತಿ ಅಸಟ ಪದೀಅ)

(ಪ್ರಭುವು ಪರೀಕ್ಷಿಸಿ ತನ್ನ ಕೋಶದಲ್ಲಿ ಸೇರಿಸಿಕೊಳ್ಳುವಂಥ ಜನರು ಅಪರೂಪ. ಅವರು ಜಾತಿ–ವರ್ಣದ ಭೇದವನ್ನು ಮಾಡದವರು, ಮಮತ್ವ ಲೋಭವನ್ನು ಬಿಟ್ಟವರು. ತೀರ್ಥಗಳಂತೆ ನಿರ್ಮಲವಾಗಿದ್ದು ನಾಮರತರಾಗಿದ್ದವರು. ಅಹಂಕಾರ ನಾಶ ಮಾಡಿದವರು, ದುಃಖ–ಮಲದಿಂದ ದೂರವಾಗಿದ್ದವರು. ನಾನಕನು ಇಂಥವರ ಪಾದಪ್ರಕ್ಷಾಲನೆ ಮಾಡುತ್ತಾನೆ; ಗುರುವಿನ ಉಪದೇಶದಿಂದ ಸತ್ಪುರುಷರೊಡನೆ ಪ್ರೇಮವುಂಟಾಯಿತು). ಒಟ್ಟಿನಲ್ಲಿ, ಮನುಷ್ಯನಲ್ಲಿ ಭಾವೈಕ್ಯ–ಸ್ವಭಾವ ತಾನಾಗಿಯೇ ಬಾರದು; ಅದಕ್ಕೆ ಸಂಸ್ಕಾರಬೇಕು. ಈ ಸಂಸ್ಕಾರ ನೀಡುವಲ್ಲಿ ಧರ್ಮದ ಆವಶ್ಯಕತೆಯಿದೆ. ಇದು ನಮ್ಮನ್ನು ಸತ್ಯನಿಷ್ಠರನ್ನಾಗಿ ಬಾಳ್ವೆ ನಡೆಸಲು ಕಲಿಸುತ್ತದೆ, ಸಿಖ್ ಧರ್ಮ ಇದಕ್ಕೆ ಹೊರತಾಗಿಲ್ಲ.

ಹೀಗೆ ಧರ್ಮದ ಮೂಲತತ್ವಗಳು ಮಾನವ ಕುಲಕ್ಕೆ ಹಿತಕಾರಿಯಾಗಿದ್ದು, ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸುವಂತಿದ್ದರೂ ಕೆಲವೊಮ್ಮೆ ಸ್ವಾರ್ಥಸಾಧಕ ಮತ್ತು ಅನ್ಯ ಉದ್ದೇಶಕರು ಧರ್ಮದ ಹೆಸರಿನಲ್ಲಿ ನಡೆಸುವ ಅಕೃತ್ಯಗಳು ಆ ಧರ್ಮದವರಿಗೇ ಕೆಲಮಟ್ಟಿಗೆ ತೊಂದರೆಯನ್ನುಂಟುಮಾಡುವಂತಹದಾಗಬಹುದು. ಇಂಥ ಘಟನೆಗಳು ಕಾಲದಿಂದ ಕಾಲಕ್ಕೆ, ಕಾಣಿಸಿಕೊಂಡಾಗ ಆ ಬಗೆಗೆ ಕ್ಷಣಿಕ ಕಳವಳವುಂಟಾಗುವುದು ಸಹಜವಾದರೂ ಪ್ರಸ್ತುತ ಸಿಖ್ ಧರ್ಮ ಸಾಕಷ್ಟು ಸತ್ವಶಾಲಿಯಾಗಿದ್ದು, ವಿಶ್ವಕಲ್ಯಾಣದ ಅಂಶಗಳು ಅದರಲ್ಲಿ ಯಥೇಚ್ಛವಾಗಿರುವುದರಿಂದ, ಭವಿಷ್ಯದಲ್ಲಿ ಸಾಮಾಜಿಕ ಶಾಂತಿ ಹಾಗೂ ಭಾವೈಕ್ಯತೆಯನ್ನು ಸಾಧಿಸುವಲ್ಲಿ ಇನ್ನೂ ಹೆಚ್ಚಿನ ಸಹಾಯಕ ಶಕ್ತಿಯಾದೀತು.

| ಸಭೀ ಮಾನವ ಸಮಾನ ಹೈಂ |

(ಸರ್ವಮಾನವರು ಸಮಾನರು)

ಗ್ರಂಥಾಧಾರಗಳು :

ಥಾಮಸ್ ಮಾಣಿಕ್ಯಂ (ಸಂ) : ರೋಲ್ ಆಫ್ ರಿಲಿಜನ್ ಇನ್ ನ್ಯಾಶನಲ್ ಇಂಟಿಗ್ರೇಶನ್, ಬೆಂಗಳೂರು, ೧೯೮೪

ನವರತ್ನ, ಎಸ್. ಆರ್. : ಜಾಗತಿಕ ಧರ್ಮಗಳು, ಧಾರವಾಡ, ೧೯೭೬

ಭಾಈ ಜೋಧ್‌ಸಿಂಗ್ (ಸಂ) : ಗುರುನಾನಕ್ ವಾಣಿ, ಹೊಸ ದೆಹಲಿ, ೧೯೭೪

ಗುರುನಾಥ ಜೋಶಿ (ಅನು) :

ಯಾಮುನಾಚಾರ್ಯ, ಎಂ : ಮತಧರ್ಮ ತತ್ವಶಾಸ್ತ್ರ, ಬೆಂಗಳೂರು, ೧೯೬೯

ಶ್ರೀ ಕೃಷ್ಣ ಭಟ್ : ಸಿಖ್ ಧರ್ಮ, ಬೆಂಗಳೂರು, ೧೯೬೯

ಹರಿದಾಸ ಭಟ್ಟಾಚಾರ್ಯ (ಸಂ) : ದಿ ಕಲ್ಚರಲ್ ಹೆರಿಟೇಜ್ ಆಫ್ ಇಂಡಿಯಾ, ಸಂ. IV., ಕಲ್ಕತ್ತ, ೧೯೬೯

ಗ್ರಂಥಾವಲೋಕನ

ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳು :

ಸಂಪಾದಕರು ಮತ್ತು ಪ್ರಕಾಶನ: ಹೊ. ನಾರಾಯಣಸ್ವಾಮಿ, ಮಾನವ ಪ್ರಕಾಶನ ೨೦೬೪/ಅ, ಉತ್ತರ ಬಡಾವಣೆ ಹಾಸನ, ೫೭೩೨೦೧ (೧೯೮೬) ಪು. ೧೬+೧೪೦. ಬೆಲೆ ಸಾದಾ. ರೂ. ೧೫/- ಉತ್ತಮ ೨೫/-

---

ಶ್ರೀ ಜ. ಹೊ. ನಾರಾಯಣಸ್ವಾಮಿ ಅವರು ೧೩೫ ಪುಟಗಳ ಈ ಪುಟ್ಟ ಪುಸ್ತಕದಲ್ಲಿ ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳನ್ನು ಅತ್ಯಂತ ವ್ಯವಸ್ಥಿತವಾದ ರೀತಿಯಲ್ಲಿ ಸಂಕಲಿಸಿ ಸಂಪಾದಿಸಿ, ಕೊಟ್ಟಿದ್ದಾರೆ. ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಹಲವು ಬಗೆಯ ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳು ಘಟಿಸುತ್ತಿದ್ದ ಕಾಲ. ಈ ಕಾಲಾವಧಿಯಲ್ಲಿ ಶ್ರೀಸ್ವಾಮಿ ವಿವೇಕಾನಂದರು ಜನ್ಮಿಸಿ ತಮ್ಮ ವಯಸ್ಸಿನ ಅಲ್ಪಾವಧಿಯಲ್ಲಿಯೇ ಮಹತ್ಕಾರ್ಯವನ್ನು ಮಾಡಹೊರಟು, ಯಶಸ್ವಿಯಾಗಿದ್ದಾರೆ. ವಿವೇಕಾನಂದರ ವಿದ್ಯಾರ್ಥಿ ಜೀವನ ಎಲ್ಲ ಕಾಲದ ವಿದ್ಯಾರ್ಥಿಗಳಿಗೂ ಸ್ಫೂರ್ತಿ, ಪ್ರೇರಣೆಯನ್ನು ಕೊಡುತ್ತದೆ. ಅವರು ವೈಯಕ್ತಿಕ ಸ್ವಾರ್ಥ, ವ್ಯಾಮೋಹಗಳನ್ನು ತೊರೆದು ಸಮಾಜ ಜೀವನವನ್ನು ಎತ್ತರಿಸಲು ಹಾಗೂ ಮಾನವೀಯ ಶಕ್ತಿಯನ್ನು ಜಾಗೃತಗೊಳಿಸಲು, ತಮ್ಮ ಜೀವವನ್ನು ಸವೆಸಿದರು. ಸನ್ಯಾಸ ಮಾರ್ಗದಲ್ಲಿ ನಡೆಯುವುದೆಂದರೆ ಖಡ್ಗದ ಧಾರೆಯ ಮೇಲೆ ನಡೆದಂತೆ. ಅವರು ಸನ್ಯಾಸವನ್ನು ಸ್ವೀಕರಿಸಿ ವೇದಾಂತದ ವಿಚಾರಗಳನ್ನು ಜನರಲ್ಲಿ ಬಿತ್ತಲು ತೊಡಗಿದರು ವಿಚಾರಗಳು ಬರೀ ಹೊತ್ತಿಗೆಯಲ್ಲಿ ಉಳಿದುಕೊಂಡರೆ ಪ್ರಯೋಜನವಿಲ್ಲ. ಬದುಕಿನಲ್ಲಿ ಅಂಥ ವಿಚಾರಗಳನ್ನು ಅಳವಡಿಸುವುದರಿಂದ ಬದುಕು ಸುಂದರವಾಗುವುದು, ಸುಲಭವಾಗುವುದು ಹಾಗೂ ಅಸ್ಪಷ್ಟತೆಯ ಮಂಜು ಕರಗಿ ಮುಂದಿನ ಗುರಿ ಸ್ಪಷ್ಟವಾಗುವುದು.

ಪ್ರಸ್ತುತ ಪುಸ್ತಕದಲ್ಲಿ ಪುರೋಹಿತಶಾಹಿ, ಧರ್ಮ–ವೇದಾಂತ, ಸ್ವರ್ಗ–ನರಕ, ಕ್ರಿಸ್ತ, ಬುದ್ಧ, ಶಂಕರ ಅಲ್ಲದೆ ಮತಾಂತರ, ಮೂಢನಂಬಿಕೆಗಳ ಕುರಿತ ಶ್ರೀಸ್ವಾಮಿ ವಿವೇಕಾನಂದರ ವಿಚಾರಗಳು ಅತ್ಯಂತ ಸುಸ್ಪಷ್ಟವಾಗಿ ಸಂಕಲಿತವಾಗಿದ್ದು ಅವು ಆಬಾಲ ವೃದ್ಧರಿಗೂ ಉಪಯುಕ್ತವಾದವುಗಳಾಗಿವೆ. ದೇಶ, ಸಮೂಹ, ಹಳ್ಳಿ-

ರೈತ, ಯೋಗ–ಭೋಗ, ಶಿಕ್ಷಣ, ಸಂಘ–ಸಂಸ್ಥೆ– ಈ ವಿಷಯಗಳ ಕುರಿತ ವಿಚಾರಗಳು ಜಿಜ್ಞಾಸೆಯನ್ನು ಕೆರಳಿಸುವಂತಿವೆ. ಇಂಥ ವಿಚಾರಗಳು ಸಹಜವಾಗಿಯೇ ಸುಪ್ತ ಶಕ್ತಿಯನ್ನು ಬಡಿದೆಬ್ಬಿಸುವಂತಿವೆ. ಹಿಂದೂ ಸಮಾಜ ಹಾಗೂ ಹಿಂದೂ ಧರ್ಮದ ಕುರಿತ ವ್ಯಾಖ್ಯಾನ ಹಿಂದುತ್ವದೊಡನೆ ಮಾನವೀಯ ಕಾಳಜಿಯನ್ನು ಹುಟ್ಟಿಸಲು ಕಾರಣವಾಗುತ್ತವೆ. ವರ್ತಮಾನ ಕಾಲದ ಹಿಂದೂಗಳ ಧರ್ಮ ವೇದದಲ್ಲಿಲ್ಲ, ಪುರಾಣದಲ್ಲಿಲ್ಲ, ಭಕ್ತಿಯಲ್ಲಿಲ್ಲ, ಆ ಧರ್ಮವೆಲ್ಲಾ ಅಡಿಗೆ ಮಾಡುವ ಪಾತ್ರೆಯೊಳಗೆ ಪ್ರವೇಶಿಸಿವೆ. ಇಂದಿನ ಹಿಂದೂ ಧರ್ಮವು ಜ್ಞಾನ ಮಾರ್ಗವು ಅಲ್ಲ, ಭಕ್ತಿ ಮಾರ್ಗವೂ ಅಲ್ಲ ಅದರ ಧರ್ಮವೇ ಅಸ್ಪೃಶ್ಯತೆ. ಅಸ್ಪೃಶ್ಯತೆ ಎಂಬ ಕುರುಡು ಧರ್ಮದಲ್ಲಿ ನಿಮ್ಮ ಜೀವನ ಹಾಳಾಗದಿರಲಿ' ಹೀಗೆಂದು ಧರ್ಮದ ಕುರಿತು ಗಂಭೀರವಾಗಿ ಆಲೋಚಿಸುತ್ತ, ಅದು ವರ್ತಮಾನ ಕಾಲದಲ್ಲಿ ಯಾವ ಹಂತಕ್ಕಿಳಿದಿದೆ ಎನ್ನುವುದರಲ್ಲಿ ಸ್ಪಷ್ಟವಾಗಿ ಹೇಳಿ ಎಲ್ಲರನ್ನೂ ಎಚ್ಚರಿಸುವ ಧ್ವನಿ ಅದರಲ್ಲಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಗಗಳ ಕುರಿತು ಆಲೋಚಿಸುತ್ತ ಕಡೆಗಣಿಸಲ್ಪಟ್ಟ ಹಾಗೂ ಶೋಷಣೆಗೊಳಗಾಗಿ ಬಳಲಿರುವ ಶೂದ್ರರ ಕುರಿತು ಖಂಡಿತವಾದ ನುಡಿಯೊಂದಿದ್ದು, ಅದು ಶೂದ್ರರಿಗೆ ಹೊಸ ಜೀವ ತುಂಬುವಂತಿದೆ.

'ಶೂದ್ರರು ತಮ್ಮ ತಮ್ಮ ಶೂದ್ರತ್ವದಿಂದಲೇ ಮೇಲೇಳುವ ಒಂದು ಕಾಲ ಬರುವದು..... ಪ್ರತಿಯೊಂದು ದೇಶದ ಶೂದ್ರರು–ವೈಶ್ಯ ಅಥವಾ ಕ್ಷತ್ರಿಯರಂತೆ ಆಗದೆ, ತಮ್ಮ ಹುಟ್ಟುಗುಣವಾದ ಶೂದ್ರ ಸ್ವಭಾವದಿಂದ ಮತ್ತು ಅಭ್ಯಾಸದಿಂದಲೇ ಪ್ರತಿಯೊಂದು ಸಮಾಜದಲ್ಲಿಯೂ ನಿರಂಕುಶ ಅಧಿಕಾರವನ್ನು ಪಡೆಯುವ ಒಂದು ಸಮಯ ಬರುವುದು.'

—ಹೀಗೆಂದು ಸ್ವಾಮಿವಿವೇಕಾನಂದರು ಅಂದು ಹೇಳಿದ್ದು ಇಂದು ಸತ್ಯವಾಗಿಯೇ ಪರಿಣಮಿಸುತ್ತಿರುವುದು ಗಮನಾರ್ಹ. ಆಫ್ರಿಕನ್, ನಿಗ್ರೋಗಳ ಬ್ಲ್ಯಾಕ್ ಪ್ಯಾಂಥರ್ ಚಳುವಳಿ, ದಲಿತ ಚಳುವಳಿ ಬಂಡಾಯದ ಧ್ವನಿ ಮುಂತಾದವುಗಳನ್ನು ಗಮನಿಸಿದರೆ ಶತಮಾನಗಳಿಂದ ಶೋಷಣೆಗೊಳಗಾದವರು ಹೊಸ ಶಕ್ತಿಯನ್ನು ಪಡೆದುಕೊಂಡು ಚಳುವಳಿ, ಕ್ರಾಂತಿಯ ಮಾರ್ಗದಲ್ಲಿ ನಡೆಯುತ್ತಿರುವುದನ್ನು ಗಮನಿಸಬಹುದಾಗಿದೆ.

'ಅನಂತಕಾಲದ ಅಗಾಧ ಪ್ರವಾಹದಲ್ಲಿ ಬ್ರಾಹ್ಮಣರೇ ಮೊದಲಾದ ಮೇಲಿನ ವರ್ಣದವರು ಶೂದ್ರರ ಮಟ್ಟಕ್ಕೆ ಇಳಿದು, ಶೂದ್ರರು ಮೇಲಿನ ಹಂತಕ್ಕೆ ಏರುವದು'–ಎಂದಿದ್ದ ಮಾತು ಅರ್ಥಪೂರ್ಣವಾಗಿದೆ. ಇತಿಹಾಸದ ಚಕ್ರ ಬದಲಾಗುವುದನ್ನು ಗಮನಿಸಿ ಸ್ವಾಮಿ ವಿವೇಕಾನಂದರ ಚಿಂತನೆ ವರ್ತಮಾನಕ್ಕೂ ಧ್ವನಿಪೂರ್ಣವಾಗಿದೆ ಮುಂದುವರಿಯುತ್ತ 'ವೇದಾಂತಕ್ಕೆ ಮಾತ್ರ ವಿಶ್ವಧರ್ಮವಾಗುವ

ಹಕ್ಕಿದೆ' –ಎಂದು ಹೇಳಿರುವುದು ಸ್ವಾಮಿ ವಿವೇಕಾನಂದರ ವೇದಾಂತ ಪ್ರೀತಿಯನ್ನು ಎತ್ತಿ ತೋರಿಸುತ್ತದೆ. ಅದು ವಿಮರ್ಶೆಯ ಮಾತೆಂದು ತೋರುವದಿಲ್ಲ.

'ಬೌದ್ಧಧರ್ಮ ಆಹುತಿಯನ್ನು ಸ್ವೀಕರಿಸುವ ದೇವತೆಗಳ ಸಿಂಹಾಸನವನ್ನು ಕದಲಿಸಿ ಅವರನ್ನು ಸ್ವರ್ಗಧಾಮದಿಂದ ಉರುಳಿಸಿತ್ತು. ದೇವತೆಗಳ, ಬ್ರಹ್ಮನ ಅಥವಾ ಇಂದ್ರನ ಪದವಿಗಿಂತ ಬುದ್ಧನಾಗುವುದು ಉತ್ತಮ ಪದವಿ, ಇದರಂತೆ ಶಂಕರಾಚಾರ್ಯರ ಕುರಿತ ಆಲೋಚನೆಗಳು ಸತ್ವಪೂರ್ಣವಾಗಿವೆ. 'ಪ್ರಪಂಚದ ಆಧ್ಯಾತ್ಮಿಕ ದರ್ಶನಗಳು ಒಂದು ಅಮೋಘಶಾಸ್ತ್ರ. ಬೈಬಲ್, ವೇದ, ಖುರಾನ್ ಮತ್ತು ಇತರ ಧರ್ಮಶಾಸ್ತ್ರಗಳೆಲ್ಲ ಕೆಲವು ಪುಟಗಳು ಮಾತ್ರ. ವ್ಯಕ್ತವಾಗಲು ಇನ್ನೂ ಅನಂತ ಪುಟಗಳಿವೆ'—ಎಂದು ಘೋಷಿಸುವ ವಿವೇಕಾನಂದರ ವಾಣಿ ಅತ್ಯಂತ ಶಕ್ತಿಶಾಲಿಯಾಗಿದ್ದು, ಎಚ್ಚರಿಕೆಯನ್ನು ಹುಟ್ಟಿಸುವಲ್ಲಿ ಸಾರ್ಥಕವಾಗುತ್ತದೆ. ಈ ಪುಟ್ಟ ಪುಸ್ತಕ ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳನ್ನು ಸಮರ್ಥವಾಗಿ, ಸರಳವಾಗಿ ಆಕರ್ಷಕ ಹಾಗೂ ಶಕ್ತಿಯುತ ಭಾಷೆಯಲ್ಲಿ ಬಿಂಬಿಸುತ್ತದೆ.

— ಬುದ್ದಣ್ಣ ಹಿಂಗಮಿರೆ

ಈ ಸಂಚಿಕೆಯ ಲೇಖಕರು

- ರೆವ್ಹರೆಂಡ ಫಾದರ್ ಸಿ. ಸಿ. ಎ.ಪೈ, ಎಸ್. ಜೆ.
  ವಿವೇಕ ಪ್ರಗತಿ, ಹಳಿಯಾಳ (ಉತ್ತರ ಕನ್ನಡ)

- ಡಾ. ದಯಾನಂದ ನರಸಿಂಹ ಶಾನಭಾಗ
  ಚೇರಮನ್, ಸಂಸ್ಕೃತ ವಿಭಾಗ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ಎಸ್. ಪಿ. ಪಾಟೀಲ
  ಉಪನ್ಯಾಸಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ತಾಳಜೆ ವಸಂತಕುಮಾರ
  ಅಧ್ಯಾಪಕರು, ಕನ್ನಡ ವಿಭಾಗ
  ಮುಂಬೈ ವಿಶ್ವವಿದ್ಯಾಲಯ, ಮುಂಬೈ-೪೦೦ ೦೯೮

- ಡಾ. ವಿಲ್ಯಂ ಮಾಡ್ರ
  ಪ್ರಧಾಪಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಶ್ರೀ ಸೈಯುದ ಜಮೀರುಲ್ಲಾ ಷರೀಫ್
  ಉಪನ್ಯಾಸಕರು, ಕನ್ನಡ ವಿಭಾಗ
  ಅಂಜುಮನ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ
  ಮಹಾವಿದ್ಯಾಲಯ, ಭಟ್ಕಳ (ಉತ್ತರಕನ್ನಡ)

- ಡಾ. ಬಿ. ಸಿ. ಜವಳಿ
  ಪ್ರವಾಚಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಡಾ. ಎಚ್. ಆರ್. ರಘುನಾಥಭಟ್, ಪ್ರವಾಚಕರು,
ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

- ಡಾ. ಬುದ್ದಣ್ಣ ಹಿಂಗಮಿರೆ
ಪ್ರವಾಚಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ: ಯಾವುದೇ ವ್ಯಕ್ತಿ ಅಥವಾ ಸಂಘ- ಸಂಸ್ಥೆಗಳು ರೂ. ೧೦೦-೦೦ (ಒಂದು ನೂರು ರೂಪಾಯಿಗಳು) ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು; ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)
ಬಿಡಿ ಪ್ರತಿ : ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೪-೦೦

ಹಣವನ್ನು ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ್ ತೆಗೆಯಿಸಿ, ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ :
ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ- ೫೮೦೦೦೩